ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ
(ಅಭಿವೃದ್ಧಿ ಅಧ್ಯಯನ)

ಮಹಾತ್ಮ ಗಾಂಧೀಜಿಯವರ ಗ್ರಾಮೀಣ ಆಡಳಿತದ ಪರಿಕಲ್ಪನೆ - ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಅಧ್ಯಯನ

ಸಂಶೋಧಕರು
ಕಿರಣಚಂದ್ರ ರೈ ಬಿ.
ನೋಂದಾವಣೆ ಸಂಖ್ಯೆ: ೧೭೧೧೧೧೦೫೦೦೨೯

ಮಾರ್ಗದರ್ಶಕರು
ಡಾ.ರೋಸ್ ವೀರ ಡಿಸೋಜ, ಎಂ.ಎ., ಎಂ.ಫಿಲ್. ಪಿ.ಹೆಚ್.ಡಿ
ಪ್ರಾಧ್ಯಾಪಕಿ ಮತ್ತು ಮುಖ್ಯಸ್ಥರು
ರಾಜ್ಯಶಾಸ್ತ್ರ ವಿಭಾಗ
ಸೈಂಟ್ ಅಲೋಶಿಯಸ್ ಕಾಲೇಜು, ಮಂಗಳೂರು

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಅಧ್ಯಯನ ಕೇಂದ್ರ
ಮಂಗಳೂರು-೫೭೫೦೦೦೧
ಸೆಪ್ಟೆಂಬರ್-೨೦೧೮

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ
(ಅಭಿವೃದ್ಧಿ ಅಧ್ಯಯನ)

ಮಹಾತ್ಮ ಗಾಂಧೀಜಿಯವರ ಗ್ರಾಮೀಣ ಆಡಳಿತದ ಪರಿಕಲ್ಪನೆ - ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಅಧ್ಯಯನ

ಸಂಶೋಧಕರು
ಕಿರಣಚಂದ್ರ ರೈ ಬಿ.
ನೋಂದಾವಣೆ ಸಂಖ್ಯೆ: ೧೭೧೧೧೧೦೩೦೦೨೯

ಮಾರ್ಗದರ್ಶಕರು
ಡಾ.ರೋಸ್ ವೀರ ಡಿಸೋಜ, ಎಂ.ಎ., ಎಂ.ಫಿಲ್. ಪಿ.ಹೆಚ್.ಡಿ
ಪ್ರಾಧ್ಯಾಪಕಿ ಮತ್ತು ಮುಖ್ಯಸ್ಥರು
ರಾಜ್ಯಶಾಸ್ತ್ರ ವಿಭಾಗ
ಸೈಂಟ್ ಅಲೋಶಿಯಸ್ ಕಾಲೇಜು, ಮಂಗಳೂರು

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಅಧ್ಯಯನ ಕೇಂದ್ರ
ಮಂಗಳೂರು-೫೭೫೦೦೦೧

ಸೆಪ್ಟೆಂಬರ್-೨೦೧೮

ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯ ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ **"ಮಹಾತ್ಮ ಗಾಂಧೀಜಿಯವರ ಗ್ರಾಮೀಣ ಆಡಳಿತದ ಪರಿಕಲ್ಪನೆ-ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಅಧ್ಯಯನ"** ಎಂಬ ಈ ನಿಬಂಧವು ನನ್ನ ಸ್ವತಂತ್ರ ಸಂಶೋಧನೆಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲಶ್ರುತಿಯಾಗಿದೆ. ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ॥ ರೋಸ್ ವೀರ ಡಿ'ಸೋಜ ರಾಜ್ಯಶಾಸ್ತ್ರ ಮುಖ್ಯಸ್ಥರು ಮತ್ತು ಸಹ ಪ್ರಾಧ್ಯಾಪಕರು ಸೈಂಟ್ ಅಲೋಶಯಸ್ ಕಾಲೇಜು ಮಂಗಳೂರು ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ ಈ ನಿಬಂಧವನ್ನು ಬೇರೆ ಯಾವುದೇ ಪದವಿ ಅಥವಾ ಡಿಪ್ಲೋಮಾ ಅಥವಾ ತತ್ಸಮಾನ ಉಪಾದಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಬಳಸಿಕೊಂಡಿಲ್ಲ ಎಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

ಕಿರಣಚಂದ್ರ ಬಿ ರೈ
ಸಂಶೋಧಕರು

ಯೋಗ್ಯತಾ ಪತ್ರ

ಕಿರಣಚಂದ್ರ ರೈ. ಬಿ. ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ಮಹಾತ್ಮ ಗಾಂಧೀಜಿಯವರ ಗ್ರಾಮೀಣ ಆಡಳಿತದ ಪರಿಕಲ್ಪನೆ – ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹವನ್ನು, ಒಳಗೊಂಡಿದೆ. ಮಾತ್ರವಲ್ಲದೆ ಸಂಶೋಧನೆಯ ಫಲ ಸ್ವರೂಪವಾಗಿ ಹೊರಹೊಮ್ಮಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ.

DR. ROSE VEERA D'SOUZA
HEAD OF THE DEPT. OF POLITICAL SCIENCE
ST. ALOYSIUS COLLEGE
MANGALURU - 575 002

ದಿನಾಂಕ: 19. 09. 2018 ಡಾ॥ ರೋಸ್ ವೀರ ಡಿಸೋಜ ಎಂ.ಎ. ಎಂ.ಫಿಲ್.ಪಿ.ಹೆಚ್.ಡಿ

ಪ್ರಾಧ್ಯಾಪಕಿ ಮತ್ತು ಮುಖ್ಯಸ್ಥರು
ರಾಜ್ಯಶಾಸ್ತ್ರ ವಿಭಾಗ
ಸೈಂಟ್ ಅಲೋಶಿಯಸ್ ಕಾಲೇಜು, ಮಂಗಳೂರು

ಕೃತಜ್ಞತೆಯ ನುಡಿಗಳು

"ಮಹಾತ್ಮ ಗಾಂಧೀಜಿಯವರ ಗ್ರಾಮೀಣ ಆಡಳಿತದ ಪರಿಕಲ್ಪನೆ - ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಅಧ್ಯಯನ" ಎಂಬ ವಿಷಯದಲ್ಲಿ ಕ್ಷೇತಾಧ್ಯಯನವನ್ನು ಕೈಗೊಂಡು ವಾಸ್ತವಾಂಶಗಳನ್ನು ಹೊರತರುವ ಪ್ರಯತ್ನವೊಂದನ್ನು ಮಾಡತೊಡಗಿದೆ. ಈ ಅಧ್ಯಯನಕ್ಕೆ ಸಂಪೂರ್ಣ ಮಾರ್ಗದರ್ಶನ ಮಾಡಿದ ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ. ರೋಸ್‌ವೀರ ಡಿಸೋಜ ಮತ್ತು ಮಂಗಳೂರು ವಿಶ್ವವಿದ್ಯಾಲಯ ರಾಜ್ಯಶಾಸ್ತ್ರ ಸಹ ಪ್ರಾಧ್ಯಾಪಕ ಡಾ. ರಾಜಾರಾಮ್ ತೊಳ್ಪಾಡಿಯವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ .

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡು ಸಂಶೋಧನ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ, ಬಲ್ಮಠ ಇದರ ನಿರ್ದೇಶಕರಾದ ಡಾ. ಗ್ಲಾಡ್ಸನ್ ಅಂತೆಯೇ ಪ್ರಸ್ತುತ ನಿರ್ದೇಶಕರಾದ ಡಾ. ವಾಟ್ಸನ್ ಇವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಪ್ರತಿ ಅಧ್ಯಯನವನ್ನು ಅಚ್ಚುಕಟ್ಟಾಗಿ ಕಂಪ್ಯೂಟರೀಕರಣಗೊಳಿಸಿ, ಸುಂದರವಾಗಿ ಮುದ್ರಿಸಿದ ಬಲ್ಮಠ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಕೇಂದ್ರ ಮತ್ತು ಬಲ್ಮಠ ಪ್ರಿಂಟಿಂಗ್ ಪ್ರೆಸ್‌ನವರಿಗೆ ವಂದನೆಗಳು. ಪರೋಕ್ಷವಾಗಿ ಸಂಶೋಧನ ಯಶಸ್ವಿಗೆ ಸಹಾಯ ಹಸ್ತ ನೀಡಿದ ಎಲ್ಲರಿಗೂ ನನ್ನ ವಂದನೆಗಳು.

ಕಿರಣಚಂದ್ರ ರೈ.ಬಿ.

ಸಂಶೋಧಕರು

ಪರಿವಿಡಿ

ಕೋಷ್ಟಕದ ಪಟ್ಟಿ

ಪೀಠಿಕೆ

ಜನತೆಯ ಸರ್ವಾಂಗೀಣ ಕಲ್ಯಾಣವೇ ಪ್ರತಿಯೊಂದು ಶಾಸ್ತ್ರ ಹಾಗೂ ಪ್ರತಿಯೊಬ್ಬ ಶ್ರೇಷ್ಠ ಚಿಂತಕರ ಚಿಂತನೆಯ ಉದ್ದೇಶ. ರಾಜ್ಯಶಾಸ್ತ್ರವು ಜನರ ಉತ್ತಮ ಬದುಕಿಗಾಗಿ ವ್ಯವಸ್ಥಿತ ನೀತಿ ನಿಯಮಾವಳಿಗಳಿಂದ ಲಭ್ಯವಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಮತ್ತು ಸಾಮರಸ್ಯದಿಂದ ಜೀವಿಸಲು ಪ್ರೇರಣೆಯನ್ನು ನೀಡುವ ಸಲುವಾಗಿ ರೂಪುಗೊಂಡ ಶಾಸ್ತ್ರವಾಗಿದೆ. ಈ ನಿಟ್ಟಿನಲ್ಲಿ ರಾಜಕೀಯ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಜನರ ಕಲ್ಯಾಣದ ಪರಿಕಲ್ಪನೆ ಮೇಲೆ ರೂಪಿಸಿರುವ ಅನೇಕ ತತ್ವಗಳು ಅಧ್ಯಯನಕ್ಕೆ ಬಹಳ ಸೂಕ್ತವಾದ ವಿಷಯವಾಗಿದೆ. ಮಹಾತ್ಮ ಗಾಂಧೀಜಿಯವರ ಆತ್ಮಚರಿತ್ರೆ ಮತ್ತು ಅವರ ಬರಹ ಪ್ರಸ್ತುತ ರಾಜ್ಯ ವ್ಯವಸ್ಥೆಯಲ್ಲಿ ಕಂಡು ಬರುವ ಅನೇಕ ರಾಜಕೀಯ ಹಾಗೂ ರಾಜಕೀಯೇತರ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ದಿಕ್ಸೂಚಿಗಳಾಗಿವೆ.

ಮಹಾತ್ಮ ಗಾಂಧೀಜಿಯವರ ಚಿಂತನೆಗಳಲ್ಲಿ ಕಲ್ಯಾಣ ರಾಜ್ಯದ ಪರಿಕಲ್ಪನೆ, ಅಹಿಂಸಾತ್ಮಕ ಜೀವನದ ಮಾರ್ಗಸೂಚನೆ, ವಿಕೇಂದ್ರೀಕರಣ, ಗ್ರಾಮಸ್ವರಾಜ್ಯ, ಧರ್ಮದರ್ಶಿ ತತ್ವ ಹಾಗೂ ನೀತಿ ಪ್ರಧಾನ ಸಿದ್ಧಾಂತ ಶ್ರಮದ ಗೌರವ ಮುಂತಾದವುಗಳು ಶ್ರೇಷ್ಟ ಚಿಂತನೆಗಳಾಗಿವೆ. ಅವರ ಸಾಮಾಜಿಕ ಚಿಂತನೆಗಳಲ್ಲಿ ಸುಭದ್ರ ಮತ್ತು ಸೂಕ್ತ ಜೀವನಕ್ಕೆ ಅತಿ ಅಗತ್ಯವಾದ ಪಾನ ನಿಷೇಧ, ಸಾಕ್ಷರತೆ, ಮಹಿಳಾ ಆರ್ಥಿಕ ಸಬಲೀಕರಣ ಮತ್ತು ಜನಸಂಖ್ಯೆ ನಿಯಂತ್ರಣದ ಬಗ್ಗೆ ಆಳವಾಗಿ ತಮ್ಮ ಬದುಕು ಮತ್ತು ಬರಹಗಳಲ್ಲಿ ಚಿಂತಿಸಿರುತ್ತಾರೆ. ಪ್ರಸ್ತುತ ಪ್ರಚಲಿತ ವ್ಯವಸ್ಥೆಯಲ್ಲಿ ಯುವಜನತೆಯಲ್ಲಿ ಶ್ರಮದ ಬಗೆಗಿನ ಗೌರವ ಪ್ರಾಮಾಣಿಕತೆ, ಸಹಿಷ್ಣುತೆ ಮತ್ತು ಸಾಮರಸ್ಯದ ಬದುಕು ಸಹಕಾರ ಮುಂತಾದ ಮಾನವೀಯ ಗುಣಗಳು ನಶಿಸುತ್ತಿರುವುದು ನಮಗೆ ಭಾಸವಾಗುತ್ತದೆ ಮತ್ತು ಇವುಗಳು ಅತ್ಯಂತ ಆತಂಕಕಾರಿ ವಿಷಯವಾಗಿವೆ. ಒಂದೆಡೆ ವಿಜ್ಞಾನ ಮತ್ತು ತಂತ್ರಜ್ಞಾನ ಅತ್ಯಂತ ವೇಗವಾಗಿ ಆವಿಷ್ಕಾರಗೊಳ್ಳುತ್ತ ಹೋದಂತೆ ಇನ್ನೊಂದೆಡೆ ವಿದ್ಯಾವಂತ ಮಾನವ ಸಹಜ ನೆಮ್ಮದಿಯನ್ನು ಕಳಕೊಳ್ಳುತ್ತ ಗಾಂಧೀಜಿಯವರ ಗ್ರಾಮೀಣ ಆಡಳಿತದ ಪರಿಕಲ್ಪನೆ ರಾಜಕೀಯ ಮತ್ತು ಗ್ರಾಮಸ್ವರಾಜ್ಯ ಅಧ್ಯಯನಕ್ಕೆ ಯೋಗ್ಯವಾದ ಗಂಭೀರ ವಿಷಯಗಳಾಗಿವೆ ಮತ್ತು ಈ ವಿಷಯದಲ್ಲಿ ಜನಸಾಮಾನ್ಯರಿಗೆ ಅರಿವು ಜನರಲ್ಲಿ ಮಾನವೀಯ ಗುಣಗಳನ್ನು ಪುನಃ ತಮ್ಮಲ್ಲಿ ರೂಪಿಸಿಕೊಳ್ಳಲು ಸಹಾಯಕವಾಗುವುದು.

ಮಹಾತ್ಮ ಗಾಂಧೀಜಿಯವರು ಒಬ್ಬ ಆದರ್ಶವಾದಿಯಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಚಿಂತಕನಾಗಿ ಬೆಳೆಸಿದ ತತ್ವಗಳಲ್ಲಿ ಧರ್ಮದರ್ಶಿತ್ವ, ಸತ್ಯಾಗ್ರಹ, ಗ್ರಾಮಗಳ ಪುನರ್‌ರಚನೆ, ಸತ್ಯ ಮತ್ತು ಅಹಿಂಸೆತತ್ವಗಳಾಗಿವೆ. ಅಹಿಂಸಾತ್ಮಕ ನೆಲೆಯಲ್ಲಿ ರಾಜ್ಯವನ್ನು ಮರುರೂಪಿಸಲು ಪರಿಶ್ರಮಿಸಿದ್ದಾರೆ. ಅವರು ಅಧಿಕಾರ ವಿಕೇಂದ್ರೀಕರಣಕ್ಕೆ ಬಹಳ ಮಹತ್ವ ನೀಡಿದ್ದಾರೆ. ಮಹಾತ್ಮ ಗಾಂಧೀಜಿಯವರು ಅಧಿಕಾರಯುತ ರಾಜ್ಯಕ್ಕೆ ಬದಲಾಗಿ ಸೇವಾ ರಾಜ್ಯವನ್ನು ಬಯಸಿದ್ದರು. ಅದರಲ್ಲಿ ಮತನಿರಪೇಕ್ಷ ಹಾಗೂ ಅಹಿಂಸಾತ್ಮಕ ತತ್ವಗಳನ್ನು ಸಮೀಕರಿಸಿ ಒಂದು ಆದರ್ಶರಾಜ್ಯದ ಕಲ್ಪನೆಯನ್ನು ಕಂಡರು.ಇದನ್ನೇ ಅವರು ರಾಮರಾಜ್ಯ ಎಂದು ಕರೆದಿದ್ದು ಎಲ್ಲ ಪ್ರಜೆಗಳಿಗೂ ನ್ಯಾಯ ಪ್ರಾಮಾಣಿಕವಾಗಿ ಹಾಗೂ ಸುಲಲಿತವಾಗಿ ದೊರೆಯತಕ್ಕದ್ದು ಎಂದು ವಾದಿಸಿದರು. ಇಂತಹ ಆದರ್ಶ ರಾಜ್ಯವು ರೂಪುಗೊಳ್ಳಬೇಕೆಂದರೆ ಪ್ರಜೆಗಳಿಗೆ ವಾಕ್ ಸ್ವಾತಂತ್ರ್ಯ ಆರಾಧನಾ ಸ್ವಾತಂತ್ರ್ಯ ಪತ್ರಿಕೆ ಸ್ವಾತಂತ್ರ್ಯ ದೊರೆಯಬೇಕು ಎನ್ನುವುದು ಅವರ ವಾದ. ಪ್ರತಿಯೊಂದು ಕ್ಷೇತ್ರದಲ್ಲಿಯೂ

ಸಮಾನ ಅವಕಾಶಗಳು ದೊರೆತಾಗ ಮಾತ್ರ ಒಂದು ಆದರ್ಶ ಗ್ರಾಮವಾಗಿ ರೂಪುಗೊಳ್ಳಬಹುದು. ಗಾಂಧೀಜಿಯವರ ತತ್ವಗಳು ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸರ್ವೋದಯ, ಸತ್ಯಾಗ್ರಹ, ಶ್ರಮ, ಗ್ರಾಮೀಣ ವಿಚಾರಗಳು, ಆಡಳಿತ ವ್ಯವಸ್ಥೆ ಮೊದಲಾದುಗಳನ್ನು ಕೇಂದ್ರೀಕರಿಸಿದೆ. ಅವರು ಪಕ್ಷರಹಿತ ಗ್ರಾಮೀಣ ಆಡಳಿತ ವ್ಯವಸ್ಥೆಗೆ ಒತ್ತು ನೀಡಿದರು. ಗಾಂಧೀಜಿಯವರು ಒಬ್ಬ ರಾಜಕಾರಣಿಯಾಗಿ, ರಾಜಕೀಯ ಸುಧಾರಕರಾಗಿ ಹಾಗೂ ಚಿಂತಕರಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ ಅನಿಷ್ಠಗಳನ್ನು ಹೋಗಲಾಡಿಸಲು ಪ್ರಯತ್ನಿಸಿದ್ದರು. ಇದಕ್ಕಾಗಿ ಇವರು ಅಧಿಕಾರ ವಿಕೇಂದ್ರೀಕರಣ, ಉತ್ಪಾದನಾಂಶಗಳ ವಿಕೇಂದ್ರೀಕರಣ, ಅಸ್ಪೃಶ್ಯತೆ ರದ್ದು, ಜೈಲುಗಳ ಸುಧಾರಣೆ , ಅಧಿಕಾರ ದಬ್ಬಾಳಿಕೆಯ ವಿರುದ್ಧ ಹೋರಾಟ ನಡೆಸಿ ಸಮಾಜದ ಹಿತಕ್ಕಾಗಿ ಆಸ್ತಿಯನ್ನು ನ್ಯಾಸವಾಗಿ ಬಳಕೆ ಮಾಡಲು ಕರೆ ನೀಡಿದ್ದು, ಗ್ರಾಮ ಪಂಚಾಯತ್ ಸ್ಥಾಪನೆ, ಎಲ್ಲರಿಗೂ ಶಿಕ್ಷಣ ನೀಡಿಕೆ, ಗುಡಿ ಮತ್ತು ಖಾದಿ ಕೈಗಾರಿಕೆಗಳ ಸ್ಥಾಪನೆಗೆ ಕರೆ ನೀಡಿರುವುದು, ಮತೀಯ ಸಾಮರಸ್ಯತೆಗೆ ಕರೆ ನೀಡಿದ್ದು, ಮಹಿಳೆಯರಿಗೆ ಗೌರವ ನೀಡುವುದನ್ನು ಬಯಸಿದ್ದು, ಮಹತ್ವವಾದ ತತ್ವಗಳಾಗಿವೆ. ಇವುಗಳು ಇರುವ ಸಮಾಜದಲ್ಲಿ ನ್ಯಾಯ ಸ್ವಾತಂತ್ರ್ಯ, ಸಮಾನತೆ ಮತ್ತು ಸಂತೋಷವನ್ನು ಕಾಣುತ್ತೇವೆ. ಇದೇ ಸುಖೀ ರಾಜ್ಯ ಅಥವಾ ರಾಮರಾಜ್ಯ ಎಂದು ಕರೆದಿದ್ದು, ಭಾರತ ಸಂವಿಧಾನದ ರಚನಾಕಾರರು ಈ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುವ ಮೂಲಕ ರಾಜನೀತಿ ನಿರ್ದೇಶನ ತತ್ವಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ.

ಗಾಂಧೀಜಿಯವರು ರಾಷ್ಟ್ರದ ಆರ್ಥಿಕ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುತ ಚಿಂತಿಸಿದ್ದರು. ಭಾರತದಲ್ಲಿ ಬಹುತೇಕ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಅವರು ವರ್ಷದಲ್ಲಿ ಆರು ತಿಂಗಳು ನಿರುದ್ಯೋಗಿಗಳಾಗಿರುತ್ತಾರೆ. ಆದುದರಿಂದ ಅವರುಗಳಿಗೆ ನೇಯ್ಗೆಯಂತಹ ಗುಡಿ ಕೈಗಾರಿಕೆಯನ್ನು ಸ್ಥಾಪಿಸುವಂತೆ ಸಲಹೆ ನೀಡಿದ್ದರು. ಇದರಿಂದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ಜೊತೆಗೆ ರಾಷ್ಟ್ರದ ಆರ್ಥಿಕ ಸಮಸ್ಯೆಯನ್ನು ಉತ್ತಮಪಡಿಸಬಹುದೆಂಬ ಆಶಯವನ್ನು ಹೊಂದಿದ್ದರು.

ಗಾಂಧೀಜಿಯವರು ಅಧಿಕಾರ ವಿಕೇಂದ್ರೀಕರಣದ ಮೂಲಕ ನೈಜವಾದ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ತರಬಹುದು ಎಂದು ನಂಬಿದರು. ಸರಕಾರವು ಗ್ರಾಮ ಪಂಚಾಯತ್‌ಗಳಿಗೆ ಹೇಗೆ ಅಧಿಕಾರವನ್ನು ಹಂಚಿಕೊಡಬೇಕು, ಪಂಚಾಯತ್‌ಗೆ ಹೇಗೆ ಪಕ್ಷಾತೀತವಾಗಿ ಸದಸ್ಯರನ್ನು ಆಯ್ಕೆಮಾಡಬೇಕು. ಗ್ರಾಮ ಪಂಚಾಯತ್‌ಗಳು ಹೇಗೆ ಕಾರ್ಯನಿರ್ವಹಿಸಬೇಕು, ವ್ಯಕ್ತಿಗಳು ತಮ್ಮ ಸ್ವಾತಂತ್ರವನ್ನು ಹೇಗೆ ಬಳಸಬೇಕು, ಇವೇ ಮೊದಲಾದ ಉದ್ದೇಶಗಳನ್ನು ನಮ್ಮ ಮುಂದಿಟ್ಟದ್ದಾರೆ. ಅಧಿಕಾರ ಹಣಕ್ಕಿಂತ ಸೇವಾ ಮನೋಭಾವನೆ ಮುಖ್ಯ ಎಂದು ಹೇಳಿದ್ದು, ಭಾರತ ಸಂವಿಧಾನದ73 ಮತ್ತು 74 ನೇ ಸಂವಿಧಾನ ತಿದ್ದುಪಡಿಗಳಾದ ಕೇಂದ್ರ ಸರಕಾರ, ಸ್ಥಳೀಯ ಪಂಚಾಯತ್‌ಗಳ ಮೂಲಕ ಗಾಂಧೀಜಿಯವರ ಕನಸನ್ನು ಸಕಾರಗೊಳಿಸಲು ಪ್ರಯತ್ನಿಸಿರುವುದನ್ನು ಕಾಣಬಹುದಾಗಿದೆ.

ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಅವರು ನೀಡಿದ್ದು, ಸ್ವಾತಂತ್ರ್ಯ ಮತ್ತು ಸಮಾನತೆಗಳೆರಡೂ ಮಹತ್ವವಾದವುಗಳೆಂದು ವಾದಿಸಿದ್ದರು. ಅವರು ಈ ಆದರ್ಶ ಗುಣಗಳನ್ನು ಭಾರತವು ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳೂ ಅನ್ವಯಿಸಿಕೊಂಡಿರುವುದನ್ನು ನೋಡಿದಾಗ ಗಾಂಧೀಜಿಯವರ ತತ್ವಗಳು

ಎಷ್ಟು ಪ್ರಸ್ತುತ ಎಂಬುದು ಅರಿವಾಗುತ್ತದೆ. ಗಾಂಧೀಜಿಯವರು ಸರ್ವಧರ್ಮ ಸಹಿಷ್ಣುತಾ ಭಾವನೆಯನ್ನು ಹೊಂದಿದವರಾಗಿದ್ದರು. ಈ ಒಂದು ದೃಷ್ಟಿಯಿಂದಲೇ ಭಾರತವು ಯಾವುದೊಂದು ಧರ್ಮವನ್ನು ರಾಷ್ಟ್ರೀಯ ಧರ್ಮವನ್ನಾಗಿ ಅಂಗೀಕರಿಸಿಲ್ಲದೇ ಇರುವುದನ್ನು ಕಾಣಬಹುದಾಗಿದೆ.ಅವರ ರಾಮರಾಜ್ಯ ಸ್ಥಾಪನೆಯಂತಹ ಆದರ್ಶಮಯ ಕನಸು ಅತ್ಯಂತ ಪ್ರಸ್ತುತವಾದುದಾಗಿದೆ. ಧರ್ಮ ಸಹಿಷ್ಣುತೆಯಿಂದ ಕೂಡಿದ ಸ್ವತಂತ್ರ, ಸಮಾನತೆ, ಸಂತೋಷಗಳಿಂದ ಕೂಡಿದ ರಾಷ್ಟ್ರ ಸ್ಥಾಪನೆಯಾಗಿದೆ. ಇವರ ಕನಸು ಅಗತ್ಯವಾಗಿಯೂ ಮತ್ತು ಪ್ರಸ್ತುತವಾಗಿ ಅವಶ್ಯಕತೆ ಇದೆ.

ಗಾಂಧೀಜಿಯವರು ಸ್ಪಷ್ಟವಾದಂತಹ ರಾಜಕೀಯ ಚಿಂತನೆಯನ್ನು ವ್ಯಕ್ತಪಡಿಸಿಲ್ಲ. ರಾಜ್ಯದ ಬಗ್ಗೆ ರಾಜ್ಯ ಇರಬೇಕೇ ಅಥವಾ ಬೇಡವೆ ಎಂಬುದರ ಬಗ್ಗೆ ನಿಖರವಾದಂತಹ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಒಂದು ಕಡೆ ರಾಜ್ಯರಹಿತ ಪ್ರಜಾಪ್ರಭುತ್ವ ಇರಬೇಕು ಎಂದು ಹೇಳಿದರೆ, ಮತ್ತೊಂದು ಕಡೆ ಸತ್ಯ ಮತ್ತು ಅಹಿಂಸಾ ತತ್ವಗಳನ್ನು ಆಧರಿಸಿ ಕೊಂಡ ರಾಜ್ಯ ಇರಬೇಕೆಂದು ಹೇಳಿದ್ದಾರೆ.

ಅವರು ಖಾಸಗಿ ಆಸ್ತಿಯನ್ನು ನ್ಯಾಸ ವ್ಯವಸ್ಥೆಯಾಗಿ ಬಳಸುವಂತೆ ಕರೆ ನೀಡಿದ್ದಾರೆ. ಖಾಸಗಿ ಆಸ್ತಿಯನ್ನು ನ್ಯಾಸವಾಗಿ ಬಳಸುವ ಮೂಲಕ ಜನರು ಸಂತೋಷವಾಗಿರುತ್ತಾರೆ ಎಂದಿದ್ದಾರೆ. ಆದರೆ ಇದು ಸಹಕಾರ್ಯ ಸಾಧ್ಯವಿಲ್ಲದಂತಹ ಅಭಿಪ್ರಾಯವಾಗಿದೆ. ಹಾಗೆಯೇ ಖಾಸಗಿ ಆಸ್ತಿಯಲ್ಲಿ ಗರಿಷ್ಠ ಮಿತಿಯನ್ನು ವಿಧಿಸುವ ಜೊತೆಗೆ ಅವಶ್ಯಕತೆಕ್ಕಿಂತ ಹೆಚ್ಚಿನ ಆಸ್ತಿಯನ್ನು ಸಮಾಜಕ್ಕೆ ಹಂಚಬೇಕು ಎಂದು ಕರೆ ಕೊಟ್ಟಿದ್ದಾರೆ.

ಉದ್ದೇಶಗಳು

1. ಸ್ಥಳೀಯ ಸರಕಾರಗಳ ಅಧಿಕಾರ ಮತ್ತು ಕಾರ್ಯಕ್ರಮಗಳನ್ನು ವಿವರವಾಗಿ ಸಮಗ್ರವಾದ ಪ್ರಸ್ತಾವನೆಗಳನ್ನು ರೂಪಿಸುವುದು.
2. ಗಾಂಧೀಜಿಯವರ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಪರಿಕಲ್ಪನೆಯ ಅಂಶಗಳನ್ನು ಪರಾಮರ್ಶಿಸುವುದು.
3. ಭಾರತದ ರಾಜಕಾರಣದಲ್ಲಿ ಗಾಂಧೀಜಿಯವರ ಚಿಂತನೆಗಳು ಪ್ರೇರೆಪಿಸಿದ ಮೌಲ್ಯಗಳ ಪರಾಮರ್ಶೆ.
4. ಗಾಂಧೀಜಿಯವರ ಶ್ರಮದ ಪರಿಕಲ್ಪನೆಯನ್ನು ಇಟ್ಟುಕೊಂಡು ದುಡಿಮೆ, ಬೇಸಾಯ ಹಾಗೂ ಕಾರ್ಮಿಕರ ಮುಂದಿರುವ ಆಯ್ಕೆಯನ್ನು ವಿಶ್ಲೇಷಿಸುವುದು.
5. ಮಹಾತ್ಮ ಗಾಂಧೀಜಿಯವರ ವಿವಿಧ ರಾಜಕೀಯ ತತ್ವಗಳ ವಿಶ್ಲೇಷಣೆ ಮಾಡಿ ನಿಜ ಜೀವನಕ್ಕೆ ಅಳವಡಿಸುವಂತೆ ಅರಿವು ನೀಡುವುದು.

ಸಾಹಿತ್ಯ ಪರಾವಿಮರ್ಶೆ

ನಮ್ಮೆದುರಿನ ಸ್ಥಳೀಯ ಆಡಳಿತದ ಜ್ಞಾನದ ಪರಂಪರೆಯನ್ನು ವರ್ತಮಾನಗಳ ಸನ್ನಿವೇಶಗಳಲ್ಲಿ ಮರು ಶೋಧಿಸಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳು ತಂದೊಡ್ಡುವ ಸವಾಲುಗಳಿಗೆ ಎದುರಾಗಿ ಉತ್ತಮ ಆಡಳಿತದ ಬೇರುಗಳನ್ನು ಬಲಗೊಳಿಸಿ ಹೊಸ ಮಾರ್ಗದಲ್ಲಿ ಪಂಚಾಯತ್ ವ್ಯವಸ್ಥೆಯನ್ನು ಬಲಗೊಳಿಸುವ ಕೆಲಸವಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಆಡಳಿತದ ಪ್ರತಿಪಾದರಕು, ತತ್ವಜ್ಞಾನಿಗಳು, ತಜ್ಞರು ಹಾಗೂ ಚಿಂತಕರುಗಳು ವಿವಿಧ ಕಾಲಘಟ್ಟದಲ್ಲಿ ತಮ್ಮದೇ ಆದ ದೇಶೀಯ ಚಿಂತನೆ ಹಾಗೂ ಸಿದ್ಧಾಂತಗಳನ್ನು ಪ್ರತಿಪಾದಿಸಿ ಇತಿಹಾಸದ ಪುಟಗಳಲ್ಲಿ ದಾಖಲಿಸಿದ್ದಾರೆ. ಅವುಗಳನ್ನು ಆಯ್ಕೆ ಮಾಡಿ ಸಂಶೋಧನೆಗೆ ಒಡ್ಡುವ ಹಿನ್ನೆಲೆಯಲ್ಲಿ ಸಾಹಿತ್ಯ ಪರಾವಿಮರ್ಶೆಯನ್ನು ಮಾಡಲಾಗುತ್ತದೆ. **ಪ್ರೊ.ಎನ್ ಹಾಲಪ್ಪ (2014)** ಅವರು ಬರೆದ "**ಸಮಕಾಲೀನ ಸಮಾಜಕ್ಕೆ ಗಾಂಧಿವಾದ ಔಚಿತ್ಯತೆ**" ಎಂಬ ಗ್ರಂಥದಲ್ಲಿ ಗಾಂಧೀಜಿಯವರು ಬೋಧಿಸದ ಸತ್ಯ ಮತ್ತು ಅಹಿಂಸೆಯ ತತ್ವಗಳು ಇಂದಿಗೂ ಸೂಕ್ತವಾಗಿವೆ. ಈ ತತ್ವಗಳು ನಮ್ಮ ರಾಷ್ಟ್ರವನ್ನು ದಾಸ್ಯದ ಸಂಕೋಲೆಗಳಿಂದ ಮುಕ್ತಗೊಳಿಸಿದವು ಎಂಬುದು ಎಲ್ಲರಿಗೂ ತಿಳಿದ ವಿಷಯ.ಅಲ್ಲದೆ ಗಾಂಧೀಜಿಯವರ ಈ ತತ್ವಗಳನ್ನು ಅನುಸರಿಸಿದ ನೆಲ್ಸನ್ ಮಂಡೇಲಾರವರು ಆಫ್ರಿಕಾದಲ್ಲಿ ಡಾ ಮಾರ್ಟಿನ್ ಲೂಥರ್‌ಕಿಂಗ್ ಅಮೇರಿಕಾದಲ್ಲಿ ತಮ್ಮ ಹೋರಾಟಗಳಲ್ಲಿ ಯಶಸ್ವಿಯಾಗಿದ್ದಾರೆ.ಗುರಿಯಷ್ಟೆ ಸಾಧನವು ಪರಿಶುದ್ಧವಾಗಿರಬೇಕೆಂದು ಎಂಬ ಗಾಂಧೀಜಿಯವರ ಸೂಕ್ಮತಾ ಅನುಭೂತಿ ಉತ್ತಮ ಆಡಳಿತಕ್ಕೆ ಮಾರ್ಗಸೂಚಿಯಾಗಿರುತ್ತದೆ. ಆದರೆ ಅಂತರಾಷ್ಟ್ರೀಯ ರಂಗದಲ್ಲಿ ಅಹಿಂಸಾತತ್ವ ಎಷ್ಟರ ಮಟ್ಟಿಗೆ ಸೂಕ್ತ ಎಂಬುದರ ಬಗ್ಗೆ ಸಂಶಯವಿದ್ದರೂ ಜಗತ್ತಿನಲ್ಲಿ ಇಂದು ಕಾಣುವ ಅಶಾಂತಿ ಅಭದ್ರತೆ ಹಾಗೂ ಅಸ್ಥಿರತೆಯನ್ನು ನೋಡಿದಾಗ ಗಾಂಧೀಜಿಯವರ ತತ್ವಗಳು ಇಂದಿಗೂ ಪ್ರಸ್ತುತ ಎಂದು ಅನಿಸುತ್ತದೆ.

ಐವನ್ ಲೋಬೋ (1993) ಅವರು ಬರೆದ "**ಗಾಂಧೀಜಿಯವರ ಆಧುನಿಕತೆಯ ಟೀಕೆಗಳು: ಹಿಂದೂ ಸ್ವರಾಜ್ ಗಾಂಧೀಜಿಯ ಮೇಲೊಂದು ವಿಶ್ಲೇಷಣೆ**" ಎಂಬ ಪ್ರಬಂಧದಲ್ಲಿ ಭಾರತದಲ್ಲಿ ಆಧುನಿಕತೆಯ ಉಗಮ, ಅದು ಪಸರಿಸಲ್ಪಟ್ಟ ರೀತಿ ಹಾಗೂ ಭಾರತ ಸಮಾಜದ ಮೇಲೆ ಅದು ಬೀರಿದ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಗ್ರಾಮೀಣ ಭಾರತದ ಆಧುನಿಕತೆಗೆ ತೆರೆದುಕೊಳ್ಳುವಾಗ ಯಾವುದು ಆಧುನಿಕತೆಯ ವಿಕೃತಗಳನ್ನು ಭಾರತದ ಸಮಾಜದಿಂದ ಹೀರಿಕೊಳ್ಳುತ್ತದೆ.ಎನ್ನುವುದನ್ನು ಈ ಆಧ್ಯಾಯ ವಿಮರ್ಶೆಗೆ ಒಳಪಡಿಸುತ್ತದೆ.

ಡಾ.ಪ್ರೊ ಕೃಷ್ಣಪ್ಪ ಮಡಿವಾಳ (2010) ಅವರು ಬರೆದ "**ಗಾಂಧೀಜಿ ಅರ್ಥಶಾಸ್ತ್ರ**" ಎಂಬ ಪುಸ್ತಕದ ಕೃತಿಯಲ್ಲಿ ಗಾಂಧೀಜಿಯವರು ಗ್ರಾಮೀಣ ಭಾರತ ಚಿಂತನೆಯನ್ನು ವಿಶ್ಲೇಷಿಸಲಾಗಿದೆ. ಗಾಂಧೀಜಿ ತಮ್ಮ ಗ್ರಾಮೀಣ ಭಾರತದ ಚಿಂತನೆಯೊಂದನ್ನು ತಮ್ಮ ಜೀವನದುದ್ದಕ್ಕೂ ವ್ಯಕ್ತಪಡಿಸಿದರು. ಅವರ ಮುಖ್ಯ ಗುರಿ ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣ ನೀಡುವುದು ಮತ್ತು ಅದರ ಸಹಾಯದಿಂದ ಪರೋಕ್ಷವಾಗಿ ಗ್ರಾಮೀಣಾಭಿವೃದ್ಧಿ ಸಾಧಿಸಬಹುದಾಗಿದೆ.ಗ್ರಾಮೀಣ ಪ್ರದೇಶದ ಬಡಜನರ ಬದುಕು, ಸ್ಥಿತಿ ಸುಧಾರಣೆ ಮಾಡಲು ಪ್ರಯತ್ನಿಸುವುದು ಗಾಂಧೀಜಿಯವರ ಯೋಚನೆಯಾಗಿತ್ತು. ಅವರು ಹೇಳಿರುವಂತೆ, ಭಾರತದ ಗ್ರಾಮೀಣ ಪ್ರದೇಶದ ಜನರ ಅವಶ್ಯಕತೆಗಳನ್ನು ಪೂರೈಸುವ ನಿಟ್ಟನಲ್ಲಿ ನಾವು ಒಂದು ಪಕ್ಷ ಕಡ್ಡಾಯ ಶಿಕ್ಷಣ ಜಾರಿಗೆ

ತರುವುದಾದರೆ, ಶಿಕ್ಷಣ ಕ್ರಮವು ವಿದ್ಯಾರ್ಥಿಗಳಲ್ಲಿ ಸ್ವಸಹಾಯ ಹುರುಪನ್ನು ಉತ್ತೇಜಿಸುವಂತಾಗಬೇಕು . ವೃತ್ತಿಪರ ಶಿಕ್ಷಣ ಗ್ರಾಮೀಣ ಜನರ ಸಮಸ್ಯೆಗಳ ನಿವಾರಣೆಗೆ ಮಾರ್ಗೋಪಾಯಗಳನ್ನು ತಿಳಿಸುತ್ತದೆ.ಗ್ರಾಮೀಣ ಬಡಜನರ ಜೀವನ ಸುಧಾರಣೆಯು ಗ್ರಾಮೀಣ ಪುನರ್‌ರಚನೆಯ ಮುಖ್ಯ ಗುರಿಯಾಗಿದೆ.ಹಳ್ಳಿಯ ಜನರು ಗ್ರಾಮೀಣ ಭಾರತದ ನರಗಳು. ಗ್ರಾಮೀಣ ಜನರ ವ್ಯವಸಾಯ ಚಟುವಟಿಕೆಗಳು ಗ್ರಾಮಗಳ ಆರ್ಥಿಕ ಶಕ್ತಿಯನ್ನು ನಿರ್ಧರಿಸುತ್ತದೆ.

ಡಾ.ಎಚ್.ಆರ್ ಕೃಷ್ಣಯ್ಯ ಗೌಡ (2015) ಅವರು ಬರೆದ **"ಗ್ರಾಮೀಣ ಅಭಿವೃದ್ಧಿಗೆ ಮಾರ್ಗಗಳು"** ಎಂಬ ಲೇಖನದಲ್ಲಿ ಗಾಂಧೀಜಿಯವರು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ಆರ್ಥಿಕ ವಿಚಾರಗಳನ್ನು ಪ್ರತಿಪಾದಿಸಿರುವರು. ಈ ವಿಚಾರಗಳು ಸತ್ಯ ಮತ್ತು ಅಹಿಂಸೆಯ ತತ್ವಗಳ ಮೇಲೆ ನಿಂತಿವೆ. ಮಹತ್ಮಾ ಗಾಂಧಿಜಿಯವರ ಮತ್ತು ಅವರ ಅನುಯಾಯಿ ಆರ್ಥಿಕ ದೃಷ್ಟಿಕೋನಗಳನ್ನು ಗಾಂಧೀ ಆರ್ಥಿಕ ಚಿಂತನೆ ಎಂತಲೇ ಕರೆಯಲಾಗಿದೆ. ಈ ಆರ್ಥಿಕ ಚಿಂತನೆಯು ಬಹುತೇಕವಾಗಿ ಪಾಶ್ಚಿಮಾತ್ಯ ಆಧುನಿಕ ಆರ್ಥಿಕ ಸಿದ್ಧಾಂತಕ್ಕೆ ವಿರುದ್ಧವಾದುದು. ಗಾಂಧೀಜಿಯವರ ಪ್ರಕಾರ ನಿಜವಾದ ಭಾರತವು ಹಳ್ಳಿಗಳಲ್ಲದೆಯೇ ಹೊರತು ಪಟ್ಟಣಗಳಲ್ಲಿ ಅಥವಾ ನಗರಗಳಲ್ಲಿ ಅಲ್ಲ. ಹಿಂದಿನ ಕಾಲದ ಗ್ರಾಮೀಣ ಆರ್ಥಿಕತೆಯಲ್ಲಿ ಉತ್ಪಾದನೆಯು ವಿತರಣೆ ಮತ್ತು ಅನುಭೋಗದ ಜೊತೆಗೆ ಅನುಸರಿಸಿ ಶ್ರಮಿಸುತ್ತಿತ್ತು. ಗ್ರಾಮೀಣ ಅರ್ಥವ್ಯವಸ್ಥೆಯ ಎಲ್ಲಾ ಹಂತಗಳಲ್ಲಿ ಜನರ ಸಹಭಾಗಿತ್ವವನ್ನು ಅವರು ಕೋರಿದ್ದಾರೆ. ಹಾಗೆ ಸಮಗ್ರವಾಗಿ ಅಭಿವೃದ್ಧಿ ಹೊಂದಿದ ಹಳ್ಳಿಗಳ ವ್ಯವಸ್ಥೆಯನ್ನು ಗಾಂಧೀಜಿ ಗ್ರಾಮೀಣ ಸರ್ವೋದಯ ಎಂದು ಕರೆದಿದ್ದಾರೆ.

ಸೌಮ್ಯ ಮೊಹಂತಿ (2012) "ಮಹಾತ್ಮ ಗಾಂಧೀಜಿಯ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಮತ್ತು ಬುಡಕಟ್ಟಿನ ಜೀವನ ಒರಿಸ್ಸಾದ ಸುಂದರಗಾರ್ ಜಿಲ್ಲೆಯ ಅಧ್ಯಯನ" ಎಂಬ ಪ್ರಬಂಧದಲ್ಲಿ ಒರಿಸ್ಸಾದ ಸುಂದರ್‌ಗಾರ್ ಜಿಲ್ಲೆಯ ಬುಡಕಟ್ಟಿನ ಜನರ ಮೇಲೆ ಮಹತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯು ಬೀರಿದ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ತಮ್ಮ ಕೃತಿಯಲ್ಲಿ 2005 ರಿಂದ 2009 ರವರೆಗೆ ಆದಂತಹ ಬದಲಾವಣೆಗಳನ್ನು ಚರ್ಚಿಸಿದ್ದಾರೆ. ಇದರಲ್ಲಿ ಮಹತ್ಮಾ ಗಾಂಧೀಜಿಯವರ ಉದ್ಯೋಗ ಖಾತರಿ ಯೋಜನೆಯ ಸಾಧಕಗಳನ್ನು ಚರ್ಚಿಸಿದ್ದಾರೆ.ವಿವಿಧ ಬುಡಕಟ್ಟು ಜನರ ಜೀವನ ಮಟ್ಟದಲ್ಲಿ ಉಂಟಾದ ಬದಲಾವಣೇಗಳನ್ನು ಅಂಕಿ ಅಂಶ ಸಹಿತ ವಿಶ್ಲೇಷಣೆ ಮಾಡಿದ್ದಾರೆ.

ಶನ್‌ಮುಬ್ಬನ್ ನಾಯರ್ (2009) "ಕಡಲುರೂರು ಡಿಂಡಿಗಲ್ ಕಂಚಿಪುರ ತಿರುವಳ್ಳರ್ ಜಿಲ್ಲೆಗಳಲ್ಲಿ ಮಹತ್ಮಾಗಾಂಧೀಜಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ವಿಶ್ಲೇಷಣೆ" ಎಂಬ ಪ್ರಬಂಧದಲ್ಲಿ ಅವರು ಮೇಲೆ ಜಿಲ್ಲೆಗಳಲ್ಲಿ ಗ್ರಾಮೀಣ ಜನರ ಜೀವನ ಮಟ್ಟದಲ್ಲಿ ಆದ ಬದಲಾವಣೆ, ಹಳ್ಳಿಯ ಪರಿಮಿತಿಯ ಒಳಗೆ ಕೆಲಸದ ಅವಕಾಶ, ಕೆಲಸದಲ್ಲಿ ಲಿಂಗ ಸಮಾನತೆ ಮತ್ತು ಅದರ ಪ್ರಭಾವ ಹಣಕಾಸಿನ ವ್ಯವಹಾರದಲ್ಲಿ ಆದಂತಹ ಚೇತರಿಕೆ ಎಲ್ಲಾ ಅಂಶಗಳನ್ನು ಅಧ್ಯಯನ ಮಾಡಿದ್ದಾರೆ. ಜನರ ಅಭಿಪ್ರಾಯಗಳನ್ನು ಪ್ರಶ್ನಾವಳಿಯ ಮೂಲಕ ಸಂಗ್ರಹಿಸಿ ಮಾಹಿತಿ ಪಡೆದುಕೊಂಡಿದ್ದಾರೆ.ಸಾಮಾಜಿಕವಾಗಿ ಈ ಯೋಜನೆ ಜಾರಿಯ ನಂತರ ಆದ ಬದಲಾವಣೆಗಳನ್ನು ತಿಳಿಸಿದ್ದಾರೆ.ಈ ಯೋಜನೆಯ ಜಾರಿಯಿಂದ ಮಹಿಳೆಯರ ಜೀವನ ಮಟ್ಟದಲ್ಲಿ ಉಂಟಾದ ಬದಲಾವಣೆಯನ್ನು ಗುರುತಿಸಿದ್ದಾರೆ.

ಡಾ.ಎಚ್.ಎಸ್ ದೊರೆಸ್ವಾಮಿ (2013) ಅವರು ಬರೆದ "**ಹಿಂದ್ ಸ್ವರಾಜ್ ಮತ್ತು ಇತರ ಲೇಖನಗಳು**" ಎಂಬ ಲೇಖನದಲ್ಲಿ ಸ್ವದೇಶಿ ಸ್ವರಾಜ್ಯ, ಸ್ವಾಯತ್ತತೆ, ಸ್ವಾವಲಂಬನೆ, ಸಂಪನ್ಮೂಲಗಳ ಮಿತಬಳಕೆ, ಸ್ವಯಂನಿಯಂತ್ರಣತತ್ವಗಳ ಮೇಲೆ ಹಿಂದೂ ಸ್ವರಾಜ್ಯವನ್ನು ಗಾಂಧೀಜಿ ರಚಿಸಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸ್ವರಾಜ್ ಎಂದರೆ ಭಯವನ್ನು ದೂರೀಕರಿಸುವುದು; ಯಾವ ರಾಷ್ಟ್ರ ಅಥವಾ ಪ್ರಜೆ ಸಾವಿನ ಭಯದಿಂದ ತತ್ತರಿಸುತ್ತಾರೋ ಅದು ಸ್ವರಾಜ್ಯವನ್ನು ಪಡೆಯಲಾರದು.ಪಡೆದ ಸ್ವರಾಜ್ಯವನ್ನು ಉಳಿಸಿಕೊಳ್ಳಲಾರದು. ಅಂತೆಯೇ ಸ್ವರಾಜ್ಯವನ್ನು ಆತ್ಮ ಸಂಯಮ ಎಂದು ಅರ್ಥೈಸಿದರು. ತಮ್ಮನ್ನು ತಾವು ಹತೋಟಿಯಲ್ಲಿಟ್ಟುಕೊಳ್ಳುವುದೇ ಸ್ವರಾಜ್ಯದ ಮೊದಲ ಹೆಜ್ಜೆ ಎಂದರು. ಹೋಮ್ ರೂಲ್ ಎಂದರೆ ತಮ್ಮನ್ನು ತಾವು ಹತೋಟಿಯಲ್ಲಿಟ್ಟುಕೊಳ್ಳುವುದು. ಆತ್ಮಬಲ ಬೆಳೆಸಿಕೊಳ್ಳುವುದು.ರಾಜಕೀಯ ಸ್ವಾತಂತ್ರ್ಯ ಎಂದರೆ ಸ್ವರಾಜ್ಯದ ಫಲವನ್ನು ಪ್ರತಿಯೊಬ್ಬ ವ್ಯಕ್ತಿಯೂ ಅನುಭವಿಸುವಂತಾಗಬೇಕು. ಆಗ ಮಾತ್ರ ಸ್ವಾತಂತ್ರ್ಯ ಅರ್ಥಪೂರ್ಣವೆನಿಸುತ್ತದೆ.

ಎ.ಕೆ.ಮಿಶ್ರಾ ಅಖ್ತರ್ ಮತ್ತು ತಾರಿಕ (2011) ಅವರು ಬರೆದ "**ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರ**" ಎಂಬ ಲೇಖನದಲ್ಲಿ ಭಾರತದ ಸ್ವಾತಂತ್ರ್ಯದ ನಂತರ ಭಾರತ ಸರಕಾರದ ಮುಖ್ಯ ಉದ್ದೇಶವಾಗಿ ಕೃಷಿ ಉದ್ಯಮ, ಶಿಕ್ಷಣ ಆರೋಗ್ಯದ ಮೇಲೆ ಅಭಿವೃದ್ಧಿ ಪೂರಕವಾಗಿ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲಾಯಿತು. ಗ್ರಾಮೀಣ ಭಾರತದ ಅಭಿವೃದ್ಧಿಯ ಮೂಲಕ ಮಾತ್ರ ದೇಶದ ಸರ್ವತೋಮುಖ ಬೆಳವಣಿಗೆ ಸಾಧ್ಯವೆಂದು. ನಿಖರ ನೀಡಲಾಯಿತು. ಈ ನಿಟ್ಟಿನಲ್ಲಿ ಭಾರತದ ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ ಪಂಚಾಯತ್ ರಾಜ್ಯಗಳು ಪರಿಚಯಿಸಲ್ಪಟ್ಟವು.

ಡಾ.ಹೋ.ಶ್ರೀನಿವಾಸಯ್ಯ (2016) ಅವರು ಬರೆದ "**ಮಹಾತ್ಮ ಗಾಂಧಿ ಪ್ರಸ್ತುತತೆ**" ಎಂಬ ಗ್ರಂಥದಲ್ಲಿ ಭಾರತ'ದ ಭಾಗ್ಯವಿದಾತ ಮತ್ತು ರಾಷ್ಟ್ರಪಿತ ಎಂಬ ಹೆಗ್ಗಳಿಕೆಗೆ ಪಾತ್ರರಾದ ಮಹಾತ್ಮ ಗಾಂಧೀಜಿಯವರು ಭಾರತಕ್ಕೆ ಮಾತ್ರವಲ್ಲದೆ, ವಿಶ್ವದ ದೃಷ್ಟಿಯಲ್ಲಿಯೂ ಒಬ್ಬ ಅಸಾಮಾನ್ಯ ಮಹಾಪುರುಷರೆನಿಸಿಕೊಂಡಿದ್ದಾರೆ. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ದೇಶಕ್ಕಾಗಿ ನಾಡಿನ ಸ್ವಾತಂತ್ರ್ಯಕ್ಕಾಗಿ ಇವರು ನಡೆಸಿದ ಅವಿರತ ಹೋರಾಟ, ಕೈಗೊಂಡ ನಿಲುವು, ದೂರದೃಷ್ಟಿ ದೇಶದ ಚರಿತ್ರೆಯ ಪುಟಗಳಲ್ಲಿ ಆರ್ಥಿಕ ವಿಚಾರಗಳು ಸಂಸ್ಕೃತಿ, ಜನಜೀವನ, ಸಾಹಿತ್ಯ ಹೀಗೆ ಒಂದಲ್ಲ ಹತ್ತು ಹಲವಾರು ವಿಷಯಗಳಲ್ಲಿ ಇವರ ಜಿಜ್ಞಾಸೆ ಪರಿಪಕ್ವಗೊಂಡು ಅವುಗಳ ಫಲಶ್ರುತಿ ಭವ್ಯ ಭಾರತ ನಿರ್ಮಾಣದಲ್ಲಿ ಸಾರ್ಥಕವೆನಿಸಿದೆ. ಈ ಎಲ್ಲಾ ಸಾಮಾಜಿಕ ಆರ್ಥಿಕ ಮತ್ತು ದಾರ್ಶನಿಕ ಚಿಂತನೆಗಳು ಮುಂದಿನ ಜನ ಮಾನಸದಲ್ಲಿ ಗಾಂಧೀವಾದಕ್ಕೆ ಹಾದಿ ಕಂಡವು. ಪ್ರಸ್ತುತತೆ ಅಂದಿಗಿಂತ ಇಂದು ಹೆಚ್ಚು ಮಹತ್ವ ಪೂರ್ಣವಾದುದ್ದೆಂಬುದನ್ನು ಮರೆಯಬಾರದು.

ಡಾ. ಶ್ರೀಧರ (2002) ಅವರು ಬರೆದ "**ವಿಕೇಂದ್ರೀಕರಣ ಮತ್ತು ಗ್ರಾಮ ಪಂಚಾಯತ್**" ಎಂಬ ಲೇಖನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಅಧಿಕಾರ ವಿಕೇಂದ್ರೀಕರಣದ ಅತ್ಯಂತ ಪ್ರಾಥಮಿಕ ಘಟಕವೇ ಗ್ರಾಮ ಪಂಚಾಯತ್ ಎಂದು ಹೇಳುತ್ತದೆ. ಗ್ರಾಮ ಪಂಚಾಯತ್ ಸಬಲೀಕರಣಗೊಂಡರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಲು ಸಾಧ್ಯ. ಅಧಿಕಾರದ ವಿಕೇಂದ್ರೀಕರಣದಿಂದಾಗಿ ಯಾವ ಸರಕಾರವು ನಿರಂಕುಶವಾಗಿ ಇರಲು

ಸಾಧ್ಯವಿಲ್ಲ. ಅಧಿಕಾರದ ಎಲ್ಲ ಹಂತಗಳನ್ನು, ವ್ಯವಸ್ಥೆಗಳನ್ನು ಒಬ್ಬನೇ ವ್ಯಕ್ತಿ ಅಥವಾ ಒಂದೇ ಸಂಸ್ಥೆ ಸಮಗ್ರವಾಗಿ ತನ್ನ ಹಿಡಿತದಲ್ಲಿ ಇಟ್ಟುಕೊಂಡು ನಿಯಂತ್ರಿಸುವುದು ಕೇಂದ್ರೀಕೃತ ವ್ಯವಸ್ಥೆ. ಈ ಕೇಂದ್ರೀಕೃತ ಅಧಿಕಾರವನ್ನು ಅಥವಾ ಕಾರ್ಯಭಾರವನ್ನು ಬೇರೆ ಬೇರೆ ಶ್ರೇಣಿಗಳಲ್ಲಿ, ಹಂತಗಳಲ್ಲಿ, ವ್ಯಕ್ತಿಗಳಲ್ಲಿ ಹಂಚಿ ಮಾಧ್ಯಮಗಳಲ್ಲಿಯೂ ಸ್ವತಂತ್ರವಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು ವಿಕೇಂದ್ರೀಕರಣ ವ್ಯವಸ್ಥೆ. ಕೇಂದ್ರೀಕರಣ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಪ್ರಮುಖ ನೆಲೆಯಾದರೆ ವಿಕೇಂದ್ರೀಕರಣವು ಪ್ರಜಾಪ್ರಭುತ್ವ ವ್ಯವಸ್ಥೆಯ ಗುಣಾತ್ಮಕ ಕಾರ್ಯ ವಿಧಾನ ಎಂಬುದನ್ನು ವಿವರಿಸುತ್ತಾರೆ.

ಎಮ್.ಅಸ್ಲಮ್ (2007) ಇವರು ಬರೆದ **"ಭಾರತದಲ್ಲ ಪಂಚಾಯತ್‌ರಾಜ್"** ಎಂಬ ಲೇಖನದಲ್ಲಿ ಅಧಿಕಾರ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ಜನಸಮುದಾಯದ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಪಂಚಾಯತ್‌ರಾಜ್ ಸಂಸ್ಥೆಯನ್ನು ಈಗ ಒಂದು ಪ್ರಮುಖ ವ್ಯವಸ್ಥೆಯೆಂದು ಗುರುತಿಸಲಾಗಿದೆ.73ನೇ ಸಾಂವಿಧಾನಿಕ ತಿದ್ದುಪಡಿಯ ಅನಂತರ ಅದು ವಿಶೇಷ ಮಹತ್ವವನ್ನು ಪಡೆಯಿತು.73ನೇ ತಿದ್ದುಪಡಿ ಪಂಚಾಯತಿಗಳಿಗೆ ಅಧಿಕಾರದ ವರ್ಗಾವಣೆಯನ್ನು ರಾಷ್ಟ್ರದ ಮೂಲಭೂತ ದಾಖಲೆಯಾದ ಭಾರತದ ಸಂವಿಧಾನದ ಒಂದು ಭಾಗವಾಗಿ ಮಾಡಿತು ಎಂಬುದನ್ನು ಈ ಲೇಖನ ಮಂಡಿಸುತ್ತದೆ.

ಶ್ರೀಮತಿ ಎಸ್. ಪುಷ್ಪಲತಾ (2015) ಅವರು ಬರೆದ **"ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕಲ್ಪನೆಯ ಹಿನ್ನಲೆಯಲ್ಲ ಸ್ಥಳೀಯ ಸ್ವಯಂ ಸರಕಾರಗಳ ಬೆಳವಣಿಗೆ ಮತ್ತು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಬೆಳವಣಿಗೆ ಒಂದು ಸಮಗ್ರ ಅಧ್ಯಯನ"** ಎಂಬ ಪ್ರಬಂಧದಲ್ಲಿ ಗಾಂಧೀಜಿಯವರು ಪ್ರತಿಪಾದಿಸಿದ ಸ್ಥಳೀಯ ಆಡಳಿತದ ಸಿದ್ಧಾಂತದಡಿಯಲ್ಲಿ ಹಾಗೂ ಸಂಪೂರ್ಣ ಸ್ವಾವಲಂಬಿ ಸಂಸ್ಕೃತಿಯ ನೆಲೆಯಲ್ಲಿ ಗ್ರಾಮೀಣ ಜನತಾಣಗಳನ್ನು, ಜನಸಂಸ್ಕೃತಿಯನ್ನು ಸ್ಥಳೀಯ ಜನಾಡಳಿತದ ಮೂಲಕ ಹೊಸತನದಲ್ಲಿ ಕಟ್ಟುವ ಕೆಲಸ ಸಮಕಾಲೀನ ಸಂದರ್ಭದ ಜಾಗತೀಕರಣ, ಉದಾರೀಕರಣ ಮತ್ತು ಕೈಗಾರೀಕರಣಗಳು ತಂದೊಡ್ಡುವ ಸವಾಲುಗಳ ನಡುವೆ ಆರಂಭವಾಗಬೇಕಾಗಿದೆ. ರಾಷ್ಟ್ರಕ್ಕೆ ದೊರಕಿರುವ ಸ್ವಾತಂತ್ರ್ಯ ಅರ್ಥಪೂರ್ಣವಾಗಬೇಕಾದರೆ ಗ್ರಾಮಗಳು ಅಭಿವೃದ್ಧಿಯಾಗಬೇಕು. ರಾಜಕೀಯ ಅಧಿಕಾರ ಮತ್ತು ಹೊಣೆಗಾರಿಕೆಯನ್ನು ಬುಡಮಟ್ಟಕ್ಕೆ ವಿಕೇಂದ್ರೀಕರಿಸಬೇಕು. ಅಧಿಕಾರ ಮತ್ತು ಅದರ ಹತೋಟಿ ಜನರಲ್ಲಿಯೇ ಇರಿಸಬೇಕು. ಪ್ರಜಾಪ್ರಭುತ್ವದ ಮೂಲಘಟಕವಾದ ಸ್ಥಳೀಯ ಸಂಸ್ಥೆಗಳು ಸ್ವಯಂ ಸರಕಾರಗಳಾಗಿ ಕೆಲಸ ಮಾಡಿದಾಗ ಪ್ರಜಾಪ್ರಭುತ್ವದ ತಾಯಿ ಬೇರುಗಳಾದ ಗ್ರಾಮಗಳ ಅಭಿವೃದ್ಧಿ ಸಾಧ್ಯವಾಗುತ್ತದೆ ಗಾಂಧೀಜಿಯ ಪರಿಕಲ್ಪನೆ ಎಂಬುದನ್ನು ಈ ಪ್ರಬಂಧ ವಿಮರ್ಶಿಸುತ್ತದೆ.

ಗುಂಡೇಗೌಡ (2012) ಅವರು ಬರೆದ **"ಗಾಂಧೀಜಿಯವರ ದೃಷ್ಟಿಯಲ್ಲ ಪಂಚಾಯತ್‌ರಾಜ್ ವ್ಯವಸ್ಥೆ ಹಾಗೂ ಅಧಿಕಾರ ವಿಕೇಂದ್ರೀಕರಣ ಒಂದು ಅಧ್ಯಯನ"** ಎಂಬ ಪ್ರಬಂಧದಲ್ಲಿ ಭಾರತದ ಗ್ರಾಮೀಣ ಜನತೆಯ ಬದುಕು ಆರ್ಥಿಕವಾಗಿ ಸಬಲೀಕರಣವಾಗದೆ ಭಾರತದ ಗ್ರಾಮಗಳು ನೈಜವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಗಾಂಧೀಜಿಯವರ ಅನುಭೂತಿಯನ್ನು ವಿಶ್ಲೇಷಿಸುತ್ತಾರೆ. ಈ ಪ್ರಬಂಧದಲ್ಲಿ ಸಂಶೋಧಕರು ಪ್ರಾಚೀನ ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತ್‌ಗಳು ಮಹಾತ್ಮ ಗಾಂಧೀಜಿಯವರ ಆದರ್ಶ ಗ್ರಾಮ ಸಿದ್ಧಾಂತ, ಗಾಂಧೀಜಿಯವರ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ತತ್ವಗಳನ್ನು ತುಮಕೂರು ಜಿಲ್ಲೆಯ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಅಧ್ಯಯನವನ್ನು ಈ ಪ್ರಬಂಧ ವಿಶ್ಲೇಶಿಸುತ್ತದೆ.

ಎಂ ಚಂದ್ರ ಪೂಜಾರಿ (2001) ಅವರು ಬರೆದ **"ದೇಶೀಯತೆಯ ನೆರಳನಲ್ಲ ವಿಕೇಂದ್ರೀಕರಣ"** ಎಂಬ ಸಂಶೋಧನಾ ಕೃತಿಯ ಪಂಚಾಯತ್ ರಾಜ್ ಸಂಸ್ಥೆಗಳನ್ನು ತಳಮಟ್ಟದಲ್ಲಿ ಬಲಯುತಗೊಳಿಸುವಲ್ಲಿ ಬುಡಮಟ್ಟದ ಜನರ ಮತ್ತು ಬುಡಮಟ್ಟದ ಜನತಾಣಗಳ ಅಭಿವೃದ್ಧಿ ಆಗುತ್ತಿದೆ ಎಂಬ ಬಗ್ಗೆ ವಾಸ್ತವ ಚಿತ್ರಣ ನೀಡಿ, ಉತ್ತಮ ಗ್ರಾಮೀಣ ಪರಿಸರ ನಿರ್ಮಾಣ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಬಗ್ಗೆ ಅಂಕಿ ಅಂಶಗಳೊಂದಿಗೆ ವಿವರವಾಗಿ ನೀಡಿದ್ದಾರೆ ಎಂಬುದನ್ನು ಈ ಕೃತಿ ಅವಲೋಕಿಸುತ್ತದೆ.

ಜಿ.ಎಂ. ಕೃಷ್ಣಮೂರ್ತಿ (2015) ಇವರು ಬರೆದ **"ನನ್ನ ಕನಸಿನ ಭಾರತ"** ಎಂಬ ಕೃತಿಯಲ್ಲಿ ಇಪ್ಪತ್ತನೇ ಶತಮಾನದ ಅತ್ಯಂತ ಪ್ರಭಾವಶಾಲಿ ಭಾರತೀಯ ಎನಿಸಿಕೊಂಡಿರುವ ಮಹಾತ್ಮಗಾಂಧಿ ಅವರ ಛಾಯೆ ಮರಣ ಹೊಂದಿದ ಅರವತ್ತು ವರ್ಷಗಳ ತರುವಾಯ ಕೂಡ ದೇಶದ ಮೇಲೆ ಪ್ರಬಲವಾಗಿ ವಿಸ್ತಾರಗೊಳ್ಳುತ್ತಿದೆ. ಬ್ರಿಟಿಷರ ಆಳ್ವಿಕೆಯ ನೊಗದಿಂದ ಭಾರತ ವಿಮೋಚನೆಗೊಳ್ಳಬೇಕಲ್ಲದೇ ದಾರಿದ್ರ್ಯ ನಿರಕ್ಷರತೆ ಮತ್ತು ಅಸ್ಪೃಶ್ಯತೆಯಂತಹ ಅನಿಷ್ಟಗಳಿಂದ ಕೂಡಾ ಬಿಡುಗಡೆ ಪಡೆಯಬೇಕೆಂದು ಅವರು ಕನಸು ಕಂಡಿದ್ದರಲ್ಲದೇ ಹೋರಾಡಿದ್ದರು.ಭಾರತದ ಎಲ್ಲಾ ಪ್ರಜೆಗಳು ಸ್ವಾತಂತ್ರ್ಯ ಮತ್ತು ಸಮೃದ್ಧಿಯ ಫಲಗಳನ್ನು ಸಮಾನವಾಗಿ ಅನುಭವಿಸಬೇಕೆಂದು ಅವರು ಆಶಿಸಿದ್ದರು.ಅವರ ಅನೇಕ ಕ್ರಾಂತಿಕಾರಿ ವಿಚಾರಗಳು ಆ ದಿನಗಳಲ್ಲಿ ವೈಶಿಷ್ಟ್ಯಗಳು ಎಂದು ಭಾವಿಸಲಾಗಿದ್ದು ಇಂದಿನ ತಲೆಮಾರು ಅವನ್ನು ಸಾಂಪ್ರದಾಯಿಕ ಪುನರುಜ್ಜೀವಿತ ಜನಪ್ರಿಯತೆಯು ಇಪ್ಪತ್ತೊಂದನೆಯ ಶತಮಾನದಲ್ಲಿ ತಗ್ಗದೇ ಮುಂದುವರಿಯುತ್ತಿರುವ ಗಾಂಧಿ ಅವರ ಪ್ರಸ್ತುತತೆಗೆ ಸಾಕ್ಷಿಯಾಗಿದೆ ಎಂಬುದನ್ನು ಈ ಕೃತಿ ಅವಲೋಕಿಸುತ್ತದೆ.

ಸಿ.ಎಸ್. ಕುಲಕರ್ಣಿ (2011) ಅವರು ಬರೆದ **"ಸರ್ವೋದಯ"** ಎಂಬ ಲೇಖನದಲ್ಲಿ ಗಾಂಧೀಜಿಯವರ ಚಿಂತನೆಯಲ್ಲಿ ಸರ್ವೋದಯ ಪರಿಕಲ್ಪನೆ ಒಂದು ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿರುತ್ತಾರೆ. ಸರ್ವರ ಸಮಗ್ರ ಅಭ್ಯುದಯವನ್ನು ಬಯಸುವ ಈ ಪರಿಕಲ್ಪನೆ ಗಾಂಧೀಜಿಯವರ ಕನಸಿನ ಕೂಸಾಗಿದೆ. ಸರ್ವೊದಯವೆಂದರೆ ಸರ್ವರ ಅಭ್ಯುದಯ ಅಥವಾ ಎಲ್ಲರ ಅಭಿವೃದ್ಧಿ ಅಥವಾ ಎಲ್ಲರ ಕ್ಷೇಮ ಅಥವಾ ಎಲ್ಲರ ಕಲ್ಯಾಣ ಅಥವಾ ಎಲ್ಲರ ಉದಯ ಎಲ್ಲರ ಉತ್ಕರ್ಷವೆಂದಾಗುತ್ತದೆ. ಇಂತಹ ಸರ್ವೋದಯ ಕಲ್ಪನೆ, ಸಮಾಜ, ಸ್ವಾತಂತ್ರ್ಯ, ಸಮಾನತೆ, ವರ್ಗ ಮತ್ತು ಜಾತಿರಹಿತ ಸಮಾಜ, ಅನ್ಯಾಯ ರಹಿತ, ಶೋಷಣೆ ರಹಿತ ಸಮಾಜ ಅವಕಾಶವೇ ಆಗಿದೆ. ಇಲ್ಲಿ ವ್ಯಕ್ತಿಗೆ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಸರ್ವೋದಯ ಗುರಿಯೆಂದರೆ ಮಾನವನ ಪ್ರಗತಿ ಎಂಬುದನ್ನು ಈ ಲೇಖನ ವಿಮರ್ಶಿಸುತ್ತದೆ.

ಡಾ.ಎನ್ ಆನಂದ ಗೌಡ (2017) ಅವರು ಬರೆದ **"ಗ್ರಾಮೀಣ ವಿಕೇಂದ್ರಿಕರಣ ಮತ್ತು ಅಭಿವೃದ್ಧಿಯಲ್ಲಿಗಾಂಧೀಜಿಯವರ ಚಿಂತನೆ"** ಎಂಬ ಲೇಖನದಲ್ಲಿ ಹಳ್ಳಿಗಳ, ಆದಾಯ, ಅನುಭೋಗ ,ಶಿಕ್ಷಣ ,ಆರೋಗ್ಯ, ವಸತಿ, ಕುಡಿಯುವ ನೀರು, ಆಹಾರ ಭದ್ರತೆ ಎಲ್ಲದರಲ್ಲೂ ನಗರದ ಜನರಿಗಿಂತ ದೂರವಿದೆ. ಚಿಕ್ಕ ಚಿಕ್ಕ ಕುಟುಂಬಗಳು, ಅರ್ಥಕಳೆದುಕೊಳ್ಳುತ್ತಿರುವ ಸಂಬಂಧಗಳು, ಧನ ಆಧರಿತ ತತ್ವರಹಿತ ರಾಜಕೀಯ ಮುಂತಾದವು ಗ್ರಾಮೀಣ ಜನರ ಜ್ವಲಂತ ಸಮಸ್ಯೆಗಳಾಗಿವೆ. ಸ್ಥಳೀಯ ಅರ್ಥವ್ಯವಸ್ಥೆ ಗ್ರಾಮಗಳನ್ನು ಅಂಧಕಾರದಲ್ಲಿಟ್ಟು ನಗರಗಳು ಬೆಳೆಸುವ ಜಲಂತ ಸಮಸ್ಯೆಗಳ ಬಗ್ಗೆ ಗಾಂಧೀಜಿಯವರು ಖಚಿತ ನಿಲುವುಗಳನ್ನು ಹೊಂದಿದ್ದರು ಎಂಬುದನ್ನು ಈ ಲೇಖನ ವಿಶ್ಲೇಷಿಸುತ್ತದೆ.

ಸುರೇಂದ್ರ ಹೆಚ್(2017) "ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಹಾತ್ಮ ಗಾಂಧೀಜಿಯವರ ರಾಜಕೀಯ **ಚಿಂತನೆಗಳ ಪ್ರಸ್ತುತತೆ"** ಎಂಬ ಲೇಖನದಲ್ಲಿ ರಾಜ್ಯರಹಿತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರತಿಪಾದನೆ ಮಾಡಿದ ಗಾಂಧಿಜೀಯವರು ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಬಲವಾಗಿ ನಂಬಿದ್ದರು. ರಾಜ್ಯದ ಕೈಯಲ್ಲಿ ಅಧಿಕಾರ ಕೇಂದ್ರೀಕೃತವಾಗುವುದನ್ನು ವಿರೋಧಿಸುತ್ತಿದ್ದರು. ಕಡಿಮೆ ಆಳ್ವಿಕೆ ಹೊಂದಿದ ಸರಕಾರವಾದ ಆದರ್ಶ ರಾಜ್ಯವನ್ನು ಪ್ರತಿಪಾದಿಸಿದರು, ಗಾಂಧೀಜಿಯವರು ರಾಜ್ಯದ ಅತಿ ಕಡಿಮೆ ಹಸ್ತಕ್ಷೇಪವನ್ನು ನಿಜವಾದ ಪ್ರಜಾಪ್ರಭುತ್ವ ಎಂದು ಕರೆದರು ಎಂಬುದನ್ನು ಈ ಲೇಖನ ವಿಶ್ಲೇಷಿಸುತ್ತದೆ.

ಡಾ. ಚಂದ್ರಶೇಖರ್ (2017) ಅವರು ಬರೆದ **"ಗಾಂಧಿ ಮತ್ತು ಸಾಮಾಜಿಕ ನ್ಯಾಯ"** ಎಂಬ ಲೇಖನದಲ್ಲಿ ಸಾಮಾಜಿಕ ನ್ಯಾಯದ ಹಾದಿಯಲ್ಲಿ ಅರ್ಥನೀತಿ, ಭಾರತೀಯ ನಿಷ್ಠೆ ಇವು ಗಾಂಧೀಜಿಯ ಮೂಲಮಂತ್ರವಾಗಿದ್ದವು. ಸತ್ಯ,ಅಹಿಂಸೆ,ಪ್ರೇಮ,ವಾತ್ಸಲ್ಯ,ಕರುಣೆ ಮತ್ತು ಮಾನವೀಯತೆಗಳ ಮೂಲಕ ಜಗತ್ತಿನ ಎಂತಹ ದುಷ್ಟ ಶಕ್ತಿಗಳನ್ನಾದರೂ ಜಯಿಸಬಹುದು ಎಂದು ಗಾಂಧೀಜಿ ಬಲವಾಗಿ ನಂಬಿದ್ದರು. ದೇಶ ಸೇವೆಯೇ ಈಶ ಸೇವೇ ಎಂದು ನಂಬಿ ಬದುಕಿದವರು ಗಾಂಧಿ. ಹಿಂಸಾತ್ಮಕವಾದ ಯಾವ ಸಾಧನೇಯು ಶಾಶ್ವತವಾದುದಲ್ಲ ಎಂಬುದು ಗಾಂಧೀಜಿಯವಾರ ವಾದವಾಗಿತ್ತು. ಸಾಮಾಜಿಕ ಬದಲಾವಣೆಗೆ ಕ್ರಾಂತಿಯ ಹಾದಿಗಿಂತಲೂ ಶಾಂತಿ ಮಾರ್ಗದಲ್ಲಿ ಹೋರಾಡಿದರೆ ಶಾಶ್ವತ ಬದಲಾವಣೆ ಸಾಧ್ಯ ಎಂದು ಬಲವಾಗಿ ನಂಬಿದ್ದರು ಎಂಬುದನ್ನು ಈ ಲೇಖನ ವಿಶ್ಲೇಷಿಸುತ್ತದೆ.

ಅಧ್ಯಯನ ವ್ಯಾಪ್ತಿ

ಸಾಮಾನ್ಯವಾಗಿ ವ್ಯಾಪ್ತಿ ಎಂದರೆ ಗಡಿ, ಮೇರೆ, ಚೌಕಟ್ಟು ಎಂದು ಅರ್ಥವಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮದೆ ಆದ ವ್ಯಾಪ್ತಿಯನ್ನು ಹೊಂದಿರುವಂತೆ ಸ್ಥಳೀಯ ಸರಕಾರವು ಸಹ ತನ್ನದೆ ಆದ ವ್ಯಾಪ್ತಿಯನ್ನು ಹೊಂದಿದೆ. ಅದರೆ ವಿವಿಧ ಸಮಿತಿಗಳು ಅದರ ಸ್ಥಳೀಯ ಸರಕಾರದ ವ್ಯಾಪ್ತಿಯ ಕುರಿತು ಒಮ್ಮತ ಅಭಿಪ್ರಾಯವನ್ನು ಹೊಂದಿರುವುದಿಲ್ಲ. ವ್ಯಾಪ್ತಿಯನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು.

ಮೊದಲನೆಯ ಸಮಿತಿ ಬಲವಂತರಾಯ್ ಮೆಹತಾ ಸಮಿತಿಯು ಸ್ಥಳೀಯ ಸರಕಾರಗಳನ್ನು ಮೂರು ಹಂತದಲ್ಲಿ ಅಂದರೆ ಗ್ರಾಮಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾಪಂಚಾಯತ್‌ಗಳ ಉಗಮ ಬೆಳವಣಿಗೆ, ರಚನೆ, ಅಧಿಕಾರ ಕಾರ್ಯಗಳನ್ನು ಮಾತ್ರ ಅಧ್ಯಯನ ಮಾಡುತ್ತದೆ.

ಎರಡನೇಯ ಸಮಿತಿ ಅಶೋಕ ಮೆಹತಾ ಸಮಿತಿಯು ಎರಡು ಹಂತದ ಅಂದರೆ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳನ್ನು ಒಳಗೊಂಡ ಸ್ಥಳೀಯ ಸರಕಾರದ ರಚನೆ, ಅಧಿಕಾರಿ ಕಾರ್ಯಗಳ ಕುರಿತು ಅಧ್ಯಯನ ಮಾಡುತ್ತದೆ. 1992 ರಲ್ಲಿ ಸಂವಿಧಾನಕ್ಕೆ 73ನೇ ತಿದ್ದುಪಡಿಯನ್ನು ತರುವುದರ ಮೂಲಕ ಸ್ಥಳೀಯ ಸರಕಾರದಲ್ಲಿ ಮೂರು ಹಂತಗಳಾದ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗಳ ರಚನೆ ಅಧಿಕಾರ ಕಾರ್ಯಗಳ ಕುರಿತು ಸ್ಥಳೀಯ ಮಟ್ಟದವರೇ ಆಳುವರು ಮತ್ತು ಆಳಿಸಿಕೊಳ್ಳುವರು ಆಗಿರುತ್ತಾರೆ. ಸ್ಥಳೀಯ ಸರಕಾರಕ್ಕೆ ಬೇಕಾದ ಪ್ರತಿನಿಧಿಗಳನ್ನು ಸ್ಥಳೀಯ ಜನರೇ ಆಯ್ಕೆ ಮಾಡಿಕೊಳ್ಳುತ್ತಾರೆ. ಆಯ್ಕೆಯಾದ ಪ್ರತಿನಿಧಿಗಳೇ ಸ್ಥಳೀಯ ಜನರ ಪರವಾಗಿ ಆಡಳಿತವನ್ನು ನಡೆಸುತ್ತಾರೆ ಈ ಆಡಳಿತವು ಸ್ಥಳೀಯ ಮಟ್ಟಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಸ್ಥಳೀಯ ಆಡಳಿತವು ಕೇಂದ್ರ ಮತ್ತು ರಾಜ್ಯ

ಆಡಳಿತ ಪಟ್ಟ ವಿಸ್ತಾರವಾಗಿ ಇರದೆ ಸೀಮಿತವಾಗಿರುತ್ತದೆ. ಆದರೆ ಈ ಸ್ಥಳೀಯ ಆಡಳಿತವೇ ರಾಜ್ಯ ಮತ್ತು ರಾಷ್ಟ್ರದ ಆಡಳಿತಕ್ಕೆ ಆಧಾರ ಸ್ತಂಭವಾಗಿದೆ.

1. ಸ್ಥಳೀಯ ಆಡಳಿತಕ್ಕೆ ಸಂಬಂಧಿಸಿದ ಸಿದ್ಧಾಂತಗಳ ಅಧ್ಯಯನ ಮಾಡುತ್ತದೆ.

1.1. ಸ್ಥಳೀಯ ಆಡಳಿತ ಪ್ರಜಾಪ್ರಭುತ್ವದ ಸಿದ್ಧಾಂತದ ಮೇಲೆ ಅವಲಂಬಿಸಿದೆ . ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಆ ಮೂಲಕ ಆಡಳಿತ ನಡೆಸುವ ಪ್ರಕ್ರಿಯೆ ಅಸ್ತಿತ್ವದಲ್ಲಿದೆ. ಇದೇ ಮಾದರಿಯನ್ನು ಸ್ಥಳೀಯ ಸರಕಾರ ಹೊಂದಿದೆ.

1.2. ಸಮತ ಸಿದ್ಧಾಂತವನ್ನು ಆಧರಿಸಿದೆ:- ಸ್ಥಳೀಯ ಆಡಳಿತವು ಎಲ್ಲ ಜನರಲ್ಲಿ ಸಮಾನತೆಯನ್ನು ತಂದು ಆ ಮೂಲಕ ಸಮಾಜದಲ್ಲಿರುವ ಅಂತರವನ್ನು ಹೋಗಲಾಡಿಸುತ್ತದೆ. ಸಮಾಜದಲ್ಲಿರುವ ಯಾವುದೇ ಒಂದು ವರ್ಗಕ್ಕೆ ತಾರತಮ್ಯ ಮಾಡದೆ ಎಲ್ಲರನ್ನು ಸಮಾನವಾಗಿ ಪರಿಗಣಿಸುತ್ತದೆ.

1.3. ಅಭಿವೃದ್ಧಿ ಸಿದ್ಧಾಂತವನ್ನು ಆಧರಿಸಿದೆ:- ಸ್ಥಳೀಯ ಸರಕಾರವು ಸ್ಥಳೀಯ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಿಗೆ ಅನ್ವಯಿಸುವಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಆ ಮೂಲಕ ಸಮಗ್ರ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ತತ್ವವನ್ನು ಅಧರಿಸಿದೆ. ಕೃಷಿ, ಹೈನುಗಾರಿಕೆ ಮಾರುಕಟ್ಟೆ ಪ್ರಾಥಮಿಕ ಆರೋಗ್ಯ ಕೇಂದ್ರ ಗ್ರಾಮಗಳ ವಿದ್ಯುದೀಕರಣ, ಸಾರಿಗೆ ಸಂಪರ್ಕ, ಕುಡಿಯುವ ನೀರು ಮುಂತಾದ ರಂಗಗಳನ್ನು ಅಭಿವೃದ್ಧಿ ಪಡಿಸುವುದು.

1.4. ಗಾಂಧೀಜಿಯವರ ನೈರ್ಮಲ್ಯ ತತ್ವದ ಆಧಾರದ ಮೇಲೆ ಅವಲಂಬಿಸಿದೆ.

1.5. ಶಿಕ್ಷಣ ಸಿದ್ಧಾಂತವನ್ನು ಅವಲಂಬಿಸಿದೆ. ಸ್ಥಳೀಯ ಸರಕಾರಗಳಿಗೆ ಕಾಲಕಾಲಕ್ಕೆ ಚುನಾವಣೆಗಳನ್ನು ಶಾಸನಬದ್ಧಗೊಳಿಸಲಾಯಿತು. ಈ ವ್ಯವಸ್ಥೆಯನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು. ಅದರ ಪ್ರಕಾರ ಮೂರು ಹಂತದ ಸ್ಥಳೀಯ ಸರಕಾರಗಳು ಅಸ್ತಿತ್ವದಲ್ಲಿ ಇಂದು ಇದೆ.

2. <u>ಸ್ಥಳೀಯ ಸರಕಾರಕ್ಕೆ ಪೂರಕವಾಗಿದೆ:-</u>

ಸ್ಥಳೀಯ ಸರಕಾರ ಕುರಿತು ಆಯೋಗಗಳಲ್ಲಿ ಒಮ್ಮತದ ಅಭಿಪ್ರಾಯವಿಲ್ಲ ಬಲವಂತರಾಯ್ ಮೆಹತ್ತಾ ಸಮಿತಿಯು ಮೂರು ಹಂತದ ಸ್ಥಳೀಯ ಸರಕಾರಿ ವ್ಯಾಪ್ತಿ ಗ್ರಾಮಪಂಚಾಯತ್ , ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಅಸ್ತಿತ್ವದಲ್ಲಿ ಇರಬೇಕೆಂದು ಹೇಳಿರುವರು. ಅಶೋಕ ಮೆಹ್ತ ಸಮಿತಿಯ ಪ್ರಕಾರ ಎರಡು ಹಂತದ ಸ್ಥಳೀಯ ಸರಕಾರ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅಸ್ತಿತ್ವದಲ್ಲಿ ಇರಬೇಕೆಂದು ಹೇಳಿರುವರು. 1992 ರಲ್ಲಿ ಸಂವಿಧಾನದ 73ನೇ ತಿದ್ದುಪಡಿಯನ್ನು ತರುವದರ ಮೂಲಕ ಮೂರು ಹಂತದ ಸ್ಥಳೀಯ ಸರಕಾರವನ್ನು ಕಾನೂನು ಬದ್ಧವಾಗಿ ಮಾನ್ಯ ಮಾಡಲಾಯಿತು. ಈ ವ್ಯವಸ್ಥೆ ಪ್ರಸ್ತುತ ನಮ್ಮ ದೇಶದಲ್ಲಿ ಜಾರಿಯಲ್ಲಿ ಇದೆ.

3. <u>ಸ್ಥಳೀಯ ಸರಕಾರವು ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಅವಲಂಬಿಸಿದೆ.</u>

ಭಾರತದ ಅಭಿವೃದ್ಧಿಯು ಗ್ರಾಮೀಣ ಸ್ಥಳೀಯ ಸರಕಾರದ ಅಭಿವೃದ್ದಿಗೆ ಅವಶ್ಯಕ ಹಾಗೂ ಪೂರಕವಾಗಿದೆ. ಸ್ಥಳೀಯ ಸರಕಾರಗಳು ಆರ್ಥಿಕ ಸ್ವಾವಲಂಬನೆ ಆಗದೆ ಇರುವ ಕಾರಣ ಹಣಕಾಸಿನ ನೆರವಿಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಿಗಳನ್ನು ಅವಲಂಬಿಸಿದೆ. ಸ್ಥಳೀಯ ಸರಕಾರದ ಅಭಿವೃದ್ಧಿಯು ಸಹ ಈ

ಸರಕಾರಗಳ ಮೇಲೆ ಆಧಾರಿಸಿದೆ. ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಸ್ಥಳೀಯ ಸರಕಾರವು ಕೇಂದ್ರ ಮತ್ತು ರಾಜ್ಯ ಸರಕಾರಗಳ ನೆರವುವನ್ನು ಪಡೆಯುತ್ತದೆ. ಸ್ಥಳೀಯ ಸರಕಾರ ಯೋಜನೆ ಮತ್ತು ವಾರ್ಷಿಕ ಮುಂಗಡ ಪತ್ರವನ್ನು ರಚಿಸಿದರೂ ಕೂಡಾ ಅದಕ್ಕೆ ರಾಜ್ಯಸರಕಾರದ ಒಪ್ಪಿಗೆ ಅನಿವಾರ್ಯವಾಗಿರುತ್ತದೆ.

4. <u>ಸ್ಥಳೀಯ ಸಂಘ ಸಂಸ್ಥೆಗಳನ್ನು ಅಧ್ಯಯನ ಮಾಡುತ್ತದೆ:-</u>

ಸ್ಥಳೀಯ ಸರಕಾರಗಳು ಗ್ರಾಮದ ಅಭಿವೃದ್ಧಿಗೆ ಅನುಕೂಲವಾದ ಸ್ಥಳೀಯ ಸಂಘಸಂಸ್ಥೆಗಳಿಗೆ ಸಹಕರಿಸುವುದರ ಮೂಲಕ ಗ್ರಾಮಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತದೆ.

5. <u>ಸ್ಥಳೀಯ ಸರಕಾರ ಸ್ಥಳೀಯ ಮಟ್ಟಕ್ಕೆ ಅನ್ವಯಿಸುತ್ತದೆ.</u>

ಈ ಸರಕಾರ ಸ್ಥಳೀಯ ಮಟ್ಟದ ಜನರಿಗೆ ಅನ್ವಯಿಸುವಂತೆ ಅಸ್ತಿತ್ವಕ್ಕೆ ಬಂದಿರುವುದರಿಂದ ಸ್ಥಳೀಯ ಸಮಸ್ಯೆಗಳಾದ ಕುಡಿಯುವ ನೀರಿನ ಸಮಸ್ಯೆ, ರಸ್ತೆಯ ಸಮಸ್ಯೆ, ವಿದ್ಯುತ್ ಸಮಸ್ಯೆ, ಆರೋಗ್ಯ ಸಮಸ್ಯೆ ಮೊದಲಾದ ಸಮಸ್ಯೆಗಳನ್ನು ಹೋಗಲಾಡಿಸಲು ಪ್ರಯತ್ನಿಸುವುದು. ಸ್ಥಳೀಯ ಸರಕಾರ ಸ್ಥಳೀಯ ಮಟ್ಟಕ್ಕೆ ಅನ್ವಯಿಸುವಂತೆ ಅಭಿವೃದ್ಧಿ ಯೋಜನೆಗಳಾದ ಸೇತುವೆ ನಿರ್ಮಾಣ,ಗ್ರಾಮೀಣ ನೈರ್ಮಲ್ಯ , ತರಗತಿ ವ್ಯವಸ್ಥೆ, ಶೌಚಾಲಯ, ಕುಡಿಯುವ ನೀರಿನ ಸೌಲಭ್ಯಗಳು, ರಸ್ತೆಗಳ ದುರಸ್ತಿ, ತಂಗುದಾಣ, ಪ್ರಾಥಮಿಕ ಆರೋಗ್ಯ ಕೇಂದ್ರದ ಸ್ಥಾಪನೆ, ವ್ಯಾಪಾರ ಮಳಿಗೆಗಳನ್ನು ನಿರ್ಮಿಸುವುದು ಸ್ವಯಂ ಉದ್ಯೋಗಿ ಮೊದಲಾದ ಕಾಮಗಾರಿಗಳಿಗೆ ಅನ್ವಯಿಸುವಂತೆ ವಾರ್ಷಿಕ ಮುಂಗಡ ಪತ್ರವನ್ನು ಸಿದ್ಧಪಡಿಸುವುದು. ಸ್ಥಳೀಯ ಜನರ ವಂತಿಗೆಗಳು, ತೆರಿಗೆಗಳನ್ನು ಸಂಗ್ರಹಿಸುವುದು. ಗ್ರಾಮ ಪಂಚಾಯತ್ ತನ್ನ ಕಟ್ಟಡಗಳನ್ನು ಬಾಡಿಗೆಗೆ ನೀಡಿ ತೆರಿಗೆಯನ್ನು ವಸೂಲಿ ಮಾಡುವುದು. ಪ್ರಾಕೃತಿಕ ವಿಕೋಪದ ಸಂದರ್ಭದಲ್ಲಿ ಗಂಜಿ ಕೇಂದ್ರಗಳನ್ನು ತೆರೆದು ಜನರನ್ನು ಸಂರಕ್ಷಣೆ ಮಾಡುವುದು. ಸ್ಥಳೀಯ ಮಟ್ಟಕ್ಕೆ ಅನ್ವಯಿಸುವಂತೆ ಕ್ರೀಡಾಂಗಣ ಗಳನ್ನು ನಿರ್ಮಿಸುವುದು. ಸ್ಥಳೀಯ ಜನರ ಹಿತಾಸಕ್ತಿಯನ್ನು ಈಡೇರಿಸಲು ಕೇಂದ್ರಸರಕಾರ ಮತ್ತು ರಾಜ್ಯ ಸರಕಾರಗಳಿಂದ ಸಹಾಯವನ್ನು ಪಡೆಯುವುದು.

<u>ಮಹತ್ವ</u>

1. **ಸ್ಥಳೀಯ ಸರಕಾರ ಒಳಪಟ್ಟಿರುವ ಆಡಳಿತದ ಅನುಭವಗಳನ್ನು ನೀಡುತ್ತದೆ.**

ಸ್ಥಳೀಯ ಸರಕಾರ ಜನರಿಗೆ ಸ್ಥಳೀಯ ರಾಜಕೀಯ ಸಂಸ್ಥೆಗಳ ಜೊತೆಗೆ ತಮ್ಮ ಕಾರ್ಯನಿರ್ವಹಣೆಗೆ ಸಹಕಾರಿ ಆಗುವಂತೆ ಸಹ ಸ್ಥಳೀಯ ಸೇವೆಗಳನ್ನು ನೀಡುವುದು ಮೂಲಕ ತಳಮಟ್ಟದ ಆಡಳಿತ ಅನುಭವವನ್ನು ನೀಡುತ್ತದೆ. ಸ್ಥಳೀಯ ಜನತೆ ಸ್ಥಳೀಯ ಆಡಳಿತದಲ್ಲಿ ಪಾಲ್ಗೊಳ್ಳುವ ಮೂಲಕ ಸ್ವಯಂ ಆಡಳಿತದ ಅನುಭವ ಪಡೆಯುತ್ತಾರೆ. ಸಮುದಾಯದ ಸರ್ವತೋಮುಖ ಬೆಳವಣಿಗೆಗೆ ಪಾಲ್ಗೊಳ್ಳುವಿಕೆಯಿಂದ ಮಾತ್ರ ಸಾಧ್ಯ ಎಂಬುದನ್ನು ಅರಿಯುತ್ತಾರೆ. ಜನರು ಸ್ಥಳೀಯ ಆಡಳಿತಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದರ ಮೂಲಕ ಪರೋಕ್ಷವಾಗಿ ಆಡಳಿತದಲ್ಲಿ ಭಾಗವಹಿಸುತ್ತಾರೆ ಅಂದರೆ ಜನರ ಪರವಾಗಿ ಪ್ರತಿನಿಧಿಯೇ ಆಡಳಿತ ನಡೆಸುತ್ತಾರೆ.

2. **ಜನರಿಗೆ ರಾಜಕೀಯ ಶಿಕ್ಷಣದ ಅರಿವು ನೀಡುತ್ತದೆ.**

ಸ್ಥಳೀಯ ಸರಕಾರವು ಪ್ರಜಾಪ್ರಭುತ್ವದ ಯಶಸ್ಸಿನ ಮೊದಲನೆ ಮೆಟ್ಟಿಲು. ಜನರಿಗೆ ರಾಜಕೀಯ ಶಿಕ್ಷಣವನ್ನು ನೀಡುವ ಪ್ರಜಾಪ್ರಭುತ್ವದ ಪ್ರಾಥಮಿಕ ಶಿಕ್ಷಣವನ್ನು ನೀಡುವದರ ಮೂಲಕ ಜನರನ್ನು ರಾಜಕೀಯದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತದೆ. ಚುನಾವಣೆ ಪ್ರಜಾಪ್ರಭುತ್ವದ ಜೀವಾಳವಾಗಿದೆ. ಪ್ರಜಾಪ್ರಭುತ್ವದ ಯಶಸ್ಸು ಚುನಾವಣೆಯನ್ನು ಅವಲಂಬಿಸಿದೆ. ಸ್ಥಳೀಯ ಆಡಳಿಕ್ಕೂ ಅನ್ವಯಿಸುತ್ತದೆ. ಸ್ಥಳೀಯ ಸರಕಾರಕ್ಕೆ ನಿಯತಕಾಲಿಕವಾಗಿ ಪ್ರತಿ ಐದು ವರ್ಷಕ್ಕೆ ಒಮ್ಮೆ ಚುನಾವಣೆ ನಡೆಯವುದರಿಂದ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಸ್ಥಳೀಯ ಜನರಲ್ಲಿ ಮತವನ್ನು ಯಾಚಿಸುತ್ತಾರೆ. ಇದರಿಂದ ಜನರಿಗೆ ತಮಗೆ ಯಾವ ಅಭ್ಯರ್ಥಿ ಯೋಗ್ಯ ಯಾವ ಅಭ್ಯರ್ಥಿ ಯೋಗ್ಯವಲ್ಲ ಎನ್ನುವುದರ ಕುರಿತು ಜನರು ತಮ್ಮತಮ್ಮಲ್ಲಿ ಚರ್ಚಿಸಿಕೊಂಡು ಅರ್ಹ ಅಭ್ಯರ್ಥಿಯನ್ನು ಮತ ಚಲಾಯಿಸುವುದರ ಮೂಲಕ ಆಯ್ಕೆ ಮಾಡುತ್ತಾರೆ. ಮತವನ್ನು ಚಲಾಯಿಸುವ ಸಂದರ್ಭದಲ್ಲಿ ಜನರ ಮುಂದೆ ವಿವಿಧ ಬೇಡಿಕೆಗಳನ್ನು ಮುಂದೆ ಇಡುವುದು ಮತ್ತು ಸ್ಥಳೀಯ ಸಮಸ್ಯೆಗಳನ್ನು ಹೋಗಲಾಡಿಸಲು ಜನತೆಗೆ ಆ ಕುರಿತು ತಿಳಿಸುವುದು.

3. **ಜನತೆಯಲ್ಲಿ ಸ್ವಾವಲಂಬನೆಯನ್ನು ಬೆಳೆಸುತ್ತದೆ.**

ಸ್ಥಳೀಯ ಸರಕಾರವು ಸ್ಥಳೀಯ ಸಮಸ್ಯೆಗಳನ್ನು ಸ್ಥಳೀಯ ಪ್ರತಿನಿಧಿಗಳಿಂದ ಸ್ಥಳೀಯವಾಗಿ ಪರಿಹರಿಸುವ ರಾಜಕೀಯ ಸಂಸ್ಥೆ ಆಗಿದೆ. ಜನರು ತಮ್ಮ ಸ್ಥಳೀಯ ಸಮಸ್ಯೆಯನ್ನು ಬಗೆಹರಿಸಲು ಹಾಗೂ ಸ್ಥಳೀಯ ಪ್ರತಿನಿಧಿಗಳಿಗೆ ರಾಜಕೀಯ ನೇತೃತ್ವವನ್ನು ನಿವಾರಿಸಲು ಸಹಕಾರಿಯಾಗಿವೆ. ಆ ಮೂಲಕ ತಮ್ಮ ಜ್ವಲಂತ ಸಮಸ್ಯೆಗಳನ್ನು ಹೋಗಲಾಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಅಭಿವೃದ್ಧಿಯನ್ನು ಸಾಧಿಸಿ ಆ ಮೂಲಕ ಗ್ರಾಮಗಳನ್ನು ಸ್ವಾವಲಂಬನೆ ಆಗುವಂತೆ ಮಾಡುತ್ತದೆ. ಗಾಂಧೀಜಿಯವರ ಅಭಿಪ್ರಾಯದಂತೆ ವಿವಿಧ ವೃತ್ತಿಗಳಲ್ಲಿ ತೊಡಗುವುದರ ಮೂಲಕ ಸ್ವಾವಲಂಬಿ ಜೀವನವನ್ನು ರೂಪಿಸಿಕೊಂಡು ನೆಮ್ಮದಿಯ ಜೀವನವನ್ನು ನಡೆಸಬಹುದು.

4. **ಆರ್ಥಿಕಾಭಿವೃದ್ಧಿಯನ್ನು ಕಾರ್ಯಗತಗೊಳಸುತ್ತದೆ.**

ಸ್ಥಳೀಯ ಸರಕಾರವು ಸ್ಥಳೀಯ ಆರ್ಥಿಕ ಸಪನ್ಮೂಲಗಳನ್ನು ಸದ್ಬಳಕೆ ಮಾಡುವುದರ ಮೂಲಕ ಗ್ರಾಮದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕಾಭಿವೃದ್ಧಿಗೆ ಪೂರಕವಾಗಿದೆ. ಸ್ಥಳೀಯ ಸರಕಾರವು ಗಾಂಧೀಜಿಯವರ ಕನಸಾದ ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದರ ಮೂಲಕ ಜನತೆಗೆ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. ಗಾಂಧೀಜಿಯವರ ಸ್ವ ಉದ್ಯೋಗದ ಕಲ್ಪನೆಯನ್ನು ಸ್ಥಳೀಯ ಸರಕಾರವು ಕೋಳಿ ಸಾಕಾಣಿಕೆ, ಹೈನುಗಾರಿಕೆ, ಮೀನುಗಾರಿಕೆ, ಜೇನು ಸಾಕಾಣಿಕೆ, ಮೊದಲಾದ ರಂಗಗಳಲ್ಲಿ ಸ್ವಯಂ ಉದ್ಯೋಗವನ್ನು ಸೃಷ್ಟಿಸಿ ಆರ್ಥಿಕ ಸಬಲೀಕರಣವನ್ನು ಕಾರ್ಯಗತಗೊಳಿಸಿದೆ.

೨. **ಗ್ರಾಮೀಣ ಜನತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತದೆ.**

ಸ್ಥಳೀಯ ಸರಕಾರವು ಸ್ಥಳೀಯ ಜನತೆಗೆ ಅವಶ್ಯಕವಾದ ಮೂಲ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ ನಿರ್ಮಾಣ, ಬೀದಿ ದೀಪ, ಚರಂಡಿ ವ್ಯವಸ್ಥೆ, ಶಿಕ್ಷಣ, ಆರೋಗ್ಯ ಪ್ರಯಾಣಿಕರ ತಂಗುದಾಣ, ವ್ಯಾಪಾರ ಮಳಿಗೆ, ಮಾರುಕಟ್ಟೆ, ಸೌಲಭ್ಯಗಳನ್ನು ನೀಡಿ ಗ್ರಾಮ ಅಭಿವೃದ್ಧಿಗೆ ಉತ್ತೇಜನ ನೀಡುತ್ತದೆ. ಸ್ಥಳೀಯ ಆಡಳಿತವು ವಿವಿಧ ಯೋಜನೆಗಳಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಮನೆ ನಿರ್ಮಿಸಿ ಕೊಡುವುದು. ಸ್ಥಳೀಯ ಸರಕಾರಿ ಕೃಷಿಗೆ ಬೇಕಾದ ಸಲಕರಣೆಗಳನ್ನು ರಿಯಾಯಿತಿ ಎರವಲು ಬಿತ್ತನೆ ಬೀಜ ಕ್ರಿಮಿನಾಶಕ ಔಷಧಿಗಳನ್ನು ವಿತರಿಸುತ್ತದೆ.

ಅಧ್ಯಯನದ ಪೂರ್ವಕಲ್ಪನೆಗಳು

1. ಭಾರತ ಭೌಗೋಳಿಕವಾಗಿ ಹಳ್ಳಿಗಳಿಂದ ರೂಪಿತವಾದ ದೇಶವಾಗಿದೆ.
2. ಗಾಂಧೀಜಿಯವರು ಅಧಿಕಾರದ ವಿಕೇಂದ್ರಿಕರಣಕ್ಕೆ ಉತ್ತೇಜನ ನೀಡಿದರು.
3. ಜವಾಬ್ದಾರಿಯುತ ನಾಗರಿಕರನ್ನು ಸೃಷ್ಟಿಸುವುದು. ಜನತೆಗೆ ಅವರುಗಳ ಹಕ್ಕು ಮತ್ತು ಭಾದ್ಯತೆಗಳ ಅರಿವು ಮೂಡಿಸುವುದು.
4. ಗಾಂಧೀಜಿಯವರು ದುರ್ಬಲ ವರ್ಗದವರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಉತ್ತೇಜನ ನೀಡಿದರು.
5. ಸ್ಥಳೀಯ ಜನತೆಯನ್ನು ಸ್ವಾವಲಂಬಿಗಳಾಗಿ ರೂಪಿಸುವುದು.

ಸಂಶೋಧನೆ ಅಧ್ಯಯನ ವಿಧಾನಗಳು

ಪ್ರಸಕ್ತ ಅಧ್ಯಯನದ ವಸ್ತು ಮತ್ತು ವ್ಯಾಪ್ತಿ ಅವಧಿ, ದತ್ತಾಂಶ ಮೂಲಗಳು ದತ್ತಾಂಶ ಸಂಗ್ರಹ ವಿಧಾನ, ಮಾದರಿ ಸಮಾಕ್ಷ ಕ್ರಮ ದತ್ತಾಂಶ ವಿಶ್ಲೇಷಣೀಯ ಸಲಕರಣೆಗಳು ಮೊದಲಾದ ವಿಚಾರಗಳನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ. ಅಧ್ಯಯನ ವಸ್ತು ರಾಜಕೀಯ ಬೆಳವಣಿಗೆ ಮತ್ತು ಅದರಲ್ಲಿ ಗಾಂಧೀಜಿಯವರ ಚಿಂತನೆಯ ಅನುಷ್ಠಾನದ ಮೇಲೆ ಹೊಂದಿಕೊಂಡಿದೆ. ಪುತ್ತೂರು ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಬೆಟ್ಟಂಪಾಡಿ ಗ್ರಾಮ ಪಂಚಾಯತ್‌ಗೆ ಭೇಟಿ ನೀಡಿ ಮಹಾತ್ಮ ಗಾಂಧೀಜಿಯವರ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಬಗ್ಗೆ 100 ಫಲಾನುಭವಿಗಳನ್ನು ಕ್ಷೇತ್ರ ಅಧ್ಯಯನದೊಂದಿಗೆ ಜನ ಪ್ರತಿನಿಧಿಗಳನ್ನು ಮತ್ತು ಪಂಚಾಯತ್ ಸಿಬ್ಬಂದಿಗಳನ್ನು ಸಂದರ್ಶನ ಮಾಡಿ ಪ್ರಾಥಮಿಕ ಮಾಹಿತಿ ಸಂಗ್ರಹಣೆಯೊಂದಿಗೆ ವಿಶ್ಲೇಷಣೆ ಮಾಡುವುದು. ಸದರಿ ಅಧ್ಯಯನವು ಪಂಚಾಯತ್‌ನ ಐದು ವರ್ಷದ ಅವಧಿಗೆ ಸೀಮಿತವಾಗಿದೆ.

ಅಧ್ಯಾಯ 1

ಗಾಂಧೀಜಿಯವರ ರಾಜಕೀಯ ತತ್ವದ ಸಮೀಕ್ಷೆ

1.1 ಗ್ರಾಮ ಸ್ವರಾಜ್ಯ

ಪೀಠಿಕೆ:-

ಗ್ರಾಮ ಸ್ವರಾಜ್ಯವು ಗಾಂಧೀಜಿಯವರ ಆದರ್ಶ ರಾಜ್ಯದ ಪರಿಕಲ್ಪನೆಯು ಆಗಿದೆ. ಗ್ರಾಮ ಒಂದನ್ನು ಸ್ವಾವಲಂಬಿಯನ್ನಾಗಿಸಲು ಅದು ತನಗೆ ಬೇಕಾದ ವಸ್ತುಗಳ ಉತ್ಪಾದನೆ, ಸ್ವಯಂ ಆರೋಗ್ಯದ ನಿರ್ವಹಣೆ , ಪ್ರಜಾಪ್ರಭುತ್ವ ಮಾದರಿಯ ಸ್ವಯಂ ಆಡಳಿತ ಮತ್ತು ಅಧಿಕಾರದ ವಿಕೇಂದ್ರೀಕರಣ, ಕಡ್ಡಾಯ ಶಿಕ್ಷಣದೊಂದಿಗೆ ತನ್ನೆಲ್ಲ ಅವಶ್ಯಕತೆಗಳನ್ನು ತಾನೇ ಪೂರೈಸಿಕೊಂಡು ಸ್ವಾವಲಂಬಿಯಾಗಿ ಪರಿಪೂರ್ಣವಾಗಿರುವುದಾಗಿದೆ. ಗಾಂಧೀಜಿಯವರ ಪ್ರಕಾರ ಆದರ್ಶಗ್ರಾಮ ಹೊಂದಿರಬೇಕಾದ ಅಗತ್ಯ ಅಂಶಗಳನ್ನು ಈ ಕೆಳಗಿನಂತೆ ಸ್ಪಷ್ಟವಾಗಿ ತಿಳಿಸಿದ್ದಾರೆ.

1. **ಗಾಂಧಿ ಮಾರ್ಗ (1896-1948):-** ಗಾಂಧೀಜಿಯವರು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ಆರ್ಥಿಕ ಭಾವನೆಗಳನ್ನು ಪ್ರತಿಪಾದಿಸಿರುವುದು. ಈ ಭಾವನೆಗಳು ಸತ್ಯ ಮತ್ತು ಅಹಿಂಸೆಯ ತತ್ವಗಳ ಮೇಲೆ ಅವಲಂಬಿಸಿದೆ. ಮಹಾತ್ಮ ಗಾಂಧಿಜಿಯವರ ಮತ್ತು ಅವರ ಹಿಂಬಾಲಕರ ಆರ್ಥಿಕ ಭಾವನೆಗಳನ್ನು ಗಾಂಧೀ ಆರ್ಥಿಕ ಚಿಂತನೆ ಎಂತಲೇ ಕರೆಯಲಾಗಿದೆ. ಈ ಅರ್ಥಿಕ ಚಿಂತನೆಯು ಬಹುತೇಕವಾಗಿ ಪಾಶ್ಚಿಮಾತ್ಯ ಆಧುನಿಕ ಆರ್ಥಿಕ ಸಿದ್ಧಾಂತಕ್ಕೆ ವಿರುದ್ಧವಾಗಿದ್ದಾಗಿದೆ.

1.1 **ಹಳ್ಳಿಗಳ ಸುಧಾರಣೆ:** ಮಹಾತ್ಮಾ ಗಾಂಧೀಜಿಯವರ ಪ್ರಕಾರ ನಿಜವಾದ ಭಾರತವು ಹಳ್ಳಿಗಳಿಲ್ಲದೆ ಹೊರತು ಪಟ್ಟಣಗಳಲ್ಲಿ ಅಥವಾ ನಗರಗಳಲ್ಲಿ ಅಲ್ಲ. ಹಿಂದಿನ ಕಾಲದ ಗ್ರಾಮೀಣ ಆರ್ಥಿಕತೆಯಲ್ಲಿ ಉತ್ಪಾದನೆಯು ವಿತರಣೆ ಮತ್ತು ಅನುಭೋಗದ ಜೊತೆ ಒಡನೆಯು ನಡೆಯುತ್ತಿತ್ತು. ಇಂತಹ ವ್ಯವಸ್ಥೆಯಲ್ಲಿ ಹಣದ ಅರ್ಥವ್ಯವಸ್ಥೆಯ ವಿಷ ಚಕ್ರವಿರಲಿಲ್ಲ. ಆನರ ಉಪಯೋಗಕ್ಕಾಗಿ ಉತ್ಪಾದನೆಯನ್ನು ಕೈಗೊಳ್ಳಲಾಗುತ್ತಿತ್ತೇ ವಿನಃ ದೂರದ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವ ಉದ್ದೇಶದಿಂದಲ್ಲ. ಗ್ರಾಮೀಣ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಬೇಕೆಂಬುದು ಗಾಂಧಿಜಿಯವರ ಹೆಬ್ಬಯಕೆಯಾಗಿತ್ತು. ಪ್ರಗತಿ ಹೊಂದದ ಕೃಷಿ ವಿಕೇಂದ್ರಿತ ಕೈಗಾರಿಕೆ ಮತ್ತು ಸಣ್ಣ ಪ್ರಮಾಣದ ಸಹಕಾರಿ ಸಂಸ್ಥೆಗಳನ್ನು ಒಳಗೊಂಡಿರುವ ಗ್ರಾಮೀಣ ಅರ್ಥವ್ಯವಸ್ಥೆಯು ನಮ್ಮಲ್ಲಿ ವಿಕಸನಗೊಳ್ಳಬೇಕೆಂಬುದು ಅವರ ಆಜ್ಞೆಯಾಗಿತ್ತು. ಗ್ರಾಮೀಣ ಅರ್ಥವ್ಯವಸ್ಥೆಯ ಎಲ್ಲಾ ಹಂತಗಳಲ್ಲಿ ಜನರ ಸಹಭಾಗಿತ್ವವನ್ನು ಅವರು ಕೋರಿದ್ದಾರೆ. ಹೀಗೆ ಸಮಗ್ರವಾಗಿ ಅಭಿವೃದ್ಧಿ ಹೊಂದಿದ ಹಳ್ಳಿಗಳ ವ್ಯವಸ್ಥೆಯನ್ನು ಗಾಂಧೀಜಿ ಗ್ರಾಮೀಣ ಸರ್ವೋದಯ ಎಂದು ಕರೆದಿದ್ದಾರೆ.

1.2 **ಗ್ರಾಮೀಣ ಭಾರತವೇ ನೈಜ ಭಾರತ:** ಭಾರತ ಬದುಕುತ್ತಿರುವುದು ಅವರ ಏಳು ಲಕ್ಷ ಹಳ್ಳಿಗಳಲ್ಲಿ ಎಂದು ಗಾಂಧೀಜಿ ಸಾರಿದ್ದಾರೆ. ಗ್ರಾಮೀಣ ಜನರ ಶೋಷಣೆ, ಪೂರಕ ಉದ್ಯೋಗಗಳ ಕೊರತೆ, ವೈದ್ಯಕೀಯ ಸೌಲಭ್ಯಗಳ ಅಭಾವ, ತೀವ್ರ ಬಡತನ, ಅನೈರ್ಮಲ್ಯ ಮೊದಲಾದ ಸಂಗತಿಗಳು ಹಳ್ಳಿಗಳ ಪ್ರಗತಿಯನ್ನು ಪ್ರತಿಬಂಧಿಸಿವೆ. ಎಂಬುದು ಗಾಂಧೀಜಿಯವರ ಅಭಿಮತವಾಗಿತ್ತು. ಗಾಂಧೀಜಿ ರೂಪಿಸಿದ

ಗ್ರಾಮ ಪುನರುಜ್ಜೀವನ ಕಾರ್ಯಕ್ರಮವನ್ನು ಸ್ವಾವಲಂಬಿ ಹಳ್ಳಿ ವ್ಯವಸ್ಥೆಯನ್ನು ಗಾಂಧೀಜಿ ಗ್ರಾಮ ಸ್ವರಾಜ್ಯವೆಂದು ಕರೆದಿದ್ದಾರೆ. ಅದು ವಿಕೇಂದ್ರೀಕರಣದಿಂದ ಸ್ವಾವಲಂಬಿ, ಬಲಾಢ್ಯ ಗ್ರಾಮೀಣ ಭಾರತ ನಿರ್ಮಾಣ ಯೋಜನೆಯಾಗಿದೆ. ಗ್ರಾಮ ಸ್ವರಾಜ್ಯವೆಂದರೆ ಹಳ್ಳಿಗಳೇ ನಡೆಸುವ ಸರಕಾರ. ಅದರ ಸ್ವರೂಪವನ್ನು ಗಾಂಧೀಜಿಯವರು ಹೀಗೆ ವಿವರಿಸಿದ್ದಾರೆ. ಗ್ರಾಮ ಸರಕಾರವನ್ನು ಹಳ್ಳಿಯ ಜನರೇ ಚುನಾಯಿಸಿದ ಪಂಚಾಯಿತಿಯ ನಿರ್ವಹಿಸಲೇಬೇಕು. ಒಂದು ಘಟಕವಾಗಿ ಹಳ್ಳಿಗೆ ಎಲ್ಲಾ ಅಧಿಕಾರ ನಿರ್ವಹಿಸಬೇಕು. ಒಂದು ಘಟಕವಾಗಿ ಹಳ್ಳಿಗೆ ಎಲ್ಲಾ ಅಧಿಕಾರಗಳಿರಬೇಕು. ಗ್ರಾಮ ಪಂಚಾಯಿತಿಯು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನು ಹೊಂದಿದ್ದು ತನ್ನ ಅವಧಿ ಮುಗಿಯುವವರೆಗೆ ಸ್ವಾಯತ್ತ ಘಟಕದಂತೆ ಕಾರ್ಯನಿರ್ವಹಿಸಬೇಕು.

1. ಹಳ್ಳಿಯ ರಚನೆಯಲ್ಲಿ ಸುವ್ಯವಸ್ಥೆ ಇರಬೇಕು.
2. ಅದು ಹಣ್ಣಿನ ಮರಗಳನ್ನು ಹೊಂದಿರಬೇಕು.
3. ಒಂದು ಧರ್ಮ ಶಾಲೆ ಮತ್ತು ಒಂದು ಚಿಕ್ಕ ಔಷದ್‌ಂಗಡಿ ಹಳ್ಳಿಯಲ್ಲಿರಬೇಕು.
4. ಆಹಾರ ಮತ್ತು ಬಟ್ಟೆಯ ಕೋರಿಕೆಗಳಿಗೆ ಸಂಬಂಧಿಸಿದಂತೆ ಅದು ಸ್ವಾವಲಂಬಿಯಾಗಿರಬೇಕು.
5. ಗ್ರಾಮೀಣ ಸಂರಚನೆಯಲ್ಲಿ ಶಿಸ್ತು ಕಾನೂನು ಪರಿಪಾಲನೆ ಮತ್ತು ಸ್ವಚ್ಛತೆ ಇಲಬೇಕು.
6. ಹಳ್ಳಿಯ ರಸ್ತೆಗಳು ಮತ್ತು ಕಿರು ದಾರಿಗಳನ್ನು ಸ್ವಚ್ಛವಾಗಿಟ್ಟರಬೇಕು.
7. ಗ್ರಾಮ ದೇವಸ್ಥಾನಗಳನ್ನು ಮತ್ತು ಮಸೀದಿಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಮತ್ತು ಬಹಳ ಸುಂದರವಾಗಿ ಸಂರಕ್ಷಿಸಬೇಕು.
8. ಗ್ರಾಮದ ಕಿರು ದಾರಿಗಳು ಚರಂಡಿ ವ್ಯವಸ್ಥೆಯನ್ನು ಹೊಂದಿರಬೇಕು.
9. ಎಲ್ಲಾ ಗ್ರಾಮಗಳಿಗೆ ತಮ್ಮನ್ನು ಕಾಡು ಪ್ರಾಣಿಗಳಿಂದ ಮತ್ತು ದರೋಡೆಕೋರರಿಂದ ರಕ್ಷಿಸಲ್ಪಡುವ ಶಕ್ತಿ ಇರಬೇಕು.
10. ಹಳ್ಳಿಯ ಒಂದು ಸಾರ್ವಜನಿಕ ಸಭಾಂಗಣ ವ್ಯವಸ್ಥೆ ಅಲ್ಲಿರಬೇಕು.
11. ಗ್ರಾಮೀಣ ಮನೋರಂಜನಾ ವ್ಯವಸ್ಥೆ ಹೊಂದಿರಬೇಕು. ಒಂದು ಆಟದ ಮೈದಾನ ಮತ್ತು ಜಾನುವಾರುಗಳು ಮೇಯುವ ಜಾಗ ಅತ್ಯಗತ್ಯ.
12. ದಕ್ಷವಾದ ನೀರು ಸರಬರಾಜು ವ್ಯವಸ್ಥೆ ಅಲ್ಲಿರಬೇಕು.
13. ಉಳಿದ ಜಾಗವಿದ್ದರೆ ಅದರಲ್ಲಿ ಹೊಗೆಸೊಪ್ಪು ಮತ್ತು ಔಷಧೀಯ ಹೊರತುಪಡಿಸಿ ಇತರೆ ವಾಣಿಜ್ಯ ಬೆಳೆಗಳನ್ನು ಬೆಳೆಯಬೇಕು.
14. ಮೂಲ ಶಿಕ್ಷಣದ ಕೊನೆಯ ತರಗತಿಯವರೆಗೆ ಹಳ್ಳಿಯಲ್ಲಿ ವಿದ್ಯಾಭ್ಯಾಸವನ್ನು ಕಡ್ಡಾಯಗೊಳಿಸಬೇಕು.
15. ಸಹಕಾರ ತತ್ವದ ಆದಾರದ ಮೂಲಕ ಎಲ್ಲಾ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳನ್ನು ನಡೆಸಬೇಕು.
16. ಗ್ರಾಮ ಪಂಚಾಯತ್‌ಗೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಅಧಿಕಾರಗಳಿರಬೇಕು.
17. ನಿಯತ ಆವರ್ತಗಳಲ್ಲಿ ಗ್ರಾಮ ಕಾವಲುಗಾರರಾಗಿ ಗ್ರಾಮಸ್ಥರು ಕಡ್ಡಾಯ ಸೇವೆ ಸಲ್ಲಿಸಬೇಕು.
18. ಗುಡಿ ಕೈಗಾರಿಕೆಗಳ ಆಧಾರದ ಮೇಲೆ ಕೈಗಾರಿಕೀಕರಣ

19. ಯಾವುದೇ ಕಾರಣಕ್ಕೆ ಗ್ರಾಮಗಳಲ್ಲಿ ಜಾತಿ ಪದ್ದತಿ ಮತ್ತು ಅಸ್ಪೃಶ್ಯತೆ ಇರಬಾರದು.

20. ವರ್ಗರಹಿತ ಗ್ರಾಮ ವ್ಯವಸ್ಥೆ ನಿರ್ಮಾಣ.

ಈ ಆಧಾರದ ಮೇಲೆ ಹಳ್ಳಿಗಳನ್ನು ಸುಧಾರಿಸಿ. ಆದರೆ ಭಾರತದ ಪ್ರಗತಿ ಸುಲಭವಾಗಿ ಸಾಧನೆಯಾದಂತೆಯೇ ಎಂದು ಗಾಂಧೀಜಿ ನಂಬಿದ್ದರು. ಆದರೆ ಕೇವಲ ಆದರ್ಶಗಳನ್ನು ಬೋಧಿಸುವವರಿಂದ ಗ್ರಾಮೀಣ ಸುಧಾರಣೆಯನ್ನು ತರುವುದು ಕಷ್ಟಕರವೆಂದು ಅವರ ಸಕಾರಣವಾಗಿಯೇ ಅಭಿಪ್ರಾಯಪಟ್ಟರು. ಬಡತನದ ನಿರ್ಮೂಲನದ ದೃಷ್ಠಿಯಿಂದ ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗೆ ಅವರು ಪ್ರಾಶಸ್ತ್ಯ ನೀಡಿದರು.

<u>ಗ್ರಾಮ ಸ್ವರಾಜ್ಯದ ಮೂಲತತ್ವಗಳು</u>

1.3 ಗ್ರಾಮ ಸ್ವರಾಜ್ಯದ ಮೂಲತತ್ವಗಳು:-

ಗ್ರಾಮ ಸ್ವರಾಜ್ಯವು ಸ್ವಾಯತ್ತ ಗಣರಾಜ್ಯ ವ್ಯವಸ್ಥೆಯಾಗಿದೆ. ಸ್ವರಾಜ್ಯದ ಮೂಲತತ್ವಗಳು ಈ ಕೆಳಗಿನತಿದೆ

1. ಪ್ರತಿಯೊಬ್ಬ ವ್ಯಕ್ತಿಗೆ ಒಂದೇ ರೀತಿಯ ಗೌರವ.
2. ಎಲ್ಲಾ ರೀತಿಯ ಕೆಲಸಗಳಿಗೆ ಸಮಾನ ಗೌರವ.
3. ಸಾಮಾಜಿಕ ಮತ್ತು ಆರ್ಥಿಕ ಸಮಾನತೆ.
4. ವಿಕೇಂದ್ರೀಕೃತ ಉತ್ಪಾದನೆ ಮತ್ತು ಆಡಳಿತ ವ್ಯವಸ್ಥೆ.
5. ಸ್ವದೇಶಿ ಸ್ವಾವಲಂಬನೆ ಮತ್ತು ಸಹಕಾರ.

1.4 ಗ್ರಾಮೀಣ ಆಡಳತ ವ್ಯವಸ್ಥೆ:- ಪ್ರತಿಯೊಂದು ಗ್ರಾಮವು ಸ್ವತಂತ್ರ ಗಣರಾಜ್ಯವಂತೆ ಸ್ವಾವಲಂಬಿಯಾಗಲು ಪ್ರಯತ್ನಿಸಬೇಕು. ತನ್ನಿಂದ ಉತ್ಪಾದಿಸಲಾಗದ ಸರಕುಗಳನ್ನು ಪಕ್ಕದ ಹಳ್ಳಿಗಳಿಂದ ತರಿಸಿಕೊಳ್ಳಬೇಕು.

ಗಾಂಧೀಜಿಯವರ ಕಲ್ಪನೆಯಲ್ಲಿ ಗ್ರಾಮೀಣ ಆಡಳತ ವ್ಯವಸ್ಥೆ ಹೇಗಿರಬೇಕು ಎಂಬುದಾಗಿ ಈ ಕೆಳಗಿನ ಅಂಶಗಳನ್ನು ತಿಳಿಸಿದ್ದಾರೆ

1. ಗ್ರಾಮೀಣ ಆಡಳಿತವು ಪಂಚಸದಸ್ಯರನ್ನೊಳಗೊಂಡ ಪಂಚಾಯತ್ ಒಂದರ ಕೈಯಲ್ಲಿರ ಬೇಕು.
2. ಗ್ರಾಮ ಪಂಚಾಯತಿಗೆ ಶಾಸಕಾಂಗ, ಕಾರ್ಯಂಗ ಮತ್ತು ನ್ಯಾಯಾಂಗದ ಅಧಿಕಾರಗಳಿರಬೇಕು.
3. ಗ್ರಾಮ ಪಂಚಾಯತು ಕಡ್ಡಾಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಬೇಕು.
4. ಗ್ರಾಮ ರಕ್ಷಕ ಯೋಜನೆಯನ್ನು ಕಡ್ಡಾಯವಾಗಿ ಅನುಷ್ಠಾನ ಗೊಳಿಸಬೇಕು.
5. ಆಹಾರ ಮತ್ತು ಬಟ್ಟೆಯ ವಿಷಯದಲ್ಲಿ ಸ್ವಾವಲಂಬನೆ ಸಾಧಿಸಬೇಕು.
6. ಗ್ರಾಮದಲ್ಲೊಂದು ರಾತ್ರಿ ರಂಗಮಂದಿರ ಮತ್ತು ಸಮುದಾಯ ಭವನ ಇರಲೇಬೇಕು.
7. ಪ್ರತಿ ಗ್ರಾಮದ ಒಂದು ಅಸ್ಪತ್ರೆ ಮತ್ತು ಒಂದು ಧರ್ಮವೃತ್ತ ಹೊಂದಿರಬೇಕು.
8. ಗ್ರಾಮಾಡಳಿತವು ಅಸ್ಪೃಶ್ಯತೆ ಮತ್ತು ಜಾತೀಯತೆಯ ವಿನಾಶಕ್ಕೆ ಯತ್ನಿಸಬೇಕು.
9. ಗ್ರಾಮಾಡಳಿತವು ವರ್ಗರಹಿತ ಗ್ರಾಮ ವ್ಯವಸ್ಥೆಯನ್ನು ನೇಮಿಸಬೇಕು.

1.5 ಸಹಕಾರ ಉತ್ಪಾದನೆ ವ್ಯವಸ್ಥೆ:- ಸಹಕಾರ ತತ್ವದ ಆಧಾರದಲ್ಲಿ ಉತ್ಪಾದನೆ ನಡೆಯಬೇಕು. ತಾನು ಎಲ್ಲರಿಗೂ ಮತ್ತು ಎಲ್ಲರೂ ತನ್ನಗಾಗಿ ಎನ್ನುವ ಭಾವನೆಯು ಅಳವಡಿಕೆಯಿಂದ ಜೀವನ ಸಾಗಿಸುವುದೇ ಸಹಕಾರ ತತ್ವ.

ಸಹಕಾರ ತತ್ವದಿಂದ ಸಮುದಾಯ ಪ್ರೀತಿ ಮತ್ತು ಸಮಾನತೆಯ ಭಾವ ಉಂಟಾಗುತ್ತದೆ. ಗ್ರಾಮಗಳ ಬದುಕನ್ನು ಸುಂದರಗೊಳಿಸಲು ಎಲ್ಲರ ಸಹಕಾರ ಅಗತ್ಯ ಅದಕ್ಕಾಗಿ ಗಾಂಧೀಜಿ ಹೇಳುತ್ತಿದ್ದರು. ನಾವು ಹಳ್ಳಿಗಳಿಗೆ ಮರಳಬೇಕಾಗಿದೆ. ಹಳ್ಳಿಗರ ಪೂರ್ವಾಗ್ರಹಗಳನ್ನು ಅಂಧ ವಿಶ್ವಾಸಗಳನ್ನು ಮತ್ತು ಸಂಕುಚಿತ ದೃಷ್ಟಿಯನ್ನು ಅವರೊಂದಿಗೆ ಬೆರತು ಪರಿಹರಿಸಬೇಕಾಗಿದೆ. ಅವರಿಗೆ ಶಿಕ್ಷಣ ನೀತಿ, ಜ್ಞಾನದ ಬೆಳಕನ್ನು ಹಚ್ಚಿ ಅವರ ಕಷ್ಟಸುಖಗಳಲ್ಲಿ ಭಾಗಿಯಾಗಿ ಅವರೊಡನೆ ವಾಸಿಸಿ ಸಹಕಾರದ ಅರಿವನ್ನು ಅವರಲ್ಲಿ ಮೂಡಿಸಬೇಕಾಗಿದೆ.

ಸಹಕಾರದ ಬಗ್ಗೆ ಗಾಂಧೀಜಿ ಅಭಿಪ್ರಾಯ

1. ಸಹಕಾರವು ಗ್ರಾಮೀಣ ಜನತೆಯ ಉದ್ಧಾರದ ಹೆದ್ದಾರಿಯಾಗಿದೆ.
2. ಗ್ರಾಮೀಣ ಜನರು ಸಹಕಾರಿ ಬೇಸಾಯ ಪದ್ಧತಿಯನ್ನು ಅನುಸರಿಸಬೇಕು.
3. ಸಹಕಾರಿ ಉತ್ಪಾದನಾ ಕ್ರಮದಿಂದ ಉತ್ಪಾದನೆ ಅಧಿಕವಾಗುತ್ತದೆ.
4. ಕೃಷಿ ಉತ್ಪಾದನೆ ಅಧಿಕವಾದರೆ ಜನರ ಅದಾಯ ಹೆಚ್ಚಾಗುತ್ತದೆ.
5. ಸಹಕಾರಿ ತತ್ವವು ಅಸ್ಪೃಶ್ಯತೆ ಮತ್ತು ಜಾತೀತತೆಯನ್ನು ಹೋಗಲಾಡಿಸುತ್ತದೆ.
6. ಸಹಕಾರದಿಂದ ಹಳ್ಳಿಗರ ಭಿನ್ನಾಭಿಪ್ರಾಯ ದೂರವಾಗುತ್ತದೆ.
7. ಸರ್ವ ಸಹೋದರತ್ವ ಭಾವನೆ ಬೆಳೆದು, ಸರ್ವರಿಗೂ ಸಮಪಾಲು ಮತ್ತು ಸಮಬಾಳು ದೊರೆಯುತ್ತದೆ.

1.6 ಸ್ಥಳೀಯ ಸಂಪನ್ಮೂಲಗಳ ಬಳಕೆ:- ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯಲ್ಲಿ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆಯಿಂದ ನಿರುದ್ಯೋಗ ನಿವಾರಣೆಗೆ ಯತ್ನಿಸಲಾಗುತ್ತದೆ. ಸ್ಥಳೀಯ ಕಚ್ಚಾ ಸಾಮಾಗ್ರಿಗಳು, ಸ್ಥಳೀಯ ಪಾರಂಪರಿಕ ತಂತ್ರಜ್ಞಾನ ಮತ್ತು ಪರಿಗಣನೆಯ ಬಳಕೆಯಿಂದ ಪ್ರತಿಯೊಂದು ಗ್ರಾಮವು ಸ್ವಾವಲಂಬೀ ಘಟಕವಾಗಿ ಪರಿವರ್ತನೆ ಹೊಂದಬೇಕೆನ್ನುವುದು ಗಾಂಧೀಜಿಯ ಆಶಯವಾಗಿದೆ. ಗಾಧೀಜಿಯವರು ಗುಡಿಕೈಗಾರಿಕೆ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಉತ್ತೇಜನ ನೀಡಿದ್ದರು.

1.7 ಗ್ರಾಮಗಳ ನಡುವೆ ವಿನಿಮಯ:- ಗಾಂಧೀಜಿ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಮಹತ್ವನೀಡಲ್ಲಿಲ್ಲ. ಗ್ರಾಮಗಳು ಉತ್ಪಾದಿಸಿದ ಸರಕುಗಳು ಗ್ರಾಮಗಳ ನಡುವೆ ವಿನಿಮಯವಾದರೆ ಸಾಗಾಟ ವೆಚ್ಚ ಮತ್ತು ಜಾಹೀರಾತು ವೆಚ್ಚಗಳ ಅಗತ್ಯವಿರುವುದಿಲ್ಲ. ಆಗ ಕಡಿಮೆ ಬೆಲೆಗೆ ಸರಕುಗಳು ಜನರಿಗೆ ಲಭ್ಯವಾಗುತ್ತದೆ. ಗ್ರಾಮವೊಂದು ತನಗೆ ಸಾಧ್ಯವಿರುವ ಸರಕುಗಳನ್ನು ತಾನೇ ಉತ್ಪಾದಿಸಿಕೊಳ್ಳಬೇಕು. ಸಾಧ್ಯವಾಗದ ಸರಕುಗಳನ್ನು ಹತ್ತಿರದ ಗ್ರಾಮಗಳಿಂದ ತರಿಸಿಕೊಳ್ಳಬೇಕು ಎನ್ನುವುದು ಗ್ರಾಮ ಸ್ವರಾಜ್ಯ ಕಲ್ಪನೆಯ ತಿರುಳಾಗಿದೆ.

ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆ ಪ್ರತಿಯೊಂದು ಗ್ರಾಮವು ಒಂದು ದೇಶದ ಹಾಗೆ ಕಾರ್ಯವೆಸಗಬೇಕು. ಎಲ್ಲಾ ಸಮಸ್ಯೆಗಳನ್ನು ಗ್ರಾಮಮಟ್ಟದಲ್ಲಿ ಬಗೆಹರಿಸಿಕೊಂಡು ಸ್ವಾವಲಂಬಿ ಆರ್ಥಿಕ ಘಟಕಗಳಾಗಿ ಕಾರ್ಯವೇಸಗಬೇಕು

1.8 ಸ್ವದೇಶಿತತ್ವ :- ಭಾರತೀಯರ ಒಡೆತನದಲ್ಲಿ ಉತ್ಪಾದನೆಯಾಗುವುದೆಲ್ಲವೂ ಸ್ವದೇಶೀ ಎನಿಸುತ್ತದೆ.

1. ಭಾರತೀಯ ಉತ್ಪನ್ನಗಳನ್ನೇ ಬಳಸಬೇಕು.
2. ವಿದೇಶೀ ಉತ್ಪನ್ನಗಳ ವ್ಯಾಮೋಹ ತೊರಯಬೇಕು.

3. ವಿದೇಶೀ ಉತ್ಪನ್ನಗಳ ಬಳಕೆಯಿಂದ ಭಾರತದ ಹಣ ಅನ್ಯದೇಶಗಳಿಗೆ ಹೋಗಿ ಭಾರತ ಇನ್ನಷ್ಟು ದುರ್ಬಲವಾಗುತ್ತದೆ.

4. ಸ್ವದೇಶೀ ಉತ್ಪನ್ನಗಳ ಬಳಕೆಯಿಂದ ದೇಶವು ಸ್ವಾವಲಂಬಿಯಾಗುತ್ತದೆ.

5. ಗ್ರಾಮ ಸ್ವರಾಜ್ಯ ಪರಿಕಲ್ಪನೆಯಿಂದ ರಾಷ್ಟ್ರ ಮಟ್ಟಕ್ಕೆ ವಿಸ್ತಾರಗೊಂಡಾಗ ರಾಮರಾಜ್ಯದ ಕನಸು ನನಸಾಗುತ್ತದೆ.

1.9 ಖಾದಿ ಉದ್ದಿಮೆ:- ಗಾಂಧೀಜಿಯವರು ಖಾದಿ ಉದ್ಯಮವನ್ನು ಗ್ರಾಮೀಣ ವ್ಯವಸ್ಥೆಯ ಸೂರ್ಯ ಎಂದು ಹೊಗಳಿದ್ದಾರೆ. ಅವರ ಪ್ರಕಾರ ಎಲ್ಲಾ ಗ್ರಾಮೀಣ ಉದ್ಯಮಗಳು ಖಾದಿಯ ಸುತ್ತ ಸುತ್ತುತ್ತವೆ. ಖಾದಿಯು ಚರಕ ನಿರ್ಮಿಸುವ ಬಡಗಿಗಳಿಗೆ ಕಮ್ಮಾರರಿಗೆ ಹತ್ತಿ ಬೆಳೆಯುವ ಬಡ ಕೃಷಿಕರಿಗೆ, ನೂಲುವವರಿಗೆ ನೇಕಾರರಿಗೆ, ಬಣ್ಣ ಹಾಕುವವರಿಗೆ ಮತ್ತು ಮುದ್ರಿಸುವವರಿಗೆ ಉದ್ಯೋಗ ಒದಗಿಸುತ್ತದೆ. ಖಾದಿ ಉದ್ಯಮವು ಭಾರತದ ಭವಿಷ್ಯವನ್ನು ಬದಲಾಯಿಸುತ್ತದೆ. ಎನ್ನುವುದು ಗಾಧೀಜಿಯವರ ನಂಬಿಕೆ. ಖಾದಿಯು ಕೋಟ್ಯಂತರ ಮಂದಿಗೆ ಉದ್ಯೋಗವನ್ನು ಒದಗಿಸುತ್ತದೆ.

ಖಾದಿಯಿಂದ ಉದ್ಯೋಗ ನಿರ್ಮಾಣ:-

- ಚರಕ ನಿರ್ಮಾಣದಿಂದ ಬಡಗಿಗಳಿಗೆ ಉದ್ಯೋಗ.
- ಕಬ್ಬಿಣದ ಉಪಕರಣಗಳ ಬಳಕೆಯಿಂದ ಕಮ್ಮಾರರಿಗೆ ಉದ್ಯೋಗ.
- ಹತ್ತಿ ಬೆಳೆಯುವ ರೈತರಿಗೆ ಉದ್ಯೋಗ.
- ನೂಲು ನೇಯುವವರಿಗೆ ಉದ್ಯೋಗ.
- ಬಟ್ಟೆ ತಯಾರಿಸುವ ನೇಕಾರರಿಗೆ ಉದ್ಯೋಗ.
- ಬಟ್ಟೆಗೆ ಬಣ್ಣ ಹಾಕುವವರಿಗೆ ಉದ್ಯೋಗ.
- ಬಟ್ಟೆಯಲ್ಲಿ ಕಸೂತಿ ಮಾಡುವವರಿಗೆ ಉದ್ಯೋಗ.
- ಬಟ್ಟೆ ಮಾರಾಟ ಮಾಡುವವರಿಗೆ ಉದ್ಯೋಗ.

ಖಾದಿ ಎಂದರೆ ಸರ್ವಸಮಾನತೆ ಆರ್ಥಿಕ ಸ್ವಾತಂತ್ರ್ಯದ ಪ್ರಾರಂಭ ಖಾದಿ ಎಂದರೆ ಸಂಪೂರ್ಣ ಸ್ವದೇಶಿ. ದೇಶದ ಜೀವನಾವಶ್ಯಕ ಸರಕುಗಳನ್ನು ಗ್ರಾಮೀಣ ಜನರ ಬುದ್ದಿ ಮತ್ತು ಪರಿಶ್ರಮಗಳಿಂದ ಉತ್ಪಾದನೆ ಮಾಡುವ ದೃಢಸಂಕಲ್ಪ. ಅದಕ್ಕಾಗಿ ಈಗಿನ ಉತ್ಪಾದನಾ ಕ್ರಮ ಬದಲಾಗಬೇಕು. ಹಳ್ಳಿಗಳನ್ನು ಹಿಂತಿ ನಗರಗಳು ಎಳೆಯುವ ಬದಲೂ ಹಳ್ಳಿಗಳು ಸ್ವಾವಲಂಬಿಗಳಾದಾಗ ಅವು ನಗರಗಳನ್ನು ಪೋಷಿಸಿಯಾವು ಎನ್ನುವುದು ಗಾಂಧೀಜಿ ಅಭೀಮತವಾಗಿತ್ತು.

ಖಾದಿ ಉದ್ದಿಮೆ ವಹಿವಾಟಿಗೆ ಗಾಂಧೀಜಿ ಹತ್ತು ಕ್ರಮಗಳನ್ನು ಸೂಚಿಸಿದ್ದಾರೆ.

1. ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ನೂಲು ನೇಯುವುದನ್ನು ಅಳವಡಿಸುವುದು.
2. ಹತ್ತಿ ಬೆಳೆಯುವ ಪ್ರದೇಶವನ್ನು ವಿಸ್ತರಿಸುವುದು.

3. ಸಹಕಾರಿ ಸಂಘಗಳು ನೂಲುವ ಮತ್ತು ನೇಯುವ ಚಟುವಟಿಕೆಗಳಿಗೆ ಉತ್ತೇಜನ ನೀಡಬೇಕು.

4. ಎಲ್ಲಾ ಸಹಕಾರಿ ಇಲಾಖೆಗಳಲ್ಲಿ ಉದ್ಯೋಗಿಗಳಿಗೆ ನೂಲುವ ಪರೀಕ್ಷೆಯನ್ನು ಏರ್ಪಡಿಸಬೇಕು. ಪರೀಕ್ಷೆಯಲ್ಲಿ ಅನುತ್ತೀರ್ಣರಾದವರನ್ನು ಕೆಲಸದಿಂದ ತೆಗೆದು ಹಾಕಬೇಕು.

5. ಗಿರಣಿ ನೂಲಿನಿಂದ ತಯಾರಾದ ಕೈ ಮಗ್ಗದ ಬಟ್ಟೆಯ ಬೆಲೆಯನ್ನು ನಿಯಂತ್ರಿಸಬೇಕು.

6. ಕೈ ಮಗ್ಗದ ಬಟ್ಟೆಗಳು ದೊಡ್ಡ ಪ್ರಮಾಣದಲ್ಲಿ ದೊರೆಯುವ ಪ್ರದೇಶಗಳಲ್ಲಿ ಗಿರಣಿ ಬಟ್ಟೆಗಳನ್ನು ನಿಷೇಧಿಸಬೇಕು.

7. ಎಲ್ಲಾ ಸಹಕಾರಿ ಕಛೇರಿಗಳಲ್ಲಿ ಕೈಮಗ್ಗದ ಬಟ್ಟೆಯ ಬೆಲೆಯನ್ನು ನಿಯಂತ್ರಿಸಬೇಕು.

8. ವಿದೇಶಿ ನೂಲು ಮತ್ತು ಬಟ್ಟೆಯ ಬಹಿಷ್ಕಾರ

9. ಬಟ್ಟೆ ಗಿರಣಿಗಳ ಸ್ಥಾಪನೆಗೆ ಅವಕಾಶ ಕೊಡದಿರುವುದು.

10. ಸರಕಾರ ನೇಕಾರರಿಗೆ ಎಲ್ಲಾ ರೀತಿಯ ಸಹಕಾರ ಮತ್ತು ಸೌಲಭ್ಯ ನೀಡಬೇಕು.

1.2 ಸತ್ಯಾಗ್ರಹ

ಸತ್ಯಾಗ್ರಹದ ಪರಿಕಲ್ಪನೆಯು ಪುರಾತನವಾದುದು. ಏಸು ಕ್ರಿಸ್ಥ, ಬುದ್ದ, ಮಹಾವೀರ ಮೊದಲಾದವರ ಪ್ರೀತಿ, ಅಹಿಂಸೆಯ ಮೂಲಕ ಗುರಿಸಾಧನೆಗೆ ಕರೆ ನೀಡಿದ್ದಾರೆ. ಈ ಹಳೆಯ ಸತ್ಯಾಗ್ರಹವನ್ನು ಮತ್ತೆ ಚಲಾವಣೆಗೆ ತರಲು ಪ್ರಯತ್ನಿಸಿದ ಗಾಂಧೀಜಿ ಸತ್ಯಾಗ್ರಹಕ್ಕೆ ಒಂದು ತತ್ವಶಾಸ್ತ್ರದ ರೂಪವನ್ನು ನೀಡುವಲ್ಲಿ ಯಸಸ್ವಿಯಾದರು ಹಾಗೂ ಸತ್ಯಾಗ್ರಹವನ್ನು ಪ್ರಥಮ ಬಾರಿಗೆ ದಕ್ಷಿಣ ಆಫ್ರಿಕಾದಲ್ಲಿ ಪ್ರಯೋಗಿಸಿ ಯಶಸ್ವಿಯಾದರು. ಇವರು ಪ್ರಯೋಗಿಸಿದ ಸತ್ಯಾಗ್ರಹದ ಹಲವು ರೂಪಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

1.1 ಅಸಹಕಾರ

ವ್ಯಕ್ತಿಯಾಗಲಿ ಅಥವಾ ಅಧಿಕಾರಿಯಾಗಲಿ ಅಥವಾ ಸರಕಾರವಾಗಲಿ ಅನ್ಯಾಯ ದಬ್ಬಾಳಿಕೆ ದುರಾಡಳಿತದಲ್ಲಿ ತೊಡಗಿದ್ದರೆ, ಅಂತಹುದರ ವಿರುದ್ಧ ಚಳುವಳಿ ಹೂಡುವುದು ಅನ್ಯಾಯಕ್ಕೊಳಗಾಗಿರುವವರ ಕರ್ತವ್ಯವಾಗಿದೆ. ಈ ರೀತಿ ಜನರು ವ್ಯಕ್ತಿ, ಸಂಸ್ಥೆ ಅಧಿಕಾರಿ ಅಥವಾ ಸರಕಾರದೊಡನೆ ಸಹಕರಿಸದಿದ್ದಾಗ ಸೋಲಬೇಕಾಗುತ್ತದೆ. ಹಾಗೂ ದಬ್ಬಾಳಿಕೆ, ದುರಾಡಳಿತ ಹಾಗೂ ಅನ್ಯಾಯ ಅಂತ್ಯಗೊಳ್ಳುತ್ತದೆ. ಈ ಅಸಹಕಾರ ಚಳುವಳಿಯ ಹಲವು ರೂಪಗಳಿದ್ದು, ಅವುಗಳೆಂದರೆ:

(ಅ) ಹರತಾಳ:ಅನ್ಯಾಯ, ದಬ್ಬಾಳಿಕೆ, ದುರಾಡಳಿತ ನಡೆಸುವವರ ಮನಸನ್ನು ಬದಲಾಯಿಸುವಂತೆ ಮಾಡಲು ತಮ್ಮ ತಮ್ಮ ಕೆಲಸವನ್ನು ನಿಲ್ಲಿಸಿ ಪ್ರತಿಭಟಿಸುವುದೇ ಹರತಾಳವಾಗಿದೆ. ಇದರಿಂದ ಸರಕಾರ, ಅಧಿಕಾರಿ ಹಾಗೂ ಜನತೆಯನ್ನು ಎಚ್ಚರಿಸಬಹುದಾಗಿದ್ದು, ಈ ಅಸ್ತ್ರವನ್ನು ಪದೇ ಪದೇ ಬಳಸಲು ಗಾಂಧೀಜಿಯವರು ವಿರೋಧ ವ್ಯಕ್ತಪಡಿಸಿದ್ದಾರೆ ಹಾಗೂ ಹಿಂಸಾ ಕೃತ್ಯದಲ್ಲಿ ತೊಡಗದಂತೆ ಎಚ್ಚರಿಕೆಯನ್ನು ನೀಡಿದ್ದಾರೆ.

(ಆ) ಸಾಮಾಜಿಕ ಬಹಿಷ್ಕಾರ:ವಿಶೇಷವಾದ ಸನ್ನಿವೇಶ ಅಥವಾ ಸಂದರ್ಭದಲ್ಲಿ ಸ್ವಹಿತ ಸಾಧನೆಗೆ ಯತ್ನಿಸಿದ ವ್ಯಕ್ತಿ ಹಾಗೂ ಸಾಮಾಜಿಕ ಪ್ರತಿಭಟನೆಯಲ್ಲಿ ಪಾಲ್ಗೊಳ್ಳದಂತಹ ವ್ಯಕ್ತಿಗಳಿಗೆ ಸಾಮಾಜಿಕ

ಬಹಿಷ್ಕಾರವನ್ನು ಹಾಕಬಹುದಾಗಿದೆ ಎಂದು ಗಾಂಧೀಜಿಯವರು ಹೇಳಿದ್ದಾರೆ. ಈ ಬಹಿಷ್ಕಾರವನ್ನು ಸಮಾಜ ದ್ರೋಹಿಗಳಿಗೆ ಮಾತ್ರ ಹಾಕುವಂತೆ ಕರೆ ನೀಡಿರುವ ಗಾಂಧೀಜಿಯವರು, ವ್ಯಕ್ತಿಯ ಮನಸ್ಸನ್ನು ಪರಿವರ್ತಿಸುವ ಉದ್ದೇಶ ಇರಬೇಕು ಎಂದು ಹೇಳಿದ್ದಾರೆ.

(ಇ) ಪಿಕೆಟಿಂಗ್: ಯಾವುದೇ ಹಿಂಸಾತ್ಮಕ ಮಾರ್ಗವನ್ನು ಅನುಸರಿಸದೆ ಶಾಂತಿಯುತವಾಗಿ ವ್ಯಕ್ತಿ ಅಥವಾ ಅಧಿಕಾರಿ ಅಥವಾ ಸರಕಾರ ಕಾರ್ಯ ನಿರ್ವಹಿಸಲು ಸಾಧ್ಯವಾಗದಂತೆ ತಡೆ ಹಾಕುವುದೇ ಆಗಿದೆ.

1.2 .ಕಾನೂನು ಭಂಗ ಚಳುವಳಿ: ರಾಜ್ಯದ ಅನ್ಯಾಯ, ದಬ್ಬಾಳಿಕೆಯನ್ನು ವಿರೋಧಿಸಲು ಸವಿನಯ ಕಾನೂನು ಭಂಗ ಚಳುವಳಿಯನ್ನು ಹಮ್ಮಿಕೊಳ್ಳುವಂತೆ ಗಾಂಧೀಜಿಯವರು ಕರೆ ನೀಡಿದ್ದಾರೆ. ಇದು ಅಸಹಕಾರ ಚಳುವಳಿಯ ಕೊನೆಯ ಅಥವಾ ತೀವ್ರ ರೀತಿಯ ಸತ್ಯಾಗ್ರಹ ವಿಧಾನವಾಗಿದ್ದು, ಸರಕಾರ ಅಸಹಕಾರ ಚಳವಳಿಯ ಮೊದಲ ವಿಧಾನಗಳಿಂದ ತನ್ನ ಧೋರಣಾ ನೀತಿಯನ್ನು ಬದಲಿಸಿಕೊಳ್ಳದಿದ್ದಂತಹ ಸಂದರ್ಭದಲ್ಲಿ ಈ ವಿಧಾನವನ್ನು ಉಪಯೋಗಿಸುವಂತೆ ಹೇಳಿದ್ದಾರೆ. ಇದನ್ನು ಶಸ್ತ್ರಕ್ರಾಂತಿಗೆ ಬದಲಾಗಿ ಅನುಸರಿಸುವ ರಕ್ತರಹಿತವಾದ ಪರಿಣಾಮಕಾರಿಯಾದ ವಿಧಾನ ಎಂದು ಗಾಂಧೀಜಿಯವರು ಕರೆ ನೀಡಿದ್ದಾರೆ.

1.3. ಹಿಜರತ್: ಒಂದು ಪ್ರದೇಶದಿಂದಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದಕ್ಕೆ ಹಿಜರತ್ ಎಂದು ಕರೆಯಾಲಾಗುತ್ತದೆ. ಇದು ಸತ್ಯಾಗ್ರಹದಲ್ಲಿ ಬಾಗವಹಿಸುವ ಸತ್ಯಾಗ್ರಹಿಯ ವಿಶಿಷ್ಟ ಬಗೆಯ ಸಾಧನವಾಗಿದ್ದು, ದಬ್ಬಾಳಿಕೆ, ಅನ್ಯಾಯ, ಶೋಷಣೆಯಿಂದ ಮುಕ್ತವಾಗಲು ಸತ್ಯಾಗ್ರಹಿಗಳು ಆತ್ಮ ಹಾಗೂ ಸ್ವಯಂ ಸಂತೋಷದಿಂದ ಬೇರೆ ಪ್ರದೇಶಗಳಿಗೆ ವಲಸೆ ಹೋಗುವುದು. ಇದೊಂದು ರೀತಿಯಲ್ಲಿ ಸ್ವಯಂ ಗಡಿಪಾರು ಕ್ರಮವೆನ್ನಬಹುದಾಗಿದೆ.

1.4. ಉಪವಾಸ: ಗಾಂಧೀಜಿಯವರು ಉಪವಾಸ ಸತ್ಯಾಗ್ರಹಕ್ಕೆ ಅತ್ಯಂತ ಶ್ರೇಷ್ಠ ಸ್ಥಾನವನ್ನು ನೀಡಿದ್ದಾರೆ. ಅನ್ಯಾಯ, ದಬ್ಬಾಳಿಕೆ, ದುರಾಡಳಿತ ವಿರುದ್ಧ ಅನ್ನ ಸತ್ಯಾಗ್ರಹ ಅಥವಾ ಉಪವಾಸದಂತಹ ಸತ್ಯಾಗ್ರಹ ಮಾರ್ಗವನ್ನು ಅನುಸರಿಸಬೇಕಾದರೆ, ಸತ್ಯಾಗ್ರಹಿಯ ಅಹಿಂಸಾ ತತ್ವದಲ್ಲಿ ನಂಬಿಕೆ, ಶಿಸ್ತು, ಸಂಯಮ, ಶ್ರದ್ಧೆಯನ್ನು ಹೊಂದಿದರೆ ಮಾತ್ರ ಬಳಸಬಹುದು ಎಂದಿದ್ದಾರೆ. ಇದನ್ನು ಅತ್ಯಂತ ಎಚ್ಚರಿಕೆಯಿಂದ ಬಳಸಬೇಕೆಂದು ಹೇಳಿರುವ ಗಾಂಧೀಜಿಯವರು, ಉದ್ದೇಶಿತ ಗುರಿ ಸಾಧನೆಗಾಗಿ ಪ್ರಾಣ ತ್ಯಾಗಕ್ಕಾದರೂ ಸಿದ್ಧರಿರುವಂತವರು ಈ ಅಸ್ತ್ರವನ್ನು ಉಪಯೋಗಿಸಬೇಕು ಎಂದಿದ್ದಾರೆ. ಈ ಉಪವಾಸದ ಮುಷ್ಕರವನ್ನು ಅನ್ಯಾಯವನ್ನು ವಿರೋಧಿಸುವುದಕ್ಕಾಗಿ, ಆತ್ಮ ಶುದ್ಧಿಗಾಗಿ, ಪ್ರಾಯಶ್ಚಿತ್ತದ ಕ್ರಮಕ್ಕಾಗಿ, ಕೆಡಕನ್ನುಂಟು ಮಾಡುವ ವ್ಯಕ್ತಿಗಳ ಮನಸ್ಸು ಬದಲಾಯಿಸುದಕ್ಕೋಸ್ಕರ ಕೈಗೊಳ್ಳುವಂತೆ ಹೇಳಿದ್ದಾರೆ.

1.5. ಮುಷ್ಕರ

ಕೈಗಾರಿಕಾ ಮಾಲೀಕರು ಅಥವಾ ಬಂಡವಾಳಶಾಹಿ ವರ್ಗದ ವಿರುದ್ಧ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಕಾರ್ಮಿಕರು ಈ ರೀತಿಯ ಮುಷ್ಕರವನ್ನು ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಕೆಲಸವನ್ನು ಸ್ಥಗಿತಗೊಳಿಸುವುದೇ ಮುಷ್ಕರವಾಗಿದ್ದು, ನ್ಯಾಯ ಸಮ್ಮತವಾದಂತಹ ಬೇಡಿಕೆಗಳ ಈಡೇರಿಕೆಗಾಗಿ ಮಾತ್ರ ಮುಷ್ಕರ ಹೂಡಬೇಕೆಂದು ಕರೆ ನೀಡಿರುವ ಗಾಂಧೀಜಿ, ಸಾಮಾನ್ಯ ಕಾರಣಗಳಿಗಾಗಿ ಮುಷ್ಕರ ಹೂಡಬಾರದೆಂದು ಎಚ್ಚರಿಕೆಯನ್ನು ನೀಡಿದ್ದಾರೆ.

1.6. ಕರೆ ನಿರಾಕರಣೆ

ಅಸಹಕಾರ ಮತ್ತು ಕಾಯ್ದೆ ಭಂಗದ ಸಮ್ಮಿಶ್ರಣವೇ ಕರೆ ನಿರಾಕರಣೆಯಾಗಿದ್ದು, ಅನ್ಯಾಯ ವಿಧಿಸಲ್ಪಡುವ ಕರ ವನ್ನು ಸರಕಾರಕ್ಕೆ ಸಲ್ಲಿಸದೆ, ಕಾನೂನಿನ ಮೂಲಕ ವಿಧಿಸುವ ಶಿಕ್ಷೆಯನ್ನು ಪ್ರತಿರೋಧ ವ್ಯಕ್ತ ಪಡಿಸದೆ, ಅನುಭವಿಸುವುದೇ ಆಗಿದೆ. ಈ ಕರೆ ನಿರಾಕರಣೆ ಚಳುವಳಿಯಿಂದಾಗಿ ಸರ್ಕಾರದ ಖಜಾನೆಗೆ ಬರುವ ಆದಾಯ ಕಡಿಮೆಯಾಗಿ, ಸರಕಾರ ಕೂಡಲೇ ಗಮನ ಹರಿಸಬಹುದೆಂಬುದು ಗಾಂಧೀಜಿಯವರ ಅನಿಸಿಕೆಯಾಗಿತ್ತು. ಗಾಂಧೀಜಿಯವರ ಬಾರ್ದೋಲಿಯಲ್ಲಿ ನಡೆಸಿದ ಕರೆ ನಿರಾಕರಣಾ ಚಳುವಳಿ ಹೆಚ್ಚು ಪ್ರಸಿದ್ಧಿಯಾಗಿದೆ. ಸತ್ಯಾಗ್ರಹದ ಅನೇಕ ವಿಧಾನಗಳ ಬಗ್ಗೆ ಪ್ರಸ್ತಾಪಿಸಿರುವ ಗಾಂಧೀಜಿಯವರು, ಸತ್ಯಾಗ್ರಹಿಗಳಿಗೆ ಅಗತ್ಯವಾಗಿರುವ ಗುಣಗಳನ್ನು ಸಹ ಪ್ರಸ್ತಾಪಿಸಿದ್ದಾರೆ. ಅವುಗಳೆಂದರೆ: (ಅ) ಪ್ರಾಮಾಣಿಕತೆಗೆ (ಆ) ಶಿಸ್ತು (ಇ) ತ್ಯಾಗ (ಈ) ಹಿಂಸೆ, (ಉ) ತ್ಯಾಗದಲ್ಲಿಯೇ ಉಲ್ಲಾಸ ಕಾಣುವ ಗುಣ, (ಊ) ಸೋಲನ್ನು ಮತ್ತು ಶಿಕ್ಷೆಯನ್ನು ಅನುಭವಿಸಲು ಸಿದ್ಧರಿರುವುದು. ಗಾಂಧೀಜಿಯವರ ಸತ್ಯಾಗ್ರಹ ಕಲ್ಪನೆಯ ಪ್ರಾಯೋಗಿಕತೆಗಿಂತಲೂ ದಾರ್ಶನಿಕ ಹಾಗೂ ಆಧ್ಯಾತ್ಮಿಕತೆಯ ಸ್ವರೂಪವನ್ನು ಹೊಂದಿದೆ. ಅಹಿಂಸೆಯೇ ಪರಮ ಧರ್ಮ ಎಂಬ ಮೂಲ ತಳಹದಿಯ ಮೇಲಿರುವ ಗಾಂಧೀಜಿಯವರ ಸತ್ಯಾಗ್ರಹ ಪರಿಕಲ್ಪನೆಯು ಏಸುಕ್ರಿಸ್ತ, ಬುಧ್ಧ ಮತ್ತು ಮಹಾವೀರರ ಉಪದೇಶದಿಂದ ಪ್ರಭಾವಿತವಾಗಿರುವುದು ಕಂಡು ಬರುತ್ತದೆ. ಪ್ರಸ್ತುತವಾಗಿ ಭಾರತದಲ್ಲಿ ಗಾಂಧೀಜಿಯವರ ಸತ್ಯಾಗ್ರಹ ಹಾಗೂ ಸತ್ಯಾಗ್ರಹ ತಂತ್ರಗಳು ಅರ್ಥಪೂರ್ಣವಾಗಿ ಬಳಕೆಯಾಗುವುದಕ್ಕೆ ಬದಲು ದುರ್ಬಳಕೆಯಾಗುತ್ತಿರುವುದು ಅತ್ಯಂತ ದುರದೃಷ್ಟಕರ ಸಂಗತಿಯಾಗಿದೆ.

1.3 ಧರ್ಮದರ್ಶಿತ್ವ ತತ್ವ–

ಮಹಾತ್ಮ ಗಾಂಧೀಜಿಯವರು ಕಾರ್ಲ್‌ಮಾರ್ಕ್ಸ್‌ರವರ ಸಾಮ್ರಾಜ್ಯಶಾಹಿ ತತ್ವಕ್ಕೆ ಬದಲಿ ತತ್ವವನ್ನು ರೂಪಿಸುವ ಉದ್ದೇಶದಿಂದ ಧರ್ಮದರ್ಶಿತ ತತ್ವವನ್ನು ಅಭಿವೃದ್ಧಿ ಪಡಿಸಿದರು. ಒಬ್ಬ ವ್ಯಕ್ತಿ ಹುಟ್ಟಿನಿಂದಲೇ ಅಥವಾ ತನ್ನ ವಾಣಿಜ್ಯ ಮತ್ತು ಔದ್ಯಮಿಕ ಚಟುವಟಿಕೆಗಳಿಂದ ಅಪೂರ್ವ ಸಂಪತ್ತನ್ನು ಹೊಂದಿದ್ದರೆ ಆ ರೀತಿಯ ಪೂರ್ಣ ಸಂಪತ್ತು ಆತನೊಬ್ಬನಿಗೇ ಇರಬೇಕಾದುದಲ್ಲ. ಆತನ ಗೌರವಯುತ ಜೀವನಕ್ಕೆ ಬೇಕಾದ ಕನಿಷ್ಟ ಸಂಪತ್ತು ಆತನಿಗೆ ಸೇರಬೇಕಾಗಿದೆ ಮತ್ತು ಸಮಾಜದ ಶ್ರೇಯಸ್ಸಿಗೆ ಮೀಸಲಿಡಬೇಕಾಗಿದೆ. ಗಾಂಧೀಜಯವರ ಪ್ರಕಾರ, "ಆತನುಕೂಡಾ ಮಿಲಿಯಗಟ್ಟಲೆ ಜನರು ಬದುಕುವ ರೀತಿಗಿಂತ ಉತ್ತಮ ರೀತಿಯಲ್ಲಿ ಬದುಕುವ ಹಕ್ಕು ಹೊಂದಿರುವುದಿಲ್ಲ.

ಶ್ರೀಮಂತ ಉದ್ಯಮಿಗಳ ಮಿಗತೆ ಸಂಪತ್ತು ಸಮುದಾಯಕ್ಕೆ ಸೇರಬೇಕು ಮತ್ತು ಅದು ಸಮಾಜದ ಶ್ರೇಯೋಭಿವೃದ್ಧಿಗೆ ಬಳಸಲ್ಪಡಬೇಕು. ಬಂಡವಾಳ ಶಾಹಿಗಳು ಪ್ರಾಮಾಣಿಕತೆ ಮತ್ತು ಕಾರ್ಯ ಸಮರ್ಥತೆ ಮೂಲಕ ತಮ್ಮ ವ್ಯವಹಾರವನ್ನು ಉತ್ತಮ ರೀತಿಯಲ್ಲಿ ನಡೆಸಿ ದೇಶದ ಧರ್ಮದರ್ಶಿಗಳಾಗಿ ಬಡಜನರ ಕಲ್ಯಾಣಕ್ಕಾಗಿ ದುಡಿಯಬೇಕೆಂದು ಮಹಾತ್ಮಗಾಂಧೀಜಿಯವರು ಇಚ್ಚಿಸಿದರು.

ಆಸ್ತಿಯು ಅಧಿಕಾರದ ಮತ್ತು ಶೋಷಣೆಯ ಮೂಲವಲ್ಲ. ಆಸ್ತಿವಂತನು ತನ್ನ ಅಸ್ತಿಯ ಧರ್ಮದರ್ಶಿಯಾಗಿರುತ್ತಾನೆ. ಎಲ್ಲಾ ಆಸ್ತಿಯು ದೇವರಿಗೆ ಸೇರಿದ್ದು ಅಥವಾ ಸಮಾಜಕ್ಕೆ ಸೇರಿದ್ದು. ಆಸ್ತಿವಂತನು ಮೇಲ್ವಿಚಾರಕನಾಗಿರುತ್ತಾನೆ ಅಷ್ಟೆ. ಯಾರೊಬ್ಬರು ವರ್ತಮಾನದಲ್ಲಿ ತನಗೆ ಅವಶ್ಯವಿಲ್ಲದಿರುವುದನ್ನು

ಹೊಂದಿರಬಾರದು. ಹಾಗೇನಾದರೂ ಪಡೆದಿದ್ದೇ ಆದರೆ ಅದು 'ಕಳವು' ಮಾಲಾಗಿರುತ್ತದೆ. ಗಾಂಧೀಜಿಯವರು ಹಿಂಸಾತ್ಮಕ ರೀತಿ ಅಥವಾ ರಕ್ತಕ್ರಾಂತಿಯನ್ನು ವಿರೋಧಿಸಿದ್ದರು ಮತ್ತು ತಡೆದಿದ್ದರು. ಶ್ರೀಮಂತಿಕೆ ಅಥವಾ ಸಂಪತ್ತಿನ ತ್ಯಾಗ ಮತ್ತು ಅಧಿಕಾರ ಉದಾರತೆಯ ಮೂಲಕ ಸಮಾಜದ ಹಿತ ಸಾಧನೆಗೋಸ್ಕರ ಪರಸ್ಪರ ಹಂಚಿಕೊಳ್ಳುವ ಮನೋಭಾವ ಬೆಳೆಯಬೇಕು. ಈ ರೀತಿ ಮಾಡುವ ಮೂಲಕ ಅತ್ಯಂತ ಅಪಯಕಾರಿ ಹಾಗೂ ಅಸಹ್ಯವಾದ ಸಂಭವನೀಯ ಕ್ರಾಂತಿಯನ್ನು ತಪ್ಪಿಸಬಹುದು ಎಂಬುದು ಮಹಾತ್ಮ ಗಾಂಧೀಜಿಯವರ ಲೆಕ್ಕಚಾರವಾಗಿತ್ತು. ಆರ್ಥಿಕ ಸಮಾನತೆಯಲ್ಲಿ ಶಾಶ್ವತ ಸ್ಥಿರತೆಯನ್ನು ಸೃಷ್ಟಿಸಿ ಕಾಯ್ದುಕೊಳ್ಳುವ ಉದ್ದೇಶದಿಂದ ಅವರು ಧರ್ಮದರ್ಶಿತ್ವ ತತ್ವವನ್ನು ಹುಟ್ಟುಹಾಕಿದ್ದರು. ವರ್ಗೀಯ ಕಲಹ ನಾಶಹೊಂದಬೇಕು ಮತ್ತು ಬಲತ್ಕಾರದಿಂದ ಇತರರ ಆಸ್ತಿಯ ಒಡೆತನವನ್ನು ಕಸಿದುಕೊಳ್ಳಬಾರದು ಎಂದು ಗಾಂಧೀಜಿಯವರು ಬಯಸಿದ್ದರು.

ಮಹಾತ್ಮ ಗಾಂಧೀಜಿಯವರು, ಅತ್ಯುತ್ತಮ ಹಾಗೂ ಮೂಲಭೂತ ತತ್ವಗಳಾದ ವಿವೇಕ ಮತ್ತು ಪ್ರೇಮತತ್ವಗಳನ್ನು ಬಂಡವಾಳಶಾಹಿ ವರ್ಗದ ಮೇಲೆ ಪ್ರಯೋಗ ಮಾಡಲು ಇಚ್ಚಿಸಿದ್ದರು. ಅವರು ಅನುಭವಿಸುತ್ತಿರುವ ಪ್ರಸಕ್ತ ಅಪಾರ ಸಂಪತ್ತು ಇತರರ ಶ್ರಮದ ಫಲ ಎಂಬ ಸತ್ಯವನ್ನು ಅವರಿಗೆ ಮನದಟ್ಟು ಮಾಡಲು ಪ್ರಯತ್ನಿಸಿದ್ದರು. ಈ ರೀತಿಯ ಸಂಪತ್ತು ಸಂಚಯನ ಅತ್ಯಂತ ಅಪಾಯಕಾರಿ ಮತ್ತು ಕೇಡು ಎಂಬುದನ್ನು ಬಂಡವಾಳಶಾಹಿ ವರ್ಗ ಮನಗಾಣಬೇಕು. ಆದುದರಿಂದ ತಮ್ಮ ವಿಲಾಸಿ ಜೀವನಕ್ಕೆ ಅದನ್ನು ಬಳಸದೆ, ಮಿಲಿಯಗಟ್ಟಲೆ ಬಡ ಜನರಿಗೆ ಉಪಕಾರ ಮಾಡುವಂತೆ ಬಳಸಿದ್ದಲ್ಲಿ ಲೋಕ ಉದ್ದಾರ ಸಾಧ್ಯ. ಆಗ ಬಂಡವಾಳಶಾಹಿಗಳು ಧರ್ಮದರ್ಶಿಗಳಾಗುತ್ತಾರೆ. ಶ್ರಮಿಕರಿಗೆ ಸಾಕಷ್ಟು ಆಹಾರ, ಶುಚಿತ್ವ, ಸೂರು ಮತ್ತು ಮಕ್ಕಳಿಗೆ ಸೂಕ್ತ ವಿದ್ಯಾಭ್ಯಾಸ ದೊರೆಯುತ್ತದೆ.

ಸಾಮಾಜಿಕ ಆಸ್ತಿ ಮೊಕ್ತೇಸರಿಕೆಗೆ ಸೇರಬೇಕು. ಬಂಡವಾಳಶಾಹಿಗಳು ಧರ್ಮದರ್ಶಿಗಳಾಗಿ ನಿಂತು ಸ್ವಹಿತಾಸಕ್ತಿ ಮತ್ತು ಮುಖ್ಯವಾಗಿ ಶ್ರಮಿಕ ವರ್ಗದ ಹಿತಾಸಕ್ತಿಯನ್ನು ಕಾಪಾಡಲು ಕೆಲಸವನ್ನು ಮಾಡಬೇಕು. ಬಂಡವಾಳಶಾಹಿಗಳು ತಮ್ಮ ಅಪಾರ ಸಂಪತ್ತನ್ನು ತಮ್ಮ ಬಯಕೆಗಳ ಈಡೇರಿಕೆಗೆ ಮತ್ತು ಸಮಾಜದ ಬಡಶ್ರಮಿಕರ ಬಯಕೆಗಳ ಈಡೇರಿಕೆಗೆ ಉಪಯೋಗಿಸಬೇಕಾಗಿದೆ. ಬಂಡವಾಳಶಾಹಿ ವರ್ಗ ಕಾರ್ಮಿಕ ವರ್ಗದ ಬಗ್ಗೆ ಅಪಾರ ಕಾಳಜಿ ಹೊಂದಿರಬೇಕು. ಅದೇ ರೀತಿ ಶ್ರಮಿಕ ವರ್ಗ ಬಂಡವಾಳಶಾಹಿ ವರ್ಗದ ಮೇಲೆ ವಿಶ್ವಾಸ ಹೊಂದಿರಬೇಕು ಮತ್ತು ಬಂಡವಾಳಶಾಹಿ ವರ್ಗದ ಆ ಪವಿತ್ರ ಧ್ಯೇಯವನ್ನು ಗೌರವಿಸಬೇಕು. ಆಗ ಮಾತ್ರ ಬಂಡವಾಳಶಾಹಿ ವರ್ಗ ಮತ್ತು ಶ್ರಮಿಕ ವರ್ಗದ ನಡುವೆ ಉತ್ತಮ ಬಾಂದವ್ಯ ಸೃಷ್ಟಿಸಿ ಬೆಳೆಸಲು ಸಾಧ್ಯ. ಉತ್ಪಾದಕರ ಮತ್ತು ಕಾರ್ಮಿಕರ ನಡುವೆ ಇರುವ ಉತ್ತಮ ಬಾಂದವ್ಯ, ಸೌಹಾರ್ದತೆ ಮತ್ತು ಸಹಕಾರ ದೇಶದ ಆರ್ಥಿಕ ಅಭಿವೃದ್ಧಿಯನ್ನು ನಿರ್ಧರಿಸುವ ಒಂದು ಪ್ರಮುಖ ಅಂಶವಾಗಿದೆ.

ಮಹಾತ್ಮ ಗಾಂಧೀಜಿಯವರ ತತ್ವವು ವರ್ಗ ಬೇಧವನ್ನು ವಿರೋಧಿಸುತ್ತದೆ. ವರ್ಗ ಸಹಯೋಗ ಮತ್ತು ಅನ್ಯೋನ್ಯತೆ ಮೂಲಕ ಮಾತ್ರ ವರ್ಗಬೇಧರಹಿತ ಪ್ರಜಾಸತ್ತೆ ರೂಪುಗೊಳ್ಳಲು ಸಾಧ್ಯ. ಸಹೋದರತ್ವ ಮತ್ತು ಸಾಮರಸ್ಯ ನೀತಿಯನುಸಾರ ಎಲ್ಲರೂ ಉತ್ಪಾದಕಾ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಶೋಷಣೆ ಎಂಬುದು ಅದೃಶ್ಯವಾಗುತ್ತದೆ. ಬಂಡವಾಳಶಾಹಿ ವರ್ಗ ಎಚ್ಚೆತ್ತು ಬದಲಾಗಿರುವ ಅರ್ಥವ್ಯವಸ್ಥೆಯು ಸ್ಥಿತಿಗತಿಗೆ ಅನುಸಾರವಾಗಿ ಅವುಗಳು ನಡೆದುಕೊಳ್ಳಬೇಕಾಗಿದೆ. ಮತ್ತು ಬಡಜನರ ಕಷ್ಟಕಾರ್ಪಣ್ಯಗಳಿಗೆ ಅತ್ಯಂತ ಯೋಗ್ಯ

ರೀತಿಯಲ್ಲಿ ಸ್ಪಂದಿಸಬೇಕಾಗಿದೆ. ಇಲ್ಲವಾದಲ್ಲಿ ಮಿಲಿಯಗಟ್ಟಲೆ ತೀರಾ ಹಸಿದಿರುವ ಬಡಜನರು ಬಂಡವಾಳಶಾಹಿಗಳ ವಿರುದ್ಧ ಬಂಡೆದ್ದು ತೊಂದರೆ ಕೊಡಬಹುದು. ಈ ರೀತಿ ನಡೆದರೆ ಯಾವ ಸರಕಾರಕ್ಕೆ ಕೂಡ ಬಂಡವಾಳಶಾಹಿ ವರ್ಗವನ್ನು ಬೆಂಬಲಿಸಲು ಮತ್ತು ಬಚಾವು ಮಾಡಲು ಖಂಡಿತಾ ಸಾಧ್ಯವಾಗದು.

ಧರ್ಮದರ್ಶಿತ್ವ ತತ್ವದ ಮೂಲಕ ದೇಶದಲ್ಲಿ ಸಮಾನತೆ ತರಲು ಸಾಧ್ಯವಿದೆ. ಮಹಾತ್ಮ ಗಾಂಧೀಜಿಯವರು ಊಹಿಸಿರುವಂತೆ, ತಾವು ಯಾವ ಸಮಾಜದಲ್ಲಿ ಜೀವಿಸುತ್ತಿದ್ದೇವೆ ಎಂಬ ಪ್ರಜ್ಞೆ ಶ್ರೀಮಂತರಲ್ಲಿ ಇರಬೇಕು. ಅವರು ಅವರ ಸಂಪತ್ತನ್ನು ತಮ್ಮ ಇಚ್ಛಾನುಸಾರ ಅವರಿಗೋಸ್ಕರ ಮಾತ್ರ ಉಪಯೋಗಿಸಿಕೊಳ್ಳಬೇಕು. ಶ್ರೀಮಂತರು ನೈತಿಕ ನಿಯಮಗಳನ್ನು ಪಾಲಿಸಬೇಕು ಮತ್ತು ಸರಿಯಾದ ವಿಧಾನಗಳ ಮೂಲಕ ಸಂಪತ್ತುಗಳಿಸಬೇಕು.

ಬಡವರು ಕೂಡಾ ಶ್ರೀಮಂತ ವರ್ಗದೊಡನೆ ಉತ್ತಮ ನಂಬಿಕೆ ಮತ್ತು ವಿಶ್ವಾಸ ಇಟ್ಟುಕೊಳ್ಳಬೇಕು ಮತ್ತು ಬಡವರ ಮೇಲಿನ ಕಾಳಜಿ ಉದ್ದೇಶದಿಂದ ಶ್ರೀಮಂತ ವರ್ಗದ ಧ್ಯೇಯ ಧೋರಣೆ ಮತ್ತು ಕಾರ್ಯಕ್ರಮಗಳ ಬಗ್ಗೆ ಶ್ರಮಿಕ ವರ್ಗ ವಿಶ್ವಾಸ ಮತ್ತು ಗೌರವ ಹೊಂದಿರಬೇಕು. ಈ ರೀತಿಯ ನಡವಳಿಕೆಗಳು, ಎರಡು ವರ್ಗಗಳ ನಡುವೆ ಪರಸ್ಪರ ನಂಬಿಕೆ ಮತ್ತು ವಿಶ್ವಾಸವನ್ನು ಸೃಷ್ಟಿಸಿ, ಬೆಳೆಸಬಹುದು ಮತ್ತು ಆರ್ಥಿಕ ಸಮಾನತೆಯನ್ನು ಸಾಧಿಸಲು ಸಹಾಯಮಾಡಬಹುದು.

ಮಹಾತ್ಮ ಗಾಂಧೀಜಿಯವರು ಸಾಧಿಸಲು ಇಚ್ಚಿಸಿರುವ ನೈಜ ಸಾಮಾಜಿಕ ವ್ಯವಸ್ತೆಯ ಕನಸನ್ನು ನನಸಾಗಿಸಲು ಬಳಸಿದ ಧರ್ಮದರ್ಶಿತ್ವ ತತ್ವ ಈ ಕೆಳಗಿನ ಲಕ್ಷಣಗಳನ್ನು ಹೊಂದಿದೆ–

1. ಧರ್ಮದರ್ಶಿತ್ವ ಸಮಾಜವನ್ನು ಬಂಡವಾಳಶಾಹಿ ವ್ಯವಸ್ಥೆಯಿಂದ ಸಮಾನತಾ ವ್ಯವಸ್ಥೆಗೆ ಪರಿವರ್ತನೆಗೊಳ್ಳುವಂತೆ ಮಾಡುತ್ತದೆ. ಅದು ಬಂಡವಾಳಶಾಹಿ ವರ್ಗಕ್ಕೆ ತಮ್ಮ ಹಿತಾಸಕ್ತಿ ಬೆಳೆಸಿಕೊಳ್ಳಲು ಅವಕಾಶ ನೀಡದಿದ್ದರೂ ಕೂಡಾ ಮಾಲಕ ವರ್ಗದ ಶ್ರೇಯೋಭಿವೃದ್ಧಿಗೆ ಅವಕಾಶ ನೀಡುತ್ತದೆ. ಮಾನವನ ಸ್ವಭಾವವು ಯಾವುದೇ ಒಂದು ವರ್ಗದ ನಾಶದ ಉದ್ದೇಶವನ್ನು ಹೊಂದಿರುವುದಿಲ್ಲ.
2. ಧರ್ಮದರ್ಶಿತ್ವ ಯಾವುದೇ ಕಾರಣಕ್ಕೂ ಆಸ್ತಿಯ ಖಾಸಗೀ ಮಾಲೀಕತ್ವವನ್ನು ಎಲ್ಲಿಯವರೆಗೆ ಸಮಾಜದ ಒಳಿತಿಗೆ ಅವು ಅಗತ್ಯವಿರುವುದಿಲ್ಲವೋ ಅಲ್ಲಿಯವರೆಗೆ ಗುರುತಿಸುವುದಿಲ್ಲ.
3. ಧರ್ಮದರ್ಶಿತ್ವ ಮಾಲೀಕತ್ವ ಮತ್ತು ಸಂಪತ್ತು ಬಳಕೆ ಬಗ್ಗೆ ಶಾಸನಾತ್ಮಕ ನಿಯಮ ಹೊಂದಿರಬೇಕು.
4. ಸರಕಾರ ನಿಯಂತ್ರಕ ಧರ್ಮದರ್ಶಿತ್ವದ ಪ್ರಕಾರ ಓರ್ವ ವ್ಯಕ್ತಿ ಸಂಪತ್ತನ್ನು ಇಟ್ಟುಕೊಳ್ಳುವಂತಿಲ್ಲ ಮತ್ತು ಆತನ ಸ್ವಾರ್ಥಯುತ ಸಂತೃಪ್ತಿಗೆ ಉಪಯೋಗಿಸುವಂತಿಲ್ಲ ಅಥವಾ ಸಮಾಜದ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸುವಂತಿಲ್ಲ.
5. ಕನಿಷ್ಟ ಜೀವನ ಕೂಲಿ ಒದಗಿಸುವ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಗರಿಷ್ಟ ವರಮಾನ ಮಿತಿ ಜಾರಿಗೊಳಿಸಬೇಕು. ಮಿತಿ ನಿರ್ಧರಿಸುವ ಸಂದರ್ಭದಲ್ಲಿ ಕನಿಷ್ಟ ವರಮಾನ ಮಿತಿ ಮತ್ತು ಗರಿಷ್ಟ ವರಮಾನ ಮಿತಿ ನಡುವೆ ನೈಜತೆ ಮತ್ತು ಸಮಾನತೆ ಕಾಯ್ದುಕೊಳ್ಳುವ ಪ್ರಯತ್ನ ನಡೆಯಬೇಕು.

ಬದಲಾಗುವ ಆರ್ಥಿಕ ಸನ್ನಿವೇಶಗಳಿಗೆ ಅನುಗುಣವಾಗಿ ನಿರ್ಧರಿಸಿದ ಮಿತಿಯನ್ನು ಬದಲಾಯಿಸಲು ಕೂಡಾ ಅವಕಾಶವಿರಬೇಕು. ಇದು ಆರ್ಥಿಕ ಸಮಾನತೆಯನ್ನು ಅಳಿಸಿ ಹಾಕುವುದು.

6. ಮಾಹಾತ್ಮ ಗಾಂಧೀಜಿಯವರ ವ್ಯವಸ್ಥೆಯ ಪ್ರಕಾರ ಉತ್ಪಾದನೆಯು ಸಾಮಾಜಿಕ ಅವಶ್ಯಕತೆಗಳಿಗೆ ತಕ್ಕಂತೆ ನಡೆಯಬೇಕು. ಯಾವ ಕಾರಣಕ್ಕೂ ಉತ್ಪಾದಕನ ವೈಯಕ್ತಿಕ ಇಚ್ಚೆ, ಚಪಲ ಮತ್ತು ದುರಾಸೆಯಿಂದ ಕೂಡಿರಬಾರದು.

1.4 ಸರ್ವೋದಯ ತತ್ವಗಳು

ಸರ್ವೋದಯ ಸಿದ್ದಾಂತದ ತತ್ವಗಳನ್ನು ಇಲ್ಲಿ ವಿಮರ್ಶಿಸಲಾಗಿದೆ.

1.1 ಆಧ್ಯಾತ್ಮಿಕ ಶ್ರೇಷ್ಠತೆ:

ಸರ್ವೋದಯವು ರಾಜಕೀಯವನ್ನು ಆಧ್ಯಾತ್ಮೀಕರಿಸುವ ಗುರಿಯನ್ನು ಹೊಂದಿದ್ದು ದೇವರಲ್ಲಿ, ಮನುಷ್ಯನ ಒಳ್ಳೆಯತನದಲ್ಲಿ ಮತ್ತು ಸಮಾಜ ಸೇವೆಯಲ್ಲಿ ನಂಬಿಕೆಯನ್ನಿಟ್ಟುಕೊಂಡಿದೆ. ಸರ್ವೋದಯದ ಲಕ್ಷಣಗಳನ್ನು ವಿವರಿಸುತ್ತಾ, ಸಮಾಜವು ಉತ್ತಮ ಆಲೋಚನೆಯ ಮೇಲೆ ಆಧಾರವಾಗಿರಬೇಕು ಮತ್ತು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕಾರ್ಯಕ್ರಮಗಳು ಸಮಾಜದಲ್ಲಿ ಜಾಗೃತಿ ಮೂಡಿಸುವ ಮತ್ತು ಬಡವರಿಗೆ ಸೇವೆ ಸಲ್ಲಿಸುವ ಗುರಿಯನ್ನು ಹೊಂದಿರಬೇಕು ಎಂದು ಗಾಂಧಿ ಅಭಿಪ್ರಾಯ ಪಟ್ಟಿದ್ದಾರೆ. ಸರ್ವೋದಯದ ಆಧ್ಯಾತ್ಮಿಕ ಅಂಶವನ್ನು ಜೆ.ಪಿ. (ಜಯಪ್ರಕಾಶ ನಾರಾಯಣ್) ಈ ತತ್ವವು ವ್ಯಕ್ತಿಯ ಹೃದಯ ಪರಿವರ್ತನೆ ಮತ್ತು ಮಾನವ ಬದಲಾಗುತ್ತಾನೆಂಬ ನಂಬಿಕೆಯ ಮೇಲೆ ಆಧಾರವಾಗಿದೆ ಎಂದು ಸಾರಾಂಶಿಸಿದ್ದಾರೆ.

1.2 ನೈತಿಕ ಮೌಲ್ಯಗಳ ಪ್ರಾಮುಖ್ಯತೆ :

ಸರ್ವೋದಯ ಸಿದ್ಧಾಂತವು ನೈತಿಕ ಮೌಲ್ಯಗಳನ್ನು ಆಧಾರಿಸಿದ್ದು ಇಳಿಮುಖವಾಗುತ್ತಿರುವ ನೈತಿಕ ಗುಣಮಟ್ಟಕ್ಕೆ ಕಾರಣವಾದ ಇಂದಿನ ಜೀವನ ವಿಧಾನವನ್ನು ತಿರಸ್ಕರಿಸುತ್ತದೆ. ಹಣ ಮತ್ತು ಅಧಿಕಾರದ ವ್ಯಾಮೋಹಕ್ಕೆ ಬಲಿಯಾಗಿ ಸಮಾಜವು ಬೌದ್ಧಿಕವಾಗಿ ಮತ್ತು ನೈತಿಕವಾಗಿ ದಿವಾಳಿಯಾಗುತ್ತಿದೆಯಾದ್ದರಿಂದ ಸರ್ವೋದಯವು ಜನರಲ್ಲಿ ಸೇವಾ ಮನೋಭಾವವನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಲು ಜೀವನದಲ್ಲಿ ಹೊಸ ವಿಚಾರಗಳ ಮತ್ತು ಮೌಲ್ಯಗಳ ಸೃಷ್ಟಿ ಅವಶ್ಯಕವೆಂದು ಹೇಳಿದ್ದಾರೆ. ಸೇವಾ ಮನೋಭಾವದ ಸ್ಥಾನದಲ್ಲಿ ವ್ಯಕ್ತಿ ಪೂಜೆ, ವ್ಯಕ್ತಿ ವೈಭವೀಕರಣ ಹೆಚ್ಚಾಗಿದೆ. ಆದ್ದರಿಂದ ಸರ್ವೋದಯವು ಸ್ವಾರ್ಥತ್ಯಾಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದೆ. ದ್ವೇಷ,ಅಸೂಯೆ , ಸ್ಪರ್ಧೆಯ ಸ್ಥಾನದಲ್ಲಿ ಪರಸ್ಪರತೆ ಮತ್ತು ಸಹಕಾರಕ್ಕೆ ಒತ್ತು ನೀಡುತ್ತದೆ. ವ್ಯಕ್ತಿಯ ಸಾಮಾಜಿಕ,ರಾಜಕೀಯ ಹಾಗೂ ಆರ್ಥಿಕ ಜೀವನದಲ್ಲಿ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ಸಮಾಜಕ್ಕೆ ಕರೆ ನೀಡುತ್ತದೆ. ಗಾಂಧೀಜಿಯವರು ಸಮಾಜದಲ್ಲಿ 7 ಪಾಪಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ:

1. ಕಾರ್ಯರಹಿತ ಸಂಪತ್ತು
2. ಪ್ರಜ್ಞೆಯಿಲ್ಲದ ಸಂತೋಷ
3. ತತ್ವರಹಿತ ರಾಜಕೀಯ
4. ಗುಣರಹಿತ ಶಿಕ್ಷಣ

5. ನೀತಿರಹಿತ ವಾಣಿಜ್ಯ

6. ಮಾನವತೆ ಇಲ್ಲದ ವಿಜ್ಞಾನ

7. ನಮ್ರತೆ ಇಲ್ಲದ ಪೂಜೆ

1.3 ಸತ್ಯ ಮತ್ತು ಅಹಿಂಸೆ :

ಸತ್ಯ ಮತ್ತು ಅಹಿಂಸೆ ಸರ್ವೋದಯ ಸಿದ್ಧಾಂತದ ಮೂಲಧಾರವಾಗಿದೆ. ಸರ್ವೋದಯ ಸಮಾಜದಲ್ಲಿ ಪ್ರಜೆಗಳು ಉತ್ತಮ ಗುಣವಂತರಾಗಿರಬೇಕು. ಇಲ್ಲಿ ಶೋಷಣೆ, ದಬ್ಬಾಳಿಕೆ, ತಾತ್ಸಾರಕ್ಕೆ ಸ್ಥಾನವಿಲ್ಲ. ಎಲ್ಲರೂ ತಮ್ಮ ಜೀವನವನ್ನು ಅವರ ಅಭಿರುಚಿಗೆ ಅನುಗುಣವಾಗಿ ರೂಪಿಸಿಕೊಳ್ಳಬಹುದು. ಈ ಸಮಾಜದಲ್ಲಿ ಅನೈತಿಕತೆ, ವರ್ಗ ವೈಷಮ್ಯಕ್ಕೆ ಸ್ಥಾನವಿಲ್ಲ. ಸಮಾಜದ ಎಲ್ಲಸದ್ಯಸರು ಎಲ್ಲರ ಕ್ಷೇಮ ಒಳಿತಿಗಾಗಿ ತಮ್ಮ ಪಾಲನ್ನು ನೀಡಬೇಕು. ಗಂಡು ಹೆಣ್ಣೆಂಬ ಬೇಧ ಭಾವವಿಲ್ಲದೆ ಎಲ್ಲರಿಗೂ ಶಿಕ್ಷಣ ದೊರೆಯಬೇಕು. ಸರ್ವೋದಯ ಸಮಾಜದಲ್ಲಿ ಬಡವ-ಶ್ರೀಮಂತನೆಂಬ ಬೇಧಭಾವವಿಲ್ಲ. ದೇಶವನ್ನಾಳುವ ನಾಯಕರು ಸರಳ ಜೀವನ ಉನ್ನತ ಚಿಂತನ ತತ್ವಕ್ಕನುಗುಣವಾಗಿದ್ದು ಪ್ರಜೆಗಳಿಗೆ ಮಾರ್ಗದರ್ಶಗಳಾಗಿರಬೇಕು. ಸರ್ವೋದಯಿಯು ಭಾರತದ ಪ್ರಜೆಯು ಭಾರತೀಯನಾಗಿದ್ದರೂ ವಿಶ್ವಪ್ರಜೆಯಾಗಿದ್ದು ಉದಾತ್ತ ಮನೋಭಾವನೆಯನ್ನು ಹೊಂದಿರಬೇಕು.

ನೈತಿಕ ಮೌಲ್ಯಗಳ ಆಧಾರದ ಮೇಲೆ ಶಾಂತಿಯುತವಾಗಿ ಸಮಾಜದ ಪುನರ್ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಸರ್ವೋದಯದಲ್ಲಿ ಹಿಂಸೆಗೆ ಸ್ಥಾನವಿಲ್ಲ. ಸರ್ವೋದಯವು ಮಾನವನ ಪುನರುಜ್ಜೀವನ ಗುರಿಯನ್ನು ಹೊಂದಿದ್ದು ಉದಾತ್ತ ಗುರಿ ಮತ್ತು ಸಾಧನೆಯಲ್ಲಿ ನಂಬಿಕೆಯಿಟ್ಟಿದೆ. ಶೋಷಣೆ ಮತ್ತು ಅನ್ಯಾಯ ಮುಕ್ತ ಸಮಾಜಕ್ಕೆ ಅಹಿಂಸೆಯೊಂದೆ ದಾರಿ ಎಂಬುದು ಸರ್ವೋದಯದ ಅಚಲ ನಂಬಿಕೆ.

1.4 ಪಕ್ಷರಹಿತ ಪ್ರಜಾಪ್ರಭುತ್ವ:

ಸರ್ವೋದಯವು ಪಕ್ಷರಹಿತ ಪ್ರಜಾಪ್ರಭುತ್ವವನ್ನು ಬಲವಾಗಿ ಪ್ರತಿಪಾದಿಸುತ್ತದೆ. ಕಾಂಗ್ರೆಸ್ ಪಕ್ಷದ ಔಚಿತ್ಯವನ್ನು ಕುರಿತು ಗಾಂಧಿ,... ಕಾಂಗ್ರೆಸ್ ಪಕ್ಷವು ಪ್ರಸ್ತುತ ರೂಪದಲ್ಲಿ ಪ್ರಚಾರ ಸಾಧನವಾಗಿ ಹಾಗೂ ಸಂಸದೀಯ ಯಂತ್ರಾಂಗವಾಗಿ ತನ್ನ ಉಪಯುಕ್ತತೆಯನ್ನು ಕಳೆದುಕೊಂಡಿದೆ..... ಎಂದಿದ್ದರು. ಅಂದರೆ, ಕಾಂಗ್ರೆಸ್ಸನ್ನು ರಾಜಕೀಯ ಪಕ್ಷಗಳ ಅಹಿತಕರ ಸ್ಪರ್ಧೆಗೆ ಒಡ್ಡಬಾರದು ಎಂಬುದು ಗಾಂಧಿಯವರ ನಿಲುವಾಗಿತ್ತು. ಈ ಕಾರಣಕ್ಕಾಗಿಯೇ ಕಾಂಗ್ರೆಸ್ ಪಕ್ಷವನ್ನು ಲೋಕ ಸೇವಕ ಸಂಘವಾಗಿ ಪರಿವರ್ತಿಸಬೇಕೆಂದು ಗಾಂಧಿ ವಾದಿಸಿದರು.

ರಾಜಕೀಯ ಪಕ್ಷಗಳು ಪ್ರಜೆಗಳನ್ನು ಜಾತಿ, ಧರ್ಮ, ಪಂಗಡ, ಪ್ರಾಂತ್ಯಗಳು ಹೆಸರಿನಲ್ಲಿ ಒಡೆದು ಸಮಾಜವನ್ನು ವಿರೋಧಿ ಯುದ್ಧ ಗುಂಪುಗಳಾಗಿ ತಯಾರಿಸುತ್ತವೆ ಎಂದು ಸರ್ವೋದಯಿಗಳು ಅಭಿಪ್ರಾಯ ಪಡುತ್ತಾರೆ. ರಾಜಕೀಯ ಪಕ್ಷಗಳು ಅಧಿಕಾರ ಲಾಲಸೆಯಿಂದ ವರ್ತಿಸುವುದರಿಂದ ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ. ಚುನಾವಣಾ ಸಮಯದಲ್ಲಿ ಮತದಾರರಿಗೆ ಅನೇಕ ಆಸೆ ಆಮಿಷಗಳಿಗೆ ಗುರಿಪಡಿಸಿ ಭ್ರಷ್ಟಾಚಾರವೆಸಗುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಜಕೀಯ

ಪಕ್ಷಗಳು ಶ್ರೀಮಂತ ವರ್ಗಗಳ ನಿಯಂತ್ರಣದಲ್ಲಿರುವುದರಿಂದ ಆರೋಗ್ಯಕರ ಪ್ರಜಾಪ್ರಭುತ್ವ ಬೆಳವಣಿಗೆಗೆ ಮಾರಕವಾಗುತ್ತದೆ. ಸರ್ವೋದಯವು ಬಹುಸಂಖ್ಯಾತ ಆಳ್ವಿಕೆಗೆ ವಿರುದ್ಧವಾಗಿದೆ. ಈ ವ್ಯವಸ್ಥೆಯನ್ನು ಸರ್ವೋದಯವು ಬಹುಸಂಖ್ಯಾತ ದಬ್ಬಾಳಿಕೆ ಎಂದು ಕರೆಯುತ್ತದೆ.ಏಕೆಂದರೆ, ಪ್ರಜಾಪ್ರಭುತ್ವ ಸರ್ಕಾರಗಳಲ್ಲಿ ಬಹುಮತ ಪಡೆದ ಪಕ್ಷವು ಅಲ್ಪಸಂಖ್ಯಾತರ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಗೌರವಿಸುವುದಿಲ್ಲ. ಬಹುಸಂಖ್ಯಾತ ಸರ್ಕಾರಗಳು ಹೊರಡಿಸುವ ಕಾನೂನುಗಳು ಮಾನವ ಗೌರವಕ್ಕೆ ಧಕ್ಕೆ ತರುವಂತಿರುತ್ತದೆ ಎಂಬುದು ಅವರ ನಿಲುವು. ಬಹುಸಂಖ್ಯಾತ ಆಳ್ವಿಕೆಯು ವ್ಯಕ್ತಿಯ ಆಂತರಿಕ ಪ್ರಜ್ಞೆಯನ್ನು ಕುಂಠಿತಗೊಳಿಸುತ್ತದೆ ಎಂದು ಗಾಂಧಿ ಹೇಳಿದ್ದಾರೆ.

ಈ ಅಂಶಗಳನ್ನು ಪ್ರಸ್ತಾವಿಸುತ್ತಾ ಪ್ರಜಾಸತ್ತಾತ್ಮಕ ಚುನಾವಣಾ ವಿಧಾನವು 500 ಪ್ರತಿನಿಧಿಗಳು 18 ಕೋಟಿ ಜನರನ್ನು ಪ್ರತಿನಿಧಿಸುವುದನ್ನು ಸಮರ್ಥಿಸಲಾಗುವುದಿಲ್ಲ ಎಂದು ಜಯಪ್ರಕಾಶ್ ನಾರಾಯಣ್ ಹೇಳಿದ್ದಾರೆ. ಈ ಪಕ್ಷ ದಬ್ಬಾಳಿಕೆಯಿಂದ ಮುಕ್ತಗೊಳಿಸಲು ಸರ್ವೋದಯ ಸಿದ್ಧಾಂತವು ಪಕ್ಷರಹಿತ ಪ್ರಜಾಪ್ರಭುತ್ವವನ್ನು ಪ್ರತಿವಾದಿಸುತ್ತದೆ.

ಸರ್ವೋದಯಗಳ ದೃಷ್ಟಿಯಲ್ಲಿ ರಾಜಕೀಯ ರಾಜ್ಯನೀತಿಯು ನಾಲ್ಕು ಅಂಶಗಳನ್ನು ಪ್ರತಿನಿಧಿಸುತ್ತಿದೆ. ಅವುಗಳೆಂದರೆ : ಸರ್ಕಾರ, ಅಧಿಕಾರ, ನಿಯಂತ್ರಣ ಮತ್ತು ಸ್ಪರ್ಧೆ. ಆದರೆ ಲೋಕ ನೀತಿಯು ನಾಲ್ಕು ಅಂಶಗಳನ್ನು ಪ್ರತಿನಿಧಿಸುತ್ತಿದೆ ಅವುಗಳೆಂದರೆ :ಸ್ವಯಂ ನಿಗ್ರಹ, ಸ್ವಾತಂತ್ರ್ಯ, ಶಿಸ್ತು ಮತ್ತು ಕರ್ತವ್ಯ ನಿರ್ವಹಣೆ ಆದ್ದರಿಂದ, ಸರ್ವೋದಯಗಳು ಲೋಕನೀತಿಯನ್ನು ಬೆಂಬಲಿಸುತ್ತಾರೆ. ಸರ್ಕಾರದ ನೀತಿಗಳು ರಾಜ್ಯನೀತಿಗೆ ಬದಲಾಗಿ ಲೋಕನೀತಿಗೆ ಅನುಗುಣವಾಗಿ ರಚಿಸಬೇಕೆಂದು ಜೆಪಿ ಹೇಳಿದ್ದಾರೆ. ಲೋಕನೀತಿಯು ಪಕ್ಷರಹಿತ ಸರ್ಕಾರವಾಗಿದ್ದು ಸಾರ್ವಜನಿಕ ಒಳಿತಿಗಾಗಿ ಶ್ರಮಿಸುತ್ತದೆ.

1.೮ .ಭೂದಾನ :

ಆಚಾರ್ಯ ವಿನೋಬಾ ಭಾವೆ ಅವರ ಮುಖಂಡತ್ವದಲ್ಲಿ ಆರಂಭವಾದ ಭೂದಾನ ಚಳುವಳಿಯು ಸರ್ವೋದಯದ ಮುಖ್ಯ ತಿರುಳಾಗಿದೆ.ಪ್ರತಿ ವ್ಯಕ್ತಿಗೆ ಭೂಮಿಯು ವಿಶ್ವದಲ್ಲಿ ಅತಂತ್ಯ ಅಚ್ಚುಮೆಚ್ಚಿನ ಅಸ್ತಿಯಾಗಿದೆ.ಆದರೆ, ಇದರ ಪರಿಣಾಮವಾಗಿ ಸಮಾಜದಲ್ಲಿ ಆರ್ಥಿಕ ಅಸಮಾನತೆಗಳು ತಲೆದೋರಿದ್ದು ಅಸ್ತಿಯೇ ಅಧಿಕಾರದ ಮುಖ್ಯ ಆಧಾರವಾಗಿ ಬೆಳೆದು ನಿಂತಿದೆ ಎಂದು ಸರ್ವೋದಯಿಗಳು ವಾದಿಸುತ್ತಾರೆ. ಈ ಅಸಮಾನತೆಯನ್ನು ಹೋಗಲಾಡಿಸಿ ಸರ್ವ ಸಮಾನ ಸಮಾಜವನ್ನು ಸ್ಥಾಪಿಸಬೇಕಾದರೆ ಭೂಮಿಯನ್ನು ಸಮಾನವಾಗಿ ಹಂಚಬೇಕು ಆಗ ಮಾತ್ರ ಒಂದು ಗುಂಪು ಮತ್ತೊಂದನ್ನು ಶೋಷಿಸದಂತೆ ತಡೆಯಬಹುದು. ಖಾಸಗಿ ಅಸ್ತಿಯ ಒಡೆತನವನ್ನು ನಿರ್ಮೂಲನಗೊಳಿಸುವುದರಿಂದಾಗಲಿ ಅಥವಾ ರಾಷ್ಟ್ರೀಕರಣ ಮಾಡುವುದರಿಂದಾಗಲಿ ದೇಶದ ಆರ್ಥಿಕ ಸಮಸ್ಯೆಗಳನ್ನು ಹೋಗಲಾಡಿಸಲಾಗುವುದಿಲ್ಲ ಎಂಬುದು ವಿನೋಭಾ ಭಾವೆ ಅವರ ಖಚಿತ ಅಭಿಪ್ರಾಯ, ಖಾಸಗಿ ಆಸ್ತಿಯನ್ನು, ಸಂಬಂಧ ಪಟ್ಟವರ ಒಪ್ಪಿಗೆ ಮೇರೆಗೆ, ಪ್ರೀತಿಯಿಂದ ವಿತರಿಸಿದಾಗ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಶ್ರೀಮಂತ ವರ್ಗದವರು ತಮ್ಮ ಆಸ್ತಿಯ ಸ್ವಲ್ಪ ಭಾಗವನ್ನು ಪ್ರೀತಿಯಿಂದ ಆಸ್ತಿ ಇಲ್ಲದವರಿಗೆ ಕೊಡಬೇಕು ಎಂದು ವಿನೋಭಾ ಭಾವೆ ಹೇಳುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ

ಭೂಮಿಯಿಲ್ಲದ ರೈತರ ಸಮಸ್ಯೆ ಬಗೆಹರಿಯಬೇಕಾದರೆ ನೂರಾರು ಎಕರೆ ಜಮೀನುಳ್ಳ ಜಮೀನ್ದಾರರು ಸ್ವಲ್ಪ ಭಾಗ ಜಮೀನನ್ನು ಬಳುವಳಿಯಾಗಿ ಭೂಮಿಯಿಲ್ಲದ ರೈತರಿಗೆ ನೀಡಬೇಕು ಎಂಬುದು ಭಾವೆ ಯವರ ಚಿಂತನೆ. ವಿನೋಬಾ ಭಾವೆ ಅವರು ನಡೆಸಿದ ಭೂದಾನ ಚಳುವಳಿಗೆ ಉತ್ತಮ ಸ್ಪಂದನೆ ದೊರೆಯಿತು. ಸಾಕಷ್ಟು ಭೂಮಾಲಿಕರು ತಮ್ಮ ಭೂಮಿಯನ್ನು ಬಳುವಳಿಯಾಗಿ ನೀಡಿದರು. ಭೂದಾನ ಚಳುವಳಿಯ ಬಗ್ಗೆ ಹೇಳುತ್ತಾ, ಭೂದಾನವು ಒಂದು ಜನಪ್ರಿಯ ಪರಿವರ್ತನಾ ಚಳುವಳಿಯಾಗಿದ್ದು ಸಮಾಜದಲ್ಲಿ ಚಿಂತನೆಯ ಹಾಗೂ ಜೀವನದ ಉದ್ದೇಶ ನೂತನ ವಾತಾವರಣವನ್ನು ನಿರ್ಮಿಸುವುದಾಗಿದೆ ಎಂದು ಜಯಪ್ರಕಾಶ್ ನಾರಾಯಣ್ ಹೇಳಿದ್ದಾರೆ. ಸರ್ವೋದಯದ ಭೂದಾನ ಸಂದೇಶವು ಸರಳವಾಗಿದೆ.ಪ್ರತಿಯೊಬ್ಬರು ಸಮುದಾಯಕ್ಕೆ ಬಳುವಳಿಯನ್ನು ನೀಡಬೇಕು. ಆ ಬಳುವಳಿ ಭೂಮಿ, ಸಂಪತ್ತು ಅಥವಾ ಶ್ರಮದ ರೂಪದಲ್ಲಿರಬಹುದು. ಈ ಸಿದ್ಧಾಂತದ ಮಹತ್ವವನ್ನು ವಿವರುಸುತ್ತಾ, ಈ ಚಳುವಳಿಯು ಅರ್ಥಶಾಸ್ತ್ರದ ಪಂಡಿತರ ತಿಳುವಳಿಕೆಗೆ ಎಟುಕದಿರಬಹುದು. ಆದರೆ ಇದು ಜನರ ಮನಸ್ಸು ಮತ್ತು ಹೃದಯಗಳನ್ನು ಮುಟ್ಟುತ್ತದೆ ಎಂದು ನೆಹರು ಹೇಳಿದ್ದಾರೆ.

1.6.ವಿಶ್ವಸ್ಥ ಸಮಿತಿ :

ಧತ್ತಿ ಅಥವಾ ವಿಶ್ವಸ್ಥ ಸಮಿತಿಯ ಕಲ್ಪನೆಯು ಗಾಂಧಿ ಅವರ ಸಾಮಾಜಿಕ ದೃಷ್ಟಿಯನ್ನು ಪ್ರತಿನಿಧಿಸುತ್ತದೆ. ಈ ಧತ್ತಿ ಸಿದ್ಧಾಂತದ ಮೂಲಕ ದೇಶದ ಶ್ರೀಮಂತರನ್ನು ರಾಷ್ಟ್ರದ ಆಸ್ತಿಯಾಗಿ ಬಳಸಿಕೊಳ್ಳುವ ಮಹತ್ತರ ಉದ್ದೇಶವನ್ನು ಗಾಂಧಿ ರೂಪಿಸಿದ್ದಾರೆ. ಪ್ರತಿ ವ್ಯಕ್ತಿಗೂ ಸಾಕಷ್ಟುಊಟ, ಇರಲು ಮನೆ, ಉತ್ತಮ ಶಿಕ್ಷಣ,ಆರೋಗ್ಯ ಮತ್ತು ಆರೈಕೆ ಹಕ್ಕಿದೆ. ಈ ಮೂಲಭೂತ ಅವಶ್ಯಕತೆಗೆ ಮೀರಿ ಆಸ್ತಿ ಹೊಂದಿದ್ದರೆ ಅದು ಅತಿ ಆಸೆ ಎಂದು ಗಾಂಧಿ ಕರೆಯುತ್ತಾರೆ.ಅವ್ಯಶಕತೆಗೆ ಮೀರಿ ಸಂಗ್ರಹಿಸಿದಾಗ ಮಾತ್ರ ಮತ್ತೊಬ್ಬರಿಗೆ ಸಿಗಬೇಕಾದ್ದು ಸಿಂಗದಂತಾಗುತ್ತದೆ .ಆದ್ದರಿಂದ ಅವ್ಯಶಕತೆಗೆ ಮೀರಿ ಸಂಗ್ರಹಿಸಲಾಗಿರುವ ಸಂಪತ್ತು ಅಥವಾ ಆಸ್ತಿಯನ್ನು ಪ್ರಜೆಗಳು ಧತಿ ್ತಯನ್ನು ಸ್ಥಾಪಿಸಿ ಬಡಜನರ ಕಷ್ಟಗಳನ್ನು ನಿವಾರಿಸಲು ಉಪಯೋಗಿಸಬೇಕು ಎಂದು ಗಾಂಧಿ ಹೇಳಿದ್ದಾರೆ.ಈ ಧತ್ತಿಗೆ ಎಲ್ಲರೂ ವಿಶ್ವಸ್ಥರಾಗಿದ್ದು ಯಾರೊಬ್ಬರ ಒಡೆತನದಲ್ಲಿರುವುದಿಲ್ಲ. ವಿಶ್ವಸ್ಥ ಸಮಿತಿಯ ಮೂಲ ಉದ್ದೇಶಗಳನ್ನು ಗಾಂಧಿಯವರ ನಿಕಟ ಅನುಯಾಯಿ ಪ್ಯಾರೇಲಾಲ್ ಈ ರೀತಿ ಸಾರಾಂಶಿಸಿದ್ದಾರೆ.

- ಧತ್ತಿಯು ಇಂದಿನ ಬಂಡವಾಳಶಾಹಿ ವ್ಯವಸ್ಥೆಯನ್ನು ಸಮಾನತಾವಾದಿ ಸಮಾಜವಾಗಿ ಪರಿವರ್ತಿಸುವ ಸಾಧನವನ್ನು ಒದಗಿಸುತ್ತದೆ.
- ಸಮಾಜದ ಒಳಿತಿಗೆ ಹೊರತುಪಡಿಸಿ ಬೇರ್ಯಾವ ರೀತಿಯ ಆಸ್ತಿಯ ಖಾಸಗಿ ಒಡೆತನವನ್ನು ಗುರುತಿಸುವುದಿಲ್ಲ.
- ಶಾಸನೀಯ ನಿರ್ಣಯದ ಮೂಲಕ ಧತ್ತಿಯ ಒಡೆತನವನ್ನು ಒಪ್ಪುತ್ತದೆ.
- ಧತ್ತಿಯ ಸ್ವತ್ತನ್ನು ಯಾವುದೇ ಸದಸ್ಯ ತನ್ನ ವೈಯಕ್ತಿಕ ಹಿತಾಸಕ್ತಿಗಾಗಿ ಬಳಸುವಂತಿಲ್ಲ.
- ಒಬ್ಬ ವ್ಯಕ್ತಿ ಹೊಂದಿರಬಹುದಾದ ಗರಿಷ್ಟ ಆದಾಯದ ಮೇಲೆ ನಿಯಂತ್ರಣವಿರಬೇಕು.
- ಉತ್ಪಾದನೆಯು ಸಮಾಜದ ಅವ್ಯಶಕತೆಗೆ ಅನುಗುಣವಾಗಿ ಇರಬೇಕೇ ಹೊರತು ವೈಯಕ್ತಿಕ ಲಾಭಕ್ಕಾಗಲ್ಲ.

ಗಾಂಧಿ ಕಲ್ಪನೆಯ ಧತ್ತಿಯಲ್ಲಿ ವರ್ಗ ವಿಭೇದವಾಗಲಿ ವರ್ಗ ವೈಷಮ್ಯವಾಗಲಿ ಇಲ್ಲ. ಬದಲಾಗಿ ವರ್ಗ ಸಹಕಾರದ ಮೇಲೆ ಅಧಾರವಾಗಿರುವ ಧತ್ತಿಯಲ್ಲಿ ಎಲ್ಲರೂ ತಮ್ಮ ಶ್ರಮದಾನ ಮಾಡುವುದರಿಂದ ಶೋಷಿತರು ಶೋಷಕರು ಯಾರೂ ಇರುವುದಿಲ್ಲ. ಧರ್ಮದರ್ಶಿಗಳಾಗಿ ಶ್ರೀಮಂತರು ಹಾಗೂ ಜಮೀನ್ದಾರರು ತಮ್ಮ ಸಂಪಾದನೆ ಮತ್ತು ತಿಳುವಳಿಕೆಯನ್ನು ತಮಗಾಗಿ ಅಲ್ಲದೇ ಸಮಾಜದ ಒಳಿತಿಗಾಗಿ ಬಳಸುತ್ತಾರೆ. ಇಡೀ ಸಂಪತ್ತು ಸಮಾಜದ ಒಡೆತನದಲ್ಲಿದ್ದು ಧರ್ಮದರ್ಶಿಗಳು ಅದನ್ನು ಕಾಪಾಡುವ ಜವಬ್ದಾರಿಯನ್ನು ಮಾತ್ರ ಹೊತ್ತಿರುತ್ತಾರೆ. ಸಮಾಜದಲ್ಲಿ ಎಲ್ಲ ಜನರೂ ಸಹಕಾರದಿಂದ ಬದುಕಲೇ ಬೇಕೆಂಬ ಅಂಶವನ್ನು ಒತ್ತಿ ಹೇಳುತ್ತಾ ಬಂಡವಾಳಶಾಹಿಗಳು ಸಮಯಕ್ಕೆ ಅನುಗುಣವಾಗಿ ತಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳದಿದ್ದರೆ ಹಸಿವಿನಿಂದ ಒದ್ದಾಡುವ ಸಹಸ್ರಾರು ಜನರು ಮೇಲೆರಗಿದರೆ ಯಾವ ಸರ್ಕಾರವೂ ರಕ್ಷಿಸಲಾಗುವುದಿಲ್ಲ ಎಂದು ಗಾಂಧಿ ಎಚ್ಚರಿಕೆ ನೀಡಿದ್ದಾರೆ.

1.7. ಗ್ರಾಮ ಸ್ವರಾಜ್ಯ (ವಿಕೇಂದ್ರೀಕರಣ):

ರಾಮರಾಜ್ಯ ಸೃಷ್ಟಿಯಾಗಬೇಕಾದರೆ ಅದು ಗ್ರಾಮರಾಜ್ಯದಿಂದ ಮಾತ್ರಸಾಧ್ಯ ಎಂದು ಗಾಂಧಿ ಬಲವಾಗಿ ನಂಬಿದ್ದರು. ಇಲ್ಲಿ ಗಮನಿಸಬೇಕಾದರೆ ಅಂಶವೆಂದರೆ ರಾಮರಾಜ್ಯವು ಯಾವುದೇ ಧರ್ಮಕ್ಕೆ ಸಂಬಂಧಿಸಿದ ವಿಷಯವಲ್ಲ. ಇದು ಕೇವಲ ಸುಭಿಕ್ಷತೆಯ ಸಂಕೇತವಷ್ಟೇ. ಪ್ರತಿ ಗ್ರಾಮವೂ ಭಾರೀ ಸಂಖ್ಯೆಯಲ್ಲಿ ಮುಕ್ತ ಹಾಗೂ ಸ್ವಯಂ ಸೇವಕ ಸಂಘಗಳಿಂದ ಕೂಡಿದ್ದು ಗ್ರಾಮಕ್ಕೆ ಸಂಬಂಧಿಸಿದ ವಿಷಯಗಳನ್ನೂ ಅವರೇ ಪಂಚಾಯಿತಿಯ ಮೂಲಕ ಬಗೆಹರಿಸಿಕೊಳ್ಳಬೇಕು. ಅಂದರೆ, ಪ್ರತಿ ಗ್ರಾಮವು ಸ್ವತಂತ್ರವಾಗಿ ತಮ್ಮ ಬೇಕು-ಬೇಡಗಳನ್ನು ತಾವೇ ನೋಡಿಕೊಳ್ಳಬೇಕೆಂದು ಗಾಂಧಿ ಹೇಳಿದ್ದಾರೆ. ಈ ಗ್ರಾಮ ಸರ್ಕಾರದಲ್ಲಿ ಭೂಮಿಯ ಒಡೆತನ ಇಡೀ ಗ್ರಾಮಕ್ಕೆ ಸೇರಿರುತ್ತದೆ. ಉತ್ಪಾದಿಸುವ ಒಟ್ಟು ಉತ್ಪನ್ನದಲ್ಲಿ ಎಲ್ಲರೂ ಸರಿಸಮಾನವಾಗಿ ಹಂಚಿಕೊಳ್ಳುತ್ತಾರೆ. ಇಲ್ಲಿ ಎಲ್ಲರೂ ದುಡಿದು ತಿನ್ನುವುದರಿಂದ ಮೇಲು-ಕೀಳು ಎಂಬ ಭಾವನೆ ಬರುವುದಿಲ್ಲ. ಗ್ರಾಮ ರಾಜ್ಯದಲ್ಲಿ ಎಲ್ಲಪ್ರಜೆಗಳಿಗೂ ಗರಿಷ್ಟ ಸ್ವಾತಂತ್ರ್ಯವಿರಬೇಕೆಂದು ಗಾಂಧಿ ಹೇಳಿದ್ದಾರೆ. ಗ್ರಾಮಗಳಿಂದ ನಗರಗಳು ಎಂದು ನಂಬಿದ್ದ ಗಾಂಧಿ ಅಧಿಕಾರ ವಿಕೇಂದ್ರೀಕರಣದ ಮೂಲಕ ಗ್ರಾಮಗಳಿಗೆ ಹೆಚ್ಚು ಅಧಿಕಾರವನ್ನು ನೀಡಿ ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುವ ನಂಬಿಕೆ ಸಾಮರ್ಥ್ಯ ಬೆಳೆಸಬೇಕೆಂದು ಹೇಳಿದ್ದಾರೆ. ಈ ವ್ಯವಸ್ಥೆಯಲ್ಲಿ ಪ್ರಜೆಗಳು ಪರಮಾಧಿಕಾರವನ್ನು ಹೊಂದಿದ್ದು ರಾಜ್ಯಕ್ಕೆ ಕನಿಷ್ಟ ಅಧಿಕಾರವಿದ್ದು ಪ್ರಜೆಗಳ ಸಂಕ್ಷೇಮಕ್ಕೆ ಅವಶ್ಯವಿರುವ ಕಾರ್ಯಕ್ರಮಗಳನ್ನು ರೂಪಿಸುವುದಾಗಿದೆ ಎಂದು ಗಾಂಧಿ ಹೇಳಿದ್ದಾರೆ. ಅಧಿಕಾರ ವಿಕೇದ್ರೀಕರಣವು ಕೇವಲ ರಾಜಕೀಯ ವಲಯಕ್ಕೆ ಮಾತ್ರ ಸೀಮಿತವಾಗಿರದೆ ಆರ್ಥಿಕ ವಲಯದಲ್ಲೂ ನಡೆಯಬೇಕು ಎಂಬುದು ಗಾಂಧಿ ಅವರ ನಿಲುವು. ಒಟ್ಟಾರೆ ಗ್ರಾಮೀಣ ಸ್ವಯಂ ಸರ್ಕಾರವೇ ಸರ್ವೋದಯದ ಗುರಿ. ಆಚಾರ್ಯ ಭಾವೆ ಹೇಳುವಂತೆ, ರಾಜ್ಯದ ಅಧಿಕಾರವನ್ನು ಗ್ರಾಮಗಳಲ್ಲಿ ಹಂಚಬೇಕು. ಪ್ರತಿ ಗ್ರಾಮವು ಗಣರಾಜ್ಯವಾಗಿ ರೂಪಗೊಂಡು ತನ್ನ ಅವಶ್ಯಕತೆಗಳನ್ನು ತಾನೇ ಪೂರೈಸಿಕೊಳ್ಳಬೇಕು. ಸರ್ವೋದಯವು ಜನಶಕ್ತಿಯಲ್ಲಿ ಸಂಪೂರ್ಣ ವಿಶ್ವಾಸವಿಟ್ಟಿದೆ.

2.8. ರಾಜ್ಯ ರಹಿತ ಸಮಾಜ :

ಆಧುನಿಕ ರಾಜ್ಯವು ಶಕ್ತಿ ಪ್ರಧಾನವಾಗಿದ್ದು ಬಲವನ್ನು ಆಧಾರಿಸಿರುತ್ತದೆ ಎಂಬುದು ಗಾಂಧಿಯವರ ಆರೋಪ. ರಾಜ್ಯವು ಆದೇಶಿಸುತ್ತದೆ. ಆದೇಶದಿಂದ ಬರುವುದು ಯಾವುದೂ ನೈತಿಕ ಮೌಲ್ಯ ಹೊಂದಿರುವುದಿಲ್ಲ. ಒಂದು ಕ್ರಿಯೆಯು ನೈತಿಕವಾಗಿರಬೇಕಾದರೆ ಅದು ಸ್ವಯಂ ಪ್ರೇರಿತವಾಗಿರಬೇಕು ಎಂದು ಗಾಂಧಿ ಹೇಳುತ್ತಾರೆ. ರಾಜ್ಯವು ಶಕ್ತಿಹಾಗೂ ದೌರ್ಜನ್ಯವನ್ನು ಅವಲಂಬಿಸಿರುವುದರಿಂದ ಗಾಂಧಿ ರಾಜ್ಯವನ್ನು ಆತ್ಮಶೂನ್ಯ ಯಂತ್ರ ಎಂದು ಕರೆದಿದ್ದಾರೆ. ಆದ್ದರಿಂದಲೇ ಸತ್ಯ ಮತ್ತು ಅಹಿಂಸೆಯನ್ನು ಅವಲಂಬಿಸಿರುವ ಉನ್ನತ ನೈತಿಕ ಮೌಲ್ಯಗಳುಳ್ಳ ಸಮಾಜವನ್ನು ನಿರ್ಮಿಸಬೇಕೆಂದು ಗಾಂಧಿ ಕರೆ ನೀಡಿದ್ದಾರೆ. ಗಾಂಧಿಯವರ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಾ, ಸುಖೀ ರಾಜ್ಯವು ಸಂಕ್ಷೇಮದ ಹೆಸರಿನಲ್ಲಿ, ಸರ್ವಾಧಿಕಾರ ಸರ್ಕಾರದಂತೆ, ವ್ಯಕ್ತಿಯನ್ನು ರಾಜ್ಯದ ಗುಲಾಮನಾಗಿ ಮಾಡುತ್ತದೆ. ರಾಜ್ಯವು ಬಲವನ್ನು ಅವಲಂಬಿಸುವುದರಿಂದ, ಅದು ಶೋಷಣಾ ಸ್ವರೂಪದ್ದಾಗಿದೆ.ರಾಜ್ಯವು ಪ್ರಜಾಪ್ರಭುತ್ವವೇ ಆಗಿದ್ದರೂ, ಅದರ ಅಸ್ಥಿತ್ವ ಬಲ ಎಂದು ಜಯಪ್ರಕಾಶ್ ನಾರಾಯಣ್ ಏಕೀಭವಿಸಿದ್ದಾರೆ. ಆದ್ದರಿಂದ, ಸತ್ಯ ಮತ್ತು ದೇವರಲ್ಲಿ ನಂಬಿಕೆ ಇರುವ ಸಮಾಜದಲ್ಲಿ ಶೋಷಣೆ ಇರುವುದಿಲ್ಲ. ಅಂತಹ ಸಮಾಜವು ವ್ಯಕ್ತಿ ವ್ಯಕ್ತಿಗಳ ನಡುವೆ ಸ್ವಯಂ ಪ್ರೇರಿತ ಸಹಕಾರವು ಪ್ರೋತ್ಸಾಹಿಸುತ್ತದೆ. ಜನರು ತಮ್ಮಲ್ಲಿ ಸ್ವಯಂ ಪ್ರೇರಿತರಾಗಿ ಸಹಕರಿಸಿದಾಗ ರಾಜಕೀಯ ಅಧಿಕಾರದ ಅವಶ್ಯಕತೆ ಇರುವುದಿಲ್ಲ. ಪ್ರರಿಣಾಮವಾಗಿ, ರಾಜ್ಯದ ಅವಶ್ಯಕತೆಯೂ ಇರುವುದಿಲ್ಲ. ರಾಜ್ಯರಹಿತ ಸಮಾಜದ ಸರ್ವೋದಯದ ಅಂತಿಮ ಗುರಿ.

1.9.ಖಾಸಗಿ ಆಸ್ತಿಗೆ ವಿರೋಧ :

ಖಾಸಗಿ ಆಸ್ತಿಯನ್ನು ಗಾಂಧಿ ಪ್ರಬಲವಾಗಿ ವಿರೋಧಿಸಿದ್ದಾರೆ. ಗಾಂದಿಯವಧ ಅಭಿಪ್ರಾಯದಲ್ಲಿ ಸಮಾಜದ ಹಿತದೃಷ್ಟಿಯಿಂದ ಖಾಸಗಿ ಆಸ್ತಿಗೆ ಅವಕಾಶವಿರಬಾರದು. ಯಾವುದೇ ವ್ಯಕ್ತಿ ತನ್ನ ಅವಶ್ಯಕತೆಗಿಂತ ಹೆಚ್ಚಾಗಿ ಉಳಿಸಿಕೊಂಡರೆ ಅದು ಕಳ್ಳತನ ಮಾಡಿದಂತೆ ಎಂದು ಗಾಂಧಿ ವಾದಿಸಿದ್ದಾರೆ. ಸರ್ವೋದಯದ ಪ್ರಕಾರ, ಎಲ್ಲ ಕೈಗಾರಿಕೆ ಮತ್ತು ವ್ಯಾಪಾರ ಸಂಸ್ಥೆಗಳು ಸಮಾಜಕ್ಕೆ ಸೇರಿದ್ದು ಅದನ್ನು ಎಲ್ಲರೂ ಸಮಾನವಾಗಿ ನೋಡಿಕೊಂಡು ಸಮಾಜದ ಒಳಿತಿಗಾಗಿ ಉಪಯೋಗಿಸಬೇಕು.

1.10 ಶ್ರಮ ಗೌರವ:

ಸರ್ವೋದಯುವು ವ್ಯಕ್ತಿಯ ಸಾಮಾಜಿಕ, ನೈತಿಕ ಹಾಗೂ ಆರ್ಥಿಕ ಪ್ರಗತಿಗೆ ಬದ್ಧವಾಗಿದೆ. ಸರ್ವೋದಯ ಸಾಮಾಜಿಕ ಕ್ರಮದಲ್ಲಿ ಒಬ್ಬ ವ್ಯಕ್ತಿಯ ಶ್ರಮವನ್ನು ಮತ್ತೊಬ್ಬನ ಶ್ರಮಕ್ಕೆ ಹೋಲಿಸುವಂತಿಲ್ಲ ಹಾಗೂ ತಾರತಮ್ಯ ತೋರಿಸುವಂತಿಲ್ಲ. ಭೌದ್ಧಿಕ ಶ್ರಮ ಮತ್ತು ದೈಹಿಕ ಶ್ರಮ ಎರಡೂ ಸಮಾನ ಎಂದು ಸರ್ವೋದಯಿಗಳು ವಾದಿಸುತ್ತಾರೆ. ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಶ್ರಮಪಟ್ಟು ಅವಶ್ಯಕತೆಗನುಗುಣವಾಗಿ ಪಡೆಯುತ್ತಾರೆ. ಎಲ್ಲ ಕೆಲಸಗಳು ಸರಾಗವಾಗಿ ನಡೆದಾಗ ಮಾತ್ರ ಸಾಮಾಜಿಕ ಜೀವನ ಸಾಧ್ಯವಾದ್ದರಿಂದ ಯಾವುದೇ ಕೆಲಸವನ್ನು ಸರ್ವೋದಯಿಗಳು ದೊಡ್ಡದು, ಚಿಕ್ಕದು, ಮುಖ್ಯ-ಮುಖ್ಯವಲ್ಲ ಎಂದು ಪರಿಗಣಿಸುವಂತಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ವೃತ್ತಿ ಗೌರವವನ್ನು ಎತ್ತಿ

ಹಿಡಿಯುತ್ತಾ, ಚಮ್ಮಾರನ ಕೆಲಸವು ಯಾವ ಅಧಿಕಾರಿಯ ಕೆಲಸಕ್ಕೂ ಕಡಿಮೆ ಇಲ್ಲ ಎಂದು ಗಾಂಧಿ ಹೇಳಿದ್ದಾರೆ.

1.11 ರಾಷ್ಟ್ರೀಯ ಐಕ್ಯತೆ:

ಸರ್ವೋದಯ ಸಿದ್ದಾಂತವು ರಾಷ್ಟ್ರೀಯ ಐಕ್ಯತೆ ಮತ್ತು ಅಖಂಡತೆಗೆ ಬದ್ಧವಾಗಿದ್ದು ಪ್ರಾಂತೀಯತೆ ಮತ್ತು ಮತಾಂಧತೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ. ಗಾಂಧಿ ಹೇಳುವಂತೆ, ನಮ್ಮ ಜೀವನದ ಅತಿದೊಡ್ಡ ದುರಂತವೆಂದರೆ ಪ್ರಾಂತೀಯತಾವಾದ. ನನ್ನ ಪ್ರಾಂತ್ಯವು ಇನ್ನೊಂದು ಪ್ರಾಂತ್ಯದ ಜೊತೆಗೆ ಸಹಬಾಳ್ವೆ ನಡೆಸಬೇಕು. ಇಲ್ಲವಾದಲ್ಲಿ ಎಲ್ಲವೂ ನಾಶವಗುತ್ತದೆ. ರಾಜ್ಯವು ಯಾವುದೇ ಅನುಮಾನವಿಲ್ಲದೆ ಜಾತ್ಯಾತೀತವಾಗಿರಬೇಕು.

1.5 ಗ್ರಾಮೀಣ ಪುನಾರಚನೆ

ಮಹಾತ್ಮಾ ಗಾಂಧೀಜಿಯವರ ಪ್ರಕಾರ ಗ್ರಾಮೀಣ ಪುನಾರಚನೆ ಅಂದರೆ ಆರ್ಥಿಕ ಮುಕ್ತಿ. ಉದಾರ ಆರ್ಥಿಕ ನೀತಿ ರೂಪಿಸುವುದು . ಬ್ರಿಟಿಷರ ಆಳ್ವಿಕೆ ಪ್ರಾರಂಭವಾಗುವ ಮುಂಚೆ ದೇಶದ ಎಲ್ಲಾ ಹಳ್ಳಿಗಳು ಸ್ವಾವಲಂಬನೆ ಹೊಂದಿದ್ದವು. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಪ್ರಾರಂಭ ದಿನದಿಂದಲೂ ಸರ್ವಾಧಿಕಾರಿ ಧೋರಣೆಯಿಂದ ಕೈಗಾರಿಕೀಕರಣ ಪ್ರವೇಶಗೊಂಡು ದೇಶದ ಗ್ರಾಮೀಣ ವ್ಯವಸ್ಥೆ ನಾಶ ಹೊಂದಲು ಕಾರಣವಾಯಿತು. ಮಹಾತ್ಮಾ ಗಾಂದೀಜಿಯವರು ಹೇಳುವಂತೆ ಹಿಂದಿನ ಗ್ರಾಮೀಣ ವ್ಯವಸ್ಥೆ ಹಕ್ಕುಗಳ ಆಧಾರದಲ್ಲಿ ಕಾರ್ಯಾಚರಿಸದೆ ಕರ್ತವ್ಯಗಳ ಮೇಲೆ ಕಾರ್ಯಾಚರಿಸುತ್ತಿತ್ತು ಮತ್ತು ಅವುಗಳಲ್ಲಿ ಒಳಗೊಂಡಿದ್ದ ಎಲ್ಲರೂ ಉತ್ತಮ ಜೀವನ ನಿರ್ವಹಣೆಗೆಗೋಸ್ಕರ ಕರ್ತವ್ಯವನ್ನು ಮಾಡುತ್ತಿದ್ದರು. ಆಗಿನ ಜನರ ಕಣ್ಣುಗಳಲ್ಲಿ ಕಾಂತಿ ಇತ್ತು. ಅವರ ಕೈಗಳು ಬಹಳ ಕ್ರಿಯಶೀಲವಾಗಿದ್ದವು, ಏಕೆಂದರೆ ಅಂದಿನ ಜನರ ಜೀವನ ಪರಮ ತತ್ವವಾದ ಅಹಿಂಸೆಯ ಆಧಾರದಲ್ಲಿ ರೂಪಿಸಲ್ಪಟ್ಟಿತ್ತು.

ಮಹಾತ್ಮಾ ಗಾಂಧೀಜಿಯವರ ಗ್ರಾಮೀಣ ಪುನರಾಚನೆಯು ವೃತ್ತಿಪರ ಶಿಕ್ಷಣಕ್ಕೆ ಮತ್ತು ಸ್ವ ಉದ್ಯೋಗಕ್ಕೆ ಹೆಚ್ಚು ಪ್ರಾಮುಖ್ಯವನ್ನು ನೀಡುತ್ತದೆ. ಶಿಕ್ಷಣದ ಉದ್ದೇಶಕ್ಕೆ ಸಹಸ್ರಾರು ಸಂಖ್ಯೆಯ ವಿದ್ಯಾರ್ಥಿಗಳಿಗೆ ಶಿಕ್ಷಣದ ನಂತರ ಉತ್ತಮ ಉದ್ಯೋಗಾವಕಾಶ ಒದಗಿಸುವುದಾಗಿದೆ. ಮಹಾತ್ಮಾ ಗಾಂಧೀಜಿಯವರು ಹೇಳಿರುವಂತೆ ನಾನು ಒಂದು ಮಗುವಿನ ಶಿಕ್ಷಣವನ್ನು ಪ್ರಾರಂಭಿಸುವುದಾದರೆ ಮಗುವಿಗೆ ಒಂದು ಕರಕುಶಲ ವಸ್ತುವನ್ನು ತಯಾರಿಸಲು ಕಲಿಸಿ, ಆ ಮಗು ತರಬೇತಿ ಮುಗಿಸಿದ ಕೂಡಲೇ ಆ ವಸ್ತುವನ್ನು ಉತ್ಪಾದಿಸಲು ಸಾಧ್ಯವಾಗುವ ಹಾಗೆ ಮಾಡಬಹುದು. ಎಂಬ ಜೀವನ ಪಾಠವನ್ನು ನೀಡುತ್ತಿದ್ದರು.

ಗಾಂಧೀಜಿ ಶಿಕ್ಷಣ ಬಹಳ ಉದಾರ ಅಥವಾ ಬಂಧ ವಿಮೋಚನೆಗೊಳಿಸುವ ಗುಣಗಳನ್ನು ಹೊಂದಿವೆ. ಶಿಕ್ಷಣವು ಓರ್ವ ವ್ಯಕ್ತಿಯನ್ನು ಆರ್ಥಿಕ ಅವಲಂಬನೆಯಿಂದ ಬಂಧ ಮುಕ್ತಿಗೊಳಿಸಲು ಮತ್ತು ಮುಕ್ತ ಸ್ವಾತಂತ್ರ್ಯ ಪಡೆಯಲು ಸಹಾಯ ಮಾಡುತ್ತದೆ. ಸ್ವ ಉದ್ಯೋಗದ ಮೂಲಕ ಗ್ರಾಮೀಣ ಪುನರಾಚನೆಯು ಹಳ್ಳಿಯ ಬಡಜನರು ಸ್ವತಂತ್ರರಾಗಲು, ತಮ್ಮ ತಲಾವರಮಾನ ಮತ್ತು ಆರ್ಥಿಕ ಸಮಸ್ಯೆಗಳಿಂದ ಮುಕ್ತರಾಗಲು ಸಹಾಯ ಮಾಡುತ್ತದೆ. ಮಹಾತ್ಮಾ ಗಾಂಧೀಜಿಯವರು ಗ್ರಾಮೀಣ ಪುನರಾಚನೆಯಲ್ಲಿ ದೈಹಿಕ ಶ್ರಮಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ದೈಹಿಕ ಶ್ರಮವು ಬಡತನಕ್ಕೆ ಸಂಬಂಧ ಪಡೆದಿದ್ದರೂ ಒಂದು ಅರ್ಥವತ್ತಾದ ವಿಷಯವಾಗಿದೆ.

ಸರಳತೆಯು ಚೌಕಟ್ಟಿನೊಳಗೆ ದೈಹಿಕ ಶ್ರಮದ ಸ್ವ ಪ್ರಯೋಗ ಅನೇಕ ಆಯಾಮಗಳನ್ನು ಹೊಂದಿರುವುದನ್ನು ಮಹಾತ್ಮ ಗಾಂಧೀಜಿಯವರು ಗುರುತಿಸಿದ್ದಾರೆ. ವ್ಯಕ್ತಿಯು ಸಮಾಜಕ್ಕೆ ಬದ್ಧವಾಗಿರುವುದನ್ನು ದೈಹಿಕ ಶ್ರಮಸೂಚಿಸುತ್ತದೆ. ಸಮಾಜದ ದೈನಂದಿನ ಚಟುವಟಿಕೆಗಳಲ್ಲಿ ಮತ್ತು ಸಮಾಜದ ಸುಧಾರಣೆಗಳಲ್ಲಿ ಪಾಲ್ಗೊಳ್ಳಲು ದೈಹಿಕ ಶ್ರಮದ ಮೂಲಕ ಒಬ್ಬಾತ ಇತರರ ಏಳಿಗೆಗೆ ಮತ್ತು ಸಮಾಜದ ಉನ್ನತಿಗೆ ಸಹಕಾರ ನೀಡಬಹುದು. ದೈಹಿಕ ಶ್ರಮವು ಕಟ್ಟಕಡೆಯ ಸೇವೆಯ ಸೂಚಕವಾಗಿದೆ.

ಮಹಾತ್ಮ ಗಾಂಧೀಜಿಯವರು ಮನದಟ್ಟು ಮಾಡಿಕೊಂಡಿರುವ ಪ್ರಕಾರ, ಓರ್ವ ಮಾನವ ತನ್ನ ಪರಿಪೂರ್ಣ ಪ್ರೇಮವನ್ನು ಮಾತ್ರ ಆಚರಣೆಯಲ್ಲಿ ತೋರಿಸಬಲ್ಲ. ಆತ ಮಾನವ ಸೇವೆಗಾಗಿ ಸಾವನ್ನಪ್ಪಲು ಮತ್ತು ದೇಹವನ್ನು ತ್ಯಜಿಸಲು ಇಚ್ಛಿಸಿದಾಗ, ಪವಿತ್ರ ಪ್ರೇಮದ ಸ್ವಾಧೀನತೆ ಕಳಚಿಕೊಳ್ಳುತ್ತಾನೆ.
ದೈಹಿಕ ಶ್ರಮದ ಘನತೆಯನ್ನು ಪವಿತ್ರ ದೃಷ್ಟಿಯಿಂದ ಮತ್ತು ವಿಶಾಲ ದೃಷ್ಟಿಯಿಂದ ಕಾಣಬೇಕಿದೆ. ಶ್ರಮದ ಘನತೆಯನ್ನು ಎತ್ತಿ ಹಿಡಿಯುವ ಕೆಲಸವನ್ನು ಶಿಕ್ಷಣ ನೋಡಿಕೊಳ್ಳಬೇಕೆಂದು ಮಹಾತ್ಮಾ ಗಾಂಧೀಜಿಯವರು ಹೇಳಿದ್ದಾರೆ. ಶ್ರಮವೇ ನಿಜವಾದ ಆರಾಧನೆ ಕಠಿಣಮತ್ತು ಪ್ರಾಮಾಣಿಕ ದುಡಿಮೆಯ ಮೂಲಕ ಶಾಂತಿಯುತ ಜೀವನ ನಡೆಸಲು ಸಾಧ್ಯ ಮಹಾತ್ಮ ಗಾಂಧೀಜಿಯವರು ಹೇಳುವಂತೆ ಕಾಯಕ ಅನ್ನ ತತ್ವವನ್ನು ಮನಪೂರ್ವಕ ಸ್ವೀಕರಿಸಿ ಪಾಲಿಸಿದಾಗ ಅದು ಸಮಾಜದ ಸಂರಚನೆಯಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ತರಬಹುದು, ನೈಜ ಮಾನವತತ್ವವು ಅಸಭ್ಯ ತತ್ವವನ್ನು ಸ್ಥಾನ ಪಲ್ಲಟಗೊಳಿಸುತ್ತದೆ.

ಮಹಾತ್ಮಾ ಗಾಂಧೀಜಿಯವರ ಜೀವನ ಮೌಲ್ಯವು ಇದಕ್ಕೆ ಆಧಾರವಾಗಿದೆ. ಮಾನವ ಬದುಕಿನ ಪ್ರತಿಯೊಂದು ನಿಮಿಷವೂ ಉತ್ಪಾದಕರ ಉದ್ದೇಶಕ್ಕೆ ಉಪಯೋಗಿಸಲ್ಪಡಬೇಕೆಂದು ಮಹಾತ್ಮಾ ಗಾಂಧೀಜಿಯವರು ಒತ್ತಿ ಹೇಳಿದ್ದರು. ಎಲ್ಲವೂ ಅಂತಿಮವಾಗಿ ಬುದುಕಿನ ಪರಮ ಮೌಲ್ಯಗಳಾದ ಸತ್ಯ ಮತ್ತು ಪ್ರೇಮಗಳ ಹಿಂದೆ ಅಡಗಿರುತ್ತದೆ.

ದೈಹಿಕ ಶ್ರಮವು ಗ್ರಾಮೀಣಾಭಿವೃದ್ಧಿಗೆ ಪೂರಕವಾದುದು. ದೇಶದ ಶಿಕ್ಷಣ ಕ್ರಮವು ಜನರನ್ನು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಲು ದೈಹಿಕ ಶ್ರಮ ತತ್ವ ಅನುಕರಣೆಗೆ ಉತ್ತೇಜನ ನೀಡಬೇಕಾಗಿದೆ ಮತ್ತು ಉಪದೇಶಿಸಬೇಕಾಗಿದೆ. ಮಹಾತ್ಮಾ ಗಾಂಧೀಜಿಯವರು ಈ ರೀತಿ ಹೇಳಿದ್ದಾರೆ. ರಾಷ್ಟ್ರೀಯ ಶಿಕ್ಷಣದಲ್ಲಿ ಜನರಿಗೆ ಬೌದ್ಧಿಕ ತರಬೇತಿಯೊಂದಿಗೆ ದೈಹಿಕ ಶ್ರಮ ಕುರಿತ ತರಬೇತಿಯನ್ನು ಕೂಡಾ ನೀಡಬೇಕಾದ ಅಗತ್ಯವಿದೆ. ಏಕೆಂದರೆ ಅವೆರೆಡೂ ನನ್ನ ದೃಷ್ಟಿಯಲ್ಲಿ ರಾಷ್ಟ್ರೀಯ ಶಿಕ್ಷಣದಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿದೆ. ದೈಹಿಕ ಶ್ರಮ ಮಾನವನ ಬುದ್ಧಿ ಶಕ್ತಿಯನ್ನು ಬಲಪಡಿಸುವ ಸಾಧನವಾಗಿರಬೇಕು.

ಶಿಕ್ಷಣವು ಜನ ಮನೋವೃತ್ತಿಯ ಸಮರ್ಪಕ ಸುಧಾರಣೆಗೆ ಹಿನ್ನೆಲೆಯನ್ನು ಒದಗಿಸುವುದು ಮಾತ್ರ ಅಲ್ಲದೆ ಗ್ರಾಮೀಣಾಭಿವೃದ್ಧಿಯಲ್ಲಿ ಆ ರೀತಿಯ ತತ್ವಗಳ ಪ್ರಯೋಗಗಳಿಗೆ ಅವಕಾಶ ಮಾಡಿಕೊಡುತ್ತದೆ. ಮಾನವನ ವ್ಯಕ್ತಿತ್ವ ವಿಕಸನಕ್ಕೆ ಆದ್ಯತೆ ನೀಡುವ ಅಗತ್ಯವಿದೆ. ಮಹಾತ್ಮಾ ಗಾಂಧೀಜಿಯವರು ಹೇಳಿರುವಂತೆ ಯಾವ ವೃತ್ತಿಗೋಸ್ಕರ ವಿದ್ಯಾರ್ಥಿ ತರಬೇತಿಯನ್ನು ಪಡೆಯುತ್ತಾನೋ, ಆ ವೃತ್ತಿಗೆ ಸಂಬಂಧಿಸಿದಂತೆ ಆತ ಹೊಂದಿರುವ ಪ್ರತಿಭೆಯನ್ನು ಗುರುತಿಸಿ, ಪೂರ್ಣ ಅಭಿವೃದ್ಧಿ ಪಡಿಸಬೇಕಿದೆ. ಶಿಕ್ಷಣ ಮುಗಿಸಿ

ಹೊರಬರುವಾಗ ಪರಿಪೂರ್ಣ ವ್ಯಕ್ತಿಯಗಿ ಹೊರಬಂದು ಆತ ತಾನು ಸಾಮಾಜಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಪರಿಪೂರ್ಣ ವ್ಯಕ್ತಿ ಎಂದು ಸಮಾಜಕೆಕ ತೋರಿಸಿಕೊಡಬೇಕಾಗಿದೆ. ವಿದ್ಯಾರ್ಥಿಗಳು ಗ್ರಾಮೀಣ ಪುನಾರಚನೆಯಲ್ಲಿ ಸಕ್ರಿಯ ಪಾತ್ರವಹಿಸಬೇಕೆಂದು ತಾವು ದೈಹಿಕ ಶ್ರಮವನ್ನು ಒದಗಿಸುವ ಮೂಲಕ ದೈಹಿಕ ಶ್ರಮದ ಘನತೆ, ಗೌರವವನ್ನು ಎತ್ತಿ ಹಿಡಿಯಬೇಕೆಂದು ಮಹಾತ್ಮಾ ಗಾಂಧೀಜಿಯವರು ಕರೆ ನೀಡಿದ್ದರು. ಅವರು ಬಹಳ ನೊಂದು ಈ ಕೆಳಗಿನಂತೆ ನುಡಿದಿದ್ದರು ನಮ್ಮ ವಿದ್ಯಾರ್ಥಿಗಳು ದೈಹಿಕ ಶ್ರಮಕ್ಕೆ ಅಗೌರವ ತೋರಿಸದಿದ್ದರೂ, ಅದನ್ನು ಯಾವುದೇ ರೀತಿಯಲ್ಲಿ ಮೆಚ್ಚದಿರುವುದು ಅತ್ಯಂತ ಕನಿಕರದ ಸಂಗತಿಯಾಗಿದೆ

ಮಹಾತ್ಮಾ ಗಾಂಧೀಜಿಯವರು ಹೊಲವನ್ನು ಉಳುತ್ತಿದ್ದರು, ಚರಕದ ಮುಂದೆ ಕುಳಿತು ನೂಲುತ್ತಿದ್ದರು, ತಮ್ಮ ಬಟ್ಟೆಯನ್ನು ತಾವೆ ಹೊಲಿಯುತ್ತಿದ್ದರು, ತಮ್ಮ ಬಟ್ಟೆ ಬರೆ ತಾವೇ ಒಗೆದು ಇಸ್ತ್ರಿ ಮಾಡುತ್ತಿದ್ದರು, ಕಸ ಗುಡಿಸುತ್ತಿದ್ದರು, ಪಾತ್ರೆ ತೊಳೆಯುತ್ತಿದ್ದರು. ತಮ್ಮ ಚಪ್ಪಲಿಯನ್ನು ತಾವೇ ತಯಾರಿಸುತ್ತಿದ್ದರು. ಇಡೀ ರಾತ್ರಿ ಎಚ್ಚರವಾಗಿದ್ದು, ಪ್ಲೇಗ್ ಪೀಡಿತರಾಗಿದ್ದ ಗಣಿ ಕಾರ್ಮಿಕರ ಆರೈಕೆ ಮಾಡುತ್ತಿದ್ದರು, ಕುಷ್ಠ ರೋಗಿಗಳ ಗಾಯವನ್ನು ತೊಳೆಯುತ್ತಿದ್ದರು, ಕಕ್ಕಸುಗಳನ್ನು ತೊಳೆಯಲು ನಾಚಿಕೆಪಟ್ಟುಕೊಳ್ಳುತ್ತಿರಲಿಲ್ಲ. ಅವರಿಗೆ ಸೋಮಾರಿತನವಾಗಲೀ ಭಯ ಅಥವಾ ದ್ವೇಷವೆಂಬುದಾಗಲೀ ತಿಳಿದೇ ಇರಲಿಲ್ಲ. ಬಡಜನರ ಸೇವೆಗೈಯುವ ಶಕ್ತಿ ಕರುಣಿಸಲು ಅವರು ಭಗವಂತನಲ್ಲಿ ಸದಾ ಪ್ರಾರ್ಥಿಸುತ್ತಿದ್ದರು. ಶ್ರಮ ಜೀವನದಲ್ಲಿ ಅವರು ಅಪಾರ ನಂಬಿಕೆಯನ್ನು ಹೊಂದಿದ್ದರು. ದೈಹಿಕ ದುಡಿಮೆಯನ್ನು ಬದುಕಿನ ಬಹುದೊಡ್ಡ ಭಾಗವಾಗಿಸಿಕೊಂಡಿದ್ದರು. ಶ್ರಮಯೆವ ಜಯತೆ ಎಂಬ ಮಾತಿಗೆ ಗಾಂಧೀಜಿ ಪ್ರತಿರೂಪವಾಗಿದ್ದರು.

ಗ್ರಾಮಗಳ ಬಗೆಗಿನ ಮಹಾತ್ಮಾ ಗಾಂಧೀಜಿಯವರ ಚಿಂತನೆಗಳು ಬಹಳ ವಿಶಾಲಾತ್ಮಕವಾಗಿದೆ,. ಅವರು ಹೇಳಿದಂತೆ ಶಿಕ್ಷಣದ ಮೂಲಭೂತ ಯೋಜನೆಯು ಗ್ರಾಮೀಣ ಬಡಜನರ ನೈಜ ಅವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕಾಗಿದೆ. ಯಾವ ಗ್ರಾಮವೂ ಉಳಿಯದಂತೆ ಕೈಗಾರಿಕೀಕರಣ ಸಾಧಿಸಲು ಭಾರತ ದೇಶಕ್ಕೆ ಸಾಧ್ಯವಿಲ್ಲದಿರುವಾಗ ಗ್ರಾಮೀಣ ಭಾರತದಲ್ಲಿ ಗ್ರಾಮವು ಖಂಡಿತವಾಗಿಯೂ ಮತ್ತು ಯಾವಾಗಲೂ ದೇಶದ ಪ್ರಮುಖ ಘಟಕವಾಗಿದೆ ಭಾರತೀಯ ಗ್ರಾಮೀಣ ಪುನಾರಚನೆಯನ್ನು ಸಾಧಿಸಲು ಅತ್ಯುತ್ತಮ ಸಾಧನವಾಗಿದೆ. ತನ್ನ ಜನರನ್ನು ದೈಹಿಕ ಶ್ರಮತತ್ವವನ್ನು ಬದುಕಲ್ಲಿ ಅಳವಡಿಸಿಕೊಳ್ಳಲು ಉತ್ತೇಜಿಸದೆ ಹೋದಲ್ಲಿ ಆರ್ಥಿಕ ಸುಧಾರಣೆಯತ್ತ ಹೆಜ್ಜೆ ಹಾಕಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಮಹಾತ್ಮಾ ಗಾಂಧೀಜಿಯವರು ಮನಗಂಡಿದ್ದರು. ದೇಶದಲ್ಲಿ ದೈಹಿಕ ಶ್ರಮವನ್ನು ಅಸಹ್ಯಪಡುವ ವಿಷಯಕ್ಕಿಂತ ಕೆಟ್ಟ, ಅನರ್ಹ ಅಥವಾ ಯೋಗ್ಯವಲ್ಲದ ವಿಷಯಗಳು ಇರುವುದಿಲ್ಲ.

1.6 ಶ್ರಮಿಕರ ಕಲ್ಯಾಣ

ಮಹಾತ್ಮಾಗಾಂಧೀಜಿಯವರು ಶ್ರಮಿಕ ವರ್ಗದ ಮೇಲೆ ಒಲವು ಹೊಂದಿದ್ದರು. ಶ್ರಮಿಕ ವರ್ಗವನ್ನು ಪರೀಕ್ಷಿಸುತ್ತಿದ್ದರು. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವುದು ಅವರ ಪ್ರಮುಖ ಧ್ಯೇಯವಾಗಿತ್ತು. ಅವರು ಶ್ರಮಿಕರಿಗೆ ಘೋರ ಅನ್ಯಾಯವಾಗುತ್ತಿರುವುದನ್ನು ಮತ್ತು ಸಮಾಜದಲ್ಲಿ ಗೌರವ ಸಿಗದಿರುವುದನ್ನು ಕಣ್ಣಾರೆ ಕಾಣುತ್ತಿದ್ದರು. ಗಾಂಧೀಜಿಯವರು ಬಾಲಾಶ್ರಮವನ್ನು ವಿರೋಧಿಸುತ್ತಾರೆ. ಕಾರ್ಮಿಕರಿಗೆ ಸಾಧ್ಯವಾದಷ್ಟು ಕಡಿಮೆ ಅವಧಿಯ ದುಡಿತ ಮತ್ತು ಹೆಚ್ಚು ವಿಶ್ರಾಂತಿ ಇರುವುದು ಅಗತ್ಯ. ಕಾರ್ಮಿಕರು ಶ್ರಮ ಒದಗಿಸುವ ಕಡೆ

ಅವರಿಗೆ ಎಲ್ಲಾ ರೀತಿಯ ಸುರಕ್ಷತಾ ವ್ಯವಸ್ಥೆ ಇರಬೇಕು ಮತ್ತು ಸಾಮಾಜಿಕ ಭದ್ರತಾ ವ್ಯವಸ್ಥೆ ಮೂಲಕ ಶ್ರಮಿಕ ವರ್ಗದ ಹಿತಾಸಕ್ತಿಯನ್ನು ಕಾಪಾಡಬೇಕಾದ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಮಹಾತ್ಮಾ ಗಾಂಧೀಜಿಯವರು ಕಾರ್ಮಿಕ ಕಲ್ಯಾಣ ವಿಷಯಕ್ಕೆ ಹೆಚ್ಚು ಪ್ರಾತನಿಧ್ಯ ನೀಡುತ್ತಿದ್ದರು. ಶ್ರಮಿಕರಿಗೆ ಉತ್ತಮ ಕೂಲಿ ಸಿಗಬೇಕೆಂದು ಒತ್ತಾಯಿಸುವ ಅವರು ಕಾರ್ಮಿಕರನ್ನು ಸಮಾಜ ಗೌರವಿಸಬೇಕೆಂದು ಹೇಳಿದ್ದಾರೆ. ಅವರು ಜೂನ್ 09 1946ರಲ್ಲಿ ಹರಿಜನ ನಿಯತಕಾಲಿಕದಲ್ಲಿ ಬರೆದಿರುವಂತೆ ಉಪಯುಕ್ತ ಕ್ರಮವನ್ನು ಒದಗಿಸಿದ ಶ್ರಮಿಕನಿಗೆ ನ್ಯಾಯಯುತ ಕೂಲಿ ಸಿಗಬೇಕು. ಕೊಡುವ ಕೂಲಿಯು ಆತನ ಮತ್ತು ಆತನ ಸಂಸಾರಕ್ಕೆ ಅತೀ ಅವಶ್ಯವಾಗಿಬೇಕಾದ ಕನಿಷ್ಟ ಆಹಾರ ಮತ್ತು ಬಟ್ಟೆ ಬರೆಹೊಂದಲು ಅನುಕೂಲವಾಗುವ ಕೂಲಿ ಆಗಿರಬೇಕು.

ವಿದ್ಯಾವಂತ ಜನರಲ್ಲಿ ದೈಹಿಕ ಶ್ರಮದ ಬಗ್ಗೆ ಜಿಗುಪ್ಸೆ ಇದೆ. ಇದು ಕಾರಕೂನ ಗಿರಿಯನ್ನು ಅಟ್ಟಕ್ಕೇರಿಸಿದೆ. ನಾವು ಗುಲಾಮಗಿರಿಯನ್ನು ಅಹ್ವಾನಿಸಿದ್ದು ಹೀಗೆಯೇ ಆದುದರಿಂದ ಈ ಅಸಂತೋಷದ ಸ್ಥಿತಿಗೆ ಬಂದು ಬಿದ್ದಿದ್ದೇವೆ ಎಂದು ಮಹಾತ್ಮಾ ಗಾಂಧೀಜಿಯವರು ಹೇಳುತ್ತಾರೆ/ ಆದುದರಿಂದ ಸುಮ್ಮನೆ ತಲೆ ಉಪಯೋಗಿಸಿ, ಕೆಲಸ ಮಾಡುವುದಷ್ಟೇ ಸಾಲದು , ಪ್ರತಿದಿನವೂ ಪ್ರತಿಯೊಬ್ಬನೂ ಒಂದಿಷ್ಟಾದರೂ ಕಷ್ಟಪಟ್ಟು ದುಡಿಯಬೇಕು. ಅಕ್ಷರಸ್ಥರು, ಅನಕ್ಷರಸ್ಥರು, ವೈದ್ಯರು ಮತ್ತು ವಕೀಲರು ನ್ಯಾಯಾದೀಶರು ಮತ್ತು ಜಾಡಾಮಾಲಿ ಎಲ್ಲರಿಗೂ ಅವರವರ ಕೆಲಸಗಳಿಗೆ ಸಮಾನ ವಾದ ಕೂಲಿಯನ್ನು ಕೊಡಬೇಕು. ಕಾರ್ಮಿಕರ ಆರ್ಥಿಕ ಸ್ಥಿತಿಗತಿ ಸುಧಾರಣೆಗೆ ಮುಖ್ಯವಾಗಿ ಬೇಕಾದ ಕನಿಷ್ಟ ಕೂಲಿ ಒದಗಿಸಬೇಕಾಗಿದೆ. ಕಾರ್ಮಿಕರಿಗೆ ಸಾಧ್ಯವಾದಷ್ಟು ಹೆಚ್ಚು ಕೂಲಿ ನೀಡಬೇಕೆಂದು ಮತ್ತು ಸಾಧ್ಯವಾದಷ್ಟು ಕಡಿಮೆ ಕೆಲಸ ನೀಡಬೇಕು. ಆ ರೀತಿ ಮಾಡುವುದರ ಮೂಲಕ ದೇಶದಲ್ಲಿ ಶ್ರಮಿಕ ವರ್ಗವನ್ನು ಹಿಂಸಿಸಬಾರದು. ಅವರನ್ನು ಸಂರಕ್ಷಿಸಬೇಕೆಂದು ಮಹಾತ್ಮಾ ಗಾಂಧೀಜಿಯವರು ಬಂಡವಾಳಶಾಹಿ ವರ್ಗವನ್ನು ವಿನಂತಿಸಿದ್ದರು. ಇದು ಶ್ರಮಿಕರನ್ನು ಸ್ವಚ್ಛ ಮನೆ, ಆರೋಗ್ಯವಂತ ದೇಹ, ಪರಿಶುದ್ಧ ಮನಸ್ಸು, ಶಾಂತಿ ಮತ್ತು ನೆಮ್ಮದಿ ಹೊಂದಲು ಸಹಾಯಮಾಡುವುದು. ಮಹಾತ್ಮಾ ಗಾಂಧೀಜಿಯವರು ವಕೀಲರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಲೇಖಕರಾಗಿ, ಪತ್ರಕರ್ತರಾಗಿ, ಮುದ್ರಕರಾಗಿ, ಪ್ರಕಾಶಕರಾಗಿ, ದರ್ಜಿಯಾಗಿ, ದಾದಿಯಾಗಿ, ಬಾಣಸಿಗರಾಗಿ, ಚಮ್ಮರರಾಗಿ, ಭಂಗಿಯಾಗಿ, ಪುರೋಹಿತರಾಗಿ, ವೈದ್ಯರಾಗಿ, ಶಿಕ್ಷಕರಾಗಿ, ನೇಕಾರರಾಗಿ, ನೂಲುವವರಾಗಿ ಅನೇಕ ಅವಕಾಶಗಳಲ್ಲಿ ನಮಗೆ ನಿಕಟವಾಗಿದ್ದಾರೆ. ಸಮಾಜ ಸೇವೆಗೆ ಮತ್ತು ಕಾರ್ಮಿಕ ಕಲ್ಯಾಣ ಚಟುವಟಿಕೆಗಳಿಗೆ ಹಣ ಸಂಗ್ರಹಿಸಲು ಮಹಾತ್ಮಾ ಗಾಂಧೀಜಿಯವರು ಹರಾಜುಗಾರನಾಗಿ, ಯಾಚಕರಾಗಿ, ಭಿಕ್ಷುಕರಾಗಿ ಕೂಡಾ ಕಾರ್ಯನಿರ್ವಹಿಸಿದ್ದರು.

ಮಹಾತ್ಮಾ ಗಾಂಧೀಜಿಯವರು ಶ್ರಮಿಕರ ಮತ್ತು ಶ್ರಮಿಕ ವರ್ಗದ ಮೇಲೆ ಅಪಾರ ಕಾಳಜಿಯನ್ನು ಹೊಂದಿದ್ದರು. ಗಾಂಧೀಜಿಯವರ ಮಾನವ ಪ್ರೇಮ ಮೆಚ್ಚುವಂತಹದ್ದು. ಕಾರ್ಮಿಕ ಕಲ್ಯಾಣ ಮಹಾತ್ಮ ಗಾಂಧೀಜಿಯವರು ಕನಸಾಗಿತ್ತು. ಬಂಡವಾಳ ಶಾಹಿಗಳ ಮಧ್ಯೆ ಸಾಮರಸ್ಯದ ಅಗತ್ಯದ ಬಗ್ಗೆ ಹೇಳುತ್ತಿದ್ದರು. ಎರಡು ವರ್ಗಗಳ ನಡುವೆ ಯಾವುದೇ ಕಾರಣಕ್ಕೂ ಸಂಘರ್ಷ ಇರಬಾರದು, ಸಹಕಾರ ಭಾವನೆ ಇರಬೇಕು. ಪರಸ್ಪರ ವಿಶ್ವಾಸ ಮತ್ತು ನಂಬಿಕೆ ಇರಬೇಕು ಎಂಬುದು ಮಹಾತ್ಮ ಗಾಂಧೀಜಿಯವರ ಅಭಿಮತ. ಅವರು ಹೇಳುವ ಪ್ರಕಾರ ಬಂಡವಾಳ ಶ್ರಮದ ಸೇವಕನಾಗಿರಬೇಕು, ಮಾಲೀಕನಾಗಿರಬಾರದು ಮಹಾತ್ಮಾ ಗಾಂಧೀಜಿಯವರು ಕಾರ್ಮಿಕ ಸಂಘಟನೆಗಳ ಪರವಾಗಿದ್ದರು. ಕಾರ್ಮಿಕರು ತಮ್ಮ ನ್ಯಾಯಯುತ ಬೇಡಿಕೆಗಳನ್ನು

ಈಡೇರಿಸಿಕೊಳ್ಳಲು ವಿಫಲರಾದಾಗ ಮುಷ್ಕರ ನಡೆಸುವ ಮೂಲಕ ಅವುಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಬಹುದು. ಆದರೆ ಯಾವ ಕಾರಣಕ್ಕೂ ಕಾರ್ಮಿಕರ ಚಳವಳಿಯು ಹಿಂಸಾತ್ಮಕವಾಗಿರಬಾರದು. ಅದು ಶಾಂತಿಯುತವಾಗಿದ್ದು ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ನಡೆಯಬೇಕು ಎಂದು ಮಹಾತ್ಮಾ ಗಾಂಧೀಜಿಯವರು ಹೇಳಿದ್ದಾರೆ.

ಮಹಾತ್ಮ ಗಾಂಧೀಜಿಯವರು ಶ್ರಮ ಜೀವನದಲ್ಲಿ ಅಪಾರ ನಂಬಿಕೆ ಇಟ್ಟಿದ್ದರು ಮತ್ತು ದೈಹಿಕ ದುಡಿಮೆಯನ್ನು ಬದುಕಿನ ಬಹುದೊಡ್ಡ ಭಾಗವಾರಿಸಿದ್ದರು, ದೈಹಿಕ ಶ್ರಮದ ಬದುಕನ್ನು ನಿಕೃಷ್ಟವಾಗಿ ಕಾಣುವುದನ್ನು ಮತ್ತು ತಮ್ಮ ಕೆಲಸವನ್ನು ತಾವು ಮಾಡಿಕೊಳ್ಳುವ ಜೀವನ ಶೈಲಿಯ ತುಚ್ಛೀಕರಣವನ್ನು ಮಹಾತ್ಮ ಗಾಂಧೀಜಿಯವರು ವಿರೋಧಿಸುತ್ತಾರೆ. ಗ್ರಾಮೀಣ ಬಡ ಶ್ರಮಿಕರನ್ನು ಮಹಾತ್ಮ ಗಾಂಧೀಜಿಯವರು ಬಹಳ ಪ್ರೀತಿಸುತ್ತಾರೆ. ಇದು ಅವರ ಮಾನವ ಪ್ರೇಮವನ್ನು ಪ್ರದರ್ಶಿಸುತ್ತದೆ. ಗ್ರಾಮೀಣ ಬಡ ಶ್ರಮಿಕರ ಉದ್ಧಾರ ವಿಷಯದಲ್ಲಿ ತುಂಬಾ ಆಸಕ್ತಿ ವಹಿಸಿದ್ದರು. ಪಂಡಿತ್ ಜವಾಹರ್ ಲಾಲ್ ನೆಹರೂ ಇವರು ಹೇಳಿರುವಂತೆ ಮಹಾತ್ಮ ಗಾಂಧೀಜಿಯವರು ಬಹಳಷ್ಟು ವಿಷಯಗಳಲ್ಲಿ ಹೇಗೆ ಆಸಕ್ತಿ ತೋರುತ್ತಿದ್ದರು ಮತ್ತು ಆಸಕ್ತಿ ವಹಿಸಿದಾಗ, ಅದನ್ನು ಅಷ್ಟೇ ಚೆನ್ನಾಗಿ ಹೇಗೆ ನಿರ್ವಹಿಸುತ್ತಿದ್ದರು. ಎಂಬುದೊಂದು ಅಸಾಮಾನ್ಯ ಸಂಗತಿ. ಜೀವನದಲ್ಲಿ ಸಣ್ಣ ಪುಟ್ಟ ಎಂದೆನಿಸುವ ಅಂಶಗಳನ್ನು ನಿರ್ವಹಿಸುವಾಗಲೂ ಸಹ ಅವರು ನೀಡುತ್ತಿದ್ದ ಸಂಪೂರ್ಣ ಗಮನವೇ ಪ್ರಾಯಶ: ಅವರ ಮಾನವೀಯತೆಯನ್ನು ಎತ್ತಿ ಹಿಡಿದದ್ದು ಎಂದು ತೋರುತ್ತದೆ. ಅವರ ವ್ಯಕ್ತಿತ್ವಕ್ಕೆ ಆಧಾರವಾಗಿದೆ.

1.7 <u>ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ</u>

1. **ಸ್ವಾತಂತ್ರ್ಯದ ತತ್ವ:-**

ನಿಧಾನದ ಸ್ವಾತಂತ್ರ್ಯವೆಂಬುದೇ ಇಲ್ಲ. ಸ್ವಾತಂತ್ರ್ಯವು ಜನನದಂತೆ. ನಾವು ಪೂರ್ಣವಾಗಿ ಸ್ವತಂತ್ರಗೊಳ್ಳುವವರೆಗೂ ಗುಲಾಮರೇ ಸರಿ. ಜನನ ಕ್ಷಣಮಾತ್ರದಲ್ಲಿ ಸಂಭವಿಸುತ್ತದೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಸಹ ತನ್ನ ಅಭಿಪ್ರಾಯವನ್ನು ಇನ್ನೊಬ್ಬರೊಡನೆ ಹಂಚಿಕೊಂಡು ಯಶಸ್ವಿ ನಾಗರಿಕತೆಗೆ ಪಾಲುದಾರನಾಗಿ ಸಹಬಾಳ್ವೆ ನಡೆಸುವ ವಿಧಾನದಲ್ಲಿ ಸ್ವಾತಂತ್ರ್ಯದ ತತ್ವ ಅಡಗಿದೆ.

2. **ಗಿಲೀಟಿನ ಗುಲಾಮಗಿರಿ:**

ಭಾರತದಲ್ಲಿ ಆತ್ಮಗೌರವಕ್ಕೆ ಪೆಟ್ಟು ನೀಡುವ ಗುಲಾಮಗಿರಿಯು ಬಹು ಅಪೇಕ್ಷಿತವಾಗಿ ನಡೆಯುತ್ತಿದೆ. ಅಧಿಕಾರದಲ್ಲಿರುವ ವ್ಯಕ್ತಿಗಳು ಇನ್ನೂಬ್ಬರ ಕಪಿಮುಷ್ಠಿಯಲ್ಲಿ ಸಿಲುಕಿ ದೇಶಕ್ಕೆ ಮಾರಕವಾಗಿ ಪರಿಣಮಿಸುತ್ತಿರುವುದು.ಈ ಗುಲಮಗಿರಿಯಿಂದ ಮುಕ್ತಿ ಹೊಂದಲು ಯುವಜನತೆ ಮುಂದಾಗಬೇಕು.

3. **ಸ್ವಾತಂತ್ರ್ಯದ ಹಕ್ಕು:-**

ಬೇರೆಯವರ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದ ಹಾಗೆ ಪ್ರತಿಯೊಬ್ಬ ವ್ಯಕ್ತಿಯು ಸಮಜದಲ್ಲಿ ನ್ಯಾಯಯುತವಾಗಿ ಬದುಕುವ ರೀತಿಯಲ್ಲಿ ಸ್ವಾತಂತ್ರ್ಯದ ತಿರುಳನ್ನು ಅಪೇಕ್ಷಿಸಬಹುದು.ಜೀವಿಸುವ

ಹಕ್ಕಿಗೆ ಗೊಂದಲ ಉಂಟಾದರೆ, ಅದು ಸ್ವಾತಂತ್ರ್ಯಕ್ಕೆ ಒದಗಿದ ಹಿನ್ನಡೆಯೆಂದು ಅರಿಯಬೇಕಾಗುತ್ತದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ನ್ಯಾಯಸಮ್ಮತವಾದ ಜೀವನದ ಭದ್ರಬುನಾದಿಯೇ ಸ್ವಾತಂತ್ರ್ಯದ ಹಕ್ಕು.

4. **ವ್ಯಕ್ತಿ ಸ್ವಾತಂತ್ರ್ಯ:-**

ಮನುಷ್ಯನು ಸಮಾಜದಲ್ಲಿ ಸಾಂಘಿಕವಾಗಿ ಬದುಕಿ ಯಶಸ್ವಿಯಾದಲ್ಲಿ ವ್ಯಕ್ತಿ ಸ್ವಾತಂತ್ಯ ಮಹತ್ವ ಪಡೆಯುತ್ತದೆ. ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಉತ್ತಮ ಬಾಂಧವ್ಯ ಏರ್ಪಟ್ಟಾಗ ಸಾಮಾಜಿಕ ಪ್ರಗತಿ ಉಂಟಾಗುತ್ತದೆ. ಇದು ವ್ಯಕ್ತಿಯು ಸಮಾಜಕ್ಕೆ ನೀಡುವ ಉತ್ತಮ ಕೊಡುಗೆಯಾಗಿದೆ.ಹೀಗೆ ಪ್ರಾಥಮಿಕವಾಗಿ ಸ್ವಾತಂತ್ರ್ಯವು ಗಟ್ಟಿಗೋಂಡಲ್ಲಿ ಅದರ ಮೇಲಿನ ಕಟ್ಟಡವೂ ಸಹ ಯಥಾವತ್ತಾಗಿ ಬಲಿಗೊಳ್ಳುವುದರಲ್ಲಿ ಸಂದೇಹವಿಲ್ಲ.

5. **ಸ್ವಾತಂತ್ರ್ಯದ ಕಲ್ಪನೆ:-**

ಸ್ವಾತಂತ್ರ್ಯವೆಂಬುದು ಸಮಾಜ ಮತ್ತು ವ್ಯಕ್ತಿಯ ಉದ್ಧಾರಕ್ಕಾಗಿ ಬಳಸಲ್ಪಡುವ ಒಂದು ವಿಧಾನವಾಗಿದೆ ಹಾಗೂ ವ್ಯಕ್ತಿಯು ತನ್ನ ಪ್ರತಿಭೆಯನ್ನು ಏಕರೂಪವಾಗಿ ತನ್ನ ನೆರೆಹೂರೆಯವರೊಂದಿಗೆ ಸಮವಾಗಿ ಬಳಸಿಕೊಳ್ಳುವ ಪೂರ್ಣ ಸ್ವಾತಂತ್ರ್ಯವನ್ನು ಪಡೆದಿರಬೇಕು ಮತ್ತು ಸಮಾಜದ ಒಳಿತಿಗಾಗಿ ಅದು ಪೂರಕವಾಗಿರಬೇಕು

6. **ಸ್ವತಂತ್ರವಾಗಿರಲು ದೃಡಸಂಕಲ್ಪ:**

ನಿರಂಕುಶ ಪ್ರಭುತ್ವದಲ್ಲಿ ಬಲಾತ್ಕಾರದಿಂದ ಜನರ ಸಮ್ಮತಿಗಳಿಸುತ್ತಾನೆ. ಗುರಿಸಾಧನೆಯಲ್ಲಿ ಅನೇಕ ಮಂದಿ ಕ್ರೂರಿಯ ಇಚ್ಚೆಗೆ ಮಣಿಯುವುದೇ ಲೇಸೆಂದು ವಿರೋಧಿ ಮಾರ್ಗವನ್ನೇ ಅನುಸರಿಸುತ್ತಾರೆ. ಆದರೆ ಆತ್ಮಸಾಕ್ಷಿಯೊಂದು ದೃಢವಾಗಿದ್ದಲ್ಲಿ ಎಲ್ಲ ಸಂಘರ್ಷಗಳನ್ನೂ ಮೀರಿ ನಡೆಯುವ ಸ್ವಾತಂತ್ರ್ಯವನ್ನು ನಾವು ಪಡೆಯಬಹುದು. ಗುಲಾಮಗಿರಿಯನ್ನು ತೊರೆಯುವುದರಿಂದ ದೇಶಕ್ಕೆ ಒಬ್ಬ ಮಾದರಿ ನಾಗರಿಕನಾಗುತ್ತಾನೆ.

7. **ಸ್ವಾತಂತ್ರ್ಯದ ಬೆಲೆ:**

ಪರರ ಆತ್ಮ ಗೌರವಕ್ಕೆ ಬೆಲೆ ನೀಡುವ ಮೂಲಕ ನಮ್ಮ ವ್ಯಕ್ತಿತ್ವವನ್ನು ಸುಧಾರಣೆಗೊಡ್ಡುವ ಪರಿಯನ್ನು ನಾಗರಿಕ ಸಮಾಜವು ಒಪ್ಪಿಕೊಳ್ಳುತ್ತದೆ. ಪೂರಕವಾದ ವಾತಾವರಣದಲ್ಲಿ ಯಶಸ್ವಿಯಾದ ಜೀವನದಲ್ಲಿ ಅಡೆತಡೆಗಳಿಲ್ಲಿ ನಡೆಯುವ ಜೀವನ ಚಕ್ರವೇ ಸ್ವಾತಂತ್ರ್ಯಕ್ಕೆ ಬೆಲೆ ತಂದುಕೊಡುತ್ತದೆ. ಸಮಾಜದಲ್ಲಿ ಪರಸ್ಪರರೊಡನೆ ಹೊಂದಾಣಿಕೆಗಳು ಗಟ್ಟಿಗೊಂಡರೆ ಪ್ರಜಾಪ್ರಭುತ್ವದ ಸಾಕಾರವಾದಂತೆ ಸರಿ. ಸ್ವಾತಂತ್ರ್ಯವೆಂಬುದು ಅಮೂಲ್ಯ ಸಂಪತ್ತು ರಕ್ಷಿಸಿದಷ್ಟೂ ಬೆಳೆವಣಿಗೆ ಹೊಂದುತ್ತದೆ. ರಕ್ಷಿಸುವ ಮನಸ್ಥಿತಿ ಪರಿಪೂರ್ಣವಾಹಿದ್ದಲ್ಲಿ ಸ್ವಾತಂತ್ರ್ಯವು ಸ್ವಚ್ಚತೆಯ ಪ್ರತೀಕವಾಗುತ್ತದೆ.

8. **ಅತಿ ದೀನರಿಗೂ ಸ್ವಾತಂತ್ರ್ಯ:**

ಸ್ವತಂತ್ರ ಭಾರತದಲ್ಲಿ ಅತಿದೀನರಿಗೂ ಸಮಾಜದಲ್ಲಿ ಸರಿಸಮಾನವಾದ ಮಾನ್ಯತೆ ದೊರೆತು ಅದು ನಾಗರಿಕತೆಯ ಏಳ್ಗೆಗೆ ಪರಿಣಾಮಕಾರಿಯಾಗಿದ್ದಲ್ಲಿ, ಅಲ್ಲಿ ಅಪ್ರಾಮಾಣಿಕತೆಯ ವಿಷಯವೇ ಎದುರು

ಬಾರದು. ಉಚ್ಚ ನೀಚ ವರ್ಗದ ಜನರ ಬಡುವೆ ಸೌಹಾರ್ದ್ರಯುತ್ ಬಾಚಿಧವ್ಯ ಏರ್ಪಟ್ಟು ಮೌಲ್ವಿಕ ಚಿಂತನೆಗಳು ಸಾಕಾರಗೊಂಡಲ್ಲಿ ವ್ಯವಸ್ಥಿತವಾಗಿ ಸ್ವಾತಂತ್ರ್ಯದ ಅಂಶವು ಬೆಳಕಿಗೆಬರುತ್ತದೆ.

೯. **ಶೋಷಣೆ ಇಲ್ಲ:**

ಯಥಾವತ್ತಾಗಿ ಎಲ್ಲ ಕಾರ್ಯಗಳು ನಡೆದಲ್ಲಿ ರಾಜಕೀಯ ಹಸ್ತಕ್ಷೇಪಸಲ್ಲದು ಎಂಬು ಸಂಗತಿ ಸರ್ವಸಮ್ಮತ ಹಾಗಿದ್ದರೂ ಅಜಾಗರೂಕ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಶೋಷಣಿಯ ಹಾದಿ ತುಳಿಯುವ ಜನತೆ ರಾಜಕೀಯದ ದೊರೆ ಹೋಗುತ್ತಾರೆ. ಶೋಷಣೆಯಿಂದ ವ್ಯಕ್ತಿ-ವ್ಯಕ್ತಿಗಳ ಮಧ್ಯೆ ವೈಷಮ್ಯ ಹುಟ್ಟುತ್ತದೆ. ಹೆಚ್ಚಾಗಿ ಜನತೆ ಶೋಷಣೆಗೊಳಗಾಗುವುದು ಆರ್ಥಿಕವಾಗಿ ಬರುವ ಸಂಕಷ್ಟಗಳಿಗೇ ಹೊರತು ಮಾರ್ಮಿಕವಾದ ವಿಷಯಕ್ಕಲ್ಲ. ಪ್ರತಿಯೊಬ್ಬ ದೀನನೂ,ಸಹ ರಾಜಕೀಯ ನಿಜವಾದ ಹಸ್ತಕ್ಷೇಪದಿಂದ ಮುಕ್ತಿ ಹೊಂದಿದಲ್ಲಿ ಪ್ರಜಾಪಭುತ್ವ ವ್ಯವಸ್ಥೆಯ ನಿಜವಾದ ಅರ್ಥ ಫಲಿಸುತ್ತದೆ. ದುರ್ಬಲನಿಂದ ಬಲಿಷ್ಠನವರೆಗೂ ತಾನು ಸರಿಸಮಾನವಾಗಿ ಒಡನಾಟ ಸಾಧ್ಯವಾದಲ್ಲಿ ಮಾತ್ರವೇ ಸ್ವಾತಂತ್ರ್ಯವು ದೃಢಗೊಳ್ಳುತ್ತದೆ.

ಶಾಂತಿಯ ಉಪಾಯಗಳು:

ಭಾರತವು ಎಂದಿಗೂ ಅಕ್ರಮಣಕಾರಿ ನಿತಿ ಅನುಸರಿಸಿಲ್ಲ. ಕೆಲವೊಮ್ಮೆ ಆತ್ಮರಕ್ಷಣೆಗಾಗಿ ಅವ್ಯವಸ್ಥಿತ ಅಥವಾ ಅರೆ ವ್ಯವಸ್ಥಿತ ರೀತಿಯಲ್ಲಿ ಪ್ರತಿಭಟನೆಯನ್ನು ಯಶಸ್ವಿಯಾಗಿ ನಡೆಸುವುದರ ಮೂಲಕ ಭಾರತವು ಶಾಂತಿಸ್ಥಾಪನೆಯನ್ನು ಮಾಡಬಹುದು.ಗಾಂಧಿಯವರ ಅಭಿಪ್ರಾಯದಂತೆ ಭಾರತವು ಸತ್ಯವನ್ನು ಬಲಿಕೊಟ್ಟು ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕಿಂತ ಅದು ನಶಿಸುವುದೇ ಒಳಿತೆಂದಿದ್ದಾರೆ.ಇಂಗ್ಲೆಂಡ್ ಭಾರತದ ಸುಲಿಗೆಯನ್ನು ತ್ಯಜಿಸಿದಾಗ ಅದು ಉಳಿದ ರಾಷ್ಟ್ರಗಳ ಸುಲಿಗೆಯನ್ನೂ ನಿಲ್ಲಿಸುತ್ತದೆ. ಭಾರತವು ಎಂದಿಗೂ ವಿಶ್ವಶಾಂತಿಯನ್ನೇ ಬಯಸುತ್ತದೆ. ಹಾಗೂ ರಕ್ತಪಾತವನ್ನು ಬಯಸುವುದಿಲ್ಲ.

ಭಾರತದ ಸ್ವಾತಂತ್ರ್ಯದ ಅರ್ಥ:

ಭಾರತದ ಸ್ವಾತಂತ್ರ್ಯವು ಶಾಂತಿ ಮತ್ತು ಯುದ್ಧದ ಬಗ್ಗೆ ಜಗತ್ತಿನ ಮನೋಭಾವದಲ್ಲಿ ಕ್ರಾಂತಿ ಉಂಟುಮಾಡಬೇಕು. ದುರ್ಬಲ ಜನಾಂಗಗಳು ಪಾಶ್ವಾತ್ಯ ಶೋಷಣೆಯ ಮೂಲಕ ವಿಮೋಚನೆ ಜನಾಂಗಗಳು ಪಾಶ್ವಾತ್ಯ ಶೋಷಣೆಯ ಮೂಲಕ ವಿಮೋಚನೆ ಸಾಧಿಸುವ ಗುರಿ ಫಲಿಸಿದಾಗ ಸ್ವಾತಂತ್ರ್ಯವು ಪ್ರಬಲಗೊಳ್ಳುತ್ತದೆ. ಸ್ವಾರ್ಥವನ್ನು ಮೆಟ್ಟನಿಂತು ಒಗ್ಗೂಡಿ ಶ್ರಮಿಸಿದಾಗ ಸ್ವಾತಂತ್ರ್ಯವು ತಾರ್ಕಿಕವಾದ ವಸ್ತುಸ್ಥಿತಿಗೆ ಸಮ್ಮತಿಸುತ್ತದೆ. ಅದು ಪ್ರೇರಣಾ ಪೂರಕವಾದ ಮತ್ತು ಸ್ಫೂರ್ತಿದಾಯಕವೂ ಆಗಿರುತ್ತದೆ.

ಅಂತಾರಾಷ್ಟ್ರೀಯ ಸಹಕಾರ:

ರಾಷ್ಟ್ರ-ರಾಷ್ಟ್ರಗಳ ನಡುವೆ ಪರಸ್ಪರ ಬಾಂಧವ್ಯವು ಸಹಕಾರ ಮನೋಭಾವನೆಯನ್ನು ಗಟ್ಟಿಗೊಳಿಸುತ್ತದೆ. ಅಂತಾರಾಷ್ಟ್ರೀಯ ಸಹಕಾರವು ಉತ್ತಮಗೊಂಡಲ್ಲಿ ನಾಗರಿಕ ಸಮಾಜ ಅದರ್ಸ ಬೆನ್ನೆಲುಬುವಾಗಿರುತ್ತದೆ.ಆದರೆ ಸಹಕಾರಕ್ಕೆ ಸಹಕಾರ ಯೋಗ್ಯವಾದ ಮುಕ್ತ ರಾಷ್ಟ್ರಗಳು ಅವಶ್ಯಕ.

ಶೋಷಿತ ಜನಾಂಗಗಳ ಸ್ವಾತಂತ್ರ್ಯ:

ಜನತೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟಗಳು ಎಲ್ಲಿ ನಡೆಯುತ್ತಿರುತ್ತದೋ ಅಲ್ಲಿ ಶೋಷಣೆಯ ವಿಕಾರತೆ ಎದ್ದು ಕಾಣುತ್ತದೆ. ಭಾರತದ ಸ್ವಾತಂತ್ರ್ಯವು ಎಲ್ಲ ಶೋಷಿತ ಜನಾಂಗಗಳಿಗೂ ಅತಿ ಸಮೀಪದಲ್ಲಿದೆ. ವರ್ಣೀಯರ ಮುಷ್ಟಿಯಲ್ಲಿ ರಾಷ್ಟ್ರದ ಸ್ವಾತಂತ್ರ್ಯ ಹದಗೆಡಬಾರದು.ಆದರೆ ಇನ್ನು ಮುಂದೆ ಶೋಷಿತ ಜನಾಂಗಗಳನ್ನು ಶೋಷಿಸುವಂತಿಲ್ಲ ಎಂದು ಗಾಂಧಿಯವರು ಅಭಿಪ್ರಾಯಪಡುತ್ತಾರೆ. ಭ್ರಾತೃತ್ವ ಭಾವನೆಯ ಅಳವಡಿಕೆಯಲ್ಲಿಯೇ ಪ್ರಜಾಪ್ರಭುತ್ವದ ಸಾರವು ಅಡಗಿದೆ ಸರ್ವರ ಸಾಮಾನ್ಯ ಒಳಿತಿಗಾಗಿ ನಡೆಯುವ ಸೇವೆಯಲ್ಲಿ ನಾನಾ ಜನವರ್ಗಗಳ ಇಡೀ ಭೌತಿಕ, ಆರ್ಥಿಕ ಹಾಗೂ ಆಧ್ಯಾತ್ಮಿಕ ಸಂಪನ್ಮೂಲಗಳನ್ನು ಸಜ್ಜುಗೊಳಿಸುವ ಕಲೆ ಮತ್ತು ವಿಜ್ಞಾನ ಎಂದೇ ಅರ್ಥವಾಗಬೇಕು.

ಶಿಸ್ತು:

ಸ್ವಾತಂತ್ರ್ಯವು ಶಿಸ್ತು & ನಮ್ರತೆಯನ್ನು ಪಡೆದಿರಬೇಕು ಶಿಸ್ತುಬದ್ಧ ಪ್ರಜಾಪ್ರಭುತ್ವ ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚು ಮಾನ್ಯತೆ ಪಡೆದಿದೆ. ಮೂಢನಂಬಿಕೆ, ಅಜ್ಞಾನಗಳಿಂದ ಕೂಡಿದ ಪ್ರಜಾಪ್ರಭುತ್ವ ಸ್ವಯಂ ನಾಶಗೊಳ್ಳುತ್ತದೆ.

ವ್ಯಕ್ತಿಯ ಜವಾಬ್ದಾರಿ :

ಪ್ರತಿಯೊಂದು ಸುಧಾರಣೆಯೂ ದಯಾಧರ್ಮದಂತೆ ತನ್ನಿಂದಲೇ ಶುರುವಾಗಬೇಕು. ಸರ್ಕಾರದ ಸಾಮಜಿಕ ನಿರ್ಧಾರದಿಂದ ವ್ಯಕ್ತಿಯ ನಿರ್ಧಾರವು ನಿಯಂತ್ರಿತವಾಗಿರುತ್ತದೆ. ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ಸಹ ಸರ್ಕಾರವೇ ನ್ಯಾಯ ದೊರೆಕಿಸಿಕೊಡಲು ಅವಕಾಶ ಮಾಡಿಕೊಡುಬೇಕು.

ಪರೀಕ್ಷೆ:

ಮಾನವ ಸೃಷ್ಟಿಯ ಅಥವಾ ದೈವದತ್ತ ನಿಯಮಗಳೆಲ್ಲವನ್ನೂ ಪರಿಪಾಲಿಸುವ ಗುಣವನ್ನು ಹೊಂದಿರುವುದೇ ಪ್ರಜಾಪ್ರಭುತ್ವವಾದಿಯವನ ನಿಜವಾದ ಕರ್ತವ್ಯವಾಗಿದೆ ಪ್ರಜಾಪ್ರಭುತ್ವವಾದಿಯು ನಿಸ್ವಾರ್ಥಿಯಾಗಿರಬೇಕು. ಬಂಡವಾಳವು ತಾನು ವೃದ್ಧಿಸಲು ಕೆಲವು ಶ್ರಮಿಕರನ್ನು ಶೋಷಿಸುತ್ತದೆ.ಶ್ರಮಿಕರ ದುಡಿಮೆಯ ಫಲವಾಗಿ ಒಟ್ಟುಗೂಡುವ ಮೊತ್ತವು ವಿವೇಕದಿಂದ ಪಡೆದುದಾದರೆ ಕೋಟ್ಯಂತರ ಜನರ ಸಂಪತ್ತನ್ನು ಹೆಚ್ಚಿಸುತ್ತದೆ. ಅದರಲ್ಲಿ ಅಡಗಿದೆ ನಿಜವಾದ ಪ್ರಜಾಪ್ರಭುತ್ವ, ನಿಜವಾದ ಪಂಚಾಯತಿ ರಾಜ್ಯ.

ಪ್ರಜಾಪ್ರಭುತ್ವ ದಲ್ಲಿ ಪ್ರಾತಿನಿಧ್ಯ:

ಪ್ರಜಾಪ್ರಭುತ್ವ ರಕ್ಷಣೆ ಮಾಡಲು ಜನರು ತೀವ್ರ ರೀತಿಯ ಸ್ವಾತಂತ್ರ್ಯ ಭಾವನೆಯನ್ನು ಪಡೆದಿರಬೇಕು ಹಾಗೂ ಪ್ರತಿನಿಧಿಗಳನ್ನು ಆರಿಸುವಾಗ ನ್ಯಾಯಯುತ ತೀರ್ಮಾನ ಕೈಗೊಳ್ಳಬೇಕು ಪ್ರತಿಯೊಬ್ಬ ವ್ಯಕ್ತಿಯೂ ರಾಷ್ಟ್ರದ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದು ಪ್ರಜಾಪ್ರಭುತ್ವ ದ ಮೂಲತತ್ತ್ವವಾಗಿದೆ. ಜನತಾ ಪ್ರತಿನಿಧಿಗಳು ಜನರ ಬೇಡಿಕೆಗಳಿಗೆ ರೂಪುಕೊಟ್ಟು ಅದು ತಿದ್ದಿಸುವಂತೆ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಗ್ರಾಮದ ಜನರು ತಳಮಟ್ಟದಿಂದ ನಡೆಸುವ ಕಾರ್ಯವಾಗಿರಬೇಕು.

ಜನತೆ:

ಪ್ರಜಾಪ್ರಭುತ್ವ ದಲ್ಲಿ ಜನತೆಯ ದೃಢಸಂಕಲ್ಪವೇ ಆಳಬೇಕು. ನಮ್ಮ ಸರ್ಕಾರವು ಜನತೆಯಿಂದ ಶಕ್ತಿಯನ್ನು ಪಡೆದುಕೊಳ್ಳು ಬೇಕಾಗುತ್ತದೆ ಹಾಗೂ ಅಧಿಕಾರಪೀಠದಲ್ಲಿ ಕೂಡಿಸಿರುವ ಪ್ರತಿನಿಧಿಗಳೊಂದಿಗೆ ಸಂಪರ್ಕದಲ್ಲಿದ್ದುಕೊಳ್ಳುವುದು ಜನತೆಗೆ ಬಹು ಅವಶ್ಯಕವಾಗಿದೆ.

ಬಹುಸಂಖ್ಯಾತರು, ಅಲ್ಪಸಂಖ್ಯಾತರು:

ಅಲ್ಪಸಂಖ್ಯಾತರು, ಬಹುಸಂಖ್ಯಾತರ ಇತರ ಸೌಲಭ್ಯವನ್ನು ಮುಕ್ತ ಅಭಿಪ್ರಾಯದ ಮೂಲಕ ಇತರರಿಗೂ ವಿಸ್ತರಿಸಬೇಕು. ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ಕಡೆಗಣಿಸಬಾರದು. ಆದ್ದರಿಂದ ಅಲ್ಪಸಂಖ್ಯಾತರು ಬಹುಸಂಖ್ಯಾತರಿಗಿಂತ ಭಿನ್ನರೀತಿಯಲ್ಲಿ ನಡೆಯಲು ಹಕ್ಕಿದೆ.

ಅಸಹನೆ:

ನಮ್ಮಲ್ಲಿ ಸಹನೆಯಿಲ್ಲದಿದ್ದಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಇತ್ಯರ್ಥಗೊಳಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೂ ಪ್ರಜಾಪ್ರಭುತ್ವದ ವಿಕಸನ ಸಾಧ್ಯವಿಲ್ಲ. ಅಸಹನೆಯು ಒಂದು ಅಭ್ಯಾಸವಾಗಿ ಬಿಟ್ಟರೆ ನಾವು ಸತ್ಯವನ್ನು ಕಳೆದುಕೊಳ್ಳುವ ಅಪಾಯವಿರುತ್ತದೆ. ಮುಕ್ತ ಭಾವನೆಯ ನಮ್ಮಲ್ಲಿರುವ ಸತ್ಯವನ್ನು ಬಲಪಡಿಸುತ್ತದೆ.

ಗಾತ್ರವಲ್ಲ ಗುಣ:

ಬಹುಸಂಖ್ಯಾತರನ್ನು ಗಾತ್ರಕ್ಕೂ ಹಾಗೂ ಅಲ್ಪಸಂಖ್ಯಾತರನ್ನು ಗುಣಕ್ಕೂ ಹೋಲಿಸಿದ್ದಾರೆ. ಅಂದರೆ ಅಲ್ಪಸಂಖ್ಯಾತರಲ್ಲಿ ನಾಯಕನಾಗಿದ್ದರೆ ಪ್ರಾಧಾನ್ಯತೆ ಹೆಚ್ಚಾಗುತ್ತದೆ ಬಹುಸಂಖ್ಯಾತರ ನಾಯಕನಲ್ಲಿ ಗೊಂದಲಮಯ ತೀರ್ಪಿನ ಮೊರೆಹೋಗಿ ವಿಷಯ ಬುಡಮೇಲಾಗುವ ಸಾಧ್ಯತೆಯಿದೆ.

ಸಾರ್ವಜನಿಕ ಅಭಿಪ್ರಾಯ:–

ಸಾರ್ವಜನಿಕ ಅಭಿಪ್ರಾಯವೊಂದೇ ಸಮಾಜವನ್ನು ಶುದ್ಧವಾಗಿ ಆರೋಗ್ಯಕರವಾಗಿ ಇಡಬಲ್ಲದು.ಯಾವ ರಾಷ್ಟ್ರವು ಸಾರ್ವಜನಿಕ ಅಭಿಪ್ರಾಯವನ್ನು ಕಡೆಗಣಿಸುತ್ತದೆಯೋ ಅದು ವಿನಾಶ ಹೊಂದುವುದು ನಿಶ್ಚಿತ. ಆದ್ದರಿಂದ ಪ್ರಜಾಪ್ರಬುತ್ವವು ಸ್ಥಿರವಾಗಿರಬೇಕಾದರೆ ದೀನದಲಿತರ ಏಳ್ಗೆಗೆ ಶ್ರಮಿಸಬೇಕು. ಹಾಗು ಅವರ ಶಿಕ್ಷಣಕ್ಕೆ ಗಮನಹರಿಸಬೇಕು. ಪ್ರಜಾಪ್ರಬುತ್ವವು ಕಾರ್ಯನಿರ್ವಹಿಸುವಂತೆ ಮಾಡಲು ಬೇಕಾದುದು ಅಂಕಿಅಂಶಗಳ ಜ್ಞಾನವಲ್ಲ. ಯುಕ್ತವಾದ ಶಿಕ್ಷಣ ಆದಾಗ್ಯೂ ಸಹ ಸತ್ಯಾಗ್ರಹ,ಉಪಾವಸಗಳು ಸೀಮಿತವಾಗಿ ಕಾರ್ಯನಿರ್ವಹಿಸುತ್ತವೆ.

ಶಾಸನ:–

ಪ್ರಜಾಪ್ರಬುತ್ವದಲ್ಲಿ ಶಾಸನಕ್ಕೆ ಮೊದಲು ತಾಳ್ಮೆಯ ತಿಳುವಳಿಕೆ ಅಗತ್ಯ. ಜನರ ಆಶೋತ್ತರಗಳ ಈಡೇರಿಕೆಗೆ ಶ್ರಮಿಸುವ ನಿಟ್ಟಿನಲ್ಲಿ ಶಾಸನ ರಚನೆಯಾಗಬೇಕು.

ರಾಜಕೀಯ ಕಾರ್ಯ:–

ಸಮಾಜದ ಪ್ರತಿ ಹಂತದಲ್ಲಿಯೂ ರಾಜಾಕೀಯ ಮುಖ್ಯಪಾತ್ರವಹಿಸುತ್ತದೆ.ರಾಜಾಕೀಯ ಸ್ಪರ್ಶವಿಲ್ಲದೆ ಸಾಮಾಜಿಕ ಪ್ರಗತಿ ಅಸಾಧ್ಯ.

ಅಧಿಕಾರದ ಸ್ವರೂಪ:–

ಪ್ರೀತಿ ಆಧಾರಿತ ಅಧಿಕಾರವು ಶಿಕ್ಷೆಯ ಬೆದರಿಕೆಯಿಂದ ಪಡೆದ ಅಧಿಕಾರಕ್ಕಿಂತಲೂ ಸಾವಿರಪಾಲು ಹೆಚ್ಚು ಪರಿಣಮಾಕಾರಿಯೂ ಶಾಶ್ವತವಾದದ್ದೂ ಆಗಿದೆ ರಾಜಕೀಯ ಅಧಿಕಾರವೆಂದರೆ ರಾಷ್ಟ್ರೀಯ ಜೀವನವನ್ನು ನಿಯಂತ್ರಿಸುವ ಸಾಮರ್ಥ್ಯ ಆದರ್ಶ ರಾಜ್ಯವೊಂದರಲ್ಲಿ ರಾಜಕೀಯ ಅಧಿಕಾರವೇ ಇರುವುದಿಲ್ಲ .ಆದ್ದರಿಂದ

ಅತಿಕಡಿಮೆ ಆಡಳಿತ ನಡೆಸುವ ಸರ್ಕಾರವೇ ಅತ್ಯುತ್ತಮವೆನ್ನಲಾಗಿದೆ. ಜನತೆಯೇ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದಲ್ಲಿ ಪ್ರಜಾಪ್ರಬುತ್ವವ್ಯವಸ್ತೆ ನಾಮಕವಸ್ಥೆಯಾಗುವ ಸಾಧ್ಯತೆಯಿದೆ.

ಸರ್ವಾಧಿಕಾರ:-

ಸಮಾಜದಲ್ಲಿ ರಾಜಕೀಯ ದಬ್ಬಾಳಿಕೆಯೇ ಸರ್ವಾಧಿಕಾರವಾಗಿದೆ. ಸರ್ವಾಧಿಕಾರವು ಅವ್ಯವಸ್ಥೆಯ ಲಕ್ಷಣವನ್ನು ಸೂಚಿಸುತ್ತದೆ .ಹಾಗು ಇದು ಪ್ರಜಾಪ್ರಬುತ್ವವ್ಯವಸ್ತೆಯಲ್ಲಿ ಮಾರಕವಾದ ವಿಲಕ್ಷಣ ವ್ಯವಸ್ಥೆಯಾಗಿದೆ ಸರ್ವಾಧಿಕಾರ ಧೋರಣೆ ತಳೆದಾಗ ಪ್ರತಿಪಕ್ಷಗಳು ಅದನ್ನು ತಡೆಯುತ್ತದೆ.

ದೊಂಬಿ ಆಡಳತ:-

ದೊಂಬಿಯಲ್ಲಿ ಪಾಲ್ಗೊಳ್ಳುವ ಜನರಿಗೆ ಮುಂದಾಲೋಚನೆ ಇರುವುದಿಲ್ಲ. ನಾಯಕತ್ವಕ್ಕಾಗಿ ಹಾತೊರೆಯುವ ಜನರಿಗೆ ಮೊದಲು ನಾವು ತರಬೇತಿ ಮಾಡಬೇಕು.ಹೀಗೆ ತರಬೇತಿ ನೀಡುವ ಮೂಲಕ ದೊಂಬಿ ಜನರ ಆಡಳಿತದಿಂದಲೇ ಪ್ರಜಾಪ್ರಬುತ್ವವ್ಯವನ್ನು ರೂಪಿಸಬುಹುದು. ಸಂಘಟನೆಗಳು ಏನೇ ಆಗಲಿ ಸತ್ವಯುತ ಕಾರ್ಯವನ್ನು ಮಾಡುವಲ್ಲಿ ಧೈರ್ಯವನ್ನು ತೋರಿಸಬೇಕು. ದೊಂಬಿಯ ನಾಯಕನು ದುರಾಡಳಿತ ಪ್ರಾವೃತ್ತಿಯವನಾಗಿದ್ದಲ್ಲಿ ಜನರನ್ನು ಅಧೋಗತಿಗೆ ಇಳಿಸುವ ಸಾಧ್ಯತೆಯಿರುತ್ತದೆ. ದೊಂಬಿ ಆಡಳಿತದಲ್ಲಿ ಉತ್ತಮ ನಯಕನೇ ಸರ್ವಾಧಿಕಾರಿಯಾಗಿ ಜನತೆಗೆ ವಿಷಕಾರಿಯಾದ ತೀರ್ಪನ್ನು ನೀಡಲೂಬಹುದು.

ಸೇನಾ ಪ್ರವೃತ್ತಿ:-

ಸರ್ಕಾರವೇ ಪ್ರಾರಂಭಿಸದ ಅಥಾವ ಜನರೇ ಪ್ರಾರಂಭಿಸದ ಭಯೋತ್ಪಾದನೆಯ ನಡುವೆ ಪ್ರಜಾಪ್ರಭುತ್ವದ ಭಾವನೆಯನ್ನು ಸ್ಥಾಪಿಸಲು ಸಾಧ್ಯವಿಲ್ಲ ಕೆಲವು ವಿಚಾರಗಳಲ್ಲಿ ಜನರೇ ಪ್ರಾರಂಭಿಸಿದ ಭಯೋತ್ಪಾದನೆಯು ಸರ್ಕಾರಿ ಭಯೋತ್ಪಾದನೆಗಿಂತಲೂ ಪ್ರಾಜಾಸತ್ತಾತ್ಮಕ ಭಾವನೆಯ ಬೆಳವಣಿಗೆಗೆ ಹೆಚ್ಚು ವಿರುದ್ಧವಾಗಿರುತ್ತದೆ. ಸರ್ಕಾರಿ ಭಯೋತ್ಪಾದನೆಯು ಪ್ರಜಾಪ್ರಭುತ್ವ ಭಾವನೇಯನ್ನು ಬಲಪಡಿಸುತ್ತದೆ. ಅದೇ ಜನತೆ ಪ್ರಾರಂಭಿಸಿದ ಭಯೋತ್ಪಾದನೆಯು ಅದನ್ನು ನಾಶಪಡಿಸುತ್ತದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೇನಾಸಹಾಯವು ಜನತೆಯನ್ನು ಹೀನಾಯ ಸ್ಥಿತಿಗೆ ಇಳಿಸುತ್ತದೆ.

ಪ್ರಜಾಪ್ರಭುತ್ವ ಹಾಗೂ ಅಹಿಂಸೆ:-

ಪ್ರಸ್ತುತದಲ್ಲಿರುವ ಸರ್ಕಾರಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮದೇ ಆದ ಸರ್ವಾಧಿಕಾರಿ ಆಡಳಿತವನ್ನು ನಡೆಸುವಂತಾಗಿದೆ. ಉತ್ತಮ ಪ್ರಜಾಪ್ರಭುತ್ವವಾದಿಯು ಅಹಿಂಸಾ ಮಾರ್ಗದಿಂದಲೇ ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬರುತ್ತಾನೆ. ಅಷ್ಟೇ ಅಲ್ಲ, ಅದೇ ಅಹಿಂಸಾ ವಿಧಾನದಿಂದ ತನ್ನ ದೇಶದ, ಕೊನೆಗೆ ಇಡೀ ಮಾನವ ಕುಲದ ರಕ್ಷಣೆಯನ್ನು ಮಾಡುತ್ತಾನೆ. ನಿಷ್ಕಳಂಕದ ಅಹಿಂಸೆಯ ಆಡಳಿತವೊಂದರಲ್ಲಿ ಮಾತ್ರವೇ ವ್ಯಕ್ತಿ ಸ್ವಾತಂತ್ರ್ಯವು ಮಾನ್ಯತೆ ಪಡೆಯಬಹುದು. ನಿಜವಾದ ಪ್ರಜಾಪ್ರಭುತ್ವ ಅಹಿಂಸಾ ತತ್ವದ ಪರಿಣಾಮವಾಗಿದೆ. ಪರಿಪೂರ್ಣವಾದಂತಹ ಅಹಿಂಸೆಯ ಹಿನ್ನಲೆ ಇಲ್ಲದೆ ಯಾವ ಪರಿಪೂರ್ಣವಾದ ಪ್ರಜಾಪ್ರಭುತ್ವವೂ ಸಾಧ್ಯವಿಲ್ಲ.

ಪ್ರಜಾಪ್ರಭುತ್ವ ಪೂರ್ವ ಹಾಗು ಪಶ್ಚಿಮ:-

ಭಾರತವು ಯಥಾರ್ಥವಾದ ಮಾದರಿಯನ್ನು ರೂಪಿಸಬೇಕಾದಲ್ಲಿ ಹಿಂಸೆ ಅಥಾವ ಅಸತ್ಯದೂಂದಿಗೆ ರಾಜಿ ಮಾಡಿಕೂಳ್ಳಬಾರದು. ಪ್ರಜಾಪ್ರಭುತ್ವವನ್ನು ಹಿಂಸಾರಹಿತವನ್ನಾಗಿ ಮಾಡಲು ಭಾರತವು ಯತ್ನಿಸುತ್ತಿದೆ .

ಅಸ್ಪೃಶ್ಯತಾ ನಿವಾರಣೆ,ಪಾನನಿರೋಧ,ಕೋಮುವಾರು ಸೌಹಾರ್ದತೆಗಳು ಯಶಸ್ವಿಯಾದಲ್ಲಿ ಅಹಿಂಸಾತ್ಮಕ ಪ್ರಜಾಪ್ರಭುತ್ವವನ್ನು ನಾವು ಎದುರು ನೋಡಲು ಸಾಧ್ಯ.ಆದರೆ ಪ್ರಸ್ತುತದಲ್ಲಿ ಇವುಗಳೆಲ್ಲ ದೀನದಲಿತರ ಉದ್ಧಾರಕ್ಕಾಗಿ ಶ್ರಮಿಸುತ್ತಿರುವುದರಿಂದ ನಿರ್ದಿಷ್ಟ ಗುರಿ ಮುಟ್ಟುವಲ್ಲಿ ಹಿಂದೇಟು ಹಾಕುವಂತಾಗಿದೆ.

1.8 ಸತ್ಯ ಮತ್ತು ಅಹಿಂಸೆ

1.1 ಸತ್ಯ: ಮಹಾತ್ಮ ಗಾಂಧೀಜಿಯವರ ಸತ್ಯದ ಪರಿಕಲ್ಪನೆಯು ಸ್ವಾಭಾವಿಕವಾಗಿ ಹೊರಹೊಮ್ಮಿರುವಂತಹುದು. ಸತ್ಯ ಎಂಬುದು ವಾಸ್ತಾವಿಕ ಸಂಗತಿ. ಸತ್ಯ ನೈಸರ್ಗಿಕವಾದುದಾಗಿದ್ದು ವ್ಯಕ್ತಿಯು ಜೀವನದಲ್ಲಿ ಅಳವಡಿಸಲೇಬೇಕಾದಂತಹ ಅವಶ್ಯಕತೆ ಎಂದು ಅಭಿಪ್ರಾಯಪಟ್ಟಿದ್ದರು. ಸತ್ಯ ಅತ್ಯಂತ ಮೌಲ್ಯಯುತವಾದುದು. ಸತ್ಯವು ವ್ಯಕ್ತಿ ಮತ್ತು ರಾಜ್ಯಕ್ಕೆ ಕಾರ್ಯಸಾಧನೆಗೆ ತಳಹದಿಯಾಗಿದೆ. ಸತ್ಯವೇ ಆತ್ಮ ಎಂದಿರುವ ಗಾಂಧೀಜಿಯವರು ಸತ್ಯವೇ ದೇವರು ಎಂದು ಹೇಳಿದ್ದಾರೆ. ದೇವರು ಎಂದರೆ ವ್ಯಕ್ತಿಯನ್ನು ನಡೆಸುವಂತೆ ಪ್ರೇರೆಪಿಸುವ ಶಕ್ತಿಯನ್ನು ಹೊಂದಿದ್ದು, ದೇವರು ಎಂದರೆ ಸತ್ಯವೇ ಆಗಿದೆ. ಆದುದರಿಂದಲೇ ಗಾಂಧೀಜಿಯವರು ಸತ್ಯ ಮತ್ತು ಅಹಿಂಸೆಯನ್ನು ಬಲಿಕೊಟ್ಟು ಪಡೆಯುವ ಸ್ವಾತಂತ್ರ್ಯ ನನಗೆ ಬೇಕಿಲ್ಲ ಎಂದಿದ್ದರು. ಈ ಮೂಲಕ ಸತ್ಯ ಮತ್ತು ಅಹಿಂಸೆಯ ಬಗ್ಗೆ ಗಾಂಧೀಜಿಯವರಿಗಿದ್ದ ಅಪಾರ ಭಕ್ತಿ ಎಂತಹುದು ಎಂಬುದು ಗೊತ್ತಾಗುತ್ತದೆ.

ಗಾಂಧೀಜಿಯವರು ಸತ್ಯವು ವ್ಯಕ್ತಿಯ ಜೀವನ ಕ್ರಮದ ಮೂಲತತ್ವವಾಗಬೇಕು ಎಂದು ಹೇಳುತ್ತಿದ್ದರು. ಹಾಗೂ ಸತ್ಯಾಗ್ರಹಿಗೆ ಸತ್ಯದ ಮೌಲ್ಯದ ಬಗ್ಗೆ ತಿಳಿಹೇಳಲು ಪ್ರಯತ್ನಿಸಿದ್ದರು. ಮಾನವರಲ್ಲಿ ನೈತಿಕತೆ ಮಾರ್ಗ ಹಾಗೂ ನೈತಿಕ ಮೌಲ್ಯದ ಬಗ್ಗೆ ಅರಿವು ಮೂಡಿಸಲು ಸತ್ಯ ಮತ್ತು ಅಹಿಂಸೆಯ ತತ್ವಗಳನ್ನು ಪ್ರತಿಪಾದಿಸಿದ್ದ ಗಾಂಧೀಜಿ ಅಹಿಂಸೆಯ ಸತ್ಯ ಅದೇ ಸತ್ಯದ ಆತ್ಮ ಹಾಗೂ ಪ್ರತಿಫಲ. ಸತ್ಯ ಮತ್ತು ಅಹಿಂಸೆಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಇದ್ದರು, ಸತ್ಯಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ಸತ್ಯರಹಿತ ನೀತಿ ಅನೈತಿಕತೆಯಿಂದ ಕೂಡಿರುತ್ತದೆ. ಸತ್ಯವು ಸರ್ವಕಾಲಿಕವಾದುದು ಹಾಗೂ ಸತ್ಯಕ್ಕಾಗಿ ಅಹಿಂಸೆಯನ್ನು ತ್ಯಜಿಸಬಹುದಾದರು ಅಹಿಂಸೆಗಾಗಿ ಸತ್ಯವನ್ನು ತ್ಯಜಿಸುವಂತಿಲ್ಲ ಎಂದು ಹೇಳುತ್ತಿದ್ದರು. ಹೀಗಾಗಿ ಗಾಂಧೀಜಿಯವರಿಗೆ ಸತ್ಯ ಧ್ಯೇಯವೇ ವಿನಹ ಸಾಧನವಾಗಿರಲಿಲ್ಲ. ಆದರೆ ಅಹಿಂಸೆ ಗಾಂಧೀಜಿಯವರಿಗೆ ಸಾಧನವಾಗಿತ್ತು.

ಅಹಿಂಸೆ: ರಾಜಕೀಯ ಚಿಂತನೆಗೆ ಮತ್ತು ಸಾಮಾಜಿಕ ತತ್ವಶಾಸ್ತ್ರಕ್ಕೆ ಗಾಂಧೀಜಿಯವರ ಮತ್ತೊಂದು ಕೊಡುಗೆಯೆಂದರೆ ಅಹಿಂಸೆಯ ಪರಿಕಲ್ಪನೆ. ಗಾಂಧೀಜಿಯವರ ಅಹಿಂಸೆಯ ಪರಿಕಲ್ಪನೆಯ ಬಗ್ಗೆ ಅಚಲವಾದ ನಂಬಿಕೆಗಳನ್ನು ಹೊಂದಿದ್ದರು. ತಮ್ಮ ಜೀವನದುದ್ದಕ್ಕೂ ಅಹಿಂಸೆಯನ್ನು ಪ್ರತಿಪಾದಿಸಿದರು, ಬೋಧಿಸಿದರು ಮತ್ತು ತಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡರು. ಮಹಾತ್ಮ ಗಾಂಧೀಜಿಯವರು ರಾಜಕೀಯ ಚಿಂತನೆಯಲ್ಲಿ ಅಹಿಂಸೆಯು ಅತ್ಯಂತ ಪ್ರಮುಖ ಲಕ್ಷಣವಾಗಿದೆ. ಸತ್ಯಾಗ್ರಹದಲ್ಲಿ ಅಹಿಂಸೆಯು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಸತ್ಯವು ಸ್ವಯಂದಂಡನೆ ಮತ್ತು ಅಹಿಂಸೆ ಪಾತ್ರವನ್ನು ನಿರ್ವಹಿಸುತ್ತದೆ. ಸತ್ಯವು ಸ್ವಯಂದಂಡನೆ ಮತ್ತು ಅಹಿಂಸೆಯ ಮೂಲಕ ಸಾಧಿಸಿವಂತಹುದು ಅಥವಾ ಶೋಧಿಸಿವಂತಹುದಾಗಿದೆ ಎಂಬುದು ಇವರ ಅಭಿಮತ. ಗಾಂಧೀಜಿಯವರು ಅಹಿಂಸೆಗೆ ವಿಶಾಲವಾದ ವ್ಯಾಪ್ತಿಯ ಅರ್ಥವನ್ನು ನೀಡಿದ್ದಾರೆ. ಅಹಿಂಸಾ ಎಂಬ

ಸಂಸ್ಕೃತ ಪದವನ್ನು ಹಿಂಸೆಗೆ ವಿರೋಧವಾಗಿ ಸಾಮಾನ್ಯವಾಗಿ ಬಳಸುತ್ತಿದ್ದರು. ಹಾಗೂ ಅಹಿಂಸೆಯನ್ನು ನಕಾರಾತ್ಮಕ ಮತ್ತು ಸಕಾರಾತ್ಮಕಗಳೆರಡರ ಅರ್ಥದಲ್ಲಿ ಬಳಸುತ್ತಿದ್ದರು. ನಕಾರಾತ್ಮಕರ್ಥದಲ್ಲಿ ಅಹಿಂಸೆಯೆಂದರೆ; ವ್ಯಕ್ತಿ ಮತ್ತು ಪ್ರಾಣಿಗಳನ್ನು ಕೊಲೆ ಮಾಡದಿರುವುದು, ಗಾಯಗೊಳಿಸದಿರುವುದು ಹಾಗೂ ತೊಂದರೆ ಕೊಡದಿರುವುದು. ಅಲ್ಲದೆ ಅಹಿಂಸೆ ಎಂದರೆ ಕ್ರಿಯೆ ಮತ್ತು ಭಾಷಾ ವಿಧಾನದ ಮೂಲಕ ಅಂದರೆ ನೋಯಿಸುವ ಭಾಷೆ. ನೋವುಂಟು ಮಾಡುವ ಕೋಪದಿಂದ ವರ್ತಿಸದಿರುವುದು.

ಸಕಾರಾತ್ಮಕ ಅರ್ಥದಲ್ಲಿ ಅಹಿಂಸೆ ಎಂದರೆ; ವಿರೋಧಿಗಳಿಗೆ ಒಳ್ಳೆಯದನ್ನು ಮಾಡುವುದು, ಅಂದರೆ ವಿಶ್ವದಲ್ಲಿನ ಎಲ್ಲಾ ಜೀವಿಗಳ ಬಗ್ಗೆ ಉತ್ತಮ ಅಭಿಪ್ರಾಯವನ್ನು ಹಾಗೂ ನಡಾವಳಿಕೆಯನ್ನು ಹೊಂದಿರುವುದು. ಇದು ಅಂದರೆ ಅಹಿಂಸೆಯು ಸರ್ವಶ್ರೇಷ್ಟವಾದುದು ಹಾಗೂ ಸಾರ್ವತ್ರಿಕ ಪ್ರೀತಿಯು ಆಗಿದೆ. ಅಲ್ಲದೆ ಅಹಿಂಸೆಯ ಸರ್ವಶ್ರೇಷ್ಟ ಕನಿಕರ ಭಾವನೆ, ಸರ್ವಶ್ರೇಷ್ಟವಾದ ಕನಿಕರ ಭಾವನೆ, ಸರ್ವಶ್ರೇಷ್ಠವಾದ ಸ್ವಯಂದಂಡನೆಯೇ ಆಗಿದೆ ಎಂಬುದು ಗಾಂಧೀಜಿಯವರ ಅಭಿಮತವಾಗಿದೆ. ಅಹಿಂಸೆಯು ಪ್ರತಿಫಲ ನಿರೀಕ್ಷಿಸುವುದು ಅಲ್ಲ. ಹಾಗೂ ಬೇರೆಯವರಿಂದ ಕನಿಕರವನ್ನು ಬಯಸುವಂತಹುದಲ್ಲ. ಗಾಂಧೀಜಿಯವರ ಸತ್ಯಾಗ್ರಹ ಪರಿಕಲ್ಪನೆಯನ್ನು ಲಿಂಕಾಲ್ನ ಎಂಬ ಲೇಖಕ ಗಾಂಧೀಜಿಯವರ ಅಹಿಂಸೆಯು ಯಾರ ವಿರುದ್ಧವೂ ಹಗೆ ಅಥವಾ ದ್ವೇಷಿಸುವುದಲ್ಲ. ಆದರೆ ಎಲ್ಲರನ್ನೂ ಪ್ರೀತಿಸುತ್ತದೆ, ಆದರೆ ಎಲ್ಲರ ಚಾರಿಟಿಯನ್ನು ಬಯಸುತ್ತದೆ ಎಂದಿದ್ದಾರೆ. ಗಾಂಧೀಜಿಯವರು ಅಹಿಂಸೆಯು ಮಾನವ ಹಾಗೂ ಎಲ್ಲ ಜೀವಿಗಳನ್ನು ಪ್ರೀತಿಸಿವಂತಹುದು, ಹಾಗೂ ಬಲ ಪ್ರಯೋಗಕ್ಕೂ ಮಿಗಿಲಾದ ಅಸ್ತ್ರವೆಂದರೆ ಅಹಿಂಸೆ.

ಮಾನವ ಜೀವನದಲ್ಲಿ ಮುಷ್ಕರ ಮತ್ತು ಹೋರಾಟ ಎಂಬುವುದು ಒಂದು ಬದುಕು ಹಾಗೂ ಸ್ವಭಾವ. ಹಾಗೆಯೇ ಅತ್ಯಂತ ಕೆಳ ಮಟ್ಟದ ಪ್ರಾಣಿಗಳಲ್ಲೂ ಪ್ರೀತಿ ಎಂಬುವುದು ಇದ್ದೇ ಇದೆ ಎಂಬುದು ಗಾಂಧೀಜಿಯವರ ವಾದ. ಅದರಂತೆ ಪ್ರತೀ ಮಾನವನೂ ಸಹ ಮಾನವೀಯ ಪ್ರೀತಿಗೆ ಪ್ರತಿಸ್ಪಂದಿಸುವುದು ಅವಶ್ಯ. ಆದ್ದರಿಂದ ಪ್ರೀತಿ ಅತ್ಯಂತ ಶ್ರೇಷ್ಟವಾದುದು. ಶಸ್ತ್ರಗಳನ್ನು ಹೊಂದಿದ್ದು, ಉಪಯೋಗಿಸುವವರು ಸಹ ಶಸ್ತ್ರ ಪ್ರಯೋಗ ನಿಶ್ಪ್ರಯೋಜಕ ಎಂದೇ ಮನಗಾಣುತ್ತಾರೆ. ಆದರೆ ಶಸ್ತ್ರ ಪ್ರಯೋಗದಿಂದ ಸಾಧಿಸಲಾಗದ್ದನ್ನು ಪ್ರೀತಿ-ಅಹಿಂಸೆಯ ಅಸ್ತ್ರಗಳಿಂದ ಸಾಧಿಸಬಹುದು ಎಂಬುದು ಗಾಂಧೀಜಿಯವರ ಪ್ರಬಲವಾದ ನಂಬಿಕೆಯಾಗಿತ್ತು. ಆದ್ದರಿಂದಲೇ ಗಾಂಧೀಜಿಯವರು ಅಹಿಂಸೆ ಮತ್ತು ಅತ್ಯಂತ ಶಕ್ತಿಯುತ ಅಸ್ತ್ರವೆಂದೇ ನಂಬಿದ್ದರು ಹಾಗೂ ಅಹಿಂಸೆಯು ಧೈರ್ಯವಂತರಿಗೆ ಶೋಭಿಸುವಂತಹುದೇ ವಿನಃ ಹೇಡಿಗಳಿಗಲ್ಲ. ಹೇಡಿಗಳು ಹಾಗೂ ದುರ್ಬಲ ಮನಸ್ಸಿನವರು ಎಂದಿಗೂ ಸ್ವಯಂ ದಂಡನೆಗೆ ಒಳಪಡುವುದಿಲ್ಲ. ಯಾರೂ ಧೈರ್ಯಶಾಲಿಗಳೋ ಹಾಗೂ ಉನ್ನತ ಪ್ರಭಲ ಮನಸ್ಸುಳ್ಳವರೋ ಅವರು ಮಾತ್ರವೇ ಅಹಿಂಸೆಯನ್ನು ಅನುಸರಿಸಲು ಸಾಧ್ಯ. ಆದ್ದರಿಂದಲೇ ಗಾಂಧೀಜಿಯವರು ಪದೇ ಪದೇ ಅಹಿಂಸೆಯು ಹೇಡಿಗಳನ್ನು ಸೃಷ್ಟಿಸುವುದಿಲ್ಲ. ಬದಲಿಗೆ ಧೈರ್ಯವಂತರನ್ನು ಸೃಷ್ಟಿಸುತ್ತದೆ ಎಂದೇ ಹೇಳುತ್ತಿದ್ದರು.

ಮಹಾತ್ಮ ಗಾಂಧೀಜಿಯವರು ಅಹಿಂಸೆಯ ತತ್ವವು ಎಲ್ಲಾ ಧರ್ಮಗಳ ಆತ್ಮ ಅಥವಾ ಹೃದಯವಿದ್ದಂತೆ ಎಂದು ಭಾವಿಸಿದ್ದರು. ಅಹಿಂಸೆ ಸತ್ಯವೇ ಆಗಿದ್ದು ಇದೊಂದು ನೈಸರ್ಗಿಕ ಹಣ್ಣು ಇದ್ದಂತೆ ಎಂದಿದ್ದು, ಸತ್ಯ ಮತ್ತು ಅಹಿಂಸೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಪ್ರತಿಪಾದಿಸುತ್ತಿದ್ದರು. ಹಾಗೂ ಸತ್ಯ

ಮತ್ತು ಅಹಿಂಸೆಯನ್ನು ಪ್ರತ್ಯೇಕಗೊಳಿಸಲು ಸಾಧ್ಯವೇ ಇಲ್ಲ ಎಂದೇ ನಂಬಿದ್ದರು. ಅಹಿಂಸೆಯನ್ನು ಸತ್ಯದಿಂದ ಬೇರ್ಪಡಿಸಿದರೆ ಸತ್ಯವನ್ನು ನಾಶಪಡಿಸಿದಂತೆ. ಸತ್ಯ ಶೋಧನೆ ಮತ್ತು ಸಂಪೂರ್ಣ ಸತ್ಯ ಕಂಡುಹಿಡಿಯುವ ಪ್ರಯತ್ನದಲ್ಲಿ ಅಹಿಂಸೆ ಎಂಬುವುದು ಒಡವೆ ಇದ್ದಂತೆ ಎಂದೇ ಪ್ರಭಲವಾಗಿ ನಂಬಿದ್ದರು. ಗಾಂಧೀಜಿಯವರು ಮುಂದುವರಿದು ಅಹಿಂಸೆಯ ಪರಿಕಲ್ಪನೆಯನ್ನು ವಿವರಿಸುತ್ತಾ ಅಹಿಂಸೆ ಎಂಬುದು ಮಾನವ ಜೀವ ಜಂತುಗಳ ಕಾನೂನು, ಆದರೆ, ಅಹಿಂಸೆಯು ಮೃಗ-ಪಶುಗಳ ಕಾನೂನು ಎಂದು ಬಣ್ಣಿಸಿದ್ದರು. ಹಿಂಸೆಯನ್ನು ಗಾಮಧಿಜಿಯವರು ವಿಶ್ವಕ್ಕೆ ಅಹಿಂಸೆ ಎಂಬ ತತ್ವಶಾಸ್ತ್ರಕ್ಕೆ ನೀಡಿದ ಕೀರ್ತಿಗೆ ಪಾತ್ರರಾಗಿದ್ದಾರೆ ಎಂದ ಮಾತ್ರಕ್ಕೆ ದುಷ್ಟ ಶಕ್ತಿಗಳನ್ನು ಗಾಂಧೀಜಿಯವರು ಸಹಿಸುತ್ತಿದ್ದರು ಎಂದರ್ಥವಲ್ಲ. ಹಾಗೂ ಗಾಂಧೀಜಿಯವರು ದುಷ್ಟಶಕ್ತಿಗಳ ವಿರುದ್ದ ಪ್ರಭಲವಾದ ವಿರೋಧ ವ್ಯಕ್ತಪಡಿಸಬೇಕು ಹಾಗೂ ಇವರ ವಿರುಧ್ದ ಹೋರಾಟವನ್ನು ನಡೆಸಬೇಕೇ ವಿನಃ ಸಹಿಸಿಕೊಳ್ಳಬೇಕಾಗಿಲ್ಲ. ಆದರೆ ಈ ದುಷ್ಟ ಶಕ್ತಿಯ ವಿರುದ್ಧ ಸತ್ಯಾಗ್ರಹ ಎಂಬ ಅಸ್ತ್ರದ ಸಹಾಯದಿಂದ ಹೋರಾಟ ನಡೆಸಬೇಕು ಎಂದು ಕರೆ ನೀಡಿದ್ದರು.ಗಾಂಧೀಜಿಯವರು ಅಹಿಂಸೆಯನ್ನು ಸಕಾರಾತ್ಮಕವಾಗಿ ಹೇಳುವುದಾದರೆ ಯಾರನ್ನು ಮಾತು-ಚಿಂತನೆ, ಪದ ಅಧೋಕ್ತಿಯ ಮೂಲಕ ಹಿಂಸಿಸುದಿಲ್ಲ ಅಥವಾ ಘಾಸಿಗೊಳಿಸುವುದಲ್ಲ ಎಂದೇ ಭಾವಿಸಿದ್ದರು. ಅಲ್ಲದೇ ಗಾಂಧೀಜಿಯವರು ಅಹಿಂಸೆಯನ್ನು ನಕಾರಾತ್ಮಕ ಅಸ್ತ್ರವೆಂದೇ ಭಾವಿಸಿರಲಿಲ್ಲ. ಆದರೆ ಇದೊಂದು ಸಕಾರಾತ್ಮಕ ಅಸ್ತ್ರವೆಂದೇ ನಂಬಿದ್ದರು. ಹಾಗೂ ಗರಿಷ್ಟ ಹಿಂಸೆಯನ್ನು ಗರಿಷ್ಟ ಪ್ರಮಾಣದ ಅಹಿಂಸೆಯಿಂದಲೇ ಎದುರಿಸಬೇಕು ಎಂದು ಪ್ರತಿಪಾದಿಸಿದ್ದರು.

ಅಹಿಂಸೆಯ ಆಯಾಮಗಳು: ಗಾಂಧೀಜಿಯವರ ಪ್ರಕಾರ ಅಹಿಂಸೆಯು ಮೂರು ಪ್ರಕಾರಗಳು ಅಥವಾ ವಿಧಗಳು ಅಥವಾ ಆಯಾಮಗಳನ್ನು ಹೊಂದಿದೆ. ಅವುಗಳೆಂದರೆ:

(ಅ) ಮೊದಲನೆಯದಾಗಿ ಅಹಿಂಸೆಯು ಎಂಬುದು ಧೈರ್ಯ. ಇದು ಶಕ್ತಿಯ ಪ್ರದರ್ಶನದ ಮೂಲ. ಅಹಿಂಸೆಯನ್ನು ಅನುಸರಿಸಿದರೆ ಇದೊಂದು ನೋವಿನ ಸಂಗತಿಯಲ್ಲ. ಅನುಸರಿಸಿದರೆ ನೈತಿಕ ಸ್ಥೈರ್ಯ ಹಾಗೂ ಧೈರ್ಯವನ್ನು ಹೆಚ್ಚಿಸುತ್ತದೆ. ಅಹಿಂಸೆಯಿಂದ ಬೆಟ್ಟಗಳನ್ನೂ ಮುಂದೆ ತಳ್ಳಬಹುದು ಎಂಬುದು ಗಾಂಧೀಜಿಯವರ ಅಭಿಮತ. ಅಷ್ಟೇ ಅಲ್ಲ ಜೀವನದಲ್ಲಿ ಬದಲಾವಣೆಯನ್ನು ತರಬಹುದು. ಅಹಿಂಸೆಯಿಂದ ಉತ್ತಮ ಫಲಿತಾಂಶ ಪಡೆಯಬಹುದು ಹಾಗೂ ಒಳ್ಳೆಯದನ್ನು ಸಾದಿಸಬಹುದಾಗಿದೆ ಎಂಬುದೇ ಗಾಂಧೀಜಿಯವರ ವಾದವಾಗಿತ್ತು.

(ಆ) ಎರಡನೆಯದಾಗಿ ಅಹಿಂಸೆಯು ಒಂದು ಪ್ರಯೋಗ ಹಾಗೂ ಉದ್ದೇಶಿತ ಗುರಿಮುಟ್ಟುವ ಪ್ರಯೋಗ ವಿಧಾನವಿದ್ದಂತೆ. ಅಲ್ಲದೆ ಗಾಂಧೀಜಿಯವರು ಅಹಿಂಸೆ ಎಂಬುದು ಇದು ದುರ್ಬಲವಾದ ಅಸ್ತ್ರವೇನಲ್ಲ. ಇದೊಂದು ನೈತಿಕ ಶಕ್ತಿ. ಅಹಿಂಸೆಯು ನಿರ್ದಿಷ್ಟ ಫಲಿತಾಂಶವನ್ನು ನೀಡಬಹುದು. ಆದರೆ ನೈತಿಕ ಧೈರ್ಯವಾಗಿದೆ.

(ಇ) ಮೂರನೆಯದಾಗಿ ಅಹಿಂಸೆಯು ಪ್ರತಿರೋಧದ ಒಂದು ಅಸ್ತ್ರ. ಆದರೆ ಹೇಡಿಗಳ ಅಸ್ತ್ರವೆಂದು ಗಾಂಧೀಜಿಯವರು ಭಾವಿಸಿರಲಿಲ್ಲ. ಹೇಡಿಗಳು ಮತ್ತು ಅಹಿಂಸೆ ಒಂದು ಕಡೆಯಿರಲು ಸಾಧ್ಯವಿಲ್ಲ. ಹೇಡಿಗಳು ಅಪಾಯವನ್ನು ಎದುರಿಸುವುದಿಲ್ಲ. ಹಾಗೂ ದಂಡಿಸುವ ಹಾಗೂ ಅಪಾಯದಿಂದ ಹೇಡಿಗಳು ಓಡಿಹೋಗುತ್ತಾರೆ. ಆದರೆ ಅಹಿಂಸಾವಾದಿಗಳು ಈ ಎರಡರಿಂದ ಓಡಿ ಹೋಗದೆ

ಎದುರಿಸುತ್ತಾರೆ. ಆದ್ದರಿಂದ ಗಾಂಧೀಜಿಯವರು ಧೈರ್ಯವಿಲ್ಲದವರು ಎಂದಿಗೂ ಅಹಿಂಸೆಯನ್ನು ಆಯ್ಕೆಮಾಡಿಕೊಳ್ಳುವುದಿಲ್ಲ.ಆದ್ದರಿಂದ ಹೇಡಿಗಳು ಮಾತ್ರವೇ ಅಸ್ತ್ರವನ್ನು ಆಯ್ಕೆಮಾಡಿಕೊಳ್ಳಬಲ್ಲವರು.

ಗಾಂಧೀಜಿಯವರ ಸತ್ಯಾಗ್ರಹದಲ್ಲಿ ಅಹಿಂಸೆಗೆ ಅತ್ಯಂತ ಪ್ರಾಮುಖ್ಯವಾದ ಸ್ಥಾನ ಹಾಗೂ ಪಾತ್ರವನ್ನು ನೀಡಿದ್ದರು. ಸತ್ಯವು ಸ್ವಯಂ ದಂಡನೆ ಮತ್ತು ಅಹಿಂಸೆಯಿಂದ ಮಾತ್ರವೇ ಶೋಧಿಸಬಹುದೆಂದು ಭಾವಿಸಿದ್ದರು. ಹೀಗಾಗಿ ಸತ್ಯ ಮತ್ತು ಅಹಿಂಸೆಯನ್ನು ಪ್ರತ್ಯೇಕಗೊಳಿಸಲು ಸಾಧ್ಯವಿಲ್ಲ. ಅಲ್ಲದೆ ಅಹಿಂಸೆಯ ಬಗ್ಗೆ ವಿಶಾಲವಾದ ಅರ್ಥವನ್ನು ನೀಡಿದ್ದಾರೆ. ಇದನ್ನು ನಕಾರಾತ್ಮಕ ಹಾಗೂ ಸಕರಾತ್ಮಕ ಅರ್ಥದಲ್ಲಿ ವ್ಯಾಖ್ಯಾನಿಸಿದ್ದರು. ಗಾಂಧೀಜಿಯವರು ಅಹಿಂಸೆಯ ಅಸ್ತ್ರವನ್ನು ಎಲ್ಲಾ ಅಂದರೆ ಯಾವುದೇ ಪರಿಸ್ಥಿತಿಯಲ್ಲಾದರೂ ಬಳಸಬಹುದು ಎಂದು ಪ್ರತಿಪಾದಿಸಿದ್ದರು. ಈ ಅಸ್ತ್ರವನ್ನು ದೈಹಿಕವಾಗಿ ದುರ್ಬಲರಾದವರು ಸಹ ಉಪಯೋಗಿಸಬಹುದು ಎಂದಿದ್ದರು. ಅಲ್ಲದೆ ಮಹಿಳೆಯರು ಮತ್ತು ಮಕ್ಕಳು ಸಹ ಅಹಿಂಸೆಯ ಅಸ್ತ್ರದ ಮೂಲಕ ಹೋರಾಟ ನಡೆಸಬಹುದು ಎಂದಿದ್ದರು. ಆದುದರಿಂದ ಯಾವುದೇ ಲಿಂಗ ಜಾತಿ–ವಯಸ್ಸು–ಆರೋಗ್ಯದ ಭೇದವಿಲ್ಲದೆ ಅಹಿಂಸೆಯ ಅಸ್ತ್ರವನ್ನು ಬಳಸಿಕೊಳ್ಳಬಹುದಾಗಿದೆ. ಸಾಮಾನ್ಯ ಜನರು ಉಪಯೋಗಿಸಬಹುದಾದ ಅಸ್ತ್ರ ಇದಾಗಿದ್ದು, ಆದರೆ ಸ್ವಂತ ಲಾಭ, ಕೆಟ್ಟ ಉದ್ದೇಶ, ಅನೈತಿಕ ಉದ್ದೇಶಕ್ಕಾಗಿ ವಿಕೃತ ಮನಸ್ಸಿನ, ದ್ವೇಷ ಮನಸ್ಸಿನ ವ್ಯಕ್ತಿಗಳು ಅಹಿಂಸೆಯ ಅಸ್ತ್ರವನ್ನು ಬಳಸಿಕೊಂಡಲ್ಲಿ ಅಪಮೌಲ್ಯವಾದಂತಾಗುತ್ತದೆ. ಆಧ್ಯಾತ್ಮಿಕವಾಗಿ ನಂಬಿಕೆ ಇರುವವರಿಗೆ ಅಹಿಂಸೆ ಸಾರ್ವತ್ರಿಕವಾದುದಾದರೆ, ವ್ಯಕ್ತಿಗತವಾಗಿ ವ್ಯಕ್ತಿಗೆ ಸಂಬಂಧಿಸಿದಂತೆ ಅವಶ್ಯ ಒಳ್ಳೆಯದಾದುದಾಗಿದೆ.

ಈ ಭಾಗದಲ್ಲಿ ಗಾಂಧೀಜಿಯವರ ಚಿಂತನೆಗಳಲ್ಲಿ ಕೆಲವು ಪರಿಕಲ್ಪನೆಗಳನ್ನು ಆಯ್ದುಕೊಳ್ಳಲಾಗಿದೆ.ಈ ಪರಿಕಲ್ಪನೆಗಳು ಒಂದು ಸುಖೀ ಸಮಾಜವನ್ನು ರೂಪಿಸಲು ಅತೀ ಅಗತ್ಯದ ಅಂಶಗಳಾಗಿವೆ. ಗ್ರಾಮಸ್ವರಾಜ್ಯ ಎನ್ನುವುದು ಒಂದು ಕಲ್ಪನೆಯ ವ್ಯವಸ್ಥೆಯಾಗಿದ್ದು ಅದರಲ್ಲಿ ಸಾಮರಸ್ಯ, ಸಹಬಾಳ್ವೆ, ಸಹಕಾರಗಳಿಂದ ಕೂಡಿದ ಸಕಾಲ ವ್ಯವಸ್ಥೆಗಳನ್ನು ಒಳಗೊಂಡ ಒಂದು ಅರ್ಥವ್ಯವಸ್ಥೆ ಆಗಿದೆ. ಈ ವ್ಯವಸ್ಥೆಯನ್ನು ಬೆಳೆಸಲು ಒಂದು ರಾಜಕೀಯ ಆಡಳಿತ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಆಡಳಿತ ವ್ಯವಸ್ಥೆಯಲ್ಲಿ ಪ್ರಾಮಾಣಿಕತನ, ಸತ್ಯ, ಅಹಿಂಸೆ, ಸಮಾನತೆ ಮೊದಲಾದ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಅಂಶಗಳನ್ನು ಈ ಪ್ರಬಂಧದಲ್ಲಿ ಉಲ್ಲೇಖಿಸಲಾಗಿದ್ದು ಪ್ರಸ್ತುತ ಅರ್ಥವ್ಯವಸ್ಥೆಯಲ್ಲಿ ಕಲ್ಯಾಣ ರಾಜ್ಯ ರೂಪಿಸಲು ಇಂತಹ ಮೌಲ್ಯಗಳು ಇಂದಿನ ಅಗತ್ಯಗಳಾಗಿರುತ್ತದೆ. ಮುಂದಿನ ಭಾಗದಲ್ಲಿ ಗಾಂಧೀಜಿಯವರ ವಿಕೇಂದ್ರಿಕರಣದ ಪರಿಕಲ್ಪನೆಯ ಬಗ್ಗೆ ಪ್ರಚಲಿತ ಅಗತ್ಯವನ್ನು ಉಲ್ಲೇಖಿಸಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ-2

ಗಾಂಧೀಜಿಯರ ವಿಕೇಂದ್ರಿಕರಣದ ಪರಿಕಲ್ಪನೆ

ಸ್ವಾತಂತ್ರ್ಯದ ವಿಸ್ತರಣೆಯು ವಿಕೇಂದ್ರಿಕರಣದ ಪ್ರಕ್ರಿಯೆಗೆ ಪೂರಕವಾಗಿದೆ. ಅಧಿಕಾರದ ವಿಕೇಂದ್ರಿಕರಣವು ಸ್ವಾತಂತ್ರ್ಯದ ಪರಿಧಿಯನ್ನು ವಿಸ್ತಾರಗೊಳಿಸುತ್ತ ಮುಂದುವರಿಯುತ್ತದೆ. ಸ್ಥಳೀಯ ಸರಕಾರ ವ್ಯವಸ್ಥೆ ಎಂಬ ಕಲ್ಪನೆಯೇ ಸ್ಥಳೀಯ ಜನತೆಯ ಸ್ವಾಯುತ್ತತೆಯನ್ನು ಪ್ರಜಾತಾಂತ್ರಿಕ ನೆಲೆಯಲ್ಲಿ ಪ್ರತಿಪಾದಿಸುವುದು. ಸ್ವ ನೆಲೆಯಲ್ಲಿ ತಮ್ಮನ್ನು ತಾವೇ ನಿರ್ವಹಿಸಿಕೊಳ್ಳುವ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು. ಸ್ಥಳೀಯ ಸರಕಾರಗಳ ಬೆಳವಣಿಗೆಗೆ ಒಂದು ಚಾರಿತ್ರಿಕ ಸಂದರ್ಭಗಳಿರುವುದನ್ನು ನಾವು ಭಾರತೀಯ ಚರಿತ್ರೆಯಲ್ಲಿ ಕಾಣುತ್ತೇವೆ. ಪ್ರಾಚೀನ ಭಾರತದ 'ಸಭಾ' 'ಸಮಿತಿ' ಮೊದಲಾದವು ಸ್ಥಳೀಯ ಸ್ವಯಂ ಸರಕಾರಗಳ ಉಗಮದಲ್ಲಿ ಒಳನೋಟಗಳನ್ನು ನೀಡಿದೆ. ವಸಾಹತುಶಾಹಿ ಆಡಳಿತದಲ್ಲಿ ಭಾರತದಲ್ಲಿ ಸ್ಥಳೀಯ ಸರಕಾರಗಳು ಪ್ರವರ್ಧಮಾನಕ್ಕೆ ಬರತ್ತವೆ. ಮಹಾತ್ಮ ಗಾಂಧಿಯವರು ಭಾರತೀಯ ಸಮಾಜದ ಆತ್ಮಗಳು ಹಳ್ಳಿಗಳಲ್ಲಿ ಕೇಂದ್ರಿಕೃತವಾಗಿರುವುದನ್ನು ತಮ್ಮ ಲೋಕಜ್ಞಾನದ ಮೂಲಕ ಅರಿತುಕೊಂಡಿದ್ದರು. ಹಳ್ಳಿಗಳು ಸ್ವಾವಲಂಬನೆಯ ಹಾದಿಯನ್ನು ತುಳಿದರೆ ದೇಶದ ಉದ್ದಾರ ಖಚಿತ ಎಂಬ ನಿಲುವನ್ನು ತಳೆದಿದ್ದರು. ಸ್ಥಳೀಯರು ತಮ್ಮ ಪರಿಸರದ ಇತಿಮಿತಿಗಳನ್ನು ನಿಖರವಾಗಿ ಅರಿತಿರುತ್ತಾರೆ. ಸ್ಥಳೀಯ ಸಂಪನ್ಮೂಗಳನ್ನು ಸ್ಥಳೀಯವಾಗಿ ಮಿತವ್ಯಯಕಾರಿಯಾಗಿ ಯಾವ ತೆರನಾಗಿ ಸದ್ವಿನಿಯೋಗಿಸಬಹುದೆಂಬ ಜ್ಞಾನವನ್ನು ಹೊಂದಿರುತ್ತಾರೆ.

ಈ ಹಿನ್ನಲೆಯಲ್ಲಿ ತಾವೇ ಸ್ಥಳೀಯವಾಗಿ ಆಯ್ಕೆ ಮಾಡಿಕೊಳ್ಳುವ ಆಡಳಿತ ವ್ಯವಸ್ಥೆಯು ತಮ್ಮ ಆಶ್ರಯಗಳು ಮತ್ತು ಬೇಡಿಕೆಗಳಿಗೆ ಸ್ಪಂದಿಸುವ ಪರಿಣಾಮಕಾರಿಯಾದ ಮುನ್ನೋಟವನ್ನು ಒಳಗೊಳ್ಳುತ್ತದೆ. ಸ್ಥಳೀಯರ ಒಳಗೊಳ್ಳುವಿಕೆಯ ಮೂಲಕವೇ ಅವರ ಬಿಡುಗಡೆ. ಆ ಬಿಡುಗಡೆಯೇ ಸ್ವರಾಜ್ಯದ ನನಸಾಗುವಿಕೆ ಆ ಕಲ್ಪನೆಯಲ್ಲಿಯೇ ಸ್ವಯಂ ಪರಿಪೂರ್ಣತೆಯೆಡೆಗೆ ಹೆಜ್ಜೆ. ಸ್ವಾವಲಂಬನೆ, ಸ್ವಾಯುತ್ತತೆ ಮತ್ತು ಸಶಕ್ತೀಕರಣ ಸ್ಥಳೀಯ ಸರಕಾರಗಳ ಮೂಲಮಂತ್ರಗಳು. ಗಾಂಧೀಜಿಯವರ ಸ್ಥಳೀಯ ಸಕಾರದ ಚಿಂತನೆಯನ್ನು ಒಳಪಡಿಸುವ ನಿಟ್ಟಿನಲ್ಲಿ ಭಾರತ ಘನ ಸರಕಾರವು ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿ ಸ್ಥಳೀಯ ಮಟ್ಟದಿಂದಲೇ ಆಡಳಿತವನ್ನು ಬಲಗೊಳಿಸಲು ಈ ನಿಟ್ಟಿನಲ್ಲಿ ಅಮೂಲಾಗ್ರವಾದ ಕಾರ್ಯಯೋಜನೆಯನ್ನು ಹಮ್ಮಿಕೊಂಡು ಅದನ್ನು ಸಂವಿಧಾನ ಬದ್ಧ ಗೊಳಿಸಿದೆ. ಆಮೂಲಕವಾಗಿ ಗಾಂಧೀಜಿಯವರ ಕನಸಾದ ಗ್ರಾಮರಾಜ್ಯವೇ ರಾಮರಾಜ್ಯವೆಂಬ ಕಲ್ಪನೆಯನ್ನು ಅನುಷ್ಠಾನಗೊಳಿಸಿದೆ. ಈ ಉದ್ದೇಶದ ಹಿನ್ನಲೆಯಲ್ಲಿ ಸ್ವಾತಂತ್ರ್ಯೋತರದ ಭಾರತದ ಸರಕಾರಗಳು ವಿವಿಧ ಸ್ಥಳೀಯ ಸಂಸ್ಥೆ ಮತ್ತು ಸಮಿತಿಗಳನ್ನು ರಚಿಸಿ ಸ್ಥಳೀಯ ಸ್ವಯಂ ಆಡಳಿತದ ಸರಕಾರಗಳಿಗೆ ಒಂದು ಗಟ್ಟಿಯಾದ ತಳಹದಿಯನ್ನು ಹಾಕಿಕೊಡುವ ಪ್ರಯತ್ನವನ್ನು ಮಾಡಿದೆ. ಎರಡನೇ ಅಧ್ಯಾಯದಲ್ಲಿ ಗಾಂಧೀಜಿಯವರ ವಿಕೇಂದ್ರೀಕರಣದ ಪರಿಕಲ್ಪನೆ ಮತ್ತು ಭಾರತದ ಅಧಿಕಾರದ ವಿಕೇಂದ್ರೀಕರಣದ ಕುರಿತು ಚಿಂತನೆಗಳ ವಿಶ್ಲೇಷಣೆ ನೀಡಲಾಗಿದೆ.

1.1 ವಿಕೇಂದ್ರೀಕರಣ

ಅಧಿಕಾರದ ಎಲ್ಲ ಹಂತಗಳನ್ನು ವ್ಯವಸ್ಥೆಗಳನ್ನು ಒಬ್ಬನೇ ವ್ಯಕ್ತಿ ಅಥವಾ ಒಂದೇ ಸಂಸ್ಥೆ ಸಮಗ್ರವಾಗಿ ತನ್ನ ಹಿಡಿತದಲ್ಲಿಟ್ಟುಕೊಂಡು ನಿಯಂತ್ರಿಸುವುದು ಕೇಂದ್ರೀಕೃತ ವ್ಯವಸ್ಥೆ. ಈ ಕೇಂದ್ರಿಕೃತ ಅಧಿಕಾರವನ್ನು ಅಥವಾ

ಕಾರ್ಯಭಾರವನ್ನು ಬೇರೆ ಬೇರೆ ಶ್ರೇಣಿಗಳಲ್ಲಿ, ಹಂತಗಳಲ್ಲಿ ವ್ಯಕ್ತಿಗಳಲ್ಲಿ ಹಂಚಿ ಆ ಮಾಧ್ಯಮಗಳಲ್ಲಿಯೂ ಸ್ವತಂತ್ರವಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು ವಿಕೇಂದ್ರೀಕರಣ ವ್ಯವಸ್ಥೆ. ಕೇಂದ್ರಿಕರಣವು ಸಾಮ್ರಾಜ್ಯ ಶಾಹಿ ವ್ಯವಸ್ಥೆಯ ಪ್ರಮುಖ ನೆಲೆಯಾದರೆ ವಿಕೇಂದ್ರೀಕರಣ ಪ್ರಜಾಪ್ರಭುತ್ವವು ವ್ಯವಸ್ಥೆಯ ಗುಣಾತ್ಮಕ ಕಾರ್ಯನಿರ್ವಹಣಾ ವಿಧಾನ ಕೇಂದ್ರಿಕರಣ ವ್ಯವಸ್ಥೆಯಲ್ಲಿ ಉಂಟಾಗುವ ಒಳಿತು ಕೆಡುಕುಗಳಿಗೆ ಎಲ್ಲ ಅಧಿಕಾರವನ್ನು ತನ್ನಲ್ಲಿ ಕೇಂದ್ರಿಕರಿಸಿಕೊಂಡ ವ್ಯಕ್ತಿ ಅಥವಾ ವ್ಯವಸ್ಥೆ ಕಾರಣವಾದರೆ ವಿಕೇಂದ್ರೀಕರಣ ವ್ಯವಸ್ಥೆ ಸಮಗ್ರ ಸ್ವರೂಪದ ಅರಿವು, ಅಧ್ಯಯನ, ಕಾರ್ಯತಂತ್ರ ಯೋಜನೆ, ಸಮಸ್ತ ಕಲ್ಯಾಣ ದೃಷ್ಟಿ ನಿಕಟ ಮತ್ತು ಸೂಕ್ಷ್ಮ ಪರಿಶೀಲನೆ ಹಾಗೂ ಅವುಗಳ ಮೂಲಕ ಗರಿಷ್ಠ ಪ್ರಮಾಣದಲ್ಲಿ ಜನ ಸಮುದಾಯದ ಒಳಿತನ್ನು ಸಾಧಿಸುವ ಬಹುಮುಖ ವ್ಯವಸ್ಥೆ, ಸ್ವತಂತ್ರ ಪೂರ್ವದಲ್ಲಿ ಭಾರತದಲ್ಲಿ ತೃಣ ಮೂಲವಾಗಿದ್ದ ರಾಜಶಾಹಿ ಅಥವಾ ಸಾಮ್ರಾಜ್ಯ ಶಾಹಿ ವ್ಯವಸ್ಥೆಯಲ್ಲಿ ರಚನೆಗೊಂಡ ಅಧಿಕಾರ ಕೇಂದ್ರಿಕರಣ ಪ್ರಕ್ರಿಯೆ ಮುಖ್ಯವಾಗಿದ್ದರೆ ಸ್ವಾತಂತ್ರೋತ್ತರ ಭಾರತ ರಾಜ್ಯಗಳಿಗೆ, ರಾಜ್ಯಗಳಿರುವ ಸೂಕ್ತ ಕಾರ್ಯನಿರ್ವಹಣೆಗೆ ಜನಸತ್ತಾತ್ಮಕ ವಿಧಾನದಲ್ಲಿ ರೂಪಿಸಲಾದ ಅಧಿಕಾರ ಮತ್ತು ಸೇವಾ ಕಾರ್ಯ ವಿಕೇಂದ್ರೀಕರಣ ಮೂಲವಾಗಿದೆ.

ವಿಕೇಂದ್ರೀಕರಣ ದೇಶೀಯ ಆಡಳಿತ ಪ್ರಕ್ರಿಯೆಯಿಂದಾಗಿ ಆರೋಗ್ಯ, ಶಿಕ್ಷಣ, ಗ್ರಾಮ ನೈರ್ಮಲ್ಯ ಮುಂತಾದ ಕಾರ್ಯಕ್ರಮಗಳಲ್ಲಿ ದೇಶೀಯ ಸಾಮಾನ್ಯ ಸಮುದಾಯದ ಪಾಲ್ಗೊಳ್ಳುವಿಕೆ ಒಂದು ವಿಧದಲ್ಲಿ ಬದಲಾವಣೆಯನ್ನು ತಂದರೂ ಸಹ ವೈಯಕ್ತಿಕ ಹಿತಾಸಕ್ತಿಗಳಿಂದಾಗಿ ನಿಯಂತ್ರಣ ತಪ್ಪುವಂತಾಯಿತು . ಈ ಎಲ್ಲ ಬದಲಾವಣೆಗಳು ಗ್ರಾಮದ ಒಟ್ಟು ಜೀವನ ಕ್ರಮದಲ್ಲಿ ಅಲೋಚನಾ ಕ್ರಮದಲ್ಲಿ ಪರಿಣಾವನ್ನು ಬೀರಿತು. ನಿಧಾನವಾಗಿ ರಾಜಕೀಯದ ಪ್ರವೇಶ ಉಂಟಾಯಿತು. ವೈಯಕ್ತಿಕ ಪ್ರತಿಷ್ಠೆ, ಪಕ್ಷ ರಾಜಕೀಯ ಇನ್ನಿತರ ಕಾರಣಗಳಿಂದಾಗಿ ಜಾತಿ ಸಂಘಟನೆ, ಪಂಥ ಸಂಘಟನೆ ಅಸ್ತಿತ್ವಕ್ಕೆ ಬಂದಿತು. ಹೀಗಾಗಿ ಗ್ರಾಮೀಣ ನಂತರದ ಸಾಮಾಜಿಕ ಜೀವನದಲ್ಲಾದ ಬದಲಾವಣೆಗಳನ್ನು ಗ್ರಾಮದ ನೆರೆಯಲ್ಲಿ ಅಧ್ಯಯನ ಮಾಡುವುದು ಅವಶ್ಯಕ ಹಾಗೂ ಅನಿವಾರ್ಯ ಎಂಬುದನ್ನು ಈ ಕೃತಿಯು ವಿಮರ್ಶೆ ಒಳಪಡಿಸುತ್ತದೆ.

ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣ ಕುರಿತಂತೆ ಆಗಾಗ ಚರ್ಚೆಗಳು ಕೇಳಿ ಬರುತ್ತದೆ. ಈ ಪ್ರಕ್ರಿಯೆಯು ಹಂತ ಹಂತವಾಗಿ ನಿರ್ದಿಷ್ಟ ಮೂರ್ತ ಸ್ವರೂಪವನ್ನು ಪಡೆದುಕೊಂಡಿದೆ. ಇದು ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಪಂಚಾಯತ್‌ಗಳು ಸಾಂವಿಧಾನಿಕ ಗುರುತ್ವವನ್ನು ಪಡೆದಿವೆ. ಇದರಿಂದಾಗಿ ವಿಕೇಂದ್ರೀಕರಣ ಆಶಯವು ಹೆಚ್ಚು ಗಟ್ಟಿಗೊಳ್ಳುತ್ತಿದೆ. ಎಲ್ಲಾ ವಿಧದ ವಿಕೇಂದ್ರೀಕರಣವು ಪ್ರಜಾತಾಂತ್ರಿಕವಲ್ಲ. ಪ್ರಜಾಪ್ರಭುತ್ವವಿಲ್ಲದ ವ್ಯವಸ್ಥೆಯಲ್ಲೂ ಉತ್ತಮವಾಗಿ ಕೆಲಸ ನಿರ್ವಹಿಸುವ ವಿಕೇಂದ್ರೀಕೃತ ಯೋಜನೆಗಳಿವೆ. ವಿಕೇಂದ್ರೀಕರಣವು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ಸ್ಥಳೀಯ ಮಟ್ಟದಲ್ಲಿ ಸಹಕಾರಿಯಾಗಿದೆ ಎನ್ನಬೇಕು. ಕೇಂದ್ರ ಮಟ್ಟದಲ್ಲಿ ಇದು ರಾಜಕೀಯ ಶಿಕ್ಷಣ, ನಾಯಕತ್ವ ತರಬೇತಿ ಮತ್ತು ರಾಜಕೀಯ ಸ್ಥಿರತೆ ನೀಡಿದರೆ ಸ್ಥಳೀಯ ಹಂತದಲ್ಲಿ ಸಮಾನತೆ, ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆ ಮುಂತಾದ ಮೌಲ್ಯಗಳನ್ನು ಇದು ನೀಡಬಹುದಾಗಿದೆ. ಹೀಗೆ ಪ್ರಜಾ ತಾಂತ್ರಿಕ ವಿಕೇಂದ್ರೀಕರಣವು ಹೆಚ್ಚು ಪಾರದರ್ಶಕವಾಗಬೇಕು, ಹೊಣೆಗಾರಿಕೆ, ಆಡಳಿತ ವೆಚ್ಚದ ಮೇಲೆ ಕಡಿವಾಣ ಪರಿಶೀಲನೆ, ದಕ್ಷತೆ ಸಮಾನತೆ ಮತ್ತು ಜನ ಸಹಭಾಗಿತ್ವಕ್ಕೆ ಅವಕಾಶವನ್ನೊದಗಿಸುತ್ತದೆ.ವಿಕೇಂದ್ರೀಕರಣ ಪದವನ್ನು ಹಲವು ರೀತಿಯಲ್ಲಿ ವ್ಯಾಖ್ಯಾನಿಸಬಹುದು. ಇದಕ್ಕೆ ಒಂದು

ಸಾರ್ವತ್ರಿಕವಾಗಿ ಒಪ್ಪುವಂತಹ ಅರ್ಥವಿವರಣೆಯನ್ನು ನೀಡುವುದು ಕಷ್ಟ ಸಾಧ್ಯ ಡಿಸೆಂಟ್ರ ಲೈಸೇಶನ್ ಎಂಬ ಆಂಗ್ಲ ಪದದ ಮೂಲ ರೂಪವು ಲ್ಯಾಟಿನ್‌ನಿಂದ ಬಂದಂತಹುದು. ಇದಕ್ಕೆ ಹಲವಾರು ಅರ್ಥ ವಿವರಣೆಗಳಿದ್ದರು ಎಲ್ಲವು ಕೇಂದ್ರದಿಂದ ದೂರವಾಗುವುದು. ಎಂಬುದನ್ನು ಸೂಚಿಸುತ್ತದೆ. ವಿಕೇಂದ್ರೀಕರಣವೆಂದರೆ ಮೇಲಿನ ಹಂತದ ಸರಕಾರದಿಂದ ಕೆಳಹಂತದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಅಥವಾ ಆಡಳಿತಾಂಗಗಳಿಗೆ ಅಧಿಕಾರದ ವರ್ಗಾವಣೆಯಾಗುವಂತಹುದು. ಅಧಿಕಾರ ವಿಕೇಂದ್ರಿಕರಣವನ್ನು ವ್ಯವಸ್ಥೆಯ ಒಳಗೂ ಹೊರಗಿನ ಸಂಘಟನೆಗಳೊಂದಿಗೂ ಮಾಡಬಹುದು.

ಅಭಿವೃದ್ಧಿ ಶೀಲ ದೇಶಗಳಲ್ಲಿ ಯೋಜನೆ ಮತ್ತು ಆಡಳಿತವನ್ನು ವಿಕೇಂದ್ರೀಕರಣಗೊಳಿಸುವುದರ ಹಿಂದೆ ಹಲವು ಚಾಲಕ ಶಕ್ತಿಗಳು ಕೆಲಸ ಮಾಡಿದೆ ಎಂದು ಚೀಮಾ ಮತ್ತು ರೊಂಡಿನೆಲ್ಲಿ ತಿಳಿಸುತ್ತಾರೆ. ಅಂದರೆ ಕೇಂದ್ರ ಸರಕಾರದಿಂದ ಅದರ ಸಹ ಸಂಸ್ಥೆಗಳಿಗೆ ಸ್ಥಳೀಯಾಡಳಿತ ಘಟಕಗಳಿಗೆ ಅರೆ ಸ್ವಾಯತ್ತ ಮತ್ತಿತರ ಸಂಸ್ಥೆಗಳಿಗೆ ಸ್ಥಳೀಯ ಸರಕಾರ ಮತ್ತು ಸರಕಾರೇತರ ಸಂಘಟನೆಗಳಿಗೆ ನಿರ್ಣಯ ನಿರೂಪಣಾ ಅಥವಾ ಯೋಜನೆಯ ವರ್ಗಾವಣೆಯೂ ಆಗಬಹುದು. ವಿಕೇಂದ್ರಿಕರಣವು ಯೋಜನೆ ರೂಪಿಸುವ ಅಧಿಕಾರ ಮತ್ತು ನಿರ್ಣಯ ನಿರೂಪಿಸುವ ಹಾಗೂ ಮುಖ್ಯವಾಗಿ ಸ್ವಾಯತ್ತತೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ. (ಚೀಮಾ ಮ್ತು ರೋಂಡಿನೆಲ್ಲಿ 1984) ಅಮಿತಾಬ್ ಮುಖರ್ಜಿಯವರು ಸಹ ಇದನ್ನೆ ಪ್ರತಿಪಾದಿಸಿದ್ದಾರೆ. ಒಟ್ಟಿನಲ್ಲಿ ವಿಕೇಂದ್ರಿತ ಸಂಸ್ಥೆಯ ಸ್ವಾಯತ್ತತೆಯೆ ಇದರ ಮೂಲ ತತ್ವ.

ಚೀಮಾ ಮತ್ತು ರೊಂಡಿನಲ್ಲ ನಾಲ್ಕು ವಿಧದ ವಿಕೇಂದ್ರಿಕರಣವನ್ನು ವಿವರಿಸುತ್ತಾರೆ.

1. **ಡಿಲಗೇಶನ್ (ಯೋಜನೆ)**:- ನಿರ್ದಿಷ್ಟ ವಿವರಣೆಯುಳ್ಳ ಕಾರ್ಯಗಳನ್ನು ದೈನಂದಿನ ಆಡಳಿತ ಶಾಹಿಯಿಂದ ಹೊರತು ಪಡಿಸಿ ಪರೋಕ್ಷವಾಗಿ ಕೇಂದ್ರ ಸರಕಾರದಿಂದ ಮಾತ್ರ ನಿಯಂತ್ರಿಸಿಡುವ ಸಂಘಟನೆಗಳಿಗೆ ಹಸ್ತಾಂತರಿಸುವುದು.
2. **ಡಿವಲೂಷನ್ (ಅವತರಣ)**:- ಸರಕಾರದ ಉಪರಾಷ್ಟ್ರೀಯ ಘಟಕಗಳನ್ನು ರಚಿಸಿ ಬಲಪಡಿಸುವುದು ಮತ್ತು ಅವುಗಳ ಕಾರ್ಯಗಳನ್ನು ಹೆಚ್ಚಾಗಿ ಕೇಂದ್ರ ಸರಕಾರದ ನೇರ ನಿಯಂತ್ರಣದಿಂದ ಹೊರಗಿಡುವುದು.
3. **ಡಿಕಾನ್ಸಂಟೇಶನ್**- ಸರಕಾರದ ಮಂತ್ರಿಮಂಡಲ ಅಥವಾ ಪಾರುಪತ್ಯದಲ್ಲಿ ಇರುವ ಕೆಲವೊಂದು ಆಡಳಿತಾಂಗ ಪ್ರಾಧಿಕಾರ ಅಥವಾ ಹೊಣೆಗಾರಿಕೆಯನ್ನು ಕೆಳಗಿನ ಹಂತಗಳಿಗೆ ನೀಡುವುದು.
4. **ಪ್ರೈವೆಟೈಜೇಶನ್(ಖಾಸಗೀಕರಣ)**

   ಸರಕಾರೇತರ ಸಂಘಟನೆಗಳು ಆಥವಾ ಸರಕಾರದಿಂದ ಸ್ವತಂತ್ರವಾದ ಖಾಸಗಿ ಉದ್ಯಮಗಳಿಗೆ ಕೆಲಸ ಕಾರ್ಯದ ಹೊಣೆಗಾರಿಕೆ ನೀಡುವುದು. ಇದರಲ್ಲಿ ಮೂರನೇ ವಿಧವನ್ನು ಹೊರತುಪಡಿಸಿದರೆ ಉಳಿದವುಗಳಲ್ಲಿ ಸರಿಯಾದ ರೀತಿಯ ಅಧಿಕಾರದ ವರ್ಗಾವಣೆಯಲ್ಲಿರುವುದನ್ನು ಕಾಣಬಹುದು. ಡಿವಲೂಷನ್ ಎಂದರೆ ಔಪಚಾರಿಕವಾಗಿ ರಚಿತವಾದ ಸ್ಥಳೀಯ ಪ್ರಾಧಿಕಾರಕ್ಕೆ ಶಾಸನಾತ್ಮಕ ಅಥವಾ ಕಾನೂನಿನ್ವಯ ನಿಶ್ಚಿತವಾದ ಅಥವಾ ವಿವೇಚನಾಧಿಕಾರಿಗಳನ್ನು ನಿರ್ವಹಿಸಲು ಅನುವು ಮಾಡಿಕೊಡುವುದಾಗಿದೆ. ವಿಕೇಂದ್ರೀಕರಣವು ಈ ಅರ್ಥದಲ್ಲಿ ಡಿವಲೂಷನ್ ಅಥವಾ ಅಧಿಕಾರದ

ಅವತರಣಕ್ಕೆ ಸಮವಾಗಿದೆ. ಇದರಂತೆ ಸ್ಥಳೀಯ ಸರಕಾರ ಘಟಕಗಳು ಸ್ವಾಯತ್ತ ಹಾಗೂ ಸ್ವತಂತ್ರವಾಗಿದ್ದು ಕೇಂದ್ರ ಸರಕಾರಕ್ಕೆ ಇದರ ಮೇಲೆ ನೇರ ನಿಯಂತ್ರಣವಿಲ್ಲ. ಸ್ಥಳೀಯ ಸರಕಾರಗಳು ಕಾನೂನು ಬದ್ಧವಾದ ಭೌಗೋಳಿಕ ಪರಿಮಿತಿಯೊಳಗೆ ತಮ್ಮ ಅಧಿಕಾರವನ್ನು ಚಲಾಯಿಸುವುದು, ಮತ್ತು ಇವುಗಳು ನಿರ್ವಹಿಸಲು ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಸಮುದಾಯಿಕಾ ಸಂಸ್ಥೆಗಳಾಗಿವೆ ಎಂದು ಚೀಮಾ ಮತ್ತು ಕೊಂಡಿನೆಲ್ಲ ತಿಳಿಸುತ್ತಾರೆ. ಸ್ಥಳೀಯ ಪ್ರಾಧಿಕಾರವು ನಿಯಮಿತವಾದರೂ ತಮ್ಮ ವ್ಯಾಪ್ತಿಯಲ್ಲಿ ಅದು ನಿರ್ಧಾರಗಳನ್ನು ಕೈಗೊಳ್ಳಲು ಸಮರ್ಥವಾಗಿದೆ ಮತ್ತು ಹೊಸ ಶಾಸನಾತ್ಮಕ ಕ್ರಮಗಳಿಂದ ಮಾತ್ರ ಬದಲಾವಣೆಗಳನ್ನು ಮಾಡಬಹುದಾಗಿದೆ. ನಿಯಮಿತ ಸಂಪನ್ಮೂಲಗಳಿದ್ದು ಇವುಗಳ ನಿರ್ವಹಣೆಯು ಈ ಪ್ರಾಧಿಕಾರದ ವಿವೇಚನೆಗೊಳಪಟ್ಟಿದೆ. ಹೀಗೆ ವಿಕೇಂದ್ರಿತ ಸ್ಥಳೀಯ ಘಟಕವೆಂದರೆ ಅದಕ್ಕೆ ತನ್ನದೇ ಆದ ಕಾನೂನಿನ ಚೌಕಟ್ಟು ಆಯವ್ಯಯ ಪ್ರಧಾನವಿದ್ದು ಅದು ತನ್ನ ವಿವಿಧ ಕಾರ್ಯಗಳನ್ನು ಈ ಸಂಪನ್ಮೂಲ ಮಿತಿಯೊಳಗೆ ಸ್ಥಳೀಯ ಜನಪ್ರತಿನಿಧಿಗಳ ಮೂಲಕ ನಿರ್ವಹಿಸುತ್ತದೆ. ಅಹಿಂಸೆಯು ಗಾಂಧೀಜಿಯವರ ಬದುಕಿನ ಮೂಲತತ್ವವಾಗಿದೆ. ಅವರು ಕೈಗಾರಿಕಾ ವಿಕೇಂದ್ರಿಕರಣವನ್ನು ಸ್ವಾಗತಿಸಿದ್ದರು. ಯಾಕೆಂದರೆ ಬೃಹತ್ ಉದ್ದಿಮೆಗಳ ಬುನಾದಿ ಹಿಂಸೆ ಎಂಬುದರ ಅಧಾರದಲ್ಲಿ ನಿರ್ಮಿತವಾಗಿದೆ. ಅವರು ಕೆಲವೇ ಕೆಲವು ಬೃಹತ್ ಮಟ್ಟದ ಕೈಗಾರಿಕೆಯ ಉತ್ಪಾದನೆಯ ಬದಲು ಬೃಹತ್ ಸಂಖ್ಯೆಯ ಚಿಕ್ಕ ಕೈಗಾರಿಕೆಗಳ ಮತ್ತು ಗುಡಿ ಕೈಗಾರಿಕೆಗಳ ಮೂಲಕ ಬೃಹತ್ ಉತ್ಪಾದನೆ ಹೊಂದಲು ಉಪದೇಶಿಸಿದ್ದರು. ಅವರು ಹೇಳಿರುವಂತೆ ನಿಮ್ಮ ದೃಷ್ಟಿಯಲ್ಲಿ ಸಾಮೂಹಿಕ ಉತ್ಪಾದನೆಯೆಂದರೆ ಕೆಲವೇ ಉದ್ದಿಮೆಗಳು ಅತ್ಯಂತ ಸುಧಾರಿತ ಬೃಹತ್ ಯಂತ್ರಗಳನ್ನು ಹೇಳುವ ಬೃಹತ್ ಉತ್ಪಾದನೆಯನ್ನು ಮಿಲಿಯಗಟ್ಟಲೆ ಜನರಿಂದ ಚಿಕ್ಕ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಗಳ ಮೂಲಕ ಕೂಡಾ ಪಡೆಯಲು ಸಾಧ್ಯ. ಆದುದರಿಂದ ನಿಮ್ಮ ನಿಲುವು ಶುದ್ಧ ತಪ್ಪು. ನಿಮ್ಮ ಬೃಹತ್ ಯಂತ್ರಗಳ ಬದಲು ನಾನು ತೀರಾ ಪ್ರಾಥಮಿಕ ಸ್ವರೂಪದ ಯಂತ್ರಗಳನ್ನು ಮಿಲಿಯಗಟ್ಟಲೆ ಜನರ ಮನೆಯಲ್ಲಿ ಅಳವಡಿಸಲು ಪ್ರೇರೇಪಿಸಿ ನೀವು ಹೇಳುವ ಬೃಹತ್ ಉತ್ಪಾನದೆಗಿಂತ ದೊಡ್ಡ ರೂಪದ ಉತ್ಪಾದನೆಯನ್ನು ನಿಮಗೆ ತೋರಿಸಬಲ್ಲೆ. ಗಾಂಧೀಜಿಯವರ ಪ್ರಕಾರ ಉತ್ಪಾದನೆಯು ಕೆಲವೇ ಉದ್ದಿಮೆಗಿಂದ ಬೃಹತ್ ಯಂತ್ರಗಳ ಬಳಕೆ ಮೂಲಕ ವಿಪರೀತ ಪ್ರಮಾಣದ ಉತ್ಪಾದನೆ ಬದಲು ಅತ್ಯಂತ ದೊಡ್ಡ ಸಂಖ್ಯೆಯ ಚಿಕ್ಕ ಉತ್ಪಾದಕರಿಂದ ಒಟ್ಟು ಹೆಚ್ಚು ಉತ್ಪಾನದೆಯಾಗಿರಬೇಕು. ಆಗ ಮಾತ್ರ ಎಲ್ಲಾ ಜನರಿಗೆ ಉದ್ಯೋಗ ಸಿಗಲು ಸಾಧ್ಯ ಮತ್ತು ದೇಶದ ಮಾನವ ಸಂಪತ್ತನ್ನು ಪರಿಪೂರ್ಣವಾಗಿ ಉತ್ಪಾದನಾ ಚಟುವಟಿಕೆಗಳಲ್ಲಿ ಸದ್ಬಳಕೆ ಮಾಡಬಹುದು.

ಡಾ. ಶುಂಪೀಟರ್ ರವರು ಹೇಳುವಂತೆ ಬೃಹತ್ ಮಟ್ಟದ ಉತ್ಪಾದನೆಯು ದೇಶದಲ್ಲಿ ಕೆಲವೇ ಕೆಲವು ಉದ್ದಿಮೆಗಳಿಗೆ ವಿಫುಲ ಮಾರಾಟ ಅವಕಾಶವನ್ನು ಒದಗಿಸಿದ್ದಲ್ಲಿ ಉದ್ದಿಮೆಗಳಲ್ಲಿ ವಿಪರೀತ ಸಂಪತ್ತು ಕೇಂದ್ರೀಕರಣಗೊಳ್ಳಬಹುದು. ಇದರ ಪ್ರಯೋಜನ ಯಾವುದೇ ರೀತಿಯಲ್ಲಿ ದೊಡ್ಡ ಸಂಖ್ಯೆಯ ನಿರುದ್ಯೋಗಿ ಬಡಜನರಿಗೆ ತಲುಪದಿರಬಹುದು ಮತ್ತು ಶೋಷಣೆ ಕಾರಣದಿಂದ ದುಡಿಯುವ ವರ್ಗಕ್ಕೆ ನ್ಯಾಯಯುತ ರೀತಿಯಲ್ಲಿ ಸಿಗದಿರಬಹುದು. ದ್ವಂದ್ವ ಆರ್ಥಿಕತೆ ಸೃಷ್ಟಿಗೆ ಕಾರಣವಾಗಬಹುದು.

ಶ್ರೀಮಂತರ ಶ್ರೀಮಂತಿಕೆ ವಿಪರೀತ ಪ್ರಮಾಣದಲ್ಲಿ ಹೆಚ್ಚಾಗಬಹುದು. ಹಾಗೂ ಬಡವರು ಮತ್ತಷ್ಟು ಬಡತನದ ಕೂಪಕ್ಕೆ ತಳ್ಳಲ್ಪಡಬಹುದು.

ಮಹಾತ್ಮಾ ಗಾಂಧೀಜಿಯವರು ನಂಬಿರುವಂತೆ ಭಾರತದ ಸಂವಿಧಾನ ಗುಣಾತ್ಮಕ ಮತ್ತು ನೇರ ಪ್ರಜಾಪ್ರಭುತ್ವ ಹೊಂದಿರುವ ಗ್ರಾಮೀಣ ಪ್ರದೇಶದ ಜನರು ಅತ್ಯುತ್ತಮ ಮಾನವ ಸಂಬಂಧ ಮತ್ತು ಅಹಿಂಸಾತ್ಮಕ ತತ್ವ ಆಧಾರಿತ ಗುಡಿ ಕೈಗಾರಿಕಾ ವ್ಯವಸ್ಥೆಯ ಮೂಲಕ ಸಂಘಟನೆಗೊಳ್ಳಲು ಪ್ರೇರಣೆ ನೀಡಬೇಕು. ಮಹಾತ್ಮಾ ಗಾಂಧೀಜಿಯವರು ಗುಡಿ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವ ಅಗತ್ಯ ಬಗ್ಗೆ ಒತ್ತಿ ಹೇಳಿದ್ದಾರೆ. ಅವರ ಚಿಂತನೆ ಪ್ರಕಾರ, ಚಿಕ್ಕ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಯ ಮೂಲಕ ನಡೆಯುವ ಉತ್ಪಾದನೆಯು ಉತ್ಪಾದನೆ ನಡೆದ ಪರಿಸರದಲ್ಲಿ ವಿತರಣೆಗೊಂಡು ಅನುಭೋಗ ಕ್ರಿಯೆಗೆ ಒಳಪಡುವ ಕಾರಣದಿಂದ ಉತ್ಪಾದನೆಯು ನಿರಂತರವಾಗಿ ಮತ್ತು ನಿರಾತಂಕವಾಗಿ ನಡೆಯುತ್ತದೆ. ಹಣದ ಮಾಧ್ಯಮ ಮೂಲಕ ವಿನಿಮಯದ ಅಗತ್ಯ ಬರುವುದಿಲ್ಲ. ಹಣದ ವೃತ್ತಾಕಾರದ ಚಲನೆಗೆ ಯಾವುದೇ ತೊಂದರೆ ಬಾಧಿಸುವುದಿಲ್ಲ. ನೇರ ವಿನಿಯಮಯ ಪ್ರಾಮುಖ್ಯವನ್ನು ಪಡೆಯುತ್ತದೆ. ಆದುದರಿಂದ ಉತ್ಪಾದನೆಯು ಸ್ಥಳೀಯರ ಅವಶ್ಯಕತೆಗಳನ್ನು ತಕ್ಷಣ ಪೂರೈಸುವ ಉತ್ಪಾದನಾ ವ್ಯವಸ್ಥೆ ಆಗಿರಬೇಕು. ದೂರದ ಪ್ರದೇಶಕ್ಕೆ ಪೂರೈಕೆ ಮಾಡುವ ಅಗತ್ಯ ಬರಬಾರದು. ದೇಶದ ಎಲ್ಲಾ ಕಡೆ ಸ್ಥಳೀಯರು ಅಪೇಕ್ಷಿಸುವ ಅವಶ್ಯಕ ವಸ್ತುಗಳು ಒದಗಿಸಲ್ಪಟ್ಟಾಗ ದೂರದ ಪ್ರದೇಶಕ್ಕೆ ಅವಶ್ಯಕ ಸರಕುಗಳನ್ನು ಪೂರೈಕೆ ಮಾಡುವ ಸಮಸ್ಯೆ ಉದ್ಭವಿಸುವುದಿಲ್ಲ. ಪ್ರತಿ ಗ್ರಾಮಗಳು ಸ್ವಾವಲಂಬನೆ ಹೊಂದಬೇಕು ಎಂಬುದು ಮಹಾತ್ಮಾ ಗಾಂಧೀಜಿಯವರ ಆಶಯವಾಗಿತ್ತು. ಗ್ರಾಮೀಣ ಸಾಮಾಜಿಕ ಸ್ವರೂಪ ಅಹಿಂಸಾ ತತ್ವದ ಆಧಾರದ ಮೇಲೆ ರೂಪುಗೊಂಡಿರಬೇಕು ಎಂದು ಅವರು ನಂಬಿದ್ದರು.

1.2 ಬಲವಂತರಾಯ್ ಮೆಹತಾ ಸಮಿತಿಯ ಶಿಫಾರಸ್ಸುಗಳು

ಭಾರತದಲ್ಲಿ 1959 ಪಂಚಾಯತ್‌ರಾಜ್‌ಗೆ ಸಂಬಂಧಿಸಿದಂತೆ ಒಂದು ಐತಿಹಾಸಿಕ ದಿವಸವಾಗಿದೆ. 1959 ಪಂಚಾಯ್ತ್‌ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ಈವರೆಗೆ ಪಂಚಾಯತ್‌ಗಳು (1959) ಕೇವಲ ಸಲಹಾ ಸಾಮರ್ಥ್ಯ ಅಧಿಕಾರವನ್ನು ಮಾತ್ರವೇ ಹೊಂದಿದ್ದವು. 1959ರ ನಂತರ ಪಂಚಾಯತ್‌ಗಳು ಸಮುದಾಯ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಜವಾಬ್ದಾರಿಯನ್ನು ನಿರ್ವಹಿಸತೊಡಗಿದವು. ಈ ಕಾರ್ಯ ಜವಾಬ್ದಾರಿಯನ್ನು ಪಂಚಾಯ್ತ್‌ಗಳು ನಿರ್ವಹಿಸಲು ಬಲವಂತರಾಯ್ ಮೆಹತಾ ಸಮಿತಿಯ ವರದಿಯ ಫಲವೇ ಆಗಿರುವುದು ಇಲ್ಲೇ ಉಲ್ಲೇಖನೀಯ ಸಂಗತಿಯಾಗಿದೆ. 1957ರಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಬಲವಂತರಾಯ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಗೆ ಈ ಕೆಳಕಂಡ ಸಮಸ್ಯೆಗಳ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸೂಚಿಸಿತು. ಅವುಗಳೆಂದರೆ: (1) ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಪರಿಣಾಮಕಾರಿ ಜಾರಿಯ ಸಮಸ್ಯೆ, (2) ಆರ್ಥಿಕ ಸಮಸ್ಯೆ, (3) ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಪುನರ್ ಸಂಘಟನೆ–ರಚನೆ, (4) ರಾಷ್ಟ್ರೀಯ ವಿಸ್ತರಣಾ ಸೇವೆ, ಇವೇ ಮೊದಲಾದಂತೆ.

ಮೆಹತಾ ಸಮಿತಿಯು ಗ್ರಾಮೀಣ ಸ್ಥಳೀಯ ಸರ್ಕಾರ ವ್ಯವಸ್ಥೆಯನ್ನು ಮೂರು ಹಂತ (ತ್ರಿಸ್ತಂಭ)ದಲ್ಲಿ ಜಾರಿಗೆ ತರುವಂತೆ ವರದಿ ಸಲ್ಲಿಸಿತು. ಹಾಗೂ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಪಂಚಾಯ್ತ್‌ರಾಜ್‌ನಲ್ಲಿ ಎಂದು ಹೆಸರಿಟ್ಟು, ಪಂಚಾಯ್ತ್‌ರಾಜ್‌ನಲ್ಲಿ ಮೂರು ಹಂತದ ವಿಕೇಂದ್ರೀಕರಣವನ್ನು ಪ್ರಸ್ತಾಪಿಸಿತು. ಅವುಗಳೆಂದರೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ. ಇದನ್ನು ಚುನಾಯಿತ ಪ್ರಜಾಸತ್ತಾತ್ಮಕ ಸಂಸ್ಥೆಗಳು ಎಂದು ಕರೆಯುವ ಜೊತೆಗೆ ಪಂಚಾಯ್ತ್‌ರಾಜ್‌ನ ಈ ಕೆಳಕಂಡ ಮುಖ್ಯ ತತ್ವಗಳ ಬಗ್ಗೆ ಒತ್ತಾಸೆ ನೀಡಿತು. ಅವುಗಳೆಂದರೆ:

(1) ಸ್ಥಳೀಯ ಸ್ವಯಂ ಸರ್ಕಾರ ವ್ಯವಸ್ಥೆಯಲ್ಲಿ ಮೂರು ಹಂತವಿರಬೇಕು. ಅವುಗಳೆಂದರೆ: ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ. ಇವುಗಳ ನಡುವೆ ಪರಸ್ಪರ ಸಂಪರ್ಕ ಇರಬೇಕು.

(2) ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯ್ತ್‌ಗಳಿಗೆ ನೈಜ ಅಧಿಕಾರ ಮತ್ತು ಜವಾಬ್ದಾರಿಯನ್ನು ವರ್ಗಾಯಿಸಬೇಕು.

(3) ಈ ಪಂಚಾಯತ್‌ಗಳಿಗೆ ತಮ್ಮ ಜವಾಬ್ದಾರಿ ನಿರ್ವಹಿಸಲು ಅಗತ್ಯ ಅದಾಯದ ಮೂಲವನ್ನು ವರ್ಗಾಯಿಸಬೇಕು.

(4) ಮೂರು ಹಂತಗಳಲ್ಲಿಯು ತಮ್ಮ ತಮ್ಮ ವ್ಯಾಪ್ತಿಯ ಮಟ್ಟದ ಅಭಿವೃದ್ದಿ ಯೋಜನೆ/ಕಾರ್ಯಕ್ರಮಗಳನ್ನು ರಚಿಸಿ ಅನುಷ್ಠಾನ ಜವಾಬ್ದಾರಿಯನ್ನು ಆಯಾ ಮಂಡಳಿಗಳಿಗೆ ವಹಿಸುವುದು.

ಬಲವಂತರಾಯ್-ಮೆಹತಾ ವರದಿಯನ್ನು ಆದರಿಸಿ ಪಂಚಾಯ್ತ್‌ರಾಜ್ ವ್ಯವಸ್ಥೆಯನ್ನು ರಾಜಸ್ತಾನ್ 1959ರಲ್ಲಿ ಪ್ರಥಮ ಬಾರಿಗೆ ಜಾರಿಗೆ ಬಂದಿತು. ಅನಂತರ ಆಂಧ್ರಪ್ರದೇಶ ಸೇರಿದಂತೆ ಹಲವಾರು ರಾಜ್ಯಗಳು ಜಾರಿಗೊಳಿಸಿದವು. ಈ ಮೇಲ್ಕಂಡ ತತ್ವಗಳನ್ನು ಆದರಿಸಿ ಪಂಚಾಯ್ತ್‌ರಾಜ್ ವ್ಯವಸ್ಥೆಯ ಸ್ಥಾಪನೆಗೆ ಮೆಹತಾ ಸಮಿತಿಯು ಈ ಕೆಳಕಂಡ ಪ್ರಮುಖ ಶಿಫಾರಸ್ಸುಗಳನ್ನು ಮಾಡಿತು. ಅವುಗಳೆಂದರೆ:

1. ಸ್ಥಳೀಯ ವ್ಯಾಪ್ತಿಯ ಅಭಿವೃದ್ಧಿ ಕಾರ್ಯಗಳನ್ನು ಸ್ಥಾಯಿ ರಚಿತ ಪಂಚಾಯತ್ ಸಮಿತಿಗೆ ವಹಿಸುವುದು.
2. ಪಂಚಾಯತ್ ಸಮಿತಿಯ ಪಂಚಾಯತ್‌ಗಳ ಅಧ್ಯಕ್ಷರುಗಳು ಮತ್ತು ಕೋ-ಆಪ್ಟ್ ಮಾಡಿಕೊಂಡ ಸದಸ್ಯರು (ಪರಿಶಿಷ್ಟ ಜಾತಿ/ಮಹಿಳೆಯರು, ಇತ್ಯಾದಿ)ಗಳನ್ನು ಒಳಗೊಂಡಿರಬೇಕು. ಪ್ರತಿಯೊಂದು ರಾಜ್ಯವು ತಮ್ಮದೇ ಆದ ರೀತಿಯ ಪಂಚಾಯತ್ ಸಮಿತಿಯ ಮಾದರಿಯನ್ನು ರಚಿಸಿಕೊಳ್ಳಬಹುದು. ಪಂಚಾಯತ್ ಸಮಿತಿಯ ವ್ಯಾಪ್ತಿಗೆ ಬರುವ ಶಾಸಕರು ಮತ್ತು ಪಾರ್ಲಿಮೆಂಟ್ ಸದಸ್ಯರು ಸಹ ಸದಸ್ಯರು ಆಗಿರುವುದು. ಚುನಾಯಿತ ಅಧ್ಯಕ್ಷರು ಅಧಿಕಾರ ವಹಿಸಿ ಕೊಳ್ಳುವವರೆಗೆ ಸಮಿತಿಯ ಅಭಿವೃದ್ಧಿ ಅಧಿಕಾರಿ ಅಧ್ಯಕ್ಷರಾಗಿರುವುದು.
3. ಜಿಲ್ಲಾ ಪರಿಷತ್ ಪಂಚಾಯತ್ ಸಮಿತಿಗಳ ಎಲ್ಲಾ ಅಧ್ಯಕ್ಷರುಗಳು, ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರು, ಶಾಸಕರು ಮತ್ತು ಕೋ-ಆಪ್ಟ್ ಮಾಡಿಕೊಂಡ ಸದಸ್ಯರುಗಳನ್ನು ಒಳಗೊಂಡಿರುವುದು.

4. ಜಿಲ್ಲಾ ಪರಿಷತ್‌ಗಳು ತನ್ನದೇ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳುವುದು. ಜಿಲ್ಲಾ ಕಲೆಕ್ಟರ್ ಪರಿಷತ್‌ನ ಸದಸ್ಯರಾಗಿದ್ದು, ಜಿಲ್ಲಾ ಪರಿಷತ್ ಮಂಡಳಿಯಂತೆ, ಸಂಯೋಜನಾಧಿಕಾರಿ ಮಂಡಳಿಯಂತೆ ಮತ್ತು ಮೇಲ್ವಿಚಾರಣಾ ಮಂಡಳಿಯಂತೆ ಹಲವಾರು ಕಾರ್ಯಕ್ರಮಗಳನ್ನು ಅಭಿವೃದ್ಧಿ ಪಡಿಸುವುದು..
5. ಪಂಚಾಯ್ತಿಗಳ ಆಯ-ವ್ಯಯಗಳನ್ನು ಪಂಚಾಯ್ತಿ ಸಮಿತಿಯು, ಪಂಚಾಯ್ತಿ ಸಮಿತಿಗಳ ಆಯ-ವ್ಯಯವನ್ನು ಜಿಲ್ಲಾ ಪರಿಷತ್ ಪರಿಶೀಲಿಸುವುದು.
6. ಪಂಚಾಯ್ತಿ ಸಮಿತಿಯು ಹಿಂದಿನ ಎನ್.ಇ.ಎಸ್ ಮತ್ತು ಜಿಲ್ಲಾ ಬೋರ್ಡ್‌ಗಳನ್ನು ನಿರ್ವಹಿಸುತ್ತಿದ್ದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು.
7. ಪಂಚಾಯ್ತಿ ಸಮಿತಿಯು ತನ್ನದೇ ಆದ ಸ್ವತಂತ್ರ ಆದಾಯದ ಮೂಲವನ್ನು ಹೊಂದಿರುವುದು.
8. ಬ್ಲಾಕ್ ಅಭಿವೃದ್ಧಿ ಅಧಿಕಾರಿ ಪಂಚಾಯತ್ ಸಮಿತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಮತ್ತು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವುದು.
9. ಗ್ರಾಮ ಹಂತದಲ್ಲಿ ಅಭಿವೃದ್ಧಿ ಕಾರ್ಯದ ಮುಖ್ಯ ಏಜೆನ್ಸಿಯಾಗಿ ಪಂಚಾಯ್ತಿಗಳು ಕಾರ್ಯನಿರ್ವಹಿಸುವುದು.
10. ಗ್ರಾಮ ಮಟ್ಟದ ಕೆಲಸಗಾರರು ಪಂಚಾಯ್ತಿಗಳ ಅಭಿವೃದ್ಧಿ ಕಾರ್ಯದಶಿಯಾಗಿರುವುದು.
11. ಈ ಸಮಿತಿಯ ಮೇಲೆ ರಾಜ್ಯ ಸರ್ಕಾರ ನಿಯಂತ್ರಣದ ಅಧಿಕಾರವನ್ನು ಹೊಂದಿರುವುದು ಹಾಗೂ ಇವುಗಳನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.

ಒಟ್ಟಾರೆ ಮೆಹತಾ ಸಮಿತಿಯ ವರದಿಯನ್ನು ಒಂದು ಐತಿಹಾಸಿಕ ದಾಖಲೆಯೆಂದು ಕರೆಯಲಾಗುವ ಜೊತೆಗೆ ಮಾಸ್ಟರ್ ಬ್ಲೂಪ್ರಿಂಟ್ ಎಂದು ಕರೆಯಲಾಗುತ್ತದೆ ಹಾಗೂ ಪಂಚಾಯ್ತಿರಾಜ್‌ನ ಬೈಬಲ್ ಎಂದೂ ವರ್ಣಿಸಲಾಗುತ್ತದೆ. ಈ ಮೆಹತಾ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ರಾಜಸ್ತಾನ್ ಮತ್ತು ಆಂಧ್ರ ಪ್ರದೇಶಗಳು ಪ್ರಜಾಸತ್ತಾತ್ಮಕ ವಿಕೇಂದ್ರಿಕರಣವನ್ನು ಜಾರಿಗೆ ತಂದರೆ, 1963ರ ವೇಳೆಗೆ ಭಾರತದ ಬಹುತೇಕ ರಾಜ್ಯಗಳು ಜಾರಿಗೊಳಿಸಿದವು. 1964-65ರ ವೇಳೆಗೆ ಭಾರತದ ಎಲ್ಲಾ ರಾಜ್ಯಗಳು ಶಾಸನ ರೂಪಿಸುವ ಮೂಲಕ ಪಂಚಾಯ್ತಿರಾಜ್ ವ್ಯವಸ್ಥೆಗೆ ಶಾಸನಬದ್ಧತೆಯನ್ನು ನೀಡಿದವು.

1.3 **ಅಶೋಕ ಮೆಹತಾ ವರದಿ**

ಬಲವಂತರಾಯ್ ಮೆಹತಾರವರ ಶಿಫಾರಸ್ಸುಗಳನ್ನು ಆಧರಿಸಿ ಬಹುತೇಕ ರಾಜ್ಯಗಳು ತಮ್ಮದೇ ಆದ ಶಾಸನಗಳ ಮೂಲಕ ಪಂಚಾಯ್ತಿ ಸಂಸ್ಥೆಗಳನ್ನು ಸೃಷ್ಟಿಸಿದವು. ಆದರೆ ಪಂಚಾಯ್ತಿರಾಜ್ ಸಂಸ್ಥೆಗಳ ಕಾರ್ಯ ಚಟುವಟಿಕೆ ಅತ್ಯಂತ ಸಿಮೀತ ಕ್ಷೇತ್ರಕ್ಕೆ ಮಾತ್ರವೇ ವಿಸ್ತರಣೆಗೊಂಡವು. ಇವುಗಳ ಆದಾಯ ಮೂಲಗಳು ಸಹ ಅತ್ಯಂತ ದುರ್ಬಲವಾಗಿತ್ತು. ಕೆಲರಾಜ್ಯಗಳು ಪಂಚಾಯ್ತಿಗಳ ಚುನಾವಣೆಯನ್ನು ನಡೆಸದೇ ಮುಂದೂಡುತ್ತಾ ಬಂದವು. ಈ ಎಲ್ಲಾ ಹಿನ್ನೆಲೆಯಲ್ಲಿ ಡಿಸೆಂಬರ್ 1977ರಲ್ಲಿ ಭಾರತ ಸರ್ಕಾರ ಅಶೋಕ ಮೆಹತಾರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಕ ಮಾಡಿತು. ಈ ಸಮಿತಿಯು ಪಂಚಾಯ್ತಿರಾಜ್ ಸಂಸ್ಥೆಗಳ

ಸಬಲೀಕರಣಕ್ಕಾಗಿ 132 ಶಿಫಾರಸ್ಸುಗಳನ್ನು ಆಗಸ್ಟ್ 1978 ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು. ಇದರ ಮುಖ್ಯಾಂಶಗಳು ಈ ಕೆಳಕಂಡಂತಿದೆ.

i. ಪ್ರಜಾಸತ್ತಾತ್ಮಕ ಮೇಲ್ವಿಚಾರಣೆಯ ಮೂಲಕ ಕಾರ್ಯಾತ್ಮಕ ಆಡಳಿತಾತ್ಮಕ ವಿಕೇಂದ್ರಿಕರಣದ ಅಗತ್ಯತೆ.

ii. ಎರಡು ಹಂತದ ಪಂಚಾಯ್ತ್‌ರಾಜ್ ವ್ಯವಸ್ಥೆ ಜಾರಿ. ಜಿಲ್ಲೆ ಮತ್ತು 15,000 ದಿಂದ 20,000 ಜನಸಂಖ್ಯೆಗಳನ್ನು ಒಳಗೊಂಡ ಗ್ರಾಮಗಳ ಗುಂಪಿನ ಮಂಡಲ ಪಂಚಾಯತ್‌ಗಳು.

iii. ಪಂಚಾಯ್ತ್‌ರಾಜ್ ಸಂಸ್ಥೆಗಳಿಗೆ ಕಡ್ಡಾಯವಾಗಿ ತೆರಿಗಾ ಅಧಿಕಾರ ಹೊಂದಿರಬೇಕು ಮತ್ತು ತಮ್ಮದೇ ಆದ ಮೂಲವನ್ನು ಕ್ರೋಢೀಕರಿಸಲು ಅವಕಾಶವಿರಬೇಕು.

iv. ಆದಾಯ ಸಂಬಂಧ ರಾಜ್ಯ ಸರ್ಕಾರಗಳನ್ನೇ ಅವಲಂಬಿಸುವುದನ್ನು ಆದಷ್ಟು ಕಡಿಮೆ ಮಾಡಬೇಕು.

v. ಪಂಚಾಯ್ತ್ ಸಂಸ್ಥೆಗಳು ಮನರಂಜನಾ ತೆರಿಗೆ, ಮನೆ ಕಂದಾಯ, ಭೂಮಿ ಮೇಲೆ ವಿಶೇಷ ತೆರಿಗೆ, ಇವೇ ಮೊದಲಾದಂತೆ ಕೆಲ ವಿಷಯಗಳ ಮೇಲೆ ತೆರಿಗೆ ವಿಧಿಸಲು ಹಾಗೂ ಸಂಗ್ರಹಿಸಲು ಅವಕಾಶವಿರಬೇಕು.

vi. ಪಂಚಾಯತ್‌ರಾಜ್‌ದ ವ್ಯವಹಾರದಲ್ಲಿ ರಾಜಕೀಯ ಪಕ್ಷಗಳು ಮುಕ್ತವಾಗಿ ಭಾಗವಹಿಸಲು ಅವಕಾಶವಿರಬೇಕು.

vii. ಗ್ರಾಮ ಕೆಲ ವಿಶೇಷ ಸಾಮಾಜಿಕ ಮತ್ತು ಆರ್ಥಿಕ ಗುಂಪುಗಳ ಹಿತಾಸಕ್ತಿಗಳ ರಕ್ಷಣೆ ಹಾಗೂ ಪ್ರೋತ್ಸಾಹಕ್ಕೆ ಅವಕಾಶ ಕಲ್ಪಿಸಿಕೊಡಬೇಕು.

viii. ನಿಯತವಾಗಿ ಸಾಮಾಜಿಕ ಲೆಕ್ಕ ತಪಾಸಣೆಯು ಜಿಲ್ಲಾ ಮಟ್ಟದ ಆಡಳಿತ ಏಜೆನ್ಸಿಯಿಂದ ನಡೆಸಬೇಕು. ಅಲ್ಲದೆ ಶಾಸಕರ ಸಮಿತಿಗಳ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಗುಂಪುಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಿದ ಹಣ ಸರಿಯಾಗಿ ವೆಚ್ಚ ಮಾಡಲಾಗಿದೆಯೆ ಅಥವಾ ಇಲ್ಲವೆ ಎಂಬುದರ ತನಿಖೆ ನಡೆಸುವ ಅಧಿಕಾರವಿರಬೇಕು.

ix. ಪಂಚಾಯ್ತ್ ಸಂಸ್ಥೆಗಳಲ್ಲಿ ಪರಿಶಿಷ್ಟಜಾತಿ/ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ಸರಿಯಾದ ಪ್ರಾತಿನಧ್ಯ ದೊರೆತಿದೆಯೆ ಅಥವಾ ಇಲ್ಲವೆ ಎಂಬುದನ್ನು ಪರಿಶೀಲಿಸಲು ಶಾಸಕರ ಸಮಿತಿಯನ್ನು ರಚಿಸಿರಬೇಕು.

x. ರಾಜ್ಯ ಸರ್ಕಾರವು ಯಾವುದಾದರೂ (ಪಾರ್ಟಿಸಿನ್ ಆಧಾರದ) ಆಧಾರದ ಮೇಲೆ ಪಂಚಾಯ್ತ್ ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡಬಾರದು.

xi. ಪಂಚಾಯ್ತ್ ಸಂಸ್ಥೆಗಳ ಚುನಾಯಿತ ಅಧಿಕಾರ ಅವಧಿ ಮುಗಿದ ಆರು ತಿಂಗಳೊಳಗೆ ಚುನಾವಣೆ ನಡೆಸಬೇಕು.

xii. ನಗರದ ಮೂಲ ಅವಶ್ಯಕತೆಗಳಾದ ರಸ್ತೆ, ಕುಡಿಯುವ ನೀರು, ವೈದ್ಯಕೀಯ ಸೌಲಭ್ಯ, ಉದ್ಯೋಗ, ಶಿಕ್ಷಣ ಸೌಲಭ್ಯಗಳನ್ನು ಗ್ರಾಮಗಳಿಗೂ ವಿಸ್ತರಿಸಬೇಕು.

ಈ ಮೇಲಿನ ವರದಿಗಳು ಬಂದರು ಸಹ ಪಂಚಾಯ್ತ್‌ರಾಜ್ ವ್ಯವಸ್ಥೆಯ ಬಗ್ಗೆ ಕರ್ನಾಟಕ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳನ್ನು ಹೊರತುಪಡಿಸಿ, ಇತರೆ ರಾಜ್ಯಗಳು ತಮಗೆ ಸಂಬಂಧಿಸಿದ ವಿಷಯವಲ್ಲ ಎಂದು ವರ್ತಿಸಿದರು ಸಹ ಕೇಂದ್ರ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಇದೇ ಉದಾಸೀನ ಮನೋಭಾವವನ್ನು ಕೇಂದ್ರ ಸರಕಾರ ಬಹಳ ವರ್ಷಗಳವರೆಗೆ ಹೊಂದಲು ಸಾಧ್ಯವಾಗಲಿಲ್ಲ. ಕೇಂದ್ರದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಅಧಿಕಾರಾವಧಿಯಲ್ಲಿ ಕೇಂದ್ರೀಕೃತ ಆಡಳಿತದ ಬಗ್ಗೆ ಹೆಚ್ಚು ಆಸ್ಥೆ ಇದ್ದರೂ ಸಹ, ಕೆಲಬುದ್ಧಿ ಜೀವಿಗಳು, ಸಾರ್ವಜನಿಕ ಅಭಿಪ್ರಾಯ ಮೂಡಿಸುವಲ್ಲಿ ಸಫಲರಾಗಿ ವಿಕೇಂದ್ರೀಕರಣದ ಬಗ್ಗೆ ಆಸ್ಥೆ ವಹಿಸಬೇಕಾಗಿ ಬಂದಿತು. ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ಸರ್ಕಾರ ಅಧಿಕಾರ ವಿಕೇಂದ್ರೀಕರಣದ ಸಂಬಂಧ ಹೊಸ-ಹೊಸ ಪ್ರಯೋಗಗಳನ್ನು ನಡೆಸಿ ಗಮನ ಸೆಳೆದವು. ಗ್ರಾಮೀಣ ಅಭಿವೃದ್ಧಿ ಸಂಬಂಧ ಗ್ರಾಮೀಣ ಜನತೆಯೇ ಪಾಲ್ಗೊಳ್ಳುವಂತಹ ಕ್ರಮ ಅಧಿಕಾರ ವಿಕೇಂದ್ರೀಕರಣದಿಂದ ಮಾತ್ರವೇ ಸಾಧ್ಯ ಎಂಬ ಅಭಿಪ್ರಾಯ ಮೂಡಲು ಸಾಧ್ಯವಾಯಿತು.

1984ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆಯ ನಂತರ ಪ್ರಧಾನ ಮಂತ್ರಿಯಾದ ಶ್ರೀ ರಾಜೀವ ಗಾಂಧಿಯವರು ಪಂಚಾಯ್ತ್‌ರಾಜ್ ವ್ಯವಸ್ಥೆಯ ಬಗ್ಗೆ ಆಸಕ್ತಿವಹಿಸಿದ್ದರು. 1989ರಲ್ಲಿ ಪಂಚಾಯ್ತ್‌ರಾಜ್ ಸಂಬಂಧ ಎಂದು ಮಸೂದೆಯನ್ನು ಪಾರ್ಲಿಮೆಂಟ್‌ನಲ್ಲಿ ಅನುಮೋದನೆಗೆ ಮಂಡಿಸಿದರು. ಆದರೆ ಈ ಮಸೂದೆ ಹಾಗೂ ಸಂವಿಧಾನದ 64ನೇ ಸಂವಿಧಾನ ತಿದ್ದುಪಡಿಗಳ ನಡುವೆ ವಿವಾದ ಉಂಟಾದ್ದರಿಂದ ಲೋಕಸಭೆಯಲ್ಲಿ ಅಂಗೀಕರಿಸದರೂ, ರಾಜ್ಯಸಭೆಯಲ್ಲಿ ಕಾಂಗ್ರೆಸ್ ಬಹುಮತ ಹೊಂದಿರದಿದ್ದ ಕಾರಣ ತಿರಸ್ಕೃತಗೊಂಡಿತು. ಹಾಗೂ ಅನಂತರ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡಿತು. ಆದರೆ ಸ್ಥಳೀಯ ಸರ್ಕಾರಗಳಿಗೆ ಸಂವಿಧಾನಾತ್ಮಕ ಸ್ಥಾನ-ಮಾನ ನೀಡುವ ವಿಚಾರವನ್ನು ಕೈಬಿಡಲಾಗಲಿಲ್ಲ. ಅನಂತರ ಅಧಿಕಾರಕ್ಕೆ ಬಂದ ವಿ.ಪಿ.ಸಿಂಗ್ ನೇತೃತ್ವದ ಕೇಂದ್ರ ಸರ್ಕಾರ ಸೆಪ್ಟಂಬರ್ 1990ರಲ್ಲಿ 73 ಹಾಗೂ 74ನೇ ಸಂವಿಧಾನ ತಿದ್ದುಪಡಿಸಿಗಳನ್ನು ಪಾರ್ಲಿಮೆಂಟ್‌ನಲ್ಲಿ ಮಂಡಿಸಿತು. ಆದರೆ ವಿ.ಪಿ.ಸಿಂಗ್ ಸರ್ಕಾರ ಪತನಗೊಂಡಿದ್ದರಿಂದ ಸಂವಿಧಾನ ತಿದ್ದುಪಡಿಗಳಿಗೆ ಅಂಗೀಕಾರ ದೊರೆಯಲಿಲ್ಲ. 1991ರಲ್ಲಿನ ಸಾರ್ವತ್ರಿಕ ಚುನಾವಣೆಯಲ್ಲಿ ಯಾವುದೇ ಪಕ್ಷ ಬಹುಮತ ಪಡೆಯಲು ವಿಫಲವಾದವು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿ, ಫಲವಾಗಿ ಪಿ.ವಿ.ನರಸಿಂಹರಾವ್ ನೇತೃತ್ವದಲ್ಲಿ ಕೇಂದ್ರದಲ್ಲಿ ಅಧಿಕಾರ ಹಿಡಿಯಿತು. ಈ ಅವಧಿಯಲ್ಲಿ ರಾಜೀವ ಗಾಂಧಿಯವರ ಅಧಿಕಾರಾವಧಿಯಲ್ಲಿ ಸಿದ್ದಪಡಿಸಿದ ಮಸೂದೆಗೆ ಎಲ್ಲಾ ರಾಜಕೀಯ ಪಕ್ಷಗಳ ಸಹಮತದೊಂದಿಗೆ ಡಿಸೆಂಬರ್ 1992ರಲ್ಲಿ ಪಾರ್ಲಿಮೆಂಟ್ ಅಂಗೀಕಾರದೊಂದಿಗೆ ಸಂವಿಧಾನಕ್ಕೆ 73 ಹಾಗೂ 74ನೇ ಸಂವಿಧಾನ ತಿದ್ದುಪಡಿ ತರುವ ಮೂಲಕ ಪಂಚಾಯ್ತ್‌ರಾಜ್ ವ್ಯವಸ್ಥೆಗೆ ಬಲತಂದು ಕೊಡಲಾಯಿತು. ಈ ತಿದ್ದುಪಡಿಗಳು ಏಪ್ರಿಲ್ 24, 1993 ರಿಂದ ಕಾರ್ಯ ಜಾರಿಗೆ ಬಂದವು. ಇದು ಸ್ಥಳೀಯ ಸರ್ಕಾರ ಸ್ಥಾಪನೆಯ ಮತ್ತೊಂದು ಐತಿಹಾಸಿಕ ದಾಖಲೆಯೆನಿಸಿದ್ದು, ಇದು ಪಂಚಾಯ್ತ್‌ರಾಜ್ ವ್ಯವಸ್ಥಗೆ ಅರ್ಥಾತ್ ಸ್ಥಳೀಯ ಸರ್ಕಾರ ವ್ಯವಸ್ಥೆಗೆ ಸಂವಿಧಾನಾತ್ಮಕ ಸ್ಥಾನ-ಮಾನ ತಂದು ಕೊಟ್ಟಿತು.

1.4 73ನೇ ಸಂವಿಧಾನ ತಿದ್ದುಪಡಿ

ಭಾರತದಲ್ಲಿ ಸ್ಥಳೀಯ ಸರಕಾರವು ತನ್ನದೇ ಆದ ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ. ಬ್ರಿಟಿಷರ ಆಡಳಿತಾವಧಿಯಲ್ಲಿಯೇ 1967 ಮದರಾಸಿನ ಮುನಿಸಿಪಲ್ ಕಾರ್ಪೋರೇಷನ್, 1926ರಲ್ಲಿ ಬಾಂಬೆ ಮತ್ತು ಕಲ್ಕತ್ ಮುನಿಸಿಪಲ್ ಕಾರ್ಪೋರೇಷನ್, ಇವೇ ಮೊದಲಾದವು ಅಸ್ಥಿತ್ವಕ್ಕೆ ಬಂದವು. 1993ರಲ್ಲಿ ಬೆಂಗಳೂರು ಮತ್ತು ಮೈಸೂರಿನಲ್ಲಿ ಮುನಿಸಿಪಲ್ ಕಾರ್ಪೋರೇಷನನ್ನು ಸ್ಥಾಪಿಸಲಾಯಿತು. ಭಾರತವು ಸ್ವಾತಂತ್ರ್ಯ ನಂತರ ಸಂಸದೀಯ ಪದ್ಧತಿಯ ಸರ್ಕಾರವನ್ನು ಹೊಂದಿದ್ದು, ಸಂಯುಕ್ತ ಸರ್ಕಾರ ಪದ್ಧತಿಯನ್ನು ಅಳವಡಿಸಿದೆ. ಇಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳ ಜೊತೆಗೆ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯನ್ವಯ ಗ್ರಾಮ ಪಂಚಾಯತ್ ನಗರ ಸ್ಥಳೀಯ ಸರ್ಕಾರಗಳಿಗೆ ಅವಕಾಶ ಕಲ್ಪಿಸಿಕೊಟ್ಟಿವೆ. ಭಾರತದಲ್ಲಿ ಸ್ಥಳೀಯ ಸರ್ಕಾರಗಳು ಸಂವಿಧಾನದ 246ನೇ ವಿಧಿಯನ್ವಯ ರಾಜ್ಯ ಶಾಸಕಾಂಗದ ಮೂಲಕ ರಚಿತವಾದಂತಹವುಗಳಾಗಿವೆ, ಇವು ರಾಜ್ಯದ ಅಧೀನದಲ್ಲಿ ಕಾರ್ಯ ನಿರ್ವಹಿಸಿದರೂ ಸ್ವಾಯತ್ತತಾ ಸ್ಥಳೀಯ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತವೆ.

ಭಾರತದಲ್ಲಿ ಸ್ಥಳೀಯ ಸಂಸ್ಥೆಗಳ ಸ್ಥಾಪನಾ ಮುಖ್ಯ ಉದ್ದೇಶಗಳೆಂದರೆ; ಸ್ಥಳೀಯ ಜನತೆ ತಮ್ಮನ್ನು ತಾವೇ ಆಳ್ವಿಕೆ ಮಾಡಿಕೊಳ್ಳಲು ಸಮರ್ಥರಾಗಿ ಮಾಡುವುದು. ಆಯಾ ಸ್ಥಳೀಯ ಪ್ರದೇಶದ ವಿಶೇಷ ಹಿತಾಸಕ್ತಿಗಳನ್ನು, ರಾಜಕೀಯ ಪ್ರಜ್ಞೆಯನ್ನು ಮೂಡಿಸುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಯ ಜವಬ್ದಾರಿಯನ್ನು ಆದಷ್ಟು ಕಡಿಮೆ ಮಾಡುವುದು, ಇವೇ ಮೊದಲಾದವುಗಳಾಗಿವೆ. ಭಾರತದಲ್ಲಿನ ಸ್ಥಳೀಯ ಸಂಸ್ಥೆಗಳು ರಾಷ್ಟ್ರಾದ್ಯಂತ ಏಕ ಪ್ರಕಾರದಲ್ಲಿಲ್ಲ. ಪ್ರತಿಯೊಂದು ರಾಜ್ಯಗಳು ತಮ್ಮದೇ ಆದ ರೀತಿಯಲ್ಲಿ ರಚಿಸಿಕೊಂಡಿವೆ. ಆದರೆ ಕೇಂದ್ರ ಸರ್ಕಾರವು ಸಂವಿಧಾನ 243ನೇ ವಿಧಿಗೆ 73 ಮತ್ತು 74ನೇ ಸಂವಿಧಾನ ತಿದ್ದುಪಡಿಯನ್ನು ಮಾಡುವ ಮೂಲಕ ರಾಷ್ಟ್ರಾದ್ಯಂತ ಏಕ ಪ್ರಕಾರದ ಸ್ಥಳೀಯ ಸಂಸ್ಥೆಗಳನ್ನು ರಚಿಸುವಂತಹ ಪ್ರಯತ್ನ ನಡೆಸಿತು.

ಸಂವಿಧಾನದ 73ನೇ ತಿದ್ದುಪಡಿಯ ಗ್ರಾಮ ಪಂಚಾಯ್ತಿ ರಚನೆಗೆ ಸಂಬಂಧಿಸಿದ್ದರೆ, 74ನೇ ತಿದ್ದುಪಡಿಯು ನಗರದ ಮುನ್ಸಿಪಾಲಿಟಿಗಳ ರಚನೆಗೆ ಸಂಬಂಧಿಸಿವೆ. ಈ ತಿದ್ದುಪಡಿಗಳ ಆಧಾರದ ಮೇಲೆ ಸ್ಥಳೀಯ ಸರ್ಕಾರಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ;

1. ಗ್ರಾಮ ಪಂಚಾಯತ್‌ಗಳು
2. ಮುನಿಸಿಪಾಲಿಟಿಗಳು

ಸಂವಿಧಾನಕ್ಕೆ 73 ಹಾಗೂ 74ನೇ ತಿದ್ದುಪಡಿಯನ್ನು ತರುವ ಮೂಲಕ ಸ್ಥಳೀಯ ಸರ್ಕಾರಗಳ ಬದಲಾವಣೆಗೆ ಮತ್ತು ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಅವಕಾಶ ನೀಡಿದೆ. ಅಲ್ಲದೆ ಸ್ಥಳೀಯ ಸರ್ಕಾರಗಳಿಗೆ ಸಂವಿಧಾನಾತ್ಮಕ ಸ್ಥಾನಮಾನವನ್ನು ಕಲ್ಪಿಸಿಕೊಟ್ಟಂತಾಗಿದೆ.

ಪಂಚಾಯತ್‌ನ ಹೆಸರಿನಲ್ಲಿ ಸಂವಿಧಾನದ 243ನೇ ವಿಧಿಗೆ 243(ಎ) ಯಿಂದ 243(ಅ) ವರೆಗೆ 16 ಹೊಸ ವಿಧಿಗಳನ್ನು ಅಳವಡಿಸಲಾಯಿತು. ಹಾಗೂ ಸಂವಿಧಾನದ 74ನೇ ತಿದ್ದುಪಡಿಗೂ ಸಹ 1992ರಲ್ಲಿ ಪಾರ್ಲಿಮೆಂಟ್ ಅನುಮೋದನೆ ನೀಡಿತು. ಈ ತಿದ್ದುಪಡಿಯು ಜೂನ್ 1, 1993ರಿಂದ ಜಾರಿಗೆ ಬಂದಿತು. ಈ ಮೂಲಕ ಭಾಗವನ್ನು ಹಾಗೂ 12ನೇ ಅನುಸೂಚಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು. ಈ ಭಾಗದಲ್ಲಿ

ಸಂವಿಧಾನದ 243ನೇ ವಿಧಿಗೆ 243(ಪಿ) ಯಿಂದ 243(2ಉ)ವರೆಗೆ ನೂತನವಾಗಿ 18 ಹೊಸ ವಿಧಿ ಸೇರಿಲಾಯಿತು. 73ನೇ ತಿದ್ದುಪಡಿಯ ಮೂಲಕ ಭಾಗ-9ನ್ನು ಸಂವಿಧಾನಕ್ಕೆ ಹೊಸದಾಗಿ ಸೇರಿಸಲಾಯಿತು. ಅದರ ಪೂರ್ಣ ವಿವರ ಇಂತಿದೆ

(1) **243ನೇ ವಿಧಿ:** ಸಂವಿಧಾನದ 243ನೇ ವಿಧಿಗೆ ಸೇರಿಸಿರುವ ವಿವರ ಇಂತಿದೆ. 243(ಎ) ಜಿಲ್ಲೆ ಎಂದರೆ ರಾಜ್ಯದಲ್ಲಿನ ಜಿಲ್ಲೆ, 243(ಬಿ) ಗ್ರಾಮಸಭೆ ಎಂದರೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ನೋಂದಾಯಿತ ಮತದಾರರ‍್ನನ್ನು ಒಳಗೊಂಡ ಮತದಾರ ವರ್ಗ. 243(ಸಿ) ಮಧ್ಯಂತರ ಮಟ್ಟ ಎಂದರೆ ಜಿಲ್ಲೆ ಮತ್ತು ಗ್ರಾಮಗಳ ನಡುವೆ ಇರುವ ಒಂದು ಭಾಗ. ಈ ಭಾಗವನ್ನು ರಾಜ್ಯದ ರಾಜ್ಯಪಾಲರು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿರುವುದು. 243(ಡಿ) ಎಂದರೆ ಸಂವಿಧಾನದ 243(ಬಿ) ಪ್ರಕಾರ ರಚಿತವಾದ ಸ್ವಾಯತ್ತತ ಸರ್ಕಾರದ ಒಂದು ಸಂಸ್ಥೆಯಾಗಿರುವ ಪಂಚಾಯತಿ 243(ಇ) ಪಂಚಾಯಿತಿ ಪ್ರದೇಶ ಎಂದರೆ ಪಂಚಾಯಿತಿ ಕೇಂದ್ರ ವ್ಯಾಪ್ತಿ, 243(ಎಫ್) ಜನಸಂಖ್ಯೆ ಎಂದರೆ ಹಿಂದಿನ ಜನಗಣತಿಯು ಪ್ರಕಟಿಸಿರುವ ಅಂಕಿ ಅಂಶಗಳನ್ನು ಒಳಗೊಂಡ ಜನಸಂಖ್ಯೆ, 243(ಜಿ) ಗ್ರಾಮ ಎಂದರೆ ರಾಜ್ಯಪಾಲರು ಅಧಿಸೂಚನೆಯ ಮೂಲಕ ಗ್ರಾಮವೆಂದು ನಿರ್ದಿಷ್ಟಪಡಿಸಿದ ಗ್ರಾಮ ಅಥವಾ ಹಾಗೆ ನಿರ್ದಿಷ್ಟಪಡಿಸಿದ ಗ್ರಾಮಗಳ ಸಮೂಹ. ಇದರ ಸಂಕ್ಷಿಪ್ತ ವಿವರಗಳು **ಈ ಕೆಳಕಂಡಂತಿದೆ:**

(2) **243 (ಎ)ನೇ ವಿಧಿ:** ಗ್ರಾಮಸಭೆಯು ರಾಜ್ಯ ವಿಧಾನ ಮಂಡಲದ ಕಾನೂನಿನ ಮೂಲಕ ನಿಗದಿಪಡಿಸಿರುವ ಅಧಿಕಾರಗಳನ್ನು ಗ್ರಾಮ ಮಟ್ಟದಲ್ಲಿ ಬದಲಾಯಿಸಬಹುದು ಹಾಗೂ ಕಾರ್ಯಗಳನ್ನು ನಿರ್ವಹಿಸಬಹುದು.

(3) **243 (ಬಿ)ನೇ ವಿಧಿ:** ಸಂವಿಧಾನದ 73ನೇ ತಿದ್ದುಪಡಿಯಲ್ಲಿ 243(ಎ) ವಿಧಿಯನ್ನು ಹೊಸದಾಗಿ ಸೇರಿಸಿದ್ದು, ಇದರಲ್ಲಿ 243(1)ರ ಪ್ರಕಾರ ಪ್ರತಿಯೊಂದು ರಾಜ್ಯದಲ್ಲಿಯು ಗ್ರಾಮ, ಮಧ್ಯಂತರ ಹಾಗೂ ಜಿಲ್ಲಾ ಮಟ್ಟದ ಪಂಚಾಯತ್‌ಗಳನ್ನು ರಚಿಸತಕ್ಕದು. 243(ಇ) ಇಪ್ಪತ್ತು ಲಕ್ಷಕ್ಕೂ ಮೀರದಷ್ಟು ಜನಸಂಖ್ಯೆಯಿರುವ ರಾಜ್ಯದಲ್ಲಿ ಮಧ್ಯಂತರ ಮಟ್ಟದ ಪಂಚಾಯತಿ ರಚಿಸಬೇಕಾಗಿಲ್ಲ. 243(1)ನೇ ವಿಧಿಯಲ್ಲಿ ಹೇಳಿದ್ದರು ಸಹ.

(4) **243 (ಸಿ)ನೇ ವಿಧಿ:** ಈ ವಿಧಿಯು 243(ಬಿ)(1)ಕ್ಕೆ ಅನುಗುಣವಾಗಿ ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ ಪಂಚಾಯಿತಿಗಳ ರಚನೆಗೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಬಹುದು. ಆದರೆ ವಿವಿಧ ಮಟ್ಟದ ಪಂಚಾಯಿತಿಯ ಕ್ಷೇತ್ರದ ಜನಸಂಖ್ಯೆ ಮತ್ತು ಚುನಾವಣೆ ಮೂಲಕ ಭರ್ತಿ ಮಾಡಬೇಕಾದ ಸದಸ್ಯರ ಸಂಖ್ಯೆ ಸಾಧ್ಯವಾದಷ್ಟು ಒಂದೇ ರೀತಿಯಾಗಿರಬೇಕು. 243(ಸಿ)(2) ಪಂಚಾಯಿತಿಗೆ ಎಲ್ಲಾ ಸ್ಥಾನಗಳನ್ನು ಪ್ರತ್ಯಕ್ಷ ಚುನಾವಣೆಯ ಮೂಲಕ ಚುನಾವಣಾ ಕ್ಷೇತ್ರದಿಂದ ಆಯ್ಕೆಯಾಗುವಂತೆ ಒಂದೇ ರೀತಿಯಲ್ಲಿ ವಿಭಾಗಿಸುವುದು. 243(ಸಿ)(3)ರ ಪ್ರಕಾರ ರಾಜ್ಯ ವಿಧಾನ ಮಂಡಲವು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮಧ್ಯಂತರ ಪಂಚಾಯಿತಿಗೆ ಮಧ್ಯಂತರ ಪಂಚಾಯಿತಿಗಳಿಲ್ಲದ ಕಡೆ ಅವರಿಗೆ ಜಿಲ್ಲಾ ಪಂಚಾಯಿತಿಗಳಲ್ಲಿ, ಮಧ್ಯಂತರ ಪಂಚಾಯಿತಿಗಳ ಅಧ್ಯಕ್ಷರು ಜಿಲ್ಲಾ ಪಂಚಾಯಿತಿಗಳಿಗೆ, ಗ್ರಾಮ ಪಂಚಾಯಿತಿಗಳನ್ನು ಬಿಟ್ಟು, ಪಾರ್ಲಿಮೆಂಟಿನ ಎರಡೂ ಸದನಗಳ ಹಾಗೂ ರಾಜ್ಯ ವಿಧಾನ ಮಂಡಲದ ಎರಡು ಸದನಗಳ ಸದಸ್ಯರು, ಮತದಾರರಾಗಿ ನೋಂದಾಯಿಸಿ ಕೊಂಡಿರುವಲ್ಲಿ ಮಧ್ಯಂತರ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಸದಸ್ಯತ್ವವನ್ನು ಹೊಂದಿರಲು ಅವಕಾಶವಿದೆ. 243(1)(4) ಪ್ರಕಾರ ಪಂಚಾಯಿತಿಗಳ

ಅಧ್ಯಕ್ಷರು ನೇರವಾಗಿ ಆಯ್ಕೆಯಾಗಲಿ ಅಥವಾ ಇತರ ಸದಸ್ಯರು ಪಂಚಾಯ್ತಿ ಸಭೆಗಳಲ್ಲಿ ಮತ ಚಲಾಯಿಸುವ ಹಕ್ಕುಳ್ಳವರಾಗಿರುತ್ತಾರೆ. ರಾಜ್ಯ ವಿಧಾನ ಮಂಡಲದ ರಚಿತ ಕಾನೂನಿನ ಪ್ರಕಾರ ಗ್ರಾಮ, ಮಧ್ಯಂತರ ಹಾಗೂ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರುಗಳನ್ನು ಆಯಾಯ ಪಂಚಾಯ್ತಿಗಳ ಸದಸ್ಯರನ್ನೇ ಚುನಾಯಿಸಬೇಕು.

(5) **243(ಡಿ)ನೇ ವಿಧಿ:** ಈ ವಿಧಿಯು ಪ್ರತಿಯೊಂದು ಮಟ್ಟದ ಪಂಚಾಯ್ತಿಗಳಲ್ಲು ಪರಿಶಿಷ್ಟ ಜಾತಿ/ವರ್ಗದವರಿಗೆ ಸ್ಥಾನಗಳನ್ನು ಮೀಸಲಿಡಬೇಕು ಎಂದು ಹೇಳಿದೆ. ಮೀಸಲಿಟ್ಟ ಸ್ಥಾನಗಳ ಸಂಖ್ಯೆಯು ಒಟ್ಟು ಸ್ಥಾನಗಳಲ್ಲಿ 1/3ರಷ್ಟಿರಬೇಕು. ಅಲ್ಲದೆ ಪರಿಶಿಷ್ಟ ಜಾತಿ/ವರ್ಗದ ಮಹಿಳೆಯರಿಗೂ ಒಳಗೊಂಡು 1/3ರಷ್ಟು ಸ್ಥಾನವನ್ನು ಮಹಿಳೆಯರಿಗೂ ಮೀಸಲಿಡಬೇಕು ಹಾಗೂ ಸ್ಥಾನಗಳನ್ನು ಸರದಿಯ ಪ್ರಕಾರ ಚುನಾವಣಾ ಕ್ಷೇತ್ರವನ್ನು ಹಂಚಿಕೆ ಮಾಡತಕ್ಕದ್ದು. ಈ ರೀತಿ ಮೀಸಲಾತಿ ನಿಗದಿಪಡಿಸುವಾಗ ಆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಆ ರಾಜ್ಯದ ಪರಿಶಿಷ್ಟ ಜಾತಿ/ವರ್ಗದವರ ಜನಸಂಖ್ಯಾ ಪ್ರಮಾಣವನ್ನು ಹೊಂದಿರುವಂತಿರಬೇಕು. ಅಲ್ಲದೆ 243(ಡಿ)(6)ರ ಪ್ರಕಾರ ರಾಜ್ಯ ವಿಧಾನಮಂಡಲವು ಹಿಂದುಳಿದ ನಾಗರಿಕ ವರ್ಗದವರಿಗೆ ಯಾವುದೇ ಪಂಚಾಯ್ತಿಯಲ್ಲಿ ಸ್ಥಾನ ಮೀಸಲಿಡಲು ಕಾನೂನು ರಚಿಸಬಹುದು.

(6) **243(ಇ)ನೇ ವಿಧಿ:** ಪ್ರತಿಯೊಂದು ಪಂಚಾಯ್ತಿ ಅಧಿಕಾರವಧಿ ಐದು ವರ್ಷಗಳು 243(ಇ)(2) ಯಾವುದೇ ಕಾನೂನಿನ ಮೂಲಕ ಅದರ ಅಧಿಕಾರಾವಧಿ ಮುಕ್ತಾಯದವರೆಗೂ ವರ್ಜಿಸುವಂತಿಲ್ಲ. 243(ಇ)(3)ರ ಪ್ರಕಾರ ಪಂಚಾಯ್ತಿ ಅಧಿಕಾರಾವಧಿ ಮುಗಿಯುವುದರ ದಿನಾಂಕಕ್ಕೆ ಮುಂಚೆ ಹಾಗೂ ಅದರ ವಿಸರ್ಜನೆಯ ದಿನಾಂಕದಿಂದ ಮುಂಚೆ ಹಾಗೂ ಅದರ ವಿಸರ್ಜನೆಯ ದಿನಾಂಕದಿಂದ ಆರು ತಿಂಗಳೊಳಗೆ ಚುನಾವಣೆ ನಡೆಸಬೇಕು.

(7) **243(ಎಫ್)ನೇ ವಿಧಿ:** ಈ ವಿಧಿಯು ಪಂಚಾಯತಿ ಸದಸ್ಯತ್ವ ಅನರ್ಹತೆಗೆ ಸಂಬಂಧಿಸಿದುದಾಗಿದೆ. ರಾಜ್ಯ ವಿಧಾನ ಮಂಡಲದ ಚುನಾವಣಾ ಉದ್ದೇಶಗಳಿಗಾಗಿ ಜಾರಿಯಲ್ಲಿರುವ ಕಾನೂನಿನ ಪ್ರಕಾರ, 21 ವರ್ಷ ತುಂಬದಿರುವವರು, ರಾಜ್ಯ ವಿಧಾನ ಮಂಡಲ ರಚಿಸಿದ ಕಾನೂನಿನ ಆಧಾರದ ಮೇಲೆ, ಅನರ್ಹತೆಯ ಬಗ್ಗೆ ಪರಿಶೀಲಿಸಲು ವಿಧಾನ ಮಂಡಲವು ಕಾನೂನು ಪ್ರಕಾರ ನಿಗದಿಪಡಿಸಿರುವ ಪ್ರಾಧಿಕಾರವು ಅಧಿಕಾರ ಹೊಂದಿರುತ್ತದೆ.

ಅರ್ಹತೆಗಳು: ಸಂವಿಧಾನದ 243ನೇ ವಿಧಿಯನ್ವಯ ರಾಜ್ಯ ಶಾಸಕಾಂಗಕ್ಕೆ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳನ್ನು ಪಂಚಾಯ್ತಿಗೂ ನಿಗದಿ ಪಡಿಸಿದೆ. ಆದರೆ ಸ್ಪರ್ಧಿಸಲು ಅಭ್ಯರ್ಥಿಗೆ ಇರಬೇಕಾದ ವಯೋಮಿತಿಯನ್ನು 21ಕ್ಕೆ ಇಳಿಸಲಾಗಿದೆ.

(8) **243(ಜಿ): ಅಧಿಕಾರ ಮತ್ತು ಕಾರ್ಯಗಳು:** ಸಂವಿಧಾನದ 11ನೇ ಭಾಗದಲ್ಲಿ ಸಂವಿಧಾನದ (243)(ಜಿ)ನೇ ವಿಧಿ ಪಂಚಾಯತ್‌ಗಳಿಗೆ 29 ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರ ಮತ್ತು ಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿ ನೀಡಿದೆ, ಅವುಗಳೆಂದರೆ:

1. ಕೃಷಿ ಮತ್ತು ಕೃಷಿಗೆ ಸಂಬಂಧಿಸಿದಂತೆ.

2. ಭೂ ಅಭಿವೃದ್ಧಿ, ಭೂ ಸುಧಾರಣೆ ಜಾರಿಗೆ ತರುವುದು ಮತ್ತು ಭೂಮಿ ಮತ್ತು ಮಣ್ಣಿನ ಸಂರಕ್ಷಣೆಗೆ ಸಂಬಂಧಿಸಿದಂತೆ.
3. ಸಣ್ಣ ನೀರಾವರಿ, ನೀರಾವರಿ ವ್ಯವಸ್ಥೆ ಮತ್ತು ನೀರಾವರಿ ಅಭಿವೃದ್ಧಿ ಪಡಿಸುವುದು.
4. ಪಶುಸಂಗೋಪನೆ, ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆ ಸಂಬಂಧಿಸಿದಂತೆ.
5. ಮೀನುಗಾರಿಕೆ.
6. ಸಾಮಾಜಿಕ ಮತ್ತು ಫಾರಂ ಅರಣ್ಯಕ್ಕೆ ಸಂಬಂಧಿಸಿದಂತೆ.
7. ಸಣ್ಣ ಪ್ರಮಾಣದ ಅರಣ್ಯ ಬೆಳೆಸುವುದು.
8. ಆಹಾರ ಪದಾರ್ಥಗಳ ಉತ್ಪಾದನಾ ಕೈಗಾರಿಕೆಗಳು ಅಲ್ಪ ಪ್ರಮಾಣದ ಕೈಗಾರಿಕೆಗಳು.
9. ಖಾದಿ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳು.
10. ಗ್ರಾಮೀಣ ವಸತಿ ನಿರ್ಮಾಣ.
11. ಕುಡಿಯುವ ನೀರು.
12. ಇಂಧನಕ್ಕೆ ಸಂಬಂಧಿಸಿದಂತೆ.
13. ರಸ್ತೆ, ಸೇತುವೆ, ಒಳಚರಂಡಿ ಮತ್ತಿತರ ಸಂಪರ್ಕ ನಿರ್ಮಾಣಕ್ಕೆ ಸಂಬಂಧಿಸಿದಂತೆ.
14. ಗ್ರಾಮೀಣ ವಿದ್ಯುತ್ ಹಂಚಿಕೆಯು ಸೇರಿದಂತೆ ವಿದ್ಯುದ್ದೀಕರಣ.
15. ಅಸಂಪ್ರದಾಯಿಕ ಇಂಧನ ಸಂಪನ್ಮೂಲಗಳು.
16. ಬಡತನ ನಿರ್ಮೂಲನ ಕಾರ್ಯಗಳು.
17. ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳು ಸೇರಿದಂತೆ ಶಿಕ್ಷಣ.
18. ವಯಸ್ಕರ ಮತ್ತು ಅನೌಪಚಾರಿಕ ಶಿಕ್ಷಣ.
19. ತಾಂತ್ರಿಕ ಶಿಕ್ಷಣ ಮತ್ತು ವೃತ್ತಿ ನಿರತ ಶಿಕ್ಷಣ
20. ಗ್ರಂಥಾಲಯಗಳು.
21. ಸಾಂಸ್ಕೃತಿಕ ಚಟುವಟಿಕೆಗಳು.
22. ಮಾರುಕಟ್ಟೆ ಮತ್ತು ಜಾತ್ರೆಗಳು.
23. ಪ್ರಾಥಮಿಕ ಆರೋಗ್ಯ ಘಟಕ ಮತ್ತು ಆರೋಗ್ಯ ಸೇರಿದಂತೆ ಜನಾರೋಗ್ಯ.
24. ಕುಟುಂಬ ಕಲ್ಯಾಣ.
25. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ.
26. ಅಂಗವಿಕಲ, ಮಾನಸಿಕ ಅಸ್ವಸ್ಥರ ಕಲ್ಯಾಣವೂ ಸೇರಿದಂತೆ ಸಾಮಾಜಿಕ ಕಲ್ಯಾಣ.
27. ದುರ್ಬಲ ವರ್ಗಗಳ ಅದರಲ್ಲೂ ಪರಿಶಿಷ್ಟ ಜಾತಿ / ವರ್ಗಗಳ ಕಲ್ಯಾಣ.
28. ಸಾರ್ವಜನಿಕ ವಿತರಣಾ ವ್ಯವಸ್ಥೆ.
29. ಸಮುದಾಯದ ಆಸ್ತಿ-ಪಾಸ್ತಿ ಸಂರಕ್ಷಣೆ.

(9) **243(ಹೆ)ನೇ ವಿಧಿ:** ಸಂವಿಧಾನದ 73ನೇ ತಿದ್ದುಪಡಿಯ ಪಂಚಾಯತ್ ಕಾರ್ಯಾಚರಣೆಗೆ ಹಣಕಾಸು ಪರಿಸ್ಥಿತಿಯನ್ನು ಸರಿದೂಗಿಸುವ ಸಲುವಾಗಿ ಹಣಕಾಸು ಆಯೋಗವನ್ನು ರಚಿಸಬೇಕೆಂದು ಸಲಹೆ ನೀಡಿದೆ. ಈ ಹಣಕಾಸು ಆಯೋಗವು ಕೇಂದ್ರ ಹಣಕಾಸು ಆಯೋಗದ ಮಾದರಿಯಲ್ಲಿರಬೇಕು. ಹಾಗೂ ರಾಜ್ಯ ಮತ್ತು ಪಂಚಾಯತ್‌ಗಳ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಿ ಶಿಫಾರಸ್ಸು ಮಾಡಬೇಕು. ಈ ಶಿಫಾರಸುಗಳು ಈ ಕೆಳಕಂಡ ಅಂಶಗಳನ್ನು ಆಧರಿಸಿರಬೇಕು. ಅವುಗಳೆಂದರೆ:

ಅ) ರಾಜ್ಯ ಮತ್ತು ಪಂಚಾಯತಿಗಳ ನಡುವೆ ತೆರಿಗೆ, ಕಂದಾಯ, ಶುಲ್ಕ ಪಡೆಯುವ ಕ್ರಮದಲ್ಲಿ ಹಂಚಿಕೆಯ ಕ್ರಮ ಮತ್ತು ವಿವಿಧ ಪಂಚಾಯತಿಗಳಿಗೆ ಇವುಗಳ ಹಂಚಿಕೆ.

ಆ) ತೆರಿಗೆ ಸಂಗ್ರಹ, ಸುಂಕ, ಶುಲ್ಕ ಇತ್ಯಾದಿಗಳನ್ನು ನಿರ್ದಿಷ್ಟ ವಿಷಯಗಳಿಂದ ಪಡೆಯಲು ಪಂಚಾಯತಿಗಳಿಗೆ ಅನುದಾನ ನೀಡುವುದು.

ಇ) ಪಂಚಾಯತಿಗಳಿಗೆ ಅನುದಾನ ನೀಡುವುದು. ಈ ಅಂಶಗಳನ್ನು ಆಧರಿಸಿಯೇ ರಾಜ್ಯ ಸರ್ಕಾರ ಶಾಸನಗಳನ್ನು ರೂಪಿಸಬೇಕು ಹಾಗೂ ಪಂಚಾಯತ್‌ಗಳಿಗೆ ನೀಡುವ ಅನುದಾನ ರಾಜ್ಯ ಸಂಚಿತ ವಿಧಿಯಿಂದಲೇ ಪಾವತಿಸಬೇಕು.

(10) **243(ಕೆ)ನೇ ವಿಧಿ:** ಪಂಚಾಯತ್ ಚುನಾವಣೆಗಳು ಸ್ವತಂತ್ರವಾಗಿ ಮತ್ತು ಮುಕ್ತವಾಗಿ ನಡೆಸಲು ಅವಕಾಶವಾಗುವಂತೆ ರಾಜ್ಯ ಚುನಾವಣಾ ಆಯೋಗ ಸ್ಥಾಪನೆಗೆ ಸಂವಿಧಾನ 243(ಕ) ವಿಧಿಯು ಅವಕಾಶ ಕಲ್ಪಿಸಿ ಕೊಟ್ಟಿದೆ. ಈ ಆಯೋಗವು ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ, ಚುನಾವಣೆ ನಡೆಸುವ, ಕಾರ್ಯಗಳನ್ನು ನಿರ್ವಹಿಸುತ್ತದೆ. ಈ ಆಯೋಗವು ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಡದಂತೆ ಇರಬೇಕೆಂದು ಸ್ಪಷ್ಟಪಡಿಸಲಾಗಿದೆ. ಈ ಚುನಾವಣಾ ಆಯೋಗವನ್ನು ಆ ರಾಜ್ಯದ ರಾಜ್ಯಪಾಲರು ನೇಮಿಸುತ್ತಾರೆ. ರಾಜ್ಯ ವಿಧಾನ ಮಂಡಲದಿಂದ ರಚಿತವಾದ ಕಾನೂನು ಆಧಾರಿತವಾಗಿ ಚುನಾವಣಾ ಆಯುಕ್ತ, ಅಧಿಕಾರಾವಧಿ, ಅದರ ಪದಚ್ಯುತಿಗೆ ಅವಕಾಶವಿದೆ. ಆದರೂ ರಾಜ್ಯ ಹೈಕೋರ್ಟ್‌ನ ನ್ಯಾಯಾಧೀಶರನ್ನು ಪದಚ್ಯುತಿಗೊಳಿಸಲು ಅನುಸರಿಸುವ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಚುನಾವಣೆಗೆ ಅಗತ್ಯ ಸಿಬ್ಬಂದಿಯನ್ನು ಅಂದರೆ ಚುನಾವಣೆಯು ನಡೆಯುವ ಕಾಲಕ್ಕೆ ರಾಜ್ಯಪಾಲರು ಒದಗಿಸುವಂತೆ ಹೇಳಲಾಗಿದೆ.

(11) **243(ಒ) ನೇ ವಿಧಿ:** ಈ ವಿಧಿಯು ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯ ಪ್ರವೇಶಿಸುವುದಕ್ಕೆ ನಿರ್ಬಂಧ ವಿಧಿಸಲಾಗಿದೆ. ಅದರಂತೆ ಚುನಾವಣಾ ಕ್ಷೇತ್ರ ನಿಗಧಿಗೆ ಸಂಬಂಧ 243(ಕೆ)ನೇ ವಿಧಿ ಮೇರೆಗೆ ಮಾಡಲಾದುದಕ್ಕೆ ಚುನಾವಣಾ ಕ್ಷೇತ್ರಗಳ ಸ್ಥಾನಗಳ ಹಂಚಿಕೆ ಸಂಬಂಧ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. 243(ಕೆ)(ಬಿ) ಯಾವುದೇ ಪಂಚಾಯತ್‌ಗೆ ನಡೆಯುವ ಯಾವುದೇ ಚುನಾವಣೆಯನ್ನು ರಾಜ್ಯ ವಿಧಾನಮಂಡಲ ರಚಿಸಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಆಧಾರದ ಮೇಲೆ ಚುನಾವಣಾ ಅರ್ಜಿಯನ್ನು ಕಾನೂನಿನ ಪ್ರಕಾರ ಪ್ರಾಧಿಕಾರಕ್ಕೆ ಸಲ್ಲಿಸದ ಹೊರತು ಪ್ರಶ್ನಿಸುವಂತಿಲ್ಲ. ಸಂವಿಧಾನದ 243ರಿಂದ 243(ಒ)ವರೆಗಿನ ವಿಧಿಗಳಲ್ಲಿ 9 ಭಾಗವನ್ನು ಸೇರಿಸುವ ಮೂಲಕ ಈ ಮುಂದಿನಂತೆ ಪಂಚಾಯ್ತಿಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಅವುಗಳೆಂದರೆ:

1) ಪ್ರತಿ ಗ್ರಾಮಕ್ಕೂ ಒಂದು ಪಂಚಾಯ್ತಿ ಇರುವುದು. ಈ ಪಂಚಾಯ್ತಿ ಸಂವಿಧಾನಿಕ ಸಂಸ್ಥೆಯ ಸ್ಥಾನಮಾನವನ್ನು ಹೊಂದಿದ್ದು, ರಾಜ್ಯ ಚುನಾವಣಾ ಆಯೋಗವು ಪಂಚಾಯತಿಗೆ ಚುನಾವಣೆ ನಡೆಸುತ್ತವೆ.

2) ಪರಿಶಿಷ್ಟ ಜಾತಿ/ವರ್ಗ ಹಾಗೂ, ಮಹಿಳೆಯರಿಗೆ ಪಂಚಾಯ್ತಿಯಲ್ಲಿ ಸ್ಥಾನ ಮೀಸಲಾತಿ ಕಡ್ಡಾಯ ಪಡಿಸಿರುವುದು.

3) ಪಂಚಾಯ್ತಿ ಅಧಿಕಾರಾವಧಿ 5 ವರ್ಷಗಳು. ಯಾವುದಾದರೂ ಪಂಚಾಯ್ತಿ ಈ ಅವಧಿಗೆ ಮೊದಲೇ ವಿಸರ್ಜನೆಯಾದರೆ, ಆರು ತಿಂಗಳೊಳಗೆ ಚುನಾವಣೆ ನಡೆಸುವುದು ಕಡ್ಡಾಯ.

4) ಈ ಕಾನೂನಿನ ಅಡಿಯಲ್ಲಿಯೇ ರಾಜ್ಯ ಸರ್ಕಾರವು ಶಾಸನವನ್ನು ರೂಪಿಸಲು ಅವಕಾಶವಿದ್ದು, ಸ್ವಾಯತ್ತತಾ ಸಂಸ್ಥೆಗಳಂತೆ ಕಾರ್ಯನಿರ್ವಹಿಸಲು ಪೂರಕವಾಗುವಂತಹ ಶಾಸನಗಳನ್ನು ರಚಿಸಬಹುದು. ಹಾಗೂ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅಭಿವೃದ್ಧಿಗೆ ಯೋಜನೆಗಳನ್ನು ಸಿದ್ಧಪಡಿಸಿ, ಸಂವಿಧಾನದ 11ನೇ ಅನುಸೂಚಿಯ ಪ್ರಕಾರ ಪಟ್ಟಿಮಾಡಲಾದ ವಿಷಯಗಳಿಗೂ ಸಂಬಂಧಿಸಿದ ಹಾಗೆ ಅಧಿಕಾರ ಮತ್ತು ಜವಾಬ್ದಾರಿಯನ್ನು ಪಂಚಾಯ್ತಿಗಳಿಗೆ ವರ್ಗಾಯಿಸಬಹುದು.

5) ರಾಜ್ಯಗಳು ಪಂಚಾಯ್ತಿಗಳಿಗೆ ಕಾನೂನಿನನ್ವಯ ತೆರಿಗೆ, ಸುಂಕ ವಿಧಿಸಲು, ವಸೂಲು ಮಾಡಲು ಮತ್ತು ವಿನಿಯೋಗಿಸಿಕೊಳ್ಳಲು ಅಧಿಕಾರವನ್ನು ನೀಡಬಹುದು.

6) ಪಂಚಾಯ್ತಿ ಲೆಕ್ಕ ಇಡುವುದು. ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಕಾನೂನು ರಚಿಸಲು ರಾಜ್ಯ ವಿಧಾನ ಮಂಡಲಕ್ಕೆ ಅಧಿಕಾರವಿದೆ.

7) ಸಂವಿಧಾನದ 11ನೇ ಅನುಸೂಚಿಯನ್ವಯ ಆರ್ಥಿಕ-ಸಾಮಾಜಿಕ ಅಭಿವೃದ್ಧಿಗಾಗಿ 29 ವಿಷಯಗಳ ಮೇಲೆ ಅಧಿಕಾರ ಹೊಂದಿರುವುದು.

8) ನೂತನವಾಗಿ ರಾಜ್ಯ ಹಣಕಾಸು ಆಯೋಗಕ್ಕೆ ಅವಕಾಶ. ಈ ಆಯೋಗವನ್ನು ರಾಜ್ಯಪಾಲರು ನೇಮಿಸುತ್ತಾರೆ. ಇದು ಪಂಚಾಯ್ತಿಗಳ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸುವುದು. ತೆರಿಗೆಯಿಂದ ಸಂಗ್ರಹಿಸಿದ ನಿವ್ವಳ ಉತ್ಪತ್ತಿಯನ್ನು ರಾಜ್ಯ ಮತ್ತು ಪಂಚಾಯ್ತಿಗಳ ನಡುವೆ ಹಂಚಿಕೆ ಮಾಡುವ ಬಗ್ಗೆ, ರಾಜ್ಯದ ಸಂಚಿತ ನಿಧಿಯಿಂದ ಪಂಚಾಯ್ತಿಗಳಿಗೆ ಸಹಾಯ ಧನವನ್ನು ನೀಡುವುದು, ಪಂಚಾಯ್ತಿಗಳ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಿಸುವುದು.

9) ಈ ಕಾನೂನು ಅನುಸೂಚಿತ ಪ್ರದೇಶಗಳನ್ನು ಹೊಂದಿರುವ ನಾಗಾಲ್ಯಾಂಡ್, ಮೇಘಾಲಯ, ಮಿಜೋರಾಂ, ಮಣಿಪುರದ ಗುಡ್ಡಗಾಡು ಪ್ರದೇಶ, ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ಗುಡ್ಡಗಾಡು ಪ್ರದೇಶಗಳಿಗೆ ಅನ್ವಯವಾಗುವುದಿಲ್ಲ. ಆದರೆ ಈ ರಾಜ್ಯಗಳು ಯಾವಾಗ ಬೇಕೋ ಆಗ ಪಂಚಾಯ್ತಿಗಳನ್ನು ರಚಿಸಲು ಅವಕಾಶವಿದೆ.

74ನೇ ಸಂವಿಧಾನ ತಿದ್ದುಪಡಿ

ಭಾರತದ ಸಂವಿಧಾನಕ್ಕೆ 74ನೇ ತಿದ್ದುಪಡಿಯನ್ನು ತರುವ ಮೂಲಕ ಮುನಿಸಿಪಾಲಿಟಿಗಳಿಗೆ ಸಂವಿಧಾನ ಬದ್ಧತೆಯನ್ನು ನೀಡಲಾಯಿತು. ಈ ತಿದ್ದುಪಡಿಯನ್ನು ಏಪ್ರಿಲ್ 24, 1993ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. 74ನೇ ತಿದ್ದುಪಡಿಯ ಮೂಲಕ ಭಾಗ 9ಕ್ಕೆ ಭಾಗ 9(ಎ) ಎಂದು ಸೇರ್ಪಡೆ ಮಾಡುವ

ಮೂಲಕ ಮೂಲ ಸಂವಿಧಾನದ 243ನೇ ವಿಧಿಗೆ 243(ಪಿ), 243(ಆರ್), 244(ಎಸ್), 243(ಟಿ), 243(ಯು), 243(ವಿ), 243(ಡಬ್ಲ್ಯು), 243(ಎಕ್ಸ್), 244(ವೈ), 243(ಝುಡ್), 243(ಝುಡ್ಎ), 243(ಝುಡ್ಬಿ), 243(ಝುಡ್ಸಿ), 243(ಝುಡ್ಡಿ), 243(ಝುಡ್ಇ), 243(ಝುಡ್ಇ), 243(ಝುಡ್ಜಿ)ಗಳನ್ನು ಸೇರಿಸಲಾಯಿತು. ಇವುಗಳ ಸಂಕ್ಷಿಪ್ತ ವಿವಿರ ಈ ಕೆಳಕಂಡಂತಿದೆ.

(1) **243(ಪಿ)ನೇ ವಿಧಿ**: 243(ಪಿ)(ಎ)ನಲ್ಲಿ 243(5)ರ ಮೇರೆಗೆ ರಚಿತವಾದ ಸಮಿತಿ. ರಾಜ್ಯದಲ್ಲಿನ ಜಿಲ್ಲೆ, ಹತ್ತು ಲಕ್ಷ ಅದಕ್ಕೂ ಹೆಚ್ಚಿನ ಜನಸಂಖ್ಯೆ ಹೊಂದಿದ್ದ ಒಂದು ಅಥವಾ ಹೆಚ್ಚು ಜಿಲ್ಲೆಗಳಲ್ಲಿ ಮತ್ತು ಎರಡು ಅಥವಾ ಹೆಚ್ಚು ಪುರಸಭೆಗಳನ್ನು ಅಥವಾ ಪಂಚಾಯತ್‌ಗಳನ್ನು ರಾಜ್ಯಪಾಲರು ಅಧಿಸೂಚನೆಯ ಮೂಲಕ ಮಹಾನಗರ ಪ್ರದೇಶ ವೆಂತಲೂ (ಮೆಟ್ರೋಪಾಲಿಟನ್), ಮುನಿಸಿಪಲ್ ಕ್ಷೇತ್ರಕ್ಕೆ ರಾಜ್ಯಪಾಲರು ಅಧಿಸೂಚಿಸಿದ ಮುನಿಸಿಪಾಲಿಟಿ , 243(ಕ್ಯು) ಪ್ರಕಾರ ಸ್ವಾಯತ್ತ ಸರ್ಕಾರದ ಒಂದು ಸಂಸ್ಥೆ ಪಂಚಾಯತ್ , ಹಿಂದಿನ ಜನಗಣತಿ ಆಧಾರದ ಮೇಲೆ ಅಂಕಿ-ಅಂಶಗಳನ್ನು ಒಳಗೊಂಡ ಜನಸಂಖ್ಯೆ ಎಂದು 243(ಪಿ)ನ(ಎ), (ಬಿ), (ಸಿ), (ಡಿ), (ಇ), (ಎಫ್) ಹಾಗೂ (ಡಿ) ವಿಧಿಗಳು ಹೇಳುತ್ತಿವೆ.

(2) **243(ಕ್ಯೂ) ನೇ ವಿಧಿ**: ಪ್ರತಿಯೊಂದು ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶವಾಗಿ ಪರಿವರ್ತಿತವಾಗುತ್ತಿರುವ ಪ್ರದೇಶಕ್ಕೆ 'ನಗರ ಪಂಚಾಯತ್' ಎಂದು, ಸಣ್ಣ ನಗರ ಪ್ರದೇಶಕ್ಕೆ 'ಮುನಿಸಿಪಲ್ ಕೌನ್ಸಿಲ್ ಎಂದು, ದೊಡ್ಡ ನಗರ ಪ್ರದೇಶಕ್ಕೆ ಮುನಿಸಿಪಲ್ ಕಾರ್ಪೋರೇಷನ್' ಎಂದು ರಾಜ್ಯಪಾಲರು ಅಧಿಸೂಚನೆ ಹೊರಡಿಸಿ ರಚಿಸಬಹುದು.

(3) **243(ಆರ್)ನೇ ವಿಧಿ**: ಮುನಿಸಿಪಾಲಿಟಿ ಸ್ಥಾನಗಳಿಗೆ ಸದಸ್ಯರನ್ನು ಪ್ರತ್ಯಕ್ಷ ಚುನಾವಣೆಯ ಮೂಲಕ ಸದಸ್ಯರನ್ನು ಆಯ್ಕೆ ಮಾಡಬೇಕು. ಮುನಿಸಿಪಲ್ ಕ್ಷೇತ್ರಗಳನ್ನು ವಿಭಾಗಗಳಾಗಿ ವಿಂಗಡಿಸಿ ಚುನಾವಣಾ ಕ್ಷೇತ್ರವಾಗಿ ವಿಂಗಡಿಸುವುದು. 243(ಆರ್)(2)ರ ಪ್ರಕಾರ ರಾಜ್ಯ ವಿಧಾನ ಮಂಡಲವು ಮುನಿಸಿಪಾಲಿಟಿಯ ಬಗ್ಗೆ ವಿಶೇಷ ಜ್ಞಾನ ಹೊಂದಿರುವವರನ್ನು, ಮುನಿಸಿಪಾಲಿಟಿಗಳ ಪ್ರಯೋಗಗಳನ್ನು ಪೂರ್ಣ ಅಥವಾ ಭಾಗಶಃ ಪ್ರತಿನಿಧಿಸುವ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆ ಸದಸ್ಯರು ಮತ್ತು ಆ ಮುನಿಸಿಪಾಲಿಟಿಗಳ ಪ್ರದೇಶದಲ್ಲಿ ನೋಂದಾಯಿತ ಮತದಾರರಾಗಿರುವ ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಸದಸ್ಯರು ಕಾನೂನಿನ ಮೂಲಕ ಪ್ರಾತಿನಿಧ್ಯವನ್ನು ಒದಗಿಸಬಹುದು ಹಾಗೂ ಇವರು ಮತದಾನ ಮಾಡುವ ಹಕ್ಕನ್ನು ಸಹ ಹೊಂದಿರುತ್ತಾರೆ. **ಇವರ ಪ್ರಕಾರ ಕಾರ್ಪೋರೇಷನ್‌ಗಳು ಮತ್ತು ಮುನಿಸಿಪಾಲಟಿಗಳು**: ಭಾರತದಲ್ಲಿ ಗ್ರಾಮ ಪಂಚಾಯತ್ ವ್ಯವಸ್ಥೆಯು ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಿಸಿದ್ದರೆ, ಮುನಿಸಿಪಾಲಿಟಿಗಳು ನಗರ-ಪಟ್ಟಣ ಪ್ರದೇಶಗಳಿಗೆ ಸಂಬಂಧಿಸಿದವುಗಳಾಗಿವೆ. ಸಂವಿಧಾನದ 243ನೇ ವಿಧಿಯು ಹಾಗೂ ಸಂವಿಧಾನಕ್ಕೆ ತರಲಾದ 74ನೇ ತಿದ್ದುಪಡಿಗಳು ನಗರ-ಪಟ್ಟಣ ಪ್ರದೇಶದ ಸ್ಥಳೀಯ ಸರ್ಕಾರಗಳಿಗೆ ಅವಕಾಶ ಕಲ್ಪಿಸಿಕೊಟ್ಟಿವೆ. ಈ ಸ್ಥಳೀಯ ಸರ್ಕಾರಗಳನ್ನು ರಾಜ್ಯದ ರಾಜ್ಯಪಾಲರುಗಳು ನಗರ-ಪಟ್ಟಣಗಳೆಂದು ಹೊರಡಿಸುವ ಪ್ರಕಟಣೆಗೆ ಅನುಗುಣವಾಗಿ ಮತ್ತು

ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಈ ಕೆಳಕಂಡ ಹೆಸರುಗಳಲ್ಲಿ ಕರೆಯಲಾಗುತ್ತದೆ. ಅವುಗಳೆಂದರೆ:

(1) ನಗರ ಕಾರ್ಪೊರೇಷನ್

(2) ಟೌನ್ ಮುನಿಸಿಪಾಲಿಟಿಗಳು

(3) ನಗರಾಭಿವೃದ್ಧಿ ಮಂಡಲಿಗಳು

(4) ಕಂಟೋನ್ಮೆಂಟ್ ಮಂಡಲಿಗಳು 243(ಟಿ)ನೇ ವಿಧಿಯನ್ವಯ ಮೀಸಲಾತಿ, 243(ವೈ)ನೇ ವಿಧಿಯಂತೆ ಹಣಕಾಸು ಆಯೋಗ, 243(ಝುಡ್)ನೇ ವಿಧಿಯ ಪ್ರಕಾರ ಚುನಾವಣಾ ಆಯೋಗಕ್ಕೂ ಕಲ್ಪಿಸಿಕೊಟ್ಟಿವೆ.

(4) 243(ಟಿ) ವಿಧಿ: ಪ್ರತಿಯೊಂದು ಮುನಿಸಿಪಾಲಿಟಿಗಳಲ್ಲಿಯೂ ಪರಿಶಿಷ್ಟ ಜಾತಿ/ವರ್ಗ ಹಾಗೂ ಪರಿಶಿಷ್ಟ ಜಾತಿ/ವರ್ಗದ ಮಹಿಳೆಯರಿಗೂ ಸ್ಥಾನ ಮೀಸಲಾತಿಗೆ ಸ್ಪಷ್ಟಪಡಿಸಿದೆ. ಹಾಗೆ ಮೀಸಲಾತಿ ನಿಗದಿ ಮಾಡುವಾಗ ಪುರಸಭೆಗಳಿಗೆ ಪ್ರತ್ಯಕ್ಷ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆ, ಪುರಸಭಾ ಪ್ರದೇಶದಲ್ಲಿ ಪರಿಶಿಷ್ಟ ಜಾತಿ/ವರ್ಗಗಳ ಜನಸಂಖ್ಯೆ ಹಾಗೂ ಪುರಸಭೆಯ ಒಟ್ಟು ಜನಸಂಖ್ಯೆಯು ಯಾವ ಪ್ರಮಾಣದಲ್ಲಿದೆಯೋ ಅದೇ ಪ್ರಮಾಣವನ್ನು ಹೊಂದಿರತಕ್ಕ ಪ್ರಮಾಣವನ್ನು ಆದಷ್ಟು ಸರಿದೂಗಿಸುವಂತೆ ಸ್ಥಾನ ಮೀಸಲಾತಿ ನಿಗದಿಪಡಿಸಬೇಕು. ಇಂತಹ ಮೀಸಲಾತಿ 1/3ರಷ್ಟು ಪ್ರಮಾಣದಲ್ಲಿ ಇರಬೇಕು. ಅಲ್ಲದೆ ಹಿಂದುಳಿದ ವರ್ಗದವರಿಗೂ ಮೀಸಲಾತಿ ಹಾಗೂ ಪಂಚಾಯತ್ ಸ್ಥಾನದಲ್ಲಿ ಅಧ್ಯಕ್ಷ ಹುದ್ದೆಯಲ್ಲಿ ಮೀಸಲಾತಿ ನೀಡುವಲ್ಲಿ ವಿಧಾನ ಮಂಡಲ ಕಾನೂನು ರಚಿಸಬಹುದು.

(5) 243(ಯು)ನೇ ವಿಧಿ: ಮುನಿಸಿಪಾಲಿಟಿ ಅವಧಿ 5 ವರ್ಷ. ಅವಧಿಗೆ ಮುಂಚೆ ಅಥವಾ ಅದರ ವಿಸರ್ಜನೆಯ ದಿನಾಂಕದಿಂದ ಆರು ತಿಂಗಳ ಅವಧಿಯಲ್ಲಿ ಚುನಾವಣೆ ನಡೆಸಬೇಕು.

(6) 243(ವಿ)ನೇ ವಿಧಿ: ಮುನಿಸಿಪಾಲಿಟಿಗಳ ಸದಸ್ಯರ ಅನರ್ಹತೆಯ ಕುರಿತು ಪ್ರಸ್ತಾಪಿಸಿದೆ. ರಾಜ್ಯ ವಿಧಾನ ಮಂಡಲವು ರಚಿಸಿದ ಕಾನೂನಿನ ಮೂಲಕ ಅವನನ್ನು ಅನರ್ಹಗೊಳಿಸಬಹುದಾಗಿದೆ. ಮುನಿಸಿಪಾಲಿಟಿಗಳು ಚುನಾಯಿತ ಮಂಡಳಿಗಳನ್ನು ಹೊಂದಿದ್ದು 5 ವರ್ಷಗಳ ಅವಧಿಗೆ ಚುನಾಯಿಸಲಾಗುತ್ತದೆ.

ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿಯ ಕಾರ್ಯಗಳು: ಸಂವಿಧಾನದ 243(ಡಬ್ಲ್ಯೂ)ಗೆ 12ನೇ ಷೆಡ್ಯೂಲನ್ನು ಸೇರಿಸಿದ್ದು, ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿಗೆ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಲು ಅವಕಾಶ ಕಲ್ಪಿಸಿಕೊಟ್ಟಿದೆ ಅವುಗಳೆಂದರೆ:

(1) ಟೌನ್ ಮತ್ತು ನಗರ ಯೋಜನೆ.

(2) ಭೂ ಉಪಯೋಗ ನಿಯಂತ್ರಣ ಮತ್ತು ಕಟ್ಟಡಗಳ ನಿರ್ಮಾಣ.

(3) ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಯೋಜನೆ.

(4) ರಸ್ತೆ ಹಾಗೂ ಸೇತುವೆಗಳ ನಿರ್ಮಾಣ ಮತ್ತು ದುರಸ್ತಿ.

(5) ಗೃಹ, ಕೈಗಾರಿಕೆ ಮತ್ತು ವ್ಯಾಪಾರ ಉದ್ದೇಶಗಳಿಗೆ ನೀರು ಸರಬರಾಜು.

(6) ಸಾರ್ವಜನಿಕ ಆರೋಗ್ಯ, ಒಳಚರಂಡಿ ವ್ಯವಸ್ಥೆ, ಕೊಳಚೆ ನೀರನ್ನು ಸಂಗ್ರಹಿಸಿ ಅದನ್ನು ಸಮರ್ಥ ರೀತಿಯಲ್ಲಿ ಬಳಕೆಮಾಡಿಕೊಳ್ಳುವುದು.

(7) ಅಗ್ನಿ ಸೇವೆ.

(8) ನಗರ ಅರಣ್ಯ, ಪರಿಸರ ಸಂರಕ್ಷಣೆ.

(9) ಸಮಾಜದ ಹಿಂದುಳಿದ ವರ್ಗಗಳು ಸೇರಿದಂತೆ ಅಂಗವಿಕಲರು, ಮಾನಸಿಕ ಅಸ್ವಸ್ಥರನ್ನು ರಕ್ಷಿಸುವುದು.

(10) ಕೊಳಚೆ ನಿರ್ಮೂಲನ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದು.

(11) ನಗರದಲ್ಲಿನ ಬಡತನವನ್ನು ನಿರ್ಮೂಲನ ಮಾಡುವುದು.

(12) ಪಾರ್ಕ್‌ಗಳು, ಉದ್ಯಾನವನಗಳು, ಆಟದ ಮೈದಾನಗಳು ಇವೇ ಮೊದಲಾದವುಗಳ ನಿರ್ಮಾಣ ಮತ್ತು ನಿರ್ವಹಣೆ.

(13) ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಪ್ರೋತ್ಸಾಹ ನೀಡುವುದು.

(14) ಸ್ಮಶಾನಗಳು ಮತ್ತು ಸ್ಮಶಾನದ ಸ್ಥಳಗಳು, ವಿದ್ಯುತ್ ಶವ ಸಂಸ್ಕಾರದ ಆವರಣಗಳು. ಶವ ಸುಡುವ ಸ್ಥಳಗಳು ಹಾಗೂ ಇವುಗಳು ಆವರಣವನ್ನು ನೋಡಿಕೊಳ್ಳುವುದು.

(15) ಗೋಶಾಲೆಗಳು ನಿರ್ವಹಣೆ.

(16) ಜನನ ಮತ್ತು ಮರಣಗಳ ದಾಖಲಾತಿ ಸಂಗ್ರಹ ಹಾಗೂ ಪತ್ರಗಳ ವಿತರಣೆ.

(17) ಸಾರ್ವಜನಿಕ ಸೌಕರ್ಯಗಳಂತಹ ಬೀದಿ ದೀಪಗಳು, ಪಾರ್ಕ್‌ಗಳು ನಿರ್ವಹಣೆ, ಬಸ್ ನಿಲ್ದಾಣಗಳು ನಿರ್ಮಾಣ, ಇವೇ ಮೊದಲಾದವುಗಳು.

(18) ಆಹಾರಕ್ಕಾಗಿ ಕೊಲ್ಲುವ ಕಸಾಯಿಖಾನೆ ಮತ್ತು ಚರ್ಮ ಹದ ಮಾಡುವ ಕಸಾಯಿಖಾನೆಗಳನ್ನು ನಿರ್ವಹಿಸುವುದು.

(7) 243(ವೈ)ನೇ ವಿಧಿ: ಸಂವಿಧಾನದ 243(ಐ)ನೇ ವಿಧಿಗೆ ಅನುಗುಣವಾಗಿ ರಚಿತವಾಗಿರುವ ಹಣಕಾಸು ಆಯೋಗವು ಮುನಿಸಿಪಾಲಿಟಿಗಳ ಹಣಕಾಸು ಪರಿಸ್ಥಿತಿಗಳನ್ನು ಪರಿಶೀಲಿಸುವಂತೆ ಹೇಳಲಾಗಿದೆ. 243(ವೈ)(ಎ)(1)ರ ಪ್ರಕಾರ ರಾಜ್ಯವು ವಿಧಿಸಬಹುದಾದ ತೆರಿಗೆ, ಸುಂಕ, ದಾರಿ ಸುಂಕ, ಶುಲ್ಕ ನಿವ್ವಳ ಉತ್ಪತ್ತಿಯಲ್ಲಿ ರಾಜ್ಯ ಮತ್ತು ಮುನಿಸಿಪಾಲಿಟಿಗಳ ನಡುವೆ ಅಂಥ ಉತ್ಪತ್ತಿಯಲ್ಲಿನ ಆಯಾ ಪುರಸಭೆಗಳ ಪಾಲನ್ನು ಆಯಾಯ ಪುರಸಭೆಗಳಿಗೆ ನೀಡಬೇಕು. ರಾಜ್ಯದ ಸಂಚಿತ ನಿಧಿಯಿಂದ ಮುನಿಸಿಪಾಲಿಟಿಗಳಿಗೆ ಸಹಾಯನುಧನ, ಮುನಿಸಿಪಾಲಿಟಿಗಳ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸಲು ಕ್ರಮ ಕೈಗೊಳ್ಳುವುದು, ಪುರಸಭೆಗಳ ಹಣಕಾಸು ಸ್ಥಿತಿ ಸುಧಾರಣೆಗೆ ರಾಜ್ಯಪಾಲರು ಹಣಕಾಸು ಆಯೋಗಕ್ಕೆ ಕಳುಹಿಸಬಹುದಾದ ಇತರ ವಿಷಯಗಳ ಬಗ್ಗೆ ರಾಜ್ಯದ ವಿಧಾನ ಮಂಡಲದಲ್ಲಿ ಮಂಡಿಸುವುದು, ಇವೇ ಮೊದಲಾದ ಅಂಶಗಳು 243(ವೈ)(ಎ), (ಬಿ), (ಸಿ) ಗಳಲ್ಲಿ ಸೇರಿವೆ.

(8) 243(ಝಡ್)ನೇ ವಿಧಿ: ಮುನಿಸಿಪಾಲಿಟಿಗಳ ಲೆಕ್ಕಪತ್ರ ಇಡುವ ಸಂಬಂಧ ಹಾಗೂ ಅದರ ಪರಿಶೋಧನೆಗೆ ರಾಜ್ಯ ವಿಧಾನ ಮಂಡಲವು ಕಾನೂನು ರಚಿಸಬಹುದು.

(9) 243(ಝಡ್‌ಎ) ನೇ ವಿಧಿ: ಮುನಿಸಿಪಾಲಿಟಿಯ ಎಲ್ಲಾ ಚುನಾವಣೆಗೆ ಮತದಾರರ ಪಟ್ಟಿ ತಯಾರಿಸಿ, ಚುನಾವಣಾ ನಿರ್ವಹಣೆ, ನಿರ್ದೇಶನ, ನಿಯಂತ್ರಣ, ಇವೇ ಮೊದಲಾದ ಚುನಾವಣಾ ಸಂಬಂಧಗಳ ಕಾರ್ಯನಿರ್ವಹಿಸಲು 243(ಕೆ')ಯನ್ವಯ ರಾಜ್ಯ ಚುನಾವಣಾ ಆಯೋಗ ಅಧಿಕಾರ ಹೊಂದಿರಬೇಕು. ಹಾಗೂ ಪುರಸಭೆ ಚುನಾವಣೆ ಸಂಬಂಧ ಕಾನೂನು ರಚಿಸಲು ವಿಧಾನ ಮಂಡಲವು ಅಧಿಕಾರ ಹೊಂದಿರುವುದು.

(10) 243(ಝಡ್‌ಬಿ) ನೇ ವಿಧಿಯು ಒಕ್ಕೂಟ ರಾಜ್ಯ ಕ್ಷೇತ್ರಗಳ ಅನ್ವಯ ಹಾಗೂ (243 ಝಡ್‌ಸಿ)ನೇ ವಿಧಿಯು ಕೆಲವು ಭಾಗಗಳಿಗೆ ಅನ್ವಯಿಸದೇ ಇರುವುದಕ್ಕೆ ಸಂಬಂಧಿಸಿದವುಗಳಾಗಿವೆ.

(11) 243(ಝಡ್‌ಡಿ)ನೇ ವಿಧಿ: ಜಿಲ್ಲೆಯಲ್ಲಿನ ಪಂಚಾಯತ್ ಹಾಗೂ ಮುನಿಸಿಪಾಲಿಟಿಗಳು ಸಿದ್ಧಪಡಿಸಿದ ಯೋಜನೆಗಳನ್ನು ಕ್ರೋಢೀಕರಿಸಲು ಹಾಗೂ ಇದೇ ಜಿಲ್ಲೆಯ ಅಭಿವೃದ್ಧಿಗಾಗಿ ಕರಡು ಸಿದ್ಧಪಡಿಸಲು ಪ್ರತಿಯೊಂದು ರಾಜ್ಯದಲ್ಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಮಿತಿ ರಚಿಸಬೇಕು. ಇದನ್ನು ರಾಜ್ಯ ವಿಧಾನ ಮಂಡಲವು ಜಿಲ್ಲಾ ಯೋಜನಾ ಸಮಿತಿಗಳ ರಚನೆ, ಸಮಿತಿಗಳಿಗೆ ಸ್ಥಾನಭರ್ತಿ, ಸಮಿತಿಯ ಅಧ್ಯಕ್ಷರ ಆಯ್ಕೆ, ಸಮಿತಿಯ ಕಾರ್ಯಗಳು, ಹಣಕಾಸಿನ ಸ್ವರೂಪ, ಲಭ್ಯವಿರುವ ಸಂಪನ್ಮೂಲ, ಶಿಫಾರಸ್ಸನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸುವುದನ್ನು ಈ ಆಯೋಗವು ನಿರ್ವಹಿಸುತ್ತದೆ.

(12) 243(ಝಡ್‌ಇ)ನೇ ವಿಧಿ: ಮೆಟ್ರೊಪಾಲಿಟನ್ ಪ್ರದೇಶ ಅಭಿವೃದ್ಧಿ ಸಂಬಂಧ ಮಹಾ ಯೋಜನಾ ಸಮಿತಿ ರಚನೆಗೆ ಈ ವಿಧಿ ಅವಕಾಶ ನೀಡಿದೆ. ಈ ಸಮಿತಿಯು ಜಿಲ್ಲಾ ಯೋಜಾನಾ ಸಮಿತಿಯ ಮಾದರಿಯಲ್ಲಿಯೇ ರಚನೆಯಾಗಿ ಕಾರ್ಯನಿರ್ವಹಿಸುತ್ತದೆ.

(13) 243(ಝಡ್‌ಎಫ್)ನೇ ವಿಧಿ: ಈಗಾಗಲೇ ಅಸ್ತಿತ್ವದಲ್ಲಿರುವ ಮುನಿಸಿಪಾಲಿಟಿಗಳನ್ನು ಮುಂದುವರಿಸುವ ಸಂಬಂಧಪಟ್ಟಂತೆ 243(ಝಡ್‌ಎಫ್)ನೇ ವಿಧಿ ಪ್ರಸ್ತಾಪಿಸುತ್ತವೆ.

(14) 243(ಝಡ್‌ಜಿ)ನೇ ವಿಧಿ: ಈ ವಿಧಿಯು ಈಗಾಗಲೇ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ ಮುನಿಸಿಪಲ್ ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯೆ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ. 243(ಝಡ್‌ಜಿ)(ಎ) ಪ್ರಕಾರ ಚುನಾವಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ನಿರ್ಣಯ, ಚುನಾವಣಾ ಕ್ಷೇತ್ರಗಳ ಸ್ಥಾನ ಹಂಚಿಕೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. 243(ಝಡ್‌ಜಿ)(ಬಿ) ಪ್ರಕಾರ ಯಾವುದೇ ಮುನಿಸಿಪಾಲಿಟಿಗಳಿಗೆ ನಡೆಯುವ ಯಾವುದೇ ಚುನಾವಣೆಯನ್ನು ರಾಜ್ಯ ವಿಧಾನ ಮಂಡಲವು ರಚಿಸಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಆಧಾರದ ಮೇಲೆ ರಚಿತವಾದ ಪ್ರಾಧಿಕಾರಕ್ಕೆ ಮತ್ತು ಕಾನೂನು ರೀತಿಯಲ್ಲಿ ಚುನಾವಣಾ ಅರ್ಜಿಯನ್ನು ಸಲ್ಲಿಸಿದ ಹೊರತು ಪ್ರಶ್ನಿಸುವಂತಿಲ್ಲ ಎಂದು ಹೇಳುತ್ತದೆ.

1.5 ಗ್ರಾಮೀಣ ಸ್ಥಳೀಯ ಸರಕಾರ

ಕರ್ನಾಟಕದಲ್ಲಿ ಸ್ಥಳೀಯ ಸರಕಾರ ವ್ಯವಸ್ಥೆ ಬಹಳ ಪುರಾತನವಾದುದು ಎಂಬುದಕ್ಕೆ ಐತಿಹಾಸಿಕ ದಾಖಲೆಗಳಿವೆ. ಕರ್ನಾಟಕ ಪ್ರದೇಶವನ್ನಾಳಿದ ಹಲವಾರು ರಾಜಮನೆತನಗಳು ವ್ಯವಸ್ಥಿತ ಸ್ಥಳೀಯ ಸರಕಾರವನ್ನು ರಚಿಸಿಕೊಂಡು ಆಡಳಿತ ನಡೆಸಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸ್ಥಳೀಯ ಸ್ವಯಂ ಸಂಸ್ಥೆಗಳ ಕಾಯಿದೆ–1902, ಅನಂತರ 1950ರಲ್ಲಿ ವೆಂಕಟಪ್ಪ ಸಮಿತಿ 1954ರಲ್ಲಿ ಚಂದ್ರಶೇಖರಯ್ಯ ಸಮಿತಿ, 1956ರ ರಾಜ್ಯ ಪುನರ್‌ವಿಂಗಡನಾ ಸಮಿತಿ ಮತ್ತು 1963ರಲ್ಲಿ ಕೊಂಡಜ್ಜಿ ಬಸಪ್ಪ ಸಮಿತಿಗಳು ರಾಜ್ಯದಲ್ಲಿ ಸ್ಥಳೀಯ ಸಂಸ್ಥೆ

ರಚನೆಗೆ ನಿಯಮಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದವು. 1983ರ ಪಂಚಾಯತ್ ರಾಜ್ಯ ಕಾಯಿದೆ ಕರ್ನಾಟಕ ಸ್ಥಳೀಯ ಸರಕಾರ ವ್ಯವಸ್ಥೆಯ ಮೈಲುಗಲ್ಲು ಎಂತಲೇ ಪರಿಗಣಿಸಲಾಗಿದೆ. ಪ್ರಸ್ತುತ ಕರ್ನಾಟಕದಲ್ಲಿ 1993ರ ಪಂಚಾಯತ್ ರಾಜ್ಯ ಕಾಯಿದೆಯ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಮೂರು ಹಂತದ ಸ್ಥಳೀಯ ಸರಕಾರವನ್ನು ರಚಿಸಲಾಗಿದೆ. ಸಂವಿಧಾನದ 73ನೇ ತಿದ್ದುಪಡಿಯ ನಂತರ ಕರ್ನಾಟಕದಲ್ಲಿ ಅಳವಡಿಸಲಾದ ಪಂಚಾಯ್ತ್‌ನ ವಿವರ ಇಂತಿದೆ.

ಪಂಚಾಯತ್‌ನ ಅರ್ಥ: ಪಂಚಾಯ್ತ್ ಪದದ ಅರ್ಥ ಗ್ರಾಮದ ಐದು ಮಂದಿ ಹಿರಿಯರ, ಅನುಭವಿಗಳ ಸಮಿತಿ ಎಂದರ್ಥ. ಅಂದರೆ ಸರಪಂಚರು ಅಥವಾ ಐವರ ಸಮಿತಿ ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ.

ಕರ್ನಾಟಕದಲ್ಲ ಪಂಚಾಯ್ತ್‌ನ ಇತಿಹಾಸ: 1919ರಲ್ಲೇ ಮೈಸೂರು ಗ್ರಾಮ ಪಂಚಾಯ್ತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯಿದೆಯನ್ನು ಜಾರಿಗೆ ತಂದು ಮೈಸೂರು ರಾಜ್ಯದಲ್ಲಿ ಪಥಮ ಬಾರಿಗೆ ಅಳವಡಿಸಿಕೊಳ್ಳಲಾಯಿತು. ಮತ್ತೆ ನವಂಬರ್ 1, 1959ರಲ್ಲಿ ಹಿಂದಿನ ಮೈಸೂರು ರಾಜ್ಯ ಪಂಚಾಯ್ತ್ ವ್ಯವಸ್ಥೆಯನ್ನು ರಚಿಸಲಾಯಿತು. ಡಿಸಂಬರ್ 21, 1960ರಲ್ಲಿ ಭಾರತದ ಅಂದಿನ ರಾಷ್ಟ್ರಾಧ್ಯಕ್ಷರಾಗಿದ್ದ ಡಾ.ರಾಜೇಂದ್ರ ಪ್ರಸಾದ್ ಅವರು ಅಧಿಕೃತವಾಗಿ ಪ್ರಾರಂಭಿಸಿದರು. 1959ರ ಕಾಯಿದೆಯನ್ವಯ ರಾಜ್ಯದಲ್ಲಿ ಗ್ರಾಮ ಪಂಚಾಯ್ತ್, ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಅಸ್ಥಿತ್ವದಲ್ಲಿದ್ದವು. ಮತ್ತೆ 1983ರಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಸರ್ಕಾರ, ಅಂದಿನ ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದ ಅಬ್ದುಲ್ ನಜೀರ್‌ಸಾಬ್‌ರ ಪರಿಶ್ರಮದಿಂದಾಗಿ ಕರ್ನಾಟಕ ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್ ಮಸೂದೆಯನ್ನು ಜಾರಿಗೆ ತಂದಿತು. ಇದು ಅಧಿಕೃತವಾಗಿ ಆಗಸ್ಟ್ 14, 1985ರಿಂದ ಜಾರಿಗೆ ಬಂದಿತು. ಮತ್ತೆ ಈ ಮಸೂದೆಗೆ ಹಲವಾರು ತಿದ್ದುಪಡಿಗಳೊದಿಗೆ ಕಾಂಗ್ರೆಸ್ ಪಕ್ಷವು 1993ರಲ್ಲಿ ಪಂಚಾಯತ್ ರಾಜ್ ಕಾಯಿದೆಯನ್ನು ಅಸ್ಥಿತ್ವಕ್ಕೆ ತಂದಿತು. ಪ್ರಸ್ತುತ ಕಾಯಿದೆಯು ಮೂರು ಹಂತದ ಪಂಚಾಯ್ತ್ ವ್ಯವಸ್ಥೆಗೆ ಅವಕಾಶ ನೀಡಿದೆ.

1) ಗ್ರಾಮ ಪಂಚಾಯತ್

2) ತಾಲ್ಲೂಕು ಪಂಚಾಯತ್

3) ಜಿಲ್ಲಾ ಪಂಚಾತ್

1. ಗ್ರಾಮ ಪಂಚಾಯತ್

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯ ಪ್ರಕಾರ ಕನಿಷ್ಟ 5000 ದಿಂದ 7000 ಜನಸಂಖ್ಯೆಯನ್ನೊಳಗೊಂಡ ಒಂದು ಗ್ರಾಮ ಅಥವಾ ಎರಡು ಮೂರು ಗ್ರಾಮಗಳನ್ನು ಒಂದು ಗ್ರಾಮ ಪಂಚಾಯಿತಿ ಎಂದು ಪರಿಗಣೆಸಲಾಗಿದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳು ಮತ್ತು ಮಲೆನಾಡು ಪ್ರದೇಶಗಳಲ್ಲಿ 2000 ಜನಸಂಖ್ಯೆ ಒಂದು ಗ್ರಾಮ ಪಂಚಾಯಿತಿಯ ರಚನೆಗೆ ಅವಕಾಶ ಕಲ್ಪಿಸಲಾಯಿತು. ಪ್ರತೀ 400 ಜನರಿಗೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುತ್ತದೆ. ಗ್ರಾಮ ಪಂಚಾಯಿತಿಯ ಅಧಿಕಾರಾವಧಿ 5 ವರ್ಷಗಳು. ಚುನಾಯಿತ ಸದಸ್ಯರುಗಳು ತಮ್ಮಲ್ಲಿಯೇ ಒಬ್ಬ ಅಧ್ಯಕ್ಷ ಮತ್ತು ಒಬ್ಬ ಉಪಾಧ್ಯಕ್ಷರನ್ನು 30

ತಿಂಗಳ ಅವಧಿಗೆ ಆಯ್ಕೆಮಾಡಿಕೊಳ್ಳುತ್ತಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗಾಗಿ ಸೂಕ್ತ ಮೀಸಲಾತಿಯನ್ನೂ ನೀಡಲಾಗಿದೆ.

ಗ್ರಾಮ ಪಂಚಾಯಿತಿ ಕನಿಷ್ಠ 2 ತಿಂಗಳಿಗೊಮ್ಮೆ ಸಭೆ ಸೇರಬೇಕು. ಅಧ್ಯಕ್ಷ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಇವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು,ಅಧ್ಯಕ್ಷತೆ ವಹಿಸಿ ಕಾರ್ಯಕಲಾಪ ನಡೆಸುತ್ತಾರೆ. ಸಭೆಯಲ್ಲಿ 1/3 ರಷ್ಟು ಸದಸ್ಯರು ಹಾಜರಿದ್ದರೆ ಮಾತ್ರ ಯಾವುದೇ ನಿರ್ಧಾರಕ್ಕೆ ಸಮ್ಮತಿ ದೊರೆಯುತ್ತದೆ. ಪರಿಣಾಮಕಾರಿ ಆಡಳಿತಕ್ಕಾಗಿ ಸ್ಥಾಯಿ ಸಮಿತಿ ರಚಿಸಿಕೊಳ್ಳಲು ಅವಕಾಶವಿದೆ. ಪ್ರಸ್ತುತ ಸುಮಾರು 5659 ಗ್ರಾಮ ಪಂಚಾಯತ್‌ಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಗ್ರಾಮ ಪಂಚಾತಯತ್ ಆಡಳಿತ ನಿರ್ವಹಣೆಗೆ ಪಂಚಾಯಿತಿ ಕಾರ್ಯದರ್ಶಿ ಮತ್ತು ಅವರ ಸಿಬ್ಬಂದಿಯಿರುತ್ತಾರೆ. ಪ್ರಸ್ತುತ ಪ್ರತಿ ಗ್ರಾಮ ಪಂಚಾಯಿತಿಗೆ ಓರ್ವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿ.ಡಿ.ಓ)ಯನ್ನು ರಾಜ್ಯ ಸರ್ಕಾರ ನೇಮಕ ಮಾಡುವ ಮೂಲಕ ಆಡಳಿತ ವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮಕಾರಿಯನ್ನಾಗಿಸಿದೆ.

ಗ್ರಾಮ ಸಭಾ

ಹಳ್ಳಿಯ ಸಮಿತಿಯನ್ನು ಗ್ರಾಮ ಸಭಾ ಎನ್ನಲಾಗಿದೆ. ಈ ಗ್ರಾಮ ಸಭೆಯಲ್ಲಿ ಗ್ರಾಮದ ಎಲ್ಲಾ 18 ವರ್ಷ ತುಂಬಿದ ಜನರು ಭಾಗವಹಿಸಲು ಅವಕಾಶವಿದೆ. ಗ್ರಾಮ ಪಂಚಾಯತಿಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದು,ಸ್ಥಳೀಯ ಸಮಸ್ಯೆಗಳ ಮತ್ತು ಅಗತ್ಯತೆಗಳ ಬಗೆಗೆ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳುತ್ತಾರೆ.ಈ ಗ್ರಾಮ ಸಭೆಯು ಕನಿಷ್ಠ 6 ತಿಂಗಳಿಗೊಮ್ಮೆ ಸಭೆ ಸೇರುತ್ತದೆ.

ಗ್ರಾಮ ಪಂಚಾಯಿತಿ ಕಾರ್ಯಗಳು

ಕರ್ನಾಟಕ ಪಂಚಾಯಿತಿ ರಾಜ್ ಕಾಯ್ದೆ 1993 ರಂತೆ ಗ್ರಾಮ ಪಂಚಾಯಿತಿ ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತದೆ.

1. **ಸಾಮಾನ್ಯ ಕಾರ್ಯಗಳು :-**

   - ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಹಳ್ಳಿಗಳ ಅಭಿವೃದ್ಧಿಗಾಗಿ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದು.
   - ಗ್ರಾಮ ಪಂಚಾಯಿತಿಯ ವಾರ್ಷಿಕ ಆಯವ್ಯಯ ಪಟ್ಟಿಯನ್ನು ಸಿದ್ಧಪಡಿಸುವುದು.
   - ನೈಸರ್ಗಿಕ ವಿಕೋಪಗಳಿಗೆ ತುತ್ತಾದವರಿಗೆ ಸೂಕ್ತ ಪರಿಹಾರವನ್ನು ನೀಡುವುದು.
   - ಸಾರ್ವಜನಿಕ ಸ್ವತ್ತಿನ ಅತಿಕ್ರಮವನ್ನು ತಡೆಯುವುದು.

2. **ಐಚ್ಛಿಕ ಕಾರ್ಯಗಳು :-**

1. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಹಳ್ಳಿಗಳಿಗೆ ಸಂಬಂಧಿಸಿದ ಅಂಕಿ ಅಂಶಗಳ ಕ್ರೋಢೀಕರಣ.
2. ಕೃಷಿಯನ್ನು ಪ್ರೋತ್ಸಾಹಿಸುವುದು.
3. ಪಶುಸಂಗೋಪನೆ, ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆಯನ್ನು ಪ್ರೋತ್ಸಾಹಿಸುವುದು.
4. ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದು.
5. ಗ್ರಾಮೀಣ ಮತ್ತು ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು.
6. ಕುಡಿಯುವ ನೀರಿನ ಬಾವಿ, ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆ
7. ಜಲಮಾಲಿನ್ಯ ನಿಯಂತ್ರಣ
8. ರಸ್ತೆ, ಸೇತುವೆ ಇತರೆ ಸಂಪರ್ಕ ಮಾರ್ಗಗಳ ನಿರ್ಮಾಣ ಮತ್ತು ನಿರ್ವಹಣೆ
9. ಗ್ರಾಮೀಣ ವಿದ್ಯುತ್ತೀಕರಣ ಮತ್ತು ವಿದ್ಯುತ್ ಪೂರೈಕೆ
10. ಅಸಂಪ್ರದಾಯಿಕ ಶಕ್ತಿಮೂಲಗಳನ್ನು ಅಭಿವೃದ್ಧಿ ಪಡಿಸುವುದು
11. ವಯಸ್ಕರ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣವನ್ನು ಪ್ರೋತ್ಸಾಹಿಸುವುದು
12. ಗ್ರಂಥಾಲಯ ಮತ್ತು ವಾಚನಾಲಯಗಳ ನಿರ್ಮಾಣ ಹಾಗೂ ನಿರ್ವಹಣೆ
13. ಬಡತನ ನಿರ್ಮೂಲನೆಗೆ ಜನರಲ್ಲಿ ಅರಿವು ಮೂಡಿಸುವುದು ಮತ್ತು ಕಾರ್ಯಕ್ರಮ ರೂಪಿಸುವುದು
14. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಬಗೆಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು
15. ದನಗಳ ಜಾತ್ರೆ ಮತ್ತು ಹಬ್ಬ, ಹರಿದಿನಗಳ ನಿರ್ವಹಣೆ
16. ಸಾರ್ವಜನಿಕ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಯೋಜನೆಗಳನ್ನು ಕಾರ್ಯಗತಗೊಳಿಸುವುದು
17. ಅಂಗವಿಕಲರು ಮತ್ತು ಮಾನಸಿಕ ಅಸ್ವಸ್ಥರ ಯೋಗಕ್ಷೇಮ ನೋಡಿಕೊಳ್ಳುವುದು
18. ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಅಭೀವೃದ್ಧಿ ಕಾರ್ಯಕ್ರಮಗಳು
19. ಸಾರ್ವಜನಿಕ ಉದ್ಯಾನವನಗಳು ಮತ್ತು ಆಟದ ಮೈದಾನಗಳ ಸಂರಕ್ಷಣೆ ಮತ್ತು ನಿರ್ವಹಣೆ
20. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲ್ವಿಚಾರಣೆ ಮಾಡುವುದು

ಗ್ರಾಮ ಪಂಚಾಯಿತಿಯ ಸ್ಥಾಯಿ ಸಮಿತಿಗಳು

1. ಉತ್ಪಾದನಾ ಸಮಿತಿ

ಕೃಷಿ ಉತ್ಪನ್ನಗಳು, ಹೈನುಗಾರಿಕೆ ಉತ್ಪನ್ನಗಳು, ಗ್ರಾಮೀಣ ಕೈಗಾರಿಕೆಗಳು ಮತ್ತು ಬಡತನ ನಿರ್ಮೂಲನೆಗೆ ಸಂಬಂಧಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿರುತ್ತದೆ.

2. ಸಾಮಾಜಿಕ ನ್ಯಾಯ ಸಮಿತಿ :

ಈ ಸಮಿತಿಯು ಪರಿಶಿಷ್ಠ ಜಾತಿ, ಪರಿಶಿಷ್ಠ ವರ್ಗ ಮತ್ತು ಮಹಿಳಾ ಸಮುದಾಯಕ್ಕೆ ಸೇರಿದ ಕನಿಷ್ಠ ಒಬ್ಬೊಬ್ಬ ಸದಸ್ಯರನ್ನು ಹೊಂದಿರಲೇಬೇಕು. ಇದರ ಪ್ರಮುಖ ಕಾರ್ಯವೆಂದರೆ ಈ ಸಮುದಾಯಗಳ ಆರ್ಥಿಕ, ಶೈಕ್ಷಣಿಕ, ಮತ್ತು ಸಾಮಾಜಿಕ ಹಿತಾಸಕ್ತಿಯನ್ನು ಕಾಪಾಡುವುದು.

3. ಸೌಲಭ್ಯಗಳ ಸಮಿತಿ

ಶಿಕ್ಷಣ, ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ಸಾರ್ವಜನಿಕ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು

ಗ್ರಾಮ ಪಂಚಾಯಿತಿಯ ಹಣಕಾಸಿನ ಮೂಲಗಳು

ಅ. ರಾಜ್ಯ ಸರ್ಕಾರದಿಂದ ನೀಡುವ ವಂತಿಗೆಗಳು, ಸಾಲ ಸೌಲಭ್ಯ ಹಾಗೂ ಅನುದಾನದ ಬಾಬ್ತು

ಆ. ಗ್ರಾಮ ಪಂಚಾಯಿತಿ ವಿಧಿಸುವ ತೆರಿಗೆಗಳು, ಸುಂಕಗಳು, ಮತ್ತಿತ್ತರ ಶುಲ್ಕಗಳಿಂದ

ಇ. ವಿವಿಧ ರೀತಿಯ ಬೇಡಿಕೆಗಳಿಂದ ಬರುವ ಆದಾಯ.

1. ತಾಲೂಕು ಪಂಚಾಯತ್

ರಾಜ್ಯದ ಪ್ರತಿಯೊಂದು ತಾಲೂಕಿಗೆ 1993 ಪಂಚಾಯತ್ ಕಾಯ್ದೆಯನ್ವಯ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಪಟ್ಟಣ ಪಂಚಾಯತಿ ಅಥವಾ ಪುರಸಭೆ, ಅಥವಾ ಕೈಗಾರಿಕಾ ಉಪನಗರವನ್ನು ಹೊರತುಪಡಿಸಿ ಇದೇ ತಾಲೂಕಿನ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ತಾಲೂಕಿನಲ್ಲಿ ತಾಲೂಕು ಪಂಚಾಯ್ತಿಯನ್ನು ರಚಿಸಬಹುದು. ತಾಲೂಕು ಪಂಚಾಯತ್‌ಯು ತಾಲೂಕಿನ ಕೇಂದ್ರ ಹೆಸರಿನ ಭಾಗದಲ್ಲಿ ಕಛೇರಿಯನ್ನು ಹೊಂದಿರುತ್ತದೆ.

ಕರ್ನಾಟಕದ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ ರಾಜ್ಯದ ಪ್ರತಿಯೊಂದು ತಾಲೂಕಿನಲ್ಲಿ ತಾಲ್ಲೂಕು ಪಂಚಾಯತ್‌ನ್ನು ರಚಿಸಲು ಅವಕಾಶ ಕಲ್ಪಿಸಿದೆ. ತಾಲೂಕು ಪಂಚಾಯತ್ ಇಡೀ ತಾಲೂಕಿನ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದು, ತಾಲೂಕಿನ ಯಾವುದೇ ಕೇಂದ್ರ ಪ್ರದೇಶದಲ್ಲಿ ಕಛೇರಿಯನ್ನು ಹೊಂದಬಹುದು. ಈ ಪ್ರದೇಶ ವ್ಯಾಪ್ತಿಯಲ್ಲಿ ಹೊಂದಿರಬಹುದಾದ ಶಾಲೆಗಳು ಮತ್ತು ಇತರ ಸಂಸ್ಥೆಗಳ ಮೇಲೆ ಅದರ ಅಧಿಕಾರಗಳನ್ನು ಮತ್ತು ಕಾರ್ಯಗಳನ್ನು ಚಲಾಯಿಸಬಹುದು ಮತ್ತು ನಿರ್ವಹಿಸಬಹುದು.

ರಚನೆ

ಪ್ರತಿಯೊಂದು ತಾಲೂಕು ಪಂಚಾಯತ್‌ಯ ಚುನಾಯಿತ ಸದಸ್ಯರನ್ನು ಹೊಂದಿದ್ದು. ತಾಲೂಕು ಪಂಚಾಯತ್‌ಗೆ ಮತದಾರರಿಂದ ಚುನಾಯಿತರಾದ ಸದಸ್ಯರು, ತಾಲೂಕನ್ನು ಪ್ರತಿನಿಧಿಸುವ ಜೊತೆಗೆ ಮತದಾರರಾಗಿರುವ ಲೋಕಸಭೆ(1) ರಾಜ್ಯ ಸಭೆ ಮತ್ತು ರಾಜ್ಯ ವಿಧಾನಸಭೆ/ಪರಿಷತ್ತಿನ ಸದಸ್ಯರು, ಗ್ರಾಮ ಪಂಚಾಯತ್‌ಗಳ ಅಧ್ಯಕ್ಷರುಗಳ ಒಟ್ಟು ಸಂಖ್ಯೆ 1/5ರಷ್ಟು ಅಧ್ಯಕ್ಷರುಗಳನ್ನು ಒಳಗೊಂಡಿದ್ದು, ಮತನೀಡುವ ಹಕ್ಕನ್ನು ಹೊಂದಿರುತ್ತಾರೆ.

ಪ್ರತಿಯೊಂದು ತಾಲೂಕು ಪಂಚಾಯತ್ ಈ ಕೆಳಕಂಡವರನ್ನು ಸದಸ್ಯರನ್ನಾಗಿ ಒಳಗೊಂಡಿರುತ್ತದೆ. ಅವುಗಳೆಂದರೆ:

1) ತಾಲೂಕುಗಳ ವಿವಿಧ ಚುನಾವಣಾ ಕ್ಷೇತ್ರಗಳಿಂದ ಚುನಾಯಿತರಾದ ಸದಸ್ಯರು
2) ತಾಲೂಕಿನ ಪೂರ್ಣ ಅಥವಾ ಭಾಗಶಃ ಭಾಗವನ್ನು ಪ್ರತಿನಿಧಿಸುವ ಲೋಕಸಭಾ ಮತ್ತು ರಾಜ್ಯ ವಿಧಾನ ಸಭಾ ಸದಸ್ಯರು

3) ತಾಲೂಕಿನ ವ್ಯಾಪ್ತಿಯಲ್ಲಿನ ಯಾವುದೇ ಪ್ರದೇಶ ಅಥವಾ ಭಾಗದಲ್ಲಿ ಮತದಾರರಾಗಿ ನೋಂದಾಯಿತರಾಗಿರುವ ರಾಜ್ಯಸಭಾ ಮತ್ತು ರಾಜ್ಯವಿಧಾನ ಪರಿಷತ್ ಸದಸ್ಯರು.

4) ತಾಲೂಕು ಗ್ರಾಮ ಪಂಚಾಯತ್‌ಗಳ ಒಟ್ಟು ಅಧ್ಯಕ್ಷರುಗಳಲ್ಲಿ 1/5ರಷ್ಟು ಅಧ್ಯಕ್ಷರುಗಳು ಒಂದು ವರ್ಷದ ಅವಧಿಗೆ ಸರದಿಯ ಪ್ರಕಾರ (ಚೀಟಿ ಎತ್ತುವ ಮೂಲಕ) ಸದಸ್ಯರುಗಳು ಇರುತ್ತಾರೆ.

ಚುನಾಯಿತ ಸದಸ್ಯರು ತಾಲೂಕಿನ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾದ ತಾಲೂಕಿನ 10,000 ಜನಸಂಖ್ಯೆಗೆ ಒಬ್ಬರಂತೆ ಚುನಾಯಿತರಾಗುತ್ತಾರೆ. ಒಂದು ಲಕ್ಷಕ್ಕೂ ಹೆಚ್ಚಿಲ್ಲದ ಜನಸಂಖ್ಯೆ ಇರುವ ತಾಲೂಕಿನಲ್ಲಿ 11 ಮಂದಿ ಚುನಾಯಿತ ಸದಸ್ಯರುಗಳಿರುತ್ತಾರೆ. ಪ್ರತಿಯೊಂದು ಜನಗಣತಿಯ ನಂತರ ಅಂಕಿ-ಅಂಶಗಳನ್ನು ಆಧರಿಸಿ ತಾಲೂಕು ಪಂಚಾಯಿತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ನಿರ್ಧರಿಸಲಾಗುತ್ತದೆ.

ಮೀಸಲಾತಿ: ತಾಲೂಕು ಪಂಚಾಯತಿಗೆ ಪರಿಶಿಷ್ಟ ಜಾತಿ/ವರ್ಗ, ಹಿಂದುಳಿದ ಜಾತಿ/ವರ್ಗ ಮತ್ತು ಮಹಿಳೆಯರಿಗೆ ಮೀಸಲಾತಿಯ ಮೂಲಕ ಆಯ್ಕೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಪ್ರತಿಯೊಂದು ತಾಲೂಕು ಪಂಚಾಯತ್‌ನಲ್ಲಿ ಪರಿಶಿಷ್ಟ ಜಾತಿ/ವರ್ಗದವರಿಗೆ ಕನಿಷ್ಟ ಒಂದೊಂದು ಸ್ಥಾನವನ್ನಾದರೂ ಮೀಸಲಿಡಬೇಕು. ಹಾಗೂ ಪಂಚಾಯತಿನ ಒಟ್ಟು ಸದಸ್ಯ ಸಂಖ್ಯೆಗಳ 1/3 ಭಾಗದಷ್ಟು ಸ್ಥಾನವನ್ನು ಹಿಂದುಳಿದ ವರ್ಗದವರಿಗೆ ಮೀಸಲಿಡಬೇಕು. ಹಾಗೆಯೇ ಮಹಿಳೆಯರಿಗೂ ಸ್ಥಾನ ಮೀಸಲಾಗಿಡಲಾಗುತ್ತದೆ. ಈ ಮೀಸಲಾತಿಯ ಕ್ಷೇತ್ರವನ್ನು ರಾಜ್ಯ ಚುನಾವಣಾ ಆಯೋಗವೇ ನಿರ್ಧರಿಸುತ್ತದೆ.

ಅರ್ಹತೆಗಳು:

ತಾಲೂಕು ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ಹೆಸರಿರುವವರು, 21 ತುಂಬಿರುವವರು ಮಾತ್ರ ಸ್ಪರ್ಧಿಸಲು ಅರ್ಹರಾಗಿರುತ್ತಾರೆ. ಅನರ್ಹತೆಗಳೆಂದರೆ: ಚುನಾವಣೆಗೆ ಸ್ಪರ್ಧಿಸಲು ಕಾನೂನಿನ್ವಯ ಅನರ್ಹರಾಗಿದ್ದಾರೆ, 21 ವರ್ಷ ಪೂರ್ಣಗೊಳ್ಳದಿದ್ದರೆ, ಕ್ರಿಮಿನಲ್ ಮೊಕದ್ದಮೆಗಾಗಿ ಶಿಕ್ಷೆಗೊಳಪಟ್ಟಿದ್ದರೆ, ಸರಕಾರಿ ಸೇವೆಯಲ್ಲಿದ್ದರೆ.

ಅವಧಿ

ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಸದಸ್ಯರುಗಳ ಅಧಿಕಾರಾವಧಿಯು ತಾಲೂಕು ಪಂಚಾಯತಿಯ ಪ್ರಥಮ ಸಭೆಗೆ ನಿಗಧಿ ಪಡಿಸಿದ ದಿನಾಂಕದಿಂದ ಐದು ವರ್ಷಗಳಾಗಿರುತ್ತದೆ. ಸದಸ್ಯರು ಪಕ್ಷಾಂತರ ಮಾಡಿದರೆ, ಸದಸ್ಯರು ರಾಜೀನಾಮೆ ನೀಡಿದರೆ, ದುರ್ವರ್ತನೆಗಾಗಿ ಸದಸ್ಯರನ್ನು ತೆಗೆದುಹಾಕಿದರೆ, ಸ್ಥಾನ ಖಾಲಿಯಾದ ನಂತರ ಮರು ಚುನಾವಣೆಗೂ ಅವಕಾಶವಿದೆ.

ತಾಲೂಕು ಪಂಚಾಯ್ತಿಯ ಸದಸ್ಯನು, ತನ್ನ ಸದಸ್ಯತ್ವಕ್ಕೆ ತನ್ನ ಸಹಿ ಸಹಿತ ತಾಲೂಕು ಪಂಚಾಯತಿ ಅಧ್ಯಕ್ಷನಿಗೆ ಸ್ವಂತ ಕೈಬರಹದಲ್ಲಿ ರಾಜೀನಾಮೆ ಸಲ್ಲಿಸಬಹುದು. ಸಲ್ಲಿಸಿದ ದಿನಾಂಕದಿಂದ 15 ದಿನಗಳೊಳಗೆ ಲಿಖಿತ ಬರಹದ ಮೂಲಕ ವಾಪಸ್ಸು ಪಡೆಯಬಹುದು. ಇಂತಹ ರಾಜೀನಾಮೆ ಪತ್ರವನ್ನು ಮುಂದಿನ ತಾಲೂಕು ಪಂಚಾಯತಿನ ಸಭೆಯಲ್ಲಿ ಪಂಚಾಯತಿ ಅಧ್ಯಕ್ಷರು ಮಂಡಿಸುತ್ತಾರೆ.

ಅಧ್ಯಕ್ಷ ಮತ್ತು ಉಪಾಧ್ಯಕ್ಷರು

ಕರ್ನಾಟಕ ಪಂಚಾಯತಿಯ ಅಧಿನಿಯಮದ ಪ್ರಕಾರ ತಾಲೂಕು ಪಂಚಾಯತಿಯ ಸದಸ್ಯರು ಇಬ್ಬರು ಸದಸ್ಯರನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಆಯ್ಕೆ ಮಾಡುತ್ತಾರೆ. ತಾಲೂಕು ಪಂಚಾಯತ್‌ನ ಅಧ್ಯಕ್ಷರು ಕಾರ್ಯಾಂಗದ ಮುಖ್ಯಸ್ಥರಾಗಿರುತ್ತಾರೆ. ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸುವ ಜೊತೆಗೆ ತಾಲೂಕು ಪಂಚಾಯತಿಗೆ ವಹಿಸಲಾಗಿರುವಂತಹ ಅಧಿಕಾರ ಮತ್ತು ಕಾರ್ಯಗಳನ್ನು ಚಲಾಯಿಸುತ್ತಾರೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಯಲ್ಲೂ ಪರಿಶಿಷ್ಟ ಜಾತಿ /ವರ್ಗ, ಹಿಂದುಳಿದ ಜಾತಿ/ವರ್ಗ ಹಾಗೂ ಮಹಿಳೆಯರಿಗೂ ಮೀಸಲಾತಿಯನ್ನು ಅನುಸರಿಸಲಾಗುತ್ತದೆ.

ತಾಲೂಕು ಪಂಚಾಯತ್‌ನ ಚುನಾವಣೆಯ ನಂತರ ಚುನಾಯಿತ ಸದಸ್ಯರು ಇಬ್ಬರನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನಾಗಿ ಚುನಾಯಿಸುತ್ತಾರೆ. ಇದರ ಅಧಿಕಾರಾವಧಿ ಅವರು ಚುನಾಯಿತರಾದ ದಿನಾಂಕದಿಂದ 20 ತಿಂಗಳ ಅವಧಿಯಾಗಿರುತ್ತದೆ. ಪಂಚಾಯತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸಂಬಳ ಮತ್ತು ಇತರೆ ಭತ್ಯೆಗಳನ್ನು ಹಾಗೂ ಸದಸ್ಯರು ಶುಲ್ಕ ಮತ್ತು ಇತರ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಪಂಚಾಯತ್‌ನ ಅಧ್ಯಕ್ಷನು ತನ್ನ ಸಹಿಸಹಿತ ಬರವಣಿಗೆಯಲ್ಲಿ ಪಂಚಾಯತ್‌ನ ಅಧ್ಯಕ್ಷರಿಗೆ ಅಥವಾ ಅಧ್ಯಕ್ಷರ ಗೈರು ಹಾಜರಿಯಲ್ಲಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬಹುದು. ರಾಜೀನಾಮೆ ಸಲ್ಲಿಸಿದ ದಿನಾಂಕದಿಂದ 15 ದಿನಗಳೊಳಗೆ ರಾಜೀನಾಮೆ ವಾಪಾಸ್ಸು ಪಡೆಯಬಹುದು. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸವನ್ನು ಪಂಚಾಯತ್ ಸಭೆಯಲ್ಲಿ ಮಂಡಿಸಬಹುದು. ಇದಕ್ಕಾಗಿ ವಿಶೇಷ ಸಭೆ ಕರೆದು ಚುನಾಯಿತ ಸದಸ್ಯರ ಒಟ್ಟುನ ಸಂಖ್ಯೆಯಲ್ಲಿ ಬಹುಮತದಿಂದ ಅಂಗೀಕರಿಸಿದರೆ ಹುದ್ದೆಯನ್ನು ತ್ಯಜಿಸಬೇಕಾಗುತ್ತದೆ. ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಆಯ್ಕೆಯಾದ 6 ತಿಂಗಳುಗಳೊಳಗೆ ಮಂಡಿಸುವಂತಿಲ್ಲ.

ತಾಲೂಕು ಪಂಚಾಯತ್‌ನ ಸಭೆಗಳು:

ಸಾಮಾನ್ಯ ಚುನಾವಣೆಯ ನಂತರ ತಾಲೂಕು ಪಂಚಾಯತ್ ಸಭೆಯನ್ನು ಉಪವಿಭಾಗಾಧಿಕಾರಿಗಳು ಕರೆಯುತ್ತಾರೆ. ಈ ಪ್ರಥಮ ಸಭೆಯ ಅಧ್ಯಕ್ಷತೆಯನ್ನು ಉಪ ವಿಭಾಗಾಧಿಕಾರಿಗಳು ಕರೆಯುತ್ತಾರೆ. ಈ ಪ್ರಥಮ ಸಭೆಯ ಅಧ್ಯಕ್ಷತೆಯನ್ನು ಉಪ-ವಿಭಾಗಾಧಿಕಾರಿಗಳೇ ವಹಿಸುತ್ತಾರೆ. ಈ ಸಭೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಯುತ್ತದೆ. ಅನಂತರದಿಂದ ನಡೆಯುವ ಎಲ್ಲಾ ಸಭೆಗಳ ಅಧ್ಯಕ್ಷತೆಯನ್ನು ಪಂಚಾಯತ್‌ನ ಅಧ್ಯಕ್ಷರು ಇವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ವಹಿಸುತ್ತಾರೆ. ಸಾಮಾನ್ಯ ಸಭೆಯ ಹತ್ತು ಪೂರ್ಣ ದಿನಗಳ ನೋಟೀಸಿನೊಂದಿಗೆ ಮತ್ತು ವಿಶೇಷ ಸಭೆಯು ಏಳು ಪೂರ್ಣ ದಿನಗಳ ನೋಟೀಸಿನೊಂದಿಗೆ ನಡೆಯುತ್ತದೆ. ತಾಲೂಕು ಪಂಚಾಯತಿಯ ಅರ್ಧದಷ್ಟು ಸದಸ್ಯರು ಹಾಜರಾತಿ ಕೋರಂ ಆಗಿರುತ್ತದೆ. ತೀರ್ಮಾನವನ್ನು ಹಾಜರಿರುವ ಸದಸ್ಯರ ಬಹುಮತದ ತೀರ್ಮಾನದ ಮೇಲೆ ಕೈಗೊಳ್ಳುತ್ತದೆ. ಸಮಾನ ಮತಗಳು ಬಂದಾಗ ನಿರ್ಣಾಯಕ ಮತವನ್ನು ಅಧ್ಯಕ್ಷರು ಚಲಾಯಿಸುತ್ತಾರೆ.

ಅಧ್ಯಕ್ಷರ ಅಧಿಕಾರ ಮತ್ತು ಕಾರ್ಯಗಳು:

ತಾಲೂಕು ಪಂಚಾಯತ್‌ನ ಕಾರ್ಯ ನಿರ್ವಾಹಕ ಮುಖ್ಯಸ್ಥರಾಗಿರುವ ಅಧ್ಯಕ್ಷರು (1996ರಿಂದ ಜಾರಿಗೆ ಬಂದ ಅಧಿಸೂಚನೆಯ ಸಂಖ್ಯೆ 9) ಈ ಕೆಳಕಂಡ ಅಧಿಕಾರ ಮತ್ತು ಕಾರ್ಯಗಳನ್ನು ನಿರ್ವಹಿಸುತ್ತಾರೆ.

1. ತಾಲೂಕು ಪಂಚಾಯತ್‌ನ ಸಭೆ ಕರೆಯುವುದು. ಸಭೆಯ ಅಧ್ಯಕ್ಷತೆ ವಹಿಸುವುದು ಮತ್ತು ಸಭೆಯನ್ನು ನಡೆಸಿಕೊಡುವುದು.
2. ತಾಲೂಕು ಪಂಚಾಯತಿ ಸಭೆ ಸ್ಥಾಯಿ ಸಮಿತಿಗಳ ನಿರ್ಣಯ ನಿರ್ಧಾರಗಳನ್ನು ಜಾರಿಗೊಳಿಸುವಲ್ಲಿ ಕಾರ್ಯನಿರ್ವಾಹಣಾಧಿಕಾರಿಯ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು.
3. ತಾಲೂಕು ಪಂಚಾಯತಿಯ ಹಣಕಾಸಿನ ಕಾರ್ಯ ನಿರ್ವಹಣಾ ಆಡಳಿತದ ಮೇಲೆ ನಿಯಂತ್ರಣ ಮತ್ತು ಮೇಲ್ವಿಚಾರಣೆ ಹಾಗೂ ಅಗತ್ಯವೆಂದು ಕಂಡು ಬಂದರೆ ಪಂಚಾಯತಿಯ ದಾಖಲೆಗಳನ್ನು ತರಿಸಿಕೊಳ್ಳುವುದು.
4. ತಾಲೂಕಿನಲ್ಲಿ ಎದುರಾಗಬಹುದಾದ ಪ್ರಕೃತಿ ವಿಕೋಪವನ್ನು ಬಗೆಹರಿಸಲು ಇದಕ್ಕಾಗಿ ರೂ.25,000ರವರೆಗೆ ಮಂಜೂರಾತಿ ಹಿಂಪಡೆಯಬಹುದು. ಈ ರೀತಿ ಮಂಜೂರಾತಿಗೆ ಮುಂದಿನ ಸಭೆಯಲ್ಲಿ ಅಂಗೀಕಾರ ಪಡೆದುಕೊಳ್ಳಬಹುದು.

ಉಪಾಧ್ಯಕ್ಷರ ಅಧಿಕಾರ ಮತ್ತು ಕಾರ್ಯಗಳು

ತಾಲೂಕು ಪಂಚಾಯತಿಯ ಉಪಾಧ್ಯಕ್ಷರು ಈ ಕೆಳಕಂಡ ಅಧಿಕಾರ ಮತ್ತು ಕಾರ್ಯಗಳನ್ನು ನಿರ್ವಹಿಸುತ್ತಾನೆ.

1. ಅಧ್ಯಕ್ಷನು ಗೈರು ಹಾಜರಾದಾಗ ಅಥವಾ ರಜೆ ಮೇಲಿರುವಾಗ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾಗಿರುವಾಗ ಅಥವಾ ಅಧ್ಯಕ್ಷನ ಹುದ್ದೆ ಖಾಲಿಯಾಗಿದ್ದಾಗ ಅಧ್ಯಕ್ಷರು ನಿರ್ವಹಿಸುವ ಎಲ್ಲಾ ಅಧಿಕಾರಗಳನ್ನು ಹೊಂದಿದ್ದು ಕಾರ್ಯನಿರ್ವಹಿಸುತ್ತಾರೆ.
2. ಅಧ್ಯಕ್ಷನ ಗೈರು ಹಾಜರಿ ಅಥವಾ ಹುದ್ದೆ ಖಾಲಿಯಿದ್ದಾಗ ಸಭೆಯ ಅಧ್ಯಕ್ಷತೆಯನ್ನು ವಹಿಸುವುದು.

ತಾಲೂಕು ಪಂಚಾಯತ್‌ನ ಅಧಿಕಾರ ಮತ್ತು ಕಾರ್ಯಗಳು

ಕರ್ನಾಟಕ ಪಂಚಾಯತ್ ಅಧಿನಿಯಮದ ಪ್ರಕಾರ ಸರ್ಕಾರವು ನಿರ್ದಿಷ್ಟ ಪಡಿಸುವಂತಹ ಷರತ್ತಿಗೆ ಒಳಪಟ್ಟು ಈ ಕೆಳಕಂಡ ಅಧಿಕಾರ ಮತ್ತು ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳು ಈ ಕೆಳಕಂಡಂತಿವೆ.

1. **ಸಾಮಾನ್ಯ ಕಾರ್ಯಗಳು:** ಸರ್ಕಾರ ಮತ್ತು ಜಿಲ್ಲಾ ಪಂಚಾಯತಿ ವಹಿಸಿದ ಕಾರ್ಯಗಳು, ಯೋಜನೆ ಸಿದ್ಧಪಡಿಸುವುದು, ತಾಲೂಕು ಮಟ್ಟದ ಅಭಿವೃದ್ಧಿ ಯೋಜನೆಗಳ ಮೇಲ್ವಿಚಾರಣೆ, ಸಂಯೋಜನೆ, ಸಂಘಟನೆ ಹಾಗೂ ಅಭಿವೃದ್ಧಿಗೆ ಯೋಜನೆಯನ್ನು ಸಿದ್ಧಪಡಿಸುವುದು.
2. **ಕೃಷಿ ಮತ್ತು ತೋಟಗಾರಿಕೆ ಕಾರ್ಯಗಳು:** ಕೃಷಿ, ಕೃಷಿ ಉತ್ಪನ್ನಗಳನ್ನು ಹೆಚ್ಚಿಸುವ ಕ್ರಮ, ಸುಧಾರಿತ ಕೃಷಿ ಪದ್ಧತಿ ಜಾರಿಗೆ ತರಲು ಯತ್ನಿಸುವುದು, ಕೃಷಿ ಮತ್ತು ತೋಟಗಾರಿಕಾ ಫಾರಂಗಳನ್ನು ತೆರೆಯುವುದು ಮತ್ತು ಅವುಗಳ ನಿರ್ವಹಣೆ, ಕೃಷಿ ಮೇಳ ಮತ್ತು ಪ್ರದರ್ಶನಗಳನ್ನು ಏರ್ಪಡಿಸುವುದು, ರೈತರಿಗೆ ತರಬೇತಿ ನೀಡುವುದು.
3. **ಭೂ ಸುಧಾರಣೆ ಮತ್ತು ಸಂರಕ್ಷಣಾ ಕಾರ್ಯಗಳು:** ಭೂ ಸುಧಾರಣೆ ಮತ್ತು ಭೂ ಸಾರ ಸಂರಕ್ಷಣೆಯ ಕಾರ್ಯಕ್ರಮಗಳ ಯೋಜನೆ ಮತ್ತು ಜಾರಿಗೆ ತರುವುದು.

4. **ಸಣ್ಣ ನೀರಾವರಿ, ಜಲಾನಯನ ಅಭಿವೃದ್ಧಿ ಮತ್ತು ನಿರ್ವಹಣೆ:** ಸಣ್ಣ ನೀರಾವರಿ ಕಾಮಗಾರಿಗಳ ನಿರ್ಮಾಣ, ಜಲಾನಯನ ಅಭಿವೃದ್ಧಿ, ಅಂತರ್ಜಲ ಮೂಲಗಳ ಅಭಿವೃದ್ಧಿ ಕಾರ್ಯಗಳು.
5. **ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆ:** ಗ್ರಾಮ ಮತ್ತು ತಾಲೂಕು ಮಟ್ಟದಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳು ಸ್ಥಾಪನೆ ಮತ್ತು ನಿರ್ವಹಣೆ ಪಶು, ಕೋಳಿ ತಳಿ ಸಂವರ್ಧನೆ, ಹೈನು, ಕೋಳಿ, ಹಂದಿ ಸಾಕಾಣಿಕೆ ಮತ್ತು ಪ್ರೋತ್ಸಾಹ ನೀಡುವುದು, ಇವುಗಳಿಗೆ ತಗಲುವ ಅಂಟು ರೋಗಗಳ ನಿವಾರಣಾ ಕಾರ್ಯಗಳು.
6. **ಮೀನುಗಾರಿಕೆ:** ಮೀನುಗಾರಿಕೆ ಅಭಿವೃದ್ಧಿ, ಮೀನುಗಾರರ ಕಲ್ಯಾಣ ಕಾರ್ಯಕ್ರಮಗಳು.
7. **ಖಾದಿ, ಗ್ರಾಮ ಮತ್ತು ಗುಡಿ ಕೈಗಾರಿಕೆಗಳು:** ಇವುಗಳಿಗೆ ಉತ್ತೇಜನ ನೀಡುವುದು. ಈ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವುದು. ತರಬೇತಿ ಹಾಗೂ ಉತ್ಪನ್ನ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣಾ ಕಾರ್ಯ.
8. **ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು:** ಆಹಾರ ಸಂಸ್ಕರಣಾ ಕೈಗಾರಿಕೆಯು ಸೇರಿದಂತೆ ಅಲ್ಪ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು.
9. **ಗ್ರಾಮೀಣ ಗೃಹ ನಿರ್ಮಾಣ:** ಗ್ರಾಮೀಣ ಪ್ರದೇಶದಲ್ಲಿ ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು.
10. **ಕುಡಿಯುವ ನೀರು:** ಗ್ರಾಮೀಣ ನೈರ್ಮಲ್ಯ ಕಾಪಾಡುವುದು ಹಾಗೂ ಶುದ್ಧ ಕುಡಿಯುವ ನೀರನ್ನು ಒದಗಿಸುವುದು.
11. **ಸಣ್ಣ ಅರಣ್ಯೋತ್ಪನ್ನ, ಇಂಧನ ಮತ್ತು ಮೇವಿಗೆ ಸಂಬಂಧಿಸಿದಂತೆ:** ಸಾಮಾಜಿಕ ಅರಣ್ಯ ನಿರ್ಮಾಣ, ಮೇವು ಅಭಿವೃದ್ಧಿಗೆ ಪ್ರೋತ್ಸಾಹ, ಬಂಜರು ಭೂಮಿಯ ಅಭಿವೃದ್ಧಿ.
12. **ರಸ್ತೆಗಳು, ಕಟ್ಟಡಗಳು, ಅಣೆಕಟ್ಟುಗಳು, ಜಲಮಾರ್ಗಗಳು ಮತ್ತು ಇತರ ಸಂಪರ್ಕ ಸಾಧನಗಳ ನಿರ್ಮಾಣ ಕಾರ್ಯಗಳು:** ಜಿಲ್ಲಾ ರಸ್ತೆಗಳು, ಕಾಲುದಾರಿ, ಅಣೆಕಟ್ಟುಗಳ ನಿರ್ಮಾಣ ಮತ್ತು ನಿರ್ವಹಣೆ, ಜಿಲ್ಲಾ ಆಡಳಿತಕ್ಕೆ ಸಂಬಂಧಪಟ್ಟಂತಹ ಕಟ್ಟಡಗಳ ನಿರ್ಮಾಣ ಮಾಡುವುದು.
13. **ಅಸಂಪ್ರದಾಯಿಕ ಈ ಇಂಧನ ಮೂಲಗಳು:** ಇವುಗಳಿಗೆ ಪ್ರೋತ್ಸಾಹ ಮತ್ತು ಅವುಗಳನ್ನು ಅಭಿವೃದ್ಧಿ ಪಡಿಸುವುದು.
14. **ಬಡತನ ನಿರ್ಮೂಲನಾ ಕಾರ್ಯಗಳು:** ಇಂತಹ ಕಾರ್ಯಕ್ರಮಗಳ ಯೋಜನೆ ಮೇಲ್ವಿಚಾರಣೆ ಮತ್ತು ನಿಯಂತ್ರಿಸುವುದು.
15. **ಶೈಕ್ಷಣಿಕ ಕಾರ್ಯಗಳು:** ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳ ಸ್ಥಾಪನೆ, ಅವುಗಳ ನಿರ್ವಹಣೆ, ಶಿಕ್ಷಣ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು. ಆಶ್ರಮ ಶಾಲೆಗಳು ಮತ್ತು ಅನಾಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ ಶಿಕ್ಷಣ, ಚಟುವಟಿಕೆಗಳ ಮೌಲ್ಯೀಕರಣ.
16. **ತಾಂತ್ರಿಕ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ:** ಗ್ರಾಮೀಣ ಕರಕುಶಲ ಮತ್ತು ವೃತ್ತಿ ತರಬೇತಿ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆ, ಗ್ರಾಮೀಣ ವೃತ್ತಿ ತರಬೇತಿ ಕೇಂದ್ರಗಳಿಗೆ ಪ್ರೋತ್ಸಾಹ ಮತ್ತು ನೆರವು ನೀಡುವುದು.

17. **ವಯಸ್ಕ ಮತ್ತು ಅನೌಪಚಾರಿಕ ಶಿಕ್ಷಣ:** ವಯಸ್ಕ ಸಾಕ್ಷರತಾ ಕಾರ್ಯಕ್ರಮಗಳು ಮತ್ತು ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನ.

18. **ಮಾರುಕಟ್ಟೆ ಮತ್ತು ಜಾತ್ರೆಗಳು:** ಜಿಲ್ಲೆಯಲ್ಲಿನ ಮುಖ್ಯವಾದ ಮಾರುಕಟ್ಟೆ, ಜಾತ್ರೆ, ಉತ್ಪನ್ನಗಳನ್ನು ನಿಯಂತ್ರಣ ಮಾಡುವುದು.

19. **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಗಳು:** ಆಸ್ಪತ್ರೆಗಳು, ಚಿಕಿತ್ಸಾಲಯಗಳ ನಿರ್ವಹಣೆ, ಗರ್ಭಿಣಿಯರ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮಗಳು, ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ, ರೋಗ ನಿರೋಧಕ ಮತ್ತು ಲಸಿಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

20. **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ:** ಈ ಸಂಬಂಧ ಕಾರ್ಯಗಳ ಜೊತೆಗೆ ಈ ಕಾರ್ಯಗಳ ಜೊತೆಗೆ ಈ ಕಾರ್ಯದಲಿ ಸ್ವಯಂ ಸೇವಾ ಸಂಸ್ಥೆಗಳು ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುವುದು.

21. **ಅಂಗವಿಕಲರು, ಮಾನಸಿಕ ಅಸ್ವಸ್ಥರು, ನಿರಾಶ್ರಿತರ ಕಲ್ಯಾಣ:** ಈ ಮೇಲ್ಕಂಡ ಕಾಯ್ದ ಜೊತೆಗೆ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವುದು.

22. **ದುರ್ಬಲ ವರ್ಗದ ಕಲ್ಯಾಣ ಕಾರ್ಯಕ್ರಮಗಳು:** ದುರ್ಬಲ ವರ್ಗಗಳ ಅದರಲ್ಲೂ ಪರಿಶಿಷ್ಟ ಜಾತಿ/ವರ್ಗಗಳು ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಇವೇ ಮೊದಲಾದ ಹಿತಾಸಕ್ತಿಗಳ ಉತ್ತೇಜನ, ಈ ವರ್ಗಗಳನ್ನು ಶೋಷಣೆ, ಸಾಮಾಜಿಕ ಅನ್ಯಾಯದಿಂದ ರಕ್ಷಿಸುವುದು ಈ ವರ್ಗಗಳ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯಗಳ ಸ್ಥಾಪನೆ ಮತ್ತು ಅವುಗಳ ನಿರ್ವಹಣೆ, ಈ ವರ್ಗಗಳವರಿಗೆ ಸಾಲ ಹಾಗೂ ಸಹಾಯಧನ ನೀಡಿಕೆ, ಹಾಗೂ ಇತರೆ ಯೋಜನೆಗಳನ್ನು ಜಾರಿಗೆ ತರುವುದು.

23. **ಸಮುದಾಯ ಸ್ವತ್ತುಗಳ ನಿರ್ವಹಣೆ:** ಅಂದರೆ ಸರ್ಕಾರದಿಂದ ಇತರ ಸ್ಥಳೀಯ ಪ್ರಾಧಿಕಾರಿಗಳಿಂದ ವರ್ಗಾಯಿಸಲ್ಪಟ್ಟಂತಹ ಸಮುದಾಯ ಸ್ವತ್ತುಗಳ ನಿರ್ವಹಣೆ, ಹಾಗೂ ಇವುಗಳನ್ನು ರಕ್ಷಿಸಲು ಸರ್ಕಾರಕ್ಕೆ ಸಹಾಯ ಮಾಡುವುದು.

24. ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು.

25. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನೋಡಿಕೊಳ್ಳುವುದು.

26. ಗ್ರಾಮೀಣ ವಿದ್ಯುದ್ದೀಕರಣ.

27. **ಸಹಕಾರ** : ಸ್ಥಳೀಯವಾಗಿ ಸಹಕಾರ ಚಟುವಟಿಕೆಗಳಿಗೆ ಸಹಕಾರ ನೀಡುವುದು.

28. ಗ್ರಂಥಾಲಯಗಳನ್ನು ಸ್ಥಾಪಿಸುವುದು ಮತ್ತು ಪ್ರೋತ್ಸಾಹ ನೀಡುವುದು.

29. ಸರ್ಕಾರ ಮತ್ತು ಜಿಲ್ಲಾ ಪಂಚಾಯತ್ ವಹಿಸಬಹುದಾದ ಇತರ ಕಾರ್ಯಗಳು.

ಕಾರ್ಯ ನಿರ್ವಾಹಕ ಅಧಿಕಾರಿ ಮತ್ತು ಇತರ ಸಿಬ್ಬಂದಿ

ರಾಜ್ಯ ಸರ್ಕಾರವು ಉಪ ವಿಭಾಗಾಧಿಕಾರಿ ದರ್ಜೆಯ ಅಥವಾ ಅದಕ್ಕೆ ಸಮನಾದ ರಾಜ್ಯ ಸರ್ಕಾರಿ ಸೇವೆಯ ಎ ಗ್ರೂಪ್ ದರ್ಜೆಯ ಅಧಿಕಾರಿಯನ್ನು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ ಮಾಡುತ್ತದೆ. ಅಲ್ಲದೆ ತಾಲ್ಲೂಕು ಪಂಚಾಯಿತಿಯ ಅಧೀನದಲ್ಲಿ ಕೆಲಸ ಮಾಡುವ ಎ

ಅಥವಾ ಬಿ ಅಥವಾ ಸಿ ಅಥವಾ ಡಿ ಗುಂಪಿನ ಸೇವೆಯ ನೌಕರರನ್ನು ಮತ್ತು ಸಿಬ್ಬಂದಿಯನ್ನು ಸರ್ಕಾರವೇ ನೇಮಕ ಮಾಡುತ್ತದೆ.

ಕಾರ್ಯನಿರ್ವಾಹಕ ಅಧಿಕಾರಿಯ ಕಾರ್ಯಗಳು

i. ತಾಲೂಕು ಪಂಚಾಯಿತಿ ಹಾಗೂ ಅದರ ಅಧೀನ ಸಿಬ್ಬಂದಿಗಳನ್ನು ಅಧ್ಯಕ್ಷರು ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮತ್ತು ನಿಯಮಗಳಿಗೆ ಒಳಪಟ್ಟು ನಿಯಂತ್ರಿಸುವುದು.

ii. ತಾಲೂಕು ಪಂಚಾಯಿತಿಯ ಎಲ್ಲಾ ಕಾಮಗಾರಿಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು. ಹಾಗೂ ಅಭಿವೃದ್ಧಿ ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳುವುದು.

iii. ತಾಲೂಕು ಪಂಚಾಯತ್ ಮತ್ತು ಸಮಿತಿಗಳ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ಕಾಗದ ಪತ್ರಗಳನ್ನು ಹಾಗೂ ದಸ್ತಾವೇಜುಗಳನ್ನು ತನ್ನ ಸುಪರ್ದಿಯಲ್ಲಿ ಹೊಂದಿರುವುದು.

iv. ತಾಲೂಕು ಪಂಚಾಯತ್ ನಿಧಿಯಿಂದ ಹಣವನ್ನು ಮತ್ತು ಬಟವಾಡೆ ಮಾಡುವ ಅಧಿಕಾರ ಹೊಂದಿರುವುದು.

ಕಾರ್ಯನಿರ್ವಾಹಕ ಅಧಿಕಾರಿಯು ತಾಲೂಕು ಪಂಚಾಯಿತಿಯ ಪ್ರತಿಯೊಂದು ಸಭೆಗೆ ಹಾಜರಾಗುತ್ತಾರೆ. ಹಾಗೆಯೇ ಪಂಚಾಯತ್ ಸಭೆ ಅಥವಾ ಯಾವುದೇ ಸಮಿತಿಯ ಸಭೆಗೆ ಹಾಜರಾಗಿ, ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಯಾವುದೇ ನಿರ್ಣಯವನ್ನು ಮಂಡಿಸುವ ಮತ್ತು ಮತ ಚಲಾಯಿಸುವ ಹಕ್ಕನ್ನು ಹೊಂದಿರುವುದಿಲ್ಲ. ತಾಲೂಕು ಪಂಚಾಯಿತಿ ಅಥವಾ ಸಮಿತಿಗಳು ಹಾಗೂ ಇವುಗಳ ಅಧ್ಯಕ್ಷರು ನಿಯಮ ಮೀರಿ ನಿರ್ಣಯ ಅಥವಾ ಆದೇಶ ಹೊರಡಿಸಿದರೆ ಅಂತಹ ನಿರ್ಣಯ ಅಥವಾ ಆದೇಶದ ಪ್ರತಿಯನ್ನು ಲಿಖಿತ ಟಿಪ್ಪಣಿಯೊಂದಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ನಿರ್ವಾಹಕ ಅಧಿಕಾರಿಗೆ ಕಳುಹಿಸುವ ಕರ್ತವ್ಯವನ್ನು ನಿರ್ವಹಿಸಬೇಕಾಗಿರುತ್ತದೆ. ಕಾರ್ಯ ನಿರ್ವಾಹಕ ಅಧಿಕಾರಿಯು ತಾಲೂಕು ಪಂಚಾಯತ್‌ಗೆ ಬಾಕಿಯಿರುವ ಹಣವನ್ನು ಬಾಕಿ ಉಳಿಸಿಕೊಂಡಿರುವವರಿಂದ ವಸೂಲಿ ಮಾಡಲು ಕ್ರಮ ಕೈಗೊಳ್ಳಬಹುದು.

ಸ್ಥಾಯಿ ಸಮಿತಿಗಳು

ಪ್ರತಿ ತಾಲೂಕು ಪಂಚಾಯತ್‌ಗಳು ಈ ಕೆಳಕಂಡ ಸ್ಥಾಯಿ ಸಮಿತಿಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ

i. ಸಾಮಾನ್ಯ ಸ್ಥಾಯಿ ಸಮಿತಿ

ii. ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ

iii. ಸಾಮಾಜಿಕ ನ್ಯಾಯ ಸಮಿತಿ

ಪ್ರತಿಯೊಂದು ಸಮಿತಿಯ 6 ಸದಸ್ಯರನ್ನು ಒಳಗೊಂಡಿದ್ದು ಇವರನ್ನು ತಾಲ್ಲೂಕು ಪಂಚಾಯತ್‌ನ ಸದಸ್ಯರು ತಮ್ಮ ಸದಸ್ಯರುಗಳಲ್ಲಿಯೇ ಚಲಾಯಿಸುತ್ತಾರೆ. ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಠ ಒಬ್ಬ ಮಹಿಳಾ ಸದಸ್ಯರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಲ್ಲಿ ಯಾರು ಪಂಚಾಯತ್‌ನಲ್ಲಿ ಹೆಚ್ಚಿನ ಸದಸ್ಯರಿರುತ್ತಾರೋ ಅವರಲ್ಲಿ ಒಬ್ಬ ಸದಸ್ಯರು ಕಡ್ಡಾಯವಾಗಿ ಇರಲೇ ಬೇಕು. ಸ್ಥಾಯಿ ಸಮಿತಿಯ ಸದಸ್ಯರು

ಹಾಗೂ ಅಧ್ಯಕ್ಷರು ಅಧಿಕಾರವಧಿ ಚುನಾವಣೆಯ ನಂತರ ದಿನಾಂಕದಿಂದ 20 ತಿಂಗಳು ಅಥವಾ ತಾಲ್ಲೂಕು ಪಂಚಾಯತ್‌ನ ಸದಸ್ಯತ್ವದ ಅವಧಿಯವರೆಗೆ ಮಾತ್ರ.

ತಾಲೂಕು ಪಂಚಾಯತ್‌ನ ಅಧ್ಯಕ್ಷರು ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿಯೂ, ಉಪಾಧ್ಯಕ್ಷನು ಸಾಮಾನ್ಯ ಸ್ಥಾಯಿ ಸಮಿತಿಯ ಸದಸ್ಯರು ಮತ್ತು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ. ತಾಲ್ಲೂಕು ಪಂಚಾಯತ್‌ನ ಸದಸ್ಯರು ಒಂದಕ್ಕಿಂತ ಹೆಚ್ಚು ಸಮಿತಿಗಳ ಸದಸ್ಯರಾಗಿರುವಂತಿಲ್ಲ. ಕಾರ್ಯನಿರ್ವಾಹಕ ಅಧಿಕಾರಿಯು ಪ್ರತಿಯೊಂದು ಸ್ಥಾಯಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ.

ತಾಲೂಕು ಪಂಚಾಯತ್‌ಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಹೊಂದಿದ್ದು, ಈ ಅಧಿಕಾರಿಯು ಅಸಿಸ್ಟೆಂಟ್ ಕಮೀಷನರ್ ಅಥವಾ ಅದಕ್ಕೆ ಸಮಾನವಾದ ರಾಜ್ಯ ಸರ್ಕಾರಿ ಸೇವೆಯ ಗ್ರೂಪ್ ಎ ದರ್ಜೆಯ ಅಧಿಕಾರಿಯಾಗಿರುತ್ತಾರೆ.

2. ಜಿಲ್ಲಾ ಪಂಚಾಯತ್

ಜಿಲ್ಲಾ ಪಂಚಾಯತ್‌ನ ಸ್ಥಾಪನೆ: ರಾಜ್ಯದ ಪ್ರತಿಯೊಂದು ಜಿಲ್ಲೆಗೆ 1997ರ ಅಧಿನಿಯಮ ಸಂಖ್ಯೆ 29ರನ್ವಯ ಮುನಿಸಿಪಲ್ ಕಾರ್ಪೊರೇಷನ್, ಪಟ್ಟಣ ಪಂಚಾಯ್ತಿ ಕೈಗಾರಿಕಾ ಉಪನಗರ, ಪುರಸಭೆಗಳನ್ನು ಹೊರತು ಪಡಿಸಿ, ಇಡೀ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯ್ತಿಯನ್ನು ರಚಿಸಲಾಗುತ್ತದೆ. ಜಿಲ್ಲಾ ಪಂಚಾಯ್ತಿಯು ಜಿಲ್ಲೆಯಿಂದ ಹೊರತು ಪಡಿಸದ ಯಾವುದೇ ಭಾಗದಲ್ಲಿ ಕಛೇರಿಯನ್ನು ಹೊಂದಿರಬಹುದು. ಜಿಲ್ಲೆಯ ಪ್ರದೇಶದಲ್ಲಿನ ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳು, ಶಾಲೆಗಳು ಮತ್ತು ಇತರ ಸಂಸ್ಥೆಗಳ ಮೇಲೆ ಅಧಿಕಾರ ಮತ್ತು ಕಾರ್ಯಗಳನ್ನು ಚಲಾಯಿಸಬಹುದು.

ಜಿಲ್ಲಾ ಪಂಚಾಯತ್‌ನ ರಚನೆ: 1993ರ ಪಂಚಾಯಿತಿ ಕಾಯಿದೆ ಪ್ರಕಾರ ಪ್ರತಿಯೊಂದು ಜಿಲ್ಲಾ ಪಂಚಾಯತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ.

1) 160ಸೆಕ್ಷನ್ ಪ್ರಕಾರ ನಿರ್ಧರಿಸಿರುವಂತೆ ಚುನಾಯಿತ ಸದಸ್ಯರು
2) ಜಿಲ್ಲೆಯ ಪೂರ್ಣಭಾಗ ಅಥವಾ ಒಂದು ಭಾಗವನ್ನು ಪ್ರತಿನಿಧಿಸುವ ಲೋಕಸಭಾ ಹಾಗೂ ರಾಜ್ಯ ವಿಧಾನ ಸಭಾ ಸದಸ್ಯರು.
3) ಜಿಲ್ಲೆಯ ವ್ಯಾಪ್ತಿಯೊಳಗೆ ಮತದಾರರಾಗಿ ನೋಂದಾಯಿತರಾಗಿರುವ ರಾಜ್ಯಸಭೆ ಮತ್ತು ರಾಜ್ಯ ವಿಧಾನ ಪರಿಷತ್ ಸದಸ್ಯರು.
4) ಜಿಲ್ಲೆಯ ತಾಲೂಕು ಪಂಚಾಯ್ತಿಗಳ ಅಧ್ಯಕ್ಷರು.

1997ರ ಅಧಿನಿಯಮ 29ರನ್ವಯ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆ ಮತ್ತು ಅವಿಶ್ವಾಸ ನಿರ್ಣಯಕ್ಕೆ ಸಂಬಂಧಿಸಿದಂತೆ ವಿಶೇಷ ಸಭೆಗಳನ್ನು ಹೊರತುಪಡಿಸಿ ಯಾವುದೇ ಜಿಲ್ಲಾ ಪಂಚಾಯ್ತಿ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಮತ್ತು ಮತನೀಡಲು ಹಕ್ಕನ್ನು ಹೊದಿರುತ್ತಾರೆ.

ಚುನಾಯಿತ ಸದಸ್ಯರು: ಜಿಲ್ಲಾ ಪಂಚಾಯ್ತಿ ಜಿಲ್ಲೆಯ ತಾಲ್ಲೂಕುಗಳಿಂದ ಚುನಾಯಿತ ಸದಸ್ಯರುಗಳನ್ನು ಒಳಗೊಂಡಿರುತ್ತದೆ. ಜಿಲ್ಲಾ ಪಂಚಾಯಿತಿಯ ಒಟ್ಟು ಸದಸ್ಯರ ಸಂಖ್ಯೆಯಲ್ಲಿ 2/3ರಷ್ಟು ಸದಸ್ಯರು

ಚುನಾಯಿತರಾಗಿರಬೇಕು. ಸದಸ್ಯರ ಸಂಖ್ಯೆಯು 40 ಸಾವಿರ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರು ಎಂದು ಸರ್ಕಾರ (2000ರ ಅಧಿನಿಯಮ) ನಿಗದಿಪಡಿಸಿದೆ. ಆದರೆ ಉತ್ತರ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳಿಗೆ 30ಸಾವಿರ ಜನಸಂಖ್ಯೆಗೆ ಹಾಗೂ ಕೊಡಗು ಜಿಲ್ಲೆಗೆ 18 ಸಾವಿರ ಜನಸಂಖ್ಯೆ ಅಥವಾ ಅದರ ಭಾಗಕ್ಕೆ ಎಂದು ನಿಗದಿಪಡಿಸಲಾಗಿದೆ.

ಜಿಲ್ಲಾ ಪಂಚಾಯತಿಯ ಸದಸ್ಯರ ಸಂಖ್ಯೆಯನ್ನು ಜನಗಣತಿಯ ಅಂಕಿ-ಅಂಶಗಳ ಆಧಾರದ ಮೇಲೆ 2003ರ ಅಧಿನಿಯಮ ಸಂಖ್ಯೆ 37ರನ್ವಯ ರಾಜ್ಯ ಚುನಾವಣಾ ಆಯೋಗವು ನಿರ್ಧರಿಸುತ್ತದೆ.

ಮೀಸಲಾತಿ: ಜಿಲ್ಲಾ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿ/ವರ್ಗ, ಹಿಂದುಳಿದ ವರ್ಗ ಹಾಗೂ ಮಹಿಳೆಯರಿಗೆ ಸ್ಥಾನಮಾನ ಮೀಸಲಿಡಲಾಗಿರುತ್ತದೆ. ಇದನ್ನು 2003ರ ಅಧಿನಿಯಮ 37ರ ಪ್ರಕಾರ ಚುನಾವಣಾ ಆಯೋಗ ನಿರ್ಧರಿಸುತ್ತದೆ. ಜಿಲ್ಲಾ ಪಂಚಾಯಿತಿಯು ಒಟ್ಟು ಸ್ಥಾನಗಳಲ್ಲಿ 1/3ರಷ್ಟು ಸ್ಥಾನವನ್ನು ಹಿಂದುಳಿದ ವರ್ಗದವರಿಗೂ, ಮಹಿಳೆಯರಿಗೆ 1/3ರಷ್ಟು ಸ್ಥಾನವನ್ನು ಅಂದರೆ ಪರಿಶಿಷ್ಟ ಜಾತಿ/ವರ್ಗ, ಹಿಂದುಳಿದ ವರ್ಗಗಳ ಮೀಸಲಿಟ್ಟಿರುವ ಹಾಗೂ ಮೀಸಲಿಟ್ಟಿರದ ಹುದ್ದೆಗಳಲ್ಲಿ ಮೀಸಲಾಗಿಡಬೇಕು. ಪರಿಶಿಷ್ಟ ಜಾತಿ/ ವರ್ಗದವರಿಗೆ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ/ವರ್ಗದವರು ಯಾವ ಪ್ರಮಾಣದಲ್ಲಿರುತ್ತಾರೋ (ಅನುಪಾತ) ಹಾಗೆ ಸ್ಥಾನಗಳನ್ನು ಮೀಸಲಿಡಬೇಕು. ಪ್ರತೀ ಜಿಲ್ಲಾ ಪಂಚಾಯತ್‌ನಲ್ಲಿ ಕನಿಷ್ಠ ಪರಿಶಿಷ್ಟ ಜಾತಿ/ ವರ್ಗದವರಿಗೆ ಒಂದು ಸ್ಥಾನವಿರುವಂತೆ ನೋಡಿಕೊಳ್ಳಬೇಕು.

ಜಿಲ್ಲಾ ಪಂಚಾಯತ್ ಚುನಾವಣಾ ಕ್ಷೇತ್ರ ಮತ್ತು ಮತದಾನ

ರಾಜ್ಯ ಚುನಾವಣಾ ಆಯೋಗವು ಅಧಿಸೂಚನೆಯ ಮೂಲಕ ಎಲ್ಲಾ ಜಿಲ್ಲಾ ಪಂಚಾಯ್ತ್ ಅಧಿಕಾರ ವ್ಯಾಪ್ತಿಯಲ್ಲಿರುವ ಪ್ರದೇಶವನ್ನು ಏಕ ಸದಸ್ಯ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸುತ್ತದೆ. ತಾಲೂಕಿನ ಭಾಗವನ್ನು ಪ್ರತಿಯೊಂದು ಚುನಾವಣಾ ಕ್ಷೇತ್ರವನ್ನು ನಿಗಧಿಪಡಿಸಲಾಗುವುದು. ಈ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ/ವರ್ಗ ಮತ್ತು ಹಿಂದುಳಿದ ವರ್ಗ ಹಾಗೂ ಮಹಿಳೆಯರಿಗೂ ಕ್ಷೇತ್ರವನ್ನು ನಿಗಧಿಪಡಿಸಲಾಗುತ್ತದೆ.

ಅರ್ಹತೆಗಳು: ಜಿಲ್ಲಾ ಪಂಚಾಯ್ತಿಯ ಮತದಾರರ ಪಟ್ಟಿಯಲ್ಲಿ ನೋಂದಾಯಿತರಾಗಿರುವವರು, 21 ವರ್ಷ ತುಂಬಿರುವವರು ಮಾತ್ರ ಸ್ಪರ್ಧಿಸಲು ಅರ್ಹರಾಗುತ್ತಾರೆ. ಜಿಲ್ಲಾ ಪಂಚಾಯ್ತ್ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗದ ನಿರ್ದೇಶಿತ ಮತ್ತು ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಉಪವಿಭಾಗಾಧಿಕಾರಿಗಳು ಸಿದ್ಧಪಡಿಸುತ್ತಾರೆ ಹಾಗೂ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಅಂತಹ ಜಿಲ್ಲಾ ಪಂಚಾಯ್ತ್‌ನ ಮತದಾರರ ಪಟ್ಟಿಯಾಗಿಯು ಅಳವಡಿಸಿಕೊಳ್ಳಬಹುದು.

ಅನರ್ಹತೆಗಳೆಂದರೆ:

ಚುನಾವಣೆಗೆ ಸ್ಪರ್ಧಿಸಲು ಕಾನೂನಿನನ್ವಯ ಅನರ್ಹರಾಗಿದ್ದರೆ 21 ವರ್ಷ ಪೂರ್ಣಗೊಳ್ಳದಿದ್ದರೆ, ಕ್ರಿಮಿನಲ್ ಮೊಕದ್ದಮೆಗಾಗಿ ಶಿಕ್ಷೆಗೊಳಪಟ್ಟಿದ್ದರೆ, ಸರಕಾರಿ ಸೇವೆಯಲ್ಲಿದ್ದರೆ.

ಜಿಲ್ಲಾ ಪಂಚಾಯ್ತ್‌ಗೆ ಚಯನಾಯಿತನಾಗಲು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

1) ರಾಜ್ಯ ವಿಧಾನ ಸಭೆಗೆ ನಡೆಯುವ ಚುನಾವಣೆಗೆ ಸ್ಪರ್ಧಿಸಲು ಜಾರಿಯಲ್ಲಿರುವ ಕಾನೂನಿನಂತೆ ಸ್ಪರ್ಧಿಸಲು ಅರ್ಹನಾಗಿರಬೇಕು.

2) 21 ವರ್ಷ ತುಂಬಿರಬೇಕು, ಮತದಾರರ ಪಟ್ಟಿಯಲ್ಲಿ ಅವನ ಹೆಸರು ನೋಂದಾಯಿತವಾಗಿರಬೇಕು.
3) ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನ ಸೇವೆಯಿಂದ ವಜಾ ಅಥವಾ ತೆಗೆದು ಹಾಕಿರಬಾರದು.
4) ವಕೀಲ ಅಥವಾ ಆರೋಗ್ಯ ಸೇವಾ ವೃತ್ತಿಯಲ್ಲಿ ವೈದ್ಯನಾಗಿದ್ದರೆ ಅಥವಾ ಚಾರ್ಟೆಡ್ ಅಕೌಂಟೆಂಟ್ ರನ್ನು ಸಕ್ಷಮ ಪ್ರಾಧಿಕಾರದ ಆದೇಶದ ಪ್ರಕಾರ ಆತನನ್ನು ಪಟ್ಟಿಯಿಂದ ತೆಗೆದು ಹಾಕಿದ್ದರೆ ಅಥವಾ ಅಮಾನತ್ತಿನಲ್ಲಿಟ್ಟದ್ದು, ಅದು ಜಾರಿಯಲ್ಲಿದ್ದರೆ ಸ್ಪರ್ಧಿಸುವಂತಿಲ್ಲ.
5) ಅಪರಾಧದ ಸಂಬಂಧದಲ್ಲಿ ಕ್ರಿಮಿನಲ್ ನ್ಯಾಯಾಲಯವು ಆತನಿಗೆ 3 ತಿಂಗಳಿಗೆ ಮೀರದ ಅವಧಿಗೆ ಜೈಲು ಶಿಕ್ಷೆಗೊಳಗಾಗಿದ್ದರೆ ಸ್ಪರ್ಧಿಸುವಂತಿಲ್ಲ.
6) ಜಿಲ್ಲಾ ಪಂಚಾಯತ್ ಆದೇಶದ ಮೂಲಕ ಕಾಮಗಾರಿಯ ಕಂಟ್ರಾಕ್ಟರ್, ಸರಕು–ಸೇವೆಗಳನ್ನು ಪಂಚಾಯ್ತಿಗೆ ಒದಗಿಸಲು ಕರಾರು ಮಾಡಿಕೊಂಡಿದ್ದರೆ, ಜಿಲ್ಲಾ ಪಂಚಾಯ್ತಿಯ ಕಾನೂನು ಸಲಹೆಗಾರನಾಗಿ ನೇಮಕಗೊಂಡಿದ್ದು, ವೇತನ ಪಡೆಯುತ್ತಿದ್ದರೆ, 1987ರ ಕರ್ನಾಟಕ ಸ್ಥಳೀಯ ಸರ್ಕಾರಗಳ ಪ್ರಾಧಿಕಾರಗಳ ಅಧಿನಿಯಮದಂತೆ ಪಕ್ಷಾಂತರ ನಿಷೇಧದನ್ವಯ ವ್ಯಾಪ್ತಿಗೆ ಬಂದು ಅನರ್ಹಗೊಳ್ಳಬಹುದು.

ಜಿಲ್ಲಾ ಪಂಚಾಯತ್ ಸದಸ್ಯರ ಅಧಿಕಾರ ಅವಧಿ

ಜಿಲ್ಲಾ ಪಂಚಾಯ್ತಿನ ಸಾರ್ವತ್ರಿಕ ಚುನಾವಣೆಯ ನಂತರದಿಂದ ಐದು ವರ್ಷಗಳ ಅವಧಿಯವರೆಗೆ ಅಂದರೆ ಸದಸ್ಯರ ಅವಧಿಯು ಜಿಲ್ಲಾ ಪಂಚಾಯತಿನ ಪ್ರಥಮ ಸಭೆಗೆ ನಿಗಧಿಪಡಿಸಿದ ದಿನಾಂಕದಿಂಧ ಪ್ರಾರಂಭವಾಗಿನಿಂದ ಐದು ವರ್ಷಗಳಾಗಿರುತ್ತದೆ. ಜಿಲ್ಲಾ ಪಂಚಾಯ್ತಿನ ಸದಸ್ಯ ತನ್ನ ಸದಸ್ಯತ್ವಕ್ಕೆ ತನ್ನ ಸಹಿಯೊಂದಿಗೆ ಜಿಲ್ಲಾ ಪಂಚಾಯ್ತ್‌ನ ಅಧ್ಯಕ್ಷರಿಗೆ ರಾಜಿನಾಮೆ ನೀಡಬಹುದು. ಹೀಗೆ ರಾಜೀನಾಮೆ ಸಲ್ಲಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಪುನಃ ಬರವಣಿಗೆಯ ಮೂಲಕ ಅಧ್ಯಕ್ಷರಿಗೆ ರಾಜೀನಾಮೆ ವಾಪಸ್ಸು ಪಡೆಯಬಹುದು. 1997ರ ಅಧಿನಿಯಮದ ಪ್ರಕಾರ ಈ ರೀತಿ ಸಲ್ಲಿಸಿದ ರಾಜೀನಾಮೆ ಪತ್ರವನ್ನು ಜಿಲ್ಲಾ ಪಂಚಾಯ್ತ್ ಸಭೆಯಲ್ಲಿ ಮಂಡಿಸಬಹುದು.

ಅಧ್ಯಕ್ಷ ಮತ್ತು ಉಪಾಧ್ಯಕ್ಷರು

ಜಿಲ್ಲಾ ಪಂಚಾಯತ್ ಸಾರ್ವತ್ರಿಕ ಚುನಾವಣೆಯ ನಂತರ ಪಂಚಾಯ್ತ್‌ನ ಸದಸ್ಯರುಗಳಲ್ಲಿ ಒಬ್ಬರು ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಚುನಾಯಿಸಲಾಗುತ್ತದೆ. ಈ ಚುನಾವಣಾ ಪ್ರಕ್ರಿಯೆ ಜಿಲ್ಲಾ ಪಂಚಾಯತ್‌ನ ಸಭೆಯಲ್ಲಿಯೇ ನಡೆಯುತ್ತದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸ್ಥಾನ ಖಾಲಿಯಾದರೆ ಇತರೆ ಸದಸ್ಯರುಗಳಲ್ಲಿ ಇಬ್ಬರನ್ನು ಚುನಾಯಿಸಬಹುದು. ಈ ರೀತಿ ಖಾಲಿಯಾದ ಸ್ಥಾನಗಳ ನಂತರ ಜಿಲ್ಲಾ ಪಂಚಾಯತ್‌ನ ಸಾರ್ವತ್ರಿಕ ಚುನಾವಣೆ ನಡೆಯುವಂತಿದ್ದರೆ, ಸ್ಥಾನ ಭರ್ತಿಮಾಡುವಂತಿಲ್ಲ. ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ಸ್ಥಾನಗಳಲ್ಲಿಯು ಪರಿಶಿಷ್ಟ ಜಾತಿ/ವರ್ಗ ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೂ ಮೀಸಲಾತಿಯಿರುತ್ತದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಅಧಿಕಾರಾವಧಿ 1997ರ ಅಧಿನಿಯಮ ಸಂಖ್ಯೆ 10ರನ್ವಯ ಅವರನ್ನು ಚುನಾಯಿಸಿದ ದಿನಾಂಕದಿಂದ 20 ತಿಂಗಳುಗಳಾಗಿರುತ್ತವೆ.

ಜಿಲ್ಲಾ ಪಂಚಾಯತ್‌ನ ಅಧ್ಯಕ್ಷನು ಸರ್ಕಾರಕ್ಕೆ ಯಾವುದೇ ಕಾಲದಲ್ಲಿ ಬೇಕಾದರು ತನ್ನ ಸಹಿ ಸಹಿತ ಬರವಣಿಗೆಯ ಮೂಲಕ ರಾಜಿನಾಮೆ ನೀಡಬಹುದು. ಉಪಾಧ್ಯಕ್ಷನು ತನ್ನ ಸ್ಥಾನಕ್ಕೆ ತನ್ನ ಸಹಿ ಸಹಿತ ಬರವಣಿಗೆಯೊಂದಿಗೆ ಅಧ್ಯಕ್ಷನಿಗೆ ಅಥವಾ ಅಧ್ಯಕ್ಷನ ಗೈರುಹಾಜರಿಯಲ್ಲಿ ಸರ್ಕಾರಕ್ಕೆ ಬರೆದು ರಾಜೀನಾಮೆ ಸಲ್ಲಿಸಬಹುದು. ಈ ರೀತಿ ಸಲ್ಲಿಸಿದ ರಾಜಿನಾಮೆ ಪತ್ರವನ್ನು ಹದಿನೈದು ದಿನಗಳೊಳಗೆ ವಾಪಸ್ಸು ಪಡೆಯಬಹುದು. ಜಿಲ್ಲಾ ಪಂಚಾಯತ್‌ನ ಅಧ್ಯಕ್ಷ ಹಾಗೂ ಉಪಾಧ್ಯಕ್ಷನನ್ನು ಜಿಲ್ಲಾ ಪಂಚಾಯತ್‌ನ ಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡಿಸುವ ಮೂಲಕ ಹಾಗೂ ಇದಕ್ಕೆ ಬಹುಮತ ದೊರಕಿದರೆ, ಆನಂತರ ತೆಗೆದು ಹಾಕಬಹುದಾಗಿದೆ. ಇದಕ್ಕಾಗಿ ಜಿಲ್ಲಾ ಪಂಚಾಯತ್ ವಿಶೇಷ ಸಭೆ ಕರೆದು ತೀರ್ಮಾನ ಮಾಡಲಾಗುತ್ತದೆ. ಅವಿಶ್ವಾಸ ಮಂಡಿಸಿ ಅಂಗೀಕಾರವಾಗದಿದ್ದಲ್ಲಿ ಮತ್ತೆ ಆರು ತಿಂಗಳವರೆಗೆ ಇಂತಹ ಅವಿಶ್ವಾಸ ನಿರ್ಣಯವನ್ನು ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ವಿರುದ್ಧ ಮಂಡಿಸುವಂತಿಲ್ಲ. ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಹುದ್ದೆಗಳಿಗೆ ರಾಜೀನಾಮೆ, ಇನ್ನಿತರ ಕಾರಣಗಳಿಂದ ತೆರವಾದಲ್ಲಿ ಮುಂದಿನ ಚುನಾವಣೆಯವರೆಗೆ ಅಂದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡುವವರೆಗೆ ಸಾಮಾಜಿಕ ಸ್ಥಾಯಿ ಸಮಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ನಿರ್ವಹಿಸುತ್ತಿದ್ದ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಜಿಲ್ಲಾ ಪಂಚಾಯತ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಅಧಿಕಾರ ಮತ್ತು ಕಾರ್ಯಗಳು

ಅಧ್ಯಕ್ಷ: ಜಿಲ್ಲಾ ಪಂಚಾಯತ್‌ನ ಅಧ್ಯಕ್ಷನು ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಾಹಕನಾಗಿದ್ದು, ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅವುಗಳೆಂದರೆ:

1) ಜಿಲ್ಲಾ ಪಂಚಾಯತ್‌ನ ಸಭೆ ಕರೆಯುವುದು, ಸಭೆಯ ಅಧ್ಯಕ್ಷತೆ ವಹಿಸುವುದು ಮತ್ತು ಸಭೆಯನ್ನು ನಡೆಸುವುದು.
2) 1996ರ ಅಧಿನಿಯಮದ ಪ್ರಕಾರ ಸರ್ಕಾರ ವಹಿಸಿದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು.
3) 2003ರ ಅಧಿನಿಯಮ ಸಂಖ್ಯೆ 27ರನ್ವಯ ಹಾಗೂ ಅಧಿನಿಯಮಕ್ಕೆ ವಿರುದ್ಧವಾಗಿ ಅಥವಾ ನಿರ್ದಿಷ್ಟ ಉದ್ದೇಶಗಳಿಗೆ ವಿರುದ್ಧವಾಗಿ ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿ ತೀರ್ಮಾನವನ್ನು ಜಾರಿಗೊಳಿಸುವ ಸಂಬಂಧ ಕಾರ್ಯ ನಿರ್ವಾಹಕ ಅಧಿಕಾರಿಯ ಮೇಲೆ ಆಡಳಿತಾತ್ಮಕ ನಿಯಂತ್ರಣ ಹಾಗೂ ಮೇಲ್ವಿಚಾರಣೆ ನಡೆಸುವುದು.
4) ಜಿಲ್ಲಾ ಪಂಚಾಯತಿಯ ಹಣಕಾಸಿನ ವಿಷಯಗಳು ಹಾಗೂ ಪಂಚಾಯತಿನ ಕಾರ್ಯನಿರ್ವಹಣಾ ಆಡಳಿತದ ಸಮಗ್ರ ಮೇಲ್ವಿಚಾರಣೆ ನಡೆಸುವುದು. ಈ ಸಂಬಂಧ ಜಿಲ್ಲಾ ಪಂಚಾಯತ್ ಆದೇಶ ಅಗತ್ಯವಿದೆ ಎಂದು ಕಂಡುಬಂದರೆ ಅಂತಹ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್‌ನ ಸಭೆಯು ಮುಂದಿಡುವುದು ಹಾಗೂ ಈ ಉದ್ದೇಶಕ್ಕಾಗಿ ಜಿಲ್ಲಾ ಪಂಚಾಯತ್‌ಯ ಎಲ್ಲಾ ದಾಖಲೆಗಳನ್ನು ತರಿಸಿಕೊಳ್ಳಬಹುದು.
5) ಜಿಲ್ಲೆಯಲ್ಲಿ ಪ್ರಕೃತಿ ವಿಕೋಪಗಳು ಸಂಭವಿಸಿದ್ದರೆ ತುರ್ತು ಪರಿಹಾರ ಕೈಗೊಳ್ಳುವುದು. ಈ ಉದ್ದೇಶಕ್ಕಾಗಿ ಒಂದು ವರ್ಷದಲ್ಲಿ 1 ಲಕ್ಷದವರೆಗೆ ವೆಚ್ಚ ಮಾಡಲು ಮಂಜೂರಾತಿ ಮಾಡಬಹುದು. ಈ ರೀತಿಯಾಗಿ ಮಂಜೂರಾದ ವೆಚ್ಚ ಸ್ಥಿರೀಕರಣಕ್ಕೆ ಪಂಚಾಯತ್ ಸಭೆಯ ಮುಂದಿಡಬೇಕು.

ಉಪಾಧ್ಯಕ್ಷ: ಜಿಲ್ಲಾ ಪಂಚಾಯತ್‌ನ ಉಪಾಧ್ಯಕ್ಷನು ಈ ಕೆಳಕಂಡ ಅಧಿಕಾರ ಮತ್ತು ಕಾರ್ಯಗಳನ್ನು ನಿರ್ವಹಿಸುತ್ತಾನೆ. ಅವುಗಳೆಂದರೆ:

1) ಅಧ್ಯಕ್ಷನು ಗೈರು ಹಾಜರಾಗಿದ್ದಾಗ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದಾಗ, 1997ರ ಅಧಿನಿಯಮ ಸಂಖ್ಯೆ 1ರ ಪ್ರಕಾರ ಅಧ್ಯಕ್ಷನ ಹುದ್ದೆ ಖಾಲಿಯಿದ್ದಾಗ ಅಧ್ಯಕ್ಷನ ಅಧಿಕಾರವನ್ನು ಕಾರ್ಯಗಳನ್ನು ನಿರ್ವಹಿಸುತ್ತಾರೆ.
2) ಅಧ್ಯಕ್ಷರ ಗೈರು ಹಾಜರಿಯಲ್ಲಿ ಜಿಲ್ಲಾ ಪಂಚಾಯತ್ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ.

ಅವಧಿ: ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಸದಸ್ಯರುಗಳ ಅಧಿಕಾರಾವಧಿಯು ಜಿಲ್ಲಾ ಪಂಚಾಯತ್‌ಯ ಪ್ರಥಮ ಸಭೆಗೆ ನಿಗಧಿಪಡಿಸಿದ ದಿನಾಂಕದಂದು ಐದು ವರ್ಷಗಳಾಗಿರುತ್ತದೆ. ಸದಸ್ಯರು ಪಕ್ಷಾಂತರ ಮಾಡಿದರೆ, ಸದಸ್ಯರು ರಾಜೀನಾಮೆ ನೀಡಿದರೆ, ದುರ್ವರ್ತನೆಗಾಗಿ ಸದಸ್ಯರನ್ನು ತೆಗೆದು ಹಾಕಿದರೆ, ಸ್ಥಾನ ಖಾಲಿಯಾದ ನಂತರ ಮರು ಚುನಾವಣೆಗೂ ಅವಕಾಶವಿದೆ.

ಜಿಲ್ಲಾ ಪಂಚಾಯತ್ ಸಭೆ

ಜಿಲ್ಲಾ ಪಂಚಾಯತ್ ಸಭೆಯು ಕರ್ನಾಟಕದ ಪಂಚಾಯತ್ ಅಧಿನಿಯಮ 180ರ ಅನ್ವಯ ಕನಿಷ್ಠ ಎರಡು ತಿಂಗಳುಗಳಲ್ಲಿ ಒಂದು ಬಾರಿಯಾದರೂ ನಡೆಯುತ್ತದೆ. ಸಭೆಯು ಸಾಮಾನ್ಯವಾಗಿ ಜಿಲ್ಲಾ ಪಂಚಾಯತ್‌ಯ ಕೇಂದ್ರ ಸ್ಥಾನದಲ್ಲಿ ನಡೆಯುತ್ತದೆ. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರೇ ವಹಿಸುತ್ತಾರೆ. ಅಧ್ಯಕ್ಷರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು, ಈ ಇಬ್ಬರ ಗೈರು ಹಾಜರಿಯಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡಿಕೊಂಡು ಕಾರ್ಯಕಲಾಪ ನಡೆಸುತ್ತಾರೆ. ಜಿಲ್ಲಾ ಪಂಚಾಯತ್‌ನ ಪ್ರತಿಯೊಂದು ಸಭೆಯ ಸಾಮಾನ್ಯವಾಗಿ ಜಿಲ್ಲಾ ಪಂಚಾಯತ್ ಕೇಂದ್ರ ಸ್ಥಾನದಲ್ಲಿ ನಡೆಯುತ್ತದೆ. ಸಾಮಾನ್ಯ ಚುನಾವಣೆಯ ನಂತರ ಜಿಲ್ಲಾ ಪಂಚಾಯತ್ ಪ್ರಥಮ ಸಭೆಯ ದಿನಾಂಕವನ್ನು ಗೊತ್ತುಪಡಿಸುವ, ರಚಿಸುವ ಹಾಗೂ ಸಭೆ ದಿನಾಂಕ ಗೊತ್ತುಪಡಿಸಿ, ಅಂತಹ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿಗಳು ವಹಿಸುತ್ತಾರೆ. ಆನಂತರ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ನಡೆಯುತ್ತದೆ. ತರುವಾಯದ ಪ್ರತಿಯೊಂದು ಸಭೆಯ ದಿನಾಂಕವನ್ನು ಜಿಲ್ಲಾ ಪಂಚಾಯತ್ ಸಭೆಯಲ್ಲಿ ನಿಗಧಿಪಡಿಸಲಾಗುತ್ತದೆ. ಸಾಕಷ್ಟು ಕಾರಣಗಳಿದ್ದರೆ ಸಭೆಯ ದಿನಾಂಕವನ್ನು ಬದಲು ಮಾಡುವ ಅಧಿಕಾರ ಅಧ್ಯಕ್ಷನಿಗೆ ಇದೆ. ಅಧ್ಯಕ್ಷನು ಸೂಕ್ತವೆಂದು ಬಯಸಿದಾಗ ಅಥವಾ ಜಿಲ್ಲಾ ಪಂಚಾಯತ್‌ನ ಒಟ್ಟು ಸದಸ್ಯರಲ್ಲಿ 1/3ರಷ್ಟು ಸದಸ್ಯರು ಕೋರಿಕೆ ಸಲ್ಲಿಸದರೆ ವಿಶೇಷ ಸಭೆ ಕರೆಯಬಹುದು. ಸಾಮಾನ್ಯ ಸಭೆಗೆ 7 ದಿನಗಳ ಮುಂಚೆ ನೋಟೀಸಿನ ಮೂಲಕ ಸದಸ್ಯರುಗಳಿಗೆ ತಿಳಿಸಬೇಕು ಹಾಗೂ ಸಭೆಯ ಕಾರ್ಯಸೂಚಿಯನ್ನು ಕಳುಹಿಸಬೇಕು.

ಕೋರಂ: ಜಿಲ್ಲಾ ಪಂಚಾಯತ್ ಒಟ್ಟು ಸದಸ್ಯರಲ್ಲಿ ಅರ್ಧದಷ್ಟು ಸದಸ್ಯರು ಹಾಜರಾತಿಯಿದ್ದರೆ ಸಭಾ ಕಲಾಪ ನಡೆಸುತ್ತದೆ. ಕೋರಂ ಇಲ್ಲದಿದ್ದರೆ 1/2 ಗಂಟೆ ಕಾದು ಕೋರಂ ಇಲ್ಲದಿದ್ದರೆ ಸಭೆಯನ್ನು

ಮುಂದೂಡಬೇಕಾಗುತ್ತದೆ. ಪ್ರತಿಯೊಂದು ಸಭೆಯು ಸಾರ್ವಜನಿಕರಿಗೆ ಮುಕ್ತವಾಗಿರುತ್ತದೆ. ಆದರೆ ವಿಚಾರಣೆ-ಚರ್ಚೆ ರಹಸ್ಯವಾಗಿ ನಡೆಯಬೇಕೆಂದು ಪ್ರಾಧಿಕಾರಿಯು ಯೋಚಿಸಿದಲ್ಲಿ ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ. ಜಿಲ್ಲಾ ಪಂಚಾಯತ್‌ನಲ್ಲಿ ಎಲ್ಲಾ ವಿಷಯಗಳನ್ನು ಹಾಜರಿರುವ ಮತ್ತು ಮತ ನೀಡುವ ಸದಸ್ಯರು ಬಹುಮತದ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಲಾಗುತ್ತದೆ. ಸಮಾನ ಮತಗಳು ಬಂದಾಗ ಅಧ್ಯಕ್ಷರು ಸಹಮತ ಚಲಾಯಿಸುತ್ತಾರೆ. ಇದನ್ನು ನಿರ್ಣಾಯಕ ಮತ ಎಂದು ಕರೆಯಲಾಗುತ್ತದೆ. ಜಿಲ್ಲಾ ಪಂಚಾಯತ್ ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಪ್ರತಿಯನ್ನು ಸಭೆ ನಡೆದ ದಿನದಿಂದ 10 ದಿನಗಳೊಳಗೆ ಸರ್ಕಾರಕ್ಕೆ ಮತ್ತು ಎಲ್ಲಾ ಸದಸ್ಯರುಗಳಿಗೆ ಸಭೆಯ ನಡವಳಿಯ ಪ್ರತಿಯನ್ನು ಕಳುಹಿಸಬೇಕು. ಜಿಲ್ಲಾ ಪಂಚಾಯತ್ ಸಭೆಯಲ್ಲಿ ಜಿಲ್ಲೆಯ ಸರ್ಕಾರಿ ಅಧಿಕಾರಿಗಳು ಅಂದರೆ ಜಿಲ್ಲಾ ಪಂಚಾಯತ್ ಅಧೀನದಲ್ಲಿ ಕೆಲಸ ನಿರ್ವಹಿಸುವ ಯಾವುದೇ ಅಧಿಕಾರಿಗಳನ್ನು ಕರೆಸುವ ಅಧಿಕಾರ ಜಿಲ್ಲಾ ಪಂಚಾಯತ್‌ಗೆ ಇದೆ. ಇಂತಹ ಅಧಿಕಾರಿ ಜಿಲ್ಲಾ ಪಂಚಾಯತ್‌ನ ಸಭೆಗೆ ಹಾಜರಾಗಬೇಕಾಗಿದೆ ಎಂದು ಅಗತ್ಯ ಕಂಡು ಬಂದರೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು, ಸಭೆಗೆ ಮುಂಚಿತವಾಗಿ 15 ದಿನಗಳಿಗೆ ಕಡಿಮೆಯಿಲ್ಲದಂತೆ ಅಂತಹ ಅಧಿಕಾರಿಗೆ ಪತ್ರ ಬರೆದು ಹಾಜರಾಗಬೇಕೆಂದು ಕೋರಬಹುದಾಗಿದೆ.

ಸ್ಥಾಯಿ ಸಮಿತಿಗಳು

ಪ್ರತಿ ಜಿಲ್ಲಾ ಪಂಚಾಯಿತಿಯು ಈ ಕೆಳಕಂಡ ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ. ಅವುಗಳೆಂದರೆ:

1) ಸಾಮಾನ್ಯ ಸ್ಥಾಯಿ ಸಮಿತಿ
2) ಹಣಕಾಸು, ಲೆಕ್ಕ ಸಂಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ
3) ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
4) ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
5) ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ತಮಿತಿ

ಪ್ರತಿಯೊಂದು ಸ್ಥಾಯಿ ಸಮಿತಿಯ ಅಧ್ಯಕ್ಷರು ಸೇರಿದಂತೆ ಏಳು ಸದಸ್ಯರನ್ನು ಹೊಂದಿರುತ್ತದೆ. ಚುನಾಯಿತ ಸದಸ್ಯರುಗಳಲ್ಲಿಯೇ ಸದಸ್ಯರುಗಳನ್ನು ಸಾಮಾನ್ಯ ಚುನಾವಣೆಯ ನಂತರದ ಸಭೆಯಲ್ಲಿ ಚುನಾಯಿಸಲಾಗುತ್ತದೆ. ಸಾಮಾಜಿಕ ನ್ಯಾಯ ಸಮಿತಿಯು ಮಹಿಳಾ ಸದಸ್ಯ ಮತ್ತು ಪರಿಶಿಷ್ಟ ಜಾತಿ/ ಅಥವಾ ವರ್ಗಗಳಲ್ಲಿ ಯಾವುದು ಹೆಚ್ಚಿನ ಚುನಾಯಿತ ಸದಸ್ಯರನ್ನು ಹೊಂದಿರುತ್ತದೋ ಅದರ ಒಬ್ಬರು ಸದಸ್ಯರನ್ನು ಹೊಂದಿರಲೇಬೇಕು. ಸ್ಥಾಯಿ ಸಮಿತಿಯ ಸದಸ್ಯರ ಅವಧಿ 20 ತಿಂಗಳು ಅಥವಾ ಜಿಲ್ಲಾ ಪಂಚಾಯಿತಿ ಸದಸ್ಯನ ಅಧಿಕಾರಾವಧಿಯವರೆಗೆ. ಇದರಲ್ಲಿ ಯಾವುದು ಮೊದಲು ಅದು. ಜಿಲ್ಲಾ ಪಂಚಾಯಿತಿನ ಅಧ್ಯಕ್ಷರು ಹಣಕಾಸು, ಲೆಕ್ಕಸಂಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಹಾಗೂ ಉಪಾಧ್ಯಕ್ಷರು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಸದಸ್ಯರು ಮತ್ತು ಅಧ್ಯಕ್ಷರು ಆಗಿರುತ್ತಾರೆ. ಇತರ ಸ್ಥಾಯಿ ಸಮಿತಿಗಳಿಗೆ ಸ್ಥಾಯಿ ಸಮಿತಿಗಳ ಸದಸ್ಯರುಗಳಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಗಿರುತ್ತದೆ. ಜಿಲ್ಲಾ ಪಂಚಾಯಿತಿಯ ಯಾವ ಸದಸ್ಯನು ಎರಡಕ್ಕಿಂತ ಹೆಚ್ಚು ಸ್ಥಾಯಿ ಸಮಿತಿಗಳ ಸದಸ್ಯನಾಗುವಂತಿಲ್ಲ. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿಯು, ಉಳಿದ ಪ್ರತಿಯೊಂದು ಸ್ಥಾಯಿಸಮಿತಿಗಳಿಗೆ

ಉಪಕಾರ್ಯದರ್ಶಿಗಳನ್ನು ಪದನಿಮಿತ್ತ ಕಾರ್ಯದರ್ಶಿಗಳನ್ನಾಗಿ ನಾಮನಿರ್ದೇಶನ ಮಾಡಲಾಗುತ್ತದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಎಲ್ಲಾ ಸ್ಥಾಯಿ ಸಮಿತಿಗಳ ಸಭೆಯಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರುತ್ತಾರೆ.

ಜಿಲ್ಲಾ ಪಂಚಾಯತ್‌ಯ ಅಧಿಕಾರ ಮತ್ತು ಕಾರ್ಯಗಳು

ಕರ್ನಾಟಕ ಪಂಚಾಯತಿಯ ಅಧಿನಿಯಮ 184ರ ಪ್ರಕಾರ ಸರ್ಕಾರವು ನಿರ್ದಿಷ್ಟ ಪಡಿಸುವಂತಹ ಷರತ್ತಿಗೆ ಒಳಪಟ್ಟು ಈ ಕೆಳಕಂಡ ಸಾಮಾನ್ಯ ಅಧಿಕಾರಗಳನ್ನು ನಿರ್ವಹಿಸುತ್ತದೆ. ಅವುಗಳು ಈ ಕೆಳಕಂಡಂತಿವೆ:

1) ಸರ್ಕಾರದ ಸಾಮಾನ್ಯ ಆದೇಶ ಮತ್ತು ಸಾಮಾನ್ಯ ಆದೇಶಗಳಿಗೆ ಒಳಪಟ್ಟು ತನ್ನ ಅಧಿಕಾರ ವ್ಯಾಪ್ತಿಯಿಂದ ಹೊರಗಿರುವ ಶಿಕ್ಷಣ ಅಥವಾ ವೈದ್ಯಕೀಯ ಪರಿಹಾರದ ಸಂಬಂಧ ವೆಚ್ಚವನ್ನು ಭರಿಸಬಹುದಾಗಿದೆ.
2) ಜಿಲ್ಲೆಯ ನಿವಾಸಿಗಳ ಆರೋಗ್ಯ, ಸಂರಕ್ಷಣೆ, ಕಲ್ಯಾಣ, ಸೌಕರ್ಯ ಅಥವಾ ಸಾಮಾಜಿಕ ಅಥವಾ ಆರ್ಥಿಕ ಅಥವಾ ಸಾಂಸ್ಕೃತಿಕವಾಗಿ ಉನ್ನತಿಯನ್ನು ಉಂಟು ಮಾಡುವಂತಹ ಯಾವುದೇ ಕಾರ್ಯಗಳನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಬಹುದು.
3) ಸ್ಥಳೀಯ ಸರ್ಕಾರಗಳ ಬಲವರ್ಧನೆಗೆ ಸಂಬಂಧಿಸಿದಂತೆ ಅಖಿಲಭಾತರ ಮಟ್ಟದ, ರಾಜ್ಯ ಮಟ್ಟದ, ಅಂತರ ರಾಜ್ಯಮಟ್ಟದ ಸಂಘಗಳಿಗೆ ಮತ್ತು ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಯೊಳಗೆ ನಡೆಯುವ ವಸ್ತು ಪ್ರದರ್ಶನ, ವಿಚಾರ ಸಂಕಿರಣ ಮತ್ತು ಸಮ್ಮೇಳನಗಳಿಗೆ ಸಹಾಯಧನ ಅಥವಾ ವಂಶಿಕೆ ಮಾಡಬಹುದು.

ಈ ಮೇಲಿನ ಸಾಮಾನ್ಯ ಕಾರ್ಯಗಳ ಜೊತೆಗೆ ಈ ಕೆಳಕಂಡ ಹಲವಾರು ಅಧಿಕಾರ ಮತ್ತು ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ:

1. **ಸಾಮಾನ್ಯ ಕಾರ್ಯಗಳು**: ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಭಿವೃದ್ಧಿ ಯೋಜನೆಗಳ ಮೇಲ್ವಿಚಾರಣೆ, ಸಂಯೋಜನೆ, ಸಂಘಟನೆ ಹಾಗೂ ಜಿಲ್ಲಾ ಅಭಿವೃದ್ಧಿಗೆ ಯೋಜನೆಗಳನ್ನು ಸಿದ್ಧಪಡಿಸುವುದು.
2. **ಕೃಷಿ ಮತ್ತು ತೋಟಗಾರಿಕೆ ಕಾರ್ಯಗಳು**: ಕೃಷಿ, ಕೃಷಿ ಉತ್ಪನ್ನಗಳ ಹೆಚ್ಚಿಸುವ ಕ್ರಮ, ಸುಧಾರಿತ ಕೃಷಿ ಪದ್ಧತಿ ಜಾರಿಗೆ ತರಲು ಯತ್ನಿಸುವುದು, ಕೃಷಿ ಮತ್ತು ತೋಟಗಾರಿಕಾ ಫಾರಂಗಳನ್ನು ತೆರೆಯುವುದು ಮತ್ತು ಅವುಗಳ ನಿರ್ವಹಣೆ, ದಾಸ್ತಾನು ಮಳಿಗೆಗಳ ಸ್ಥಾಪನೆ ಮತ್ತು ಅವುಗಳ ನಿರ್ವಹಣೆ, ಕೃಷಿ ಮೇಳ ಮತ್ತು ಪ್ರದರ್ಶನಗಳನ್ನು ಏರ್ಪಡಿಸುವುದು, ರೈತರಿಗೆ ತರಬೇತಿ ನೀಡುವುದು.
3. **ಭೂ ಸುಧಾರಣೆ ಮತ್ತು ಸಂರಕ್ಷಣಾ ಕಾರ್ಯಗಳು**: ಭೂ ಸುಧಾರಣೆ ಮತ್ತು ಭೂ ಸಾರ ಸಂರಕ್ಷಣೆಯ ಕಾರ್ಯಕ್ರಮಗಳ ಯೋಜನೆ ಮತ್ತು ಜಾರಿಗೆ ತರುವುದು.
4. **ಸಣ್ಣ ನೀರಾವರಿ, ಜಲಾನಯನ ಅಭಿವೃದ್ಧಿ ಮತ್ತು ನಿರ್ವಹಣೆ**: ಸಣ್ಣ ನೀರಾವರಿ ಕಾಮಗಾರಿಗಳ ನಿರ್ಮಾಣ, ಜಲಾನಯನ ಅಭಿವೃದ್ಧಿ, ಅಂತರ್ಜಲ ಮೂಲಗಳ ಅಭಿವೃದ್ಧಿ ಕಾರ್ಯಗಳು.
5. **ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆ**: ಗ್ರಾಮ ಮತ್ತು ತಾಲ್ಲೂಕು ಮಟ್ಟದಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳು ಸ್ಥಾಪನೆ ಮತ್ತು ನಿರ್ವಹಣೆ ಪಶು, ಕೋಳಿ ತಳಿ ಸಂವರ್ಧನೆ, ಹೈನು,

ಕೋಳಿ, ಹಂದಿ ಸಾಕಾಣಿಕೆ ಮತ್ತು ಪ್ರೋತ್ಸಾಹ ನೀಡುವುದು, ಇವುಗಳಿಗೆ ತಗಲುವ ಅಂಟು ರೋಗಗಳ ನಿವಾರಣಾ ಕಾರ್ಯಗಳು.

6. **ಮೀನುಗಾರಿಕೆ**: ಮೀನುಗಾರಿಕೆ ಅಭಿವೃದ್ಧಿ, ಮೀನುಗಾರರ ಕಲ್ಯಾಣ ಕಾರ್ಯಕ್ರಮಗಳು.
7. **ಖಾದಿ, ಗ್ರಾಮ ಮತ್ತು ಗುಡಿ ಕೈಗಾರಿಕೆಗಳು**: ಇವುಗಳಿಗೆ ಉತ್ತೇಜನ ನೀಡುವುದು, ಈ ಉತ್ಪನ್ನಗಳಿಗೆ ಸೌಲಭ್ಯ ನೀಡುವುದು. ತರಬೇತಿ ಹಾಗೂ ಉತ್ಪನ್ನ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣಾ ಕಾರ್ಯ.
8. **ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು**: ಆಹಾರ ಸಂಸ್ಕರಣಾ ಕೈಗಾರಿಕೆಯು ಸೇರಿದಂತೆ ಅಲ್ಪ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು.
9. **ಗ್ರಾಮೀಣ ಗೃಹ ನಿರ್ಮಾಣ**: ಗ್ರಾಮೀಣ ಪ್ರದೇಶಗಳಲ್ಲಿ ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು.
10. **ಕುಡಿಯುವ ನೀರು**: ಗ್ರಾಮೀಣ ನೈರ್ಮಲ್ಯ ಕಾಪಾಡುವುದು ಹಾಗೂ ಶುದ್ಧ ಕುಡಿಯುವ ನೀರನ್ನು ಒದಗಿಸುವುದು.
11. **ಸಣ್ಣ ಅರಣ್ಯೋತ್ಪನ್ನ, ಇಂಧನ ಮತ್ತು ಮೇವಿಗೆ ಸಂಬಂಧಿಸಿದಂತೆ**: ಸಾಮಾಜಿಕ ಅರಣ್ಯ ನಿರ್ಮಾಣ, ಮೇವು ಅಭಿವೃದ್ಧಿಗೆ ಪ್ರೋತ್ಸಾಹ, ಬಂಜರು ಭೂಮಿಯ ಅಭಿವೃದ್ಧಿ.
12. **ರಸ್ತೆಗಳು, ಕಟ್ಟಡಗಳು, ಅಣೆಕಟ್ಟುಗಳು, ಜಲಮಾರ್ಗಗಳು ಮತ್ತು ಇತರ ಸಂಪರ್ಕ ಸಾಧನಗಳ ನಿರ್ಮಾಣ ಕಾರ್ಯಗಳು**: ಜಿಲ್ಲಾ ರಸ್ತೆಗಳು, ಕಾಲುದಾರಿ, ಅಣೆಕಟ್ಟುಗಳ ನಿರ್ಮಾಣ ಮತ್ತು ನಿರ್ವಹಣೆ, ಜಿಲ್ಲಾ ಆಡಳಿತಕ್ಕೆ ಸಂಬಂಧಪಟ್ಟಂತಹ ಕಟ್ಟಡಗಳು ನಿರ್ಮಾಣ ಮಾಡುವುದು.
13. **ಬಡತನ ನಿರ್ಮೂಲನಾ ಕಾರ್ಯಗಳು**: ಇಂತಹ ಕಾರ್ಯಕ್ರಮಗಳ ಯೋಜನೆ, ಮೇಲ್ವಿಚಾರಣೆ ಮತ್ತು ನಿಯಂತ್ರಿಸುವುದು.
14. **ಶೈಕ್ಷಣಿಕ ಕಾರ್ಯಗಳು**: ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳ ಸ್ಥಾಪನೆ, ಅವುಗಳ ನಿರ್ವಹಣೆ, ಶಿಕ್ಷಣ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು, ಆಶ್ರಮ ಶಾಲೆಗಳು ಮತ್ತು ಅನಾಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ ಶಿಕ್ಷಣ ಚಟುವಟಿಕೆಗಳ ಮೌಲ್ಯೀಕರಣ.
15. **ತಾಂತ್ರಿಕ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ**: ಗ್ರಾಮೀಣ ಕರಕುಶಲ ಮತ್ತು ವೃತ್ತಿ ತರಬೇತಿ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆ, ಗ್ರಾಮೀಣ ವೃತ್ತಿ ತರಬೇತಿ ಕೇಂದ್ರಗಳಿಗೆ ಪ್ರೋತ್ಸಾಹ ಮತ್ತು ನೆರವು ನೀಡುವುದು.
16. **ವಯಸ್ಕ ಮತ್ತು ಅನೌಪಚಾರಿಕ ಶಿಕ್ಷಣ**: ವಯಸ್ಕ ಸಾಕ್ಷರತಾ ಕಾರ್ಯಕ್ರಮಗಳು ಮತ್ತು ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನ.
17. **ಮಾರುಕಟ್ಟೆ ಮತ್ತು ಜಾತ್ರೆಗಳು**: ಜಿಲ್ಲೆಯಲ್ಲಿನ ಮುಖ್ಯವಾದ ಮಾರುಕಟ್ಟೆ, ಜಾತ್ರೆ, ಉತ್ಸವಗಳನ್ನು ನಿಯಂತ್ರಣ ಮಾಡುವುದು.

18. **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಗಳು:** ಆಸ್ಪತ್ರೆಗಳು, ಚಿಕಿತ್ಸಾಲಯಗಳ ನಿರ್ವಹಣೆ, ಗರ್ಭಿಣಿಯರ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮಗಳು, ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ, ರೋಗ ನಿರೋಧಕ ಮತ್ತು ಲಸಿಕೆ ಮಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
19. **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ:** ಈ ಸಂಬಂಧ ಕಾರ್ಯಗಳ ಜೊತೆಗೆ ಈ ಕಾರ್ಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುವುದು.
20. **ಅಂಗವಿಕಲ, ಮಾನಸಿಕ ಅಸ್ವಸ್ಥರು, ನಿರಾಶ್ರಿತರ ಕಲ್ಯಾಣ:** ಈ ಮೇಲ್ಕಂಡ ಕಾರ್ಯದ ಜೊತೆಗೆ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವುದು.
21. **ದುರ್ಬಲ ವರ್ಗದ ಕಲ್ಯಾಣ ಕಾರ್ಯಕ್ರಮಗಳು:** ದುರ್ಬಲ ವರ್ಗಗಳ ಅದರಲ್ಲೂ ಪರಿಶಿಷ್ಠ ಜಾತಿ/ವರ್ಗಗಳು ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಇವೇ ಮೊದಲಾದ ಹಿತಾಸಕ್ತಿಗಳ ಉತ್ತೇಜನ, ಈ ವರ್ಗಗಳನ್ನು ಶೋಷಣೆ, ಸಾಮಾಜಿಕ ಅನ್ಯಾಯದಿಂದ ರಕ್ಷಿಸುವುದು. ಈ ವರ್ಗಗಳ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳ ಸ್ಥಾಪನೆ ಮತ್ತು ಅವುಗಳ ನಿರ್ವಹಣೆ. ಈ ವರ್ಗಗಳವರಿಗೆ ಸಾಲ ಹಾಗೂ ಸಹಾಯಧನ ನೀಡಿಕೆ, ಹಾಗೂ ಇತರ ಯೋಜನೆಗಳನ್ನು ಜಾರಿಗೆ ತರುವುದು.
22. **ಸಮುದಾಯದ ಸ್ವತ್ತುಗಳ ನಿರ್ವಹಣೆ:** ಅಂದರೆ ಸರ್ಕಾರದಿಂದ ಇತರ ಸ್ಥಳೀಯ ಪ್ರಾಧಿಕಾರಗಳಿಂದ ವರ್ಗಾಯಿಸಲ್ಪಟ್ಟಂತಹ ಸಮುದಾಯ ಸ್ವತ್ತುಗಳ ನಿರ್ವಹಣೆ, ಹಾಗೂ ಇವುಗಳನ್ನು ರಕ್ಷಿಸಲು ಸರ್ಕಾರಕ್ಕೆ ಸಹಾಯ ಮಾಡುವುದು.
23. ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು.
24. ಸಾರ್ವಜನಿಕ ವಿತರ'ಣಾ ವ್ಯವಸ್ಥೆಯನ್ನು ನೋಡಿಕೊಳ್ಳುವುದು.
25. ಗ್ರಾಮೀಣ ವಿದ್ಯುದ್ದೀಕರಣ.
26. **ಸಹಕಾರ:** ಸ್ಥಳೀಯವಾಗಿ ಸಹಕಾರ ಚಟುವಟಿಕೆಗಳಿಗೆ ಸಹಕಾರ ನೀಡುವುದು.
27. ಗ್ರಂಥಾಲಯಗಳನ್ನು ಸ್ಥಾಪಿಸುವುದು ಮತ್ತು ಪ್ರೋತ್ಸಾಹ ನೀಡುವುದು.
28. ಸರ್ಕಾರ ವಹಿಸಬಹುದಾದ ಇತರ ಕಾರ್ಯಗಳು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ: ಪ್ರತಿ ಜಿಲ್ಲಾ ಪಂಚಾಯ್ತಿಗೆ ಸರ್ಕಾರವು ಜಿಲ್ಲೆಯ ಜಿಲ್ಲಾಧಿಕಾರಿ ದರ್ಜೆಗೆ ಕಡಿಮೆಯಿಲ್ಲದಂತಹ ಒಬ್ಬರನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧೀಕಾರಿಯಾಗಿ ನೇಮಕ ಮಾಡುತ್ತದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಜೊತೆಗೆ ಸರ್ಕಾರವು ಒಬ್ಬ ಮುಖ್ಯ ಲೆಕ್ಕಾಧಿಕಾರಿಯನ್ನು, 1997ರ ಅಧಿನಿಯಮ ಪ್ರಕಾರ (ಸಂಖ್ಯೆ 1) ಒಬ್ಬ ಯೋಜನಾಧಿಕಾರಿಯನ್ನು ನೇಮಕ ಮಾಡುತ್ತದೆ. ಅಲ್ಲದೆ ಒಬ್ಬರು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಉಪಕಾರ್ಯದರ್ಶಿಗಳನ್ನು ನೇಂಕ ಮಾಡುತ್ತದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಾರೆ.

1) 1993ರ ಪಂಚಾಯತ್ ರಾಜ್ ಕಾಯ್ದೆ 1996ರ ಅಧಿನಿಯಮ ಮತ್ತು 2003ರ ಅಧಿನಿಯಮದಂತೆ ಜಾರಿಯಲ್ಲಿರುವ ಎಲ್ಲಾ ಅಧಿಕಾರಿಗಳನ್ನು ನಿರ್ವಹಿಸುವುದು.

2) ಜಿಲ್ಲಾ ಪಂಚಾಯತ್‌ನ ಹಾಗೂ ಅದರ ಅಧೀನದಲ್ಲಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಅಧ್ಯಕ್ಷರ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮತ್ತು ನಿಯಮಾನುಸಾರಕ್ಕೆ ಒಳಪಟ್ಟು ನಿಯಂತ್ರಿಸುವುದು.

3) ಜಿಲ್ಲಾ ಪಂಚಾಯತ್‌ನ ಎಲ್ಲಾ ಕಾಮಗಾರಿಗಳ ಮತ್ತು ಅಭಿವೃದ್ಧಿ ಯೋಜನೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು ಹಾಗೂ ತ್ವರಿತ ನಿರ್ವಹಣೆಗಾಗಿ ಅವಶ್ಯಕವಾದ ಕ್ರಮಕೈಗೊಳ್ಳುವುದು.

4) ಜಿಲ್ಲಾ ಪಂಚಾಯತ್ ಮತ್ತು ಪಂಚಾಯತ್ ಸಭೆ ಅದರ ಸಮಿತಿಗಳ ಸಭೆಗಳ ವ್ಯವಹಾರ ನಿರ್ವಹಣೆಗೆ ಸಂಬಂಧವಾದ ಎಲ್ಲಾ ದಾಖಲೆಗಳು ಕಾಗದ ಪತ್ರಗಳು ಮತ್ತು ದಸ್ತಾವೇಜುಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುವುದು.

5) ಜಿಲ್ಲಾ ಪಂಚಾಯತ್ ನಿಧಿಯಿಂದ ಹಣ ಪಡೆಯುವುದು ಮತ್ತು ಅಗತ್ಯ ಬಟವಾಡೆ ಮಾಡುವುದು.

6) ಜಿಲ್ಲಾ ಪಂಚಾಯತ್‌ನ ಪ್ರತಿಯೊಂದು ಸಭೆಗೆ ಹಾಜರಾಗುವುದು, ಸಮಿತಿಗಳ ಸಭೆಗೆ ಹಾಜರಾಗಲು ಹಕ್ಕಿರುವುದು ಮತ್ತು ಚರ್ಚೆಯಲ್ಲಿ ಭಾಗವಹಿಸುವುದು. ಆದರೆ ಸಭೆಗಳಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರುವಂತಿಲ್ಲ.

7) ಜಿಲ್ಲಾ ಪಂಚಾಯತ್ ಅಥವಾ ಅದರ ಸ್ಥಾಯಿಸಮಿತಿಗಳ ಅಧ್ಯಕ್ಷರು ತೆಗೆದುಕೊಂಡ ನಿರ್ಣಯ ಅಥವಾ ಆದೇಶದ ಪ್ರತಿಯನ್ನು ಲಿಖಿತ ಟಿಪ್ಪಣಿಯೊಂದಿಗೆ ಸರ್ಕಾರಕ್ಕೆ ಕಳುಹಿಸುವುದು.

ಜಿಲ್ಲಾ ಪಂಚಾಯತ್‌ನ ಇತರೆ ಅಧಿಕಾರಿಗಳಲ್ಲಿ ಮುಖ್ಯ ಲೆಕ್ಕಾಧಿಕಾರಿಯು ಹಣಕಾಸಿನ ಕಾರ್ಯನೀತಿಯ ವಿಷಯದಲ್ಲಿ ಜಿಲ್ಲಾ ಪಂಚಾಯತ್‌ನ ಸಲಹೆ ನೀಡುತ್ತಾರೆ ಹಾಗೂ ನಿಯಮಾನುಸಾರ ವೆಚ್ಚ ಮಾಡಲು ಕ್ರಮಕೈಗೊಳ್ಳುತ್ತಾರೆ. ನಿಯಮಗಳು ಮತ್ತು ಬಜೆಟ್‌ನ ಅನುಮೋದನಾ ರಹಿತವಾಗಿ ಯಾವುದೇ ವೆಚ್ಚದ ಬಗ್ಗೆ ಅನುಮತಿ ನೀಡುವುದಿಲ್ಲ. ಉಪಕಾರ್ಯದರ್ಶಿ ಅಥವಾ ಕಾರ್ಯದರ್ಶಿಗಳು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅದರ ಕಾರ್ಯನಿರ್ವಹಣೆಯಲ್ಲಿ ನೆರವಾಗುತ್ತಾರೆ.

ಅಧ್ಯಾಯ -3

ಪುತ್ತೂರು ತಾಲ್ಲೂಕಿನ ಬೆಟ್ಟಂಪಾಡಿ ಗ್ರಾಮಪಂಚಾಯಿತ್ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ ಯೋಜನೆಯ ಅನುಷ್ಠಾನ

ಪ್ರಸ್ತುತ ಅವಧಿಯಲ್ಲಿ ಉದ್ಯೋಗ ಖಾತರಿ ಯೋಜನೆಯು ಒಂದು ಜನಪ್ರಿಯ ಯೋಜನೆಯಾಗಿರುವುದರಿಂದ ಅದರ ಯಶಸ್ಸು ಮತ್ತು ವೈಫಲ್ಯವನ್ನು ವಸ್ತುನಿಷ್ಠವಾಗಿ ತಿಳಿದುಕೊಳ್ಳುವ ಪರಿಕಲ್ಪನೆಯ ನಿಟ್ಟಿನಲ್ಲಿ ಬೆಟ್ಟಂಪಾಡಿ ಗ್ರಾಮ ಪಂಚಾಯತಿಯನ್ನು ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ನಡೆಸಲಾಗಿದೆ. ಬೆಟ್ಟಂಪಾಡಿ ಗ್ರಾಮ ಪಂಚಾಯತಿನ ಇತಿಹಾಸ: ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಪುತ್ತೂರು ಕೇಂದ್ರ ಸ್ಥಾನದಿಂದ 14 ಕಿ.ಮೀ ದೂರದಲ್ಲಿದ್ದು ಪುತ್ತೂರು-ಪಾಣಾಜೆ ರಸ್ತೆ ಬದಿಯಲ್ಲಿ ಕಛೇರಿಯನ್ನು ಹೊಂದಿ ಕಾರ್ಯಚರಿಸುತ್ತಿದೆ. ಈ ಪಂಚಾಯತ್ ಇರ್ದೆ ಮತ್ತು ಬೆಟ್ಟಂಪಾಡಿ ಎಂಬ 2 ಕಂದಾಯ ಗ್ರಾಮಗಳನ್ನು ಒಳಗೊಂಡಿದೆ. ವಿಸ್ತೀರ್ಣದಲ್ಲಿ ಇರ್ದೆಗಿಂತ ಬೆಟ್ಟಂಪಾಡಿ ದೊಡ್ಡ ಗ್ರಾಮ. ಈ ಗ್ರಾಮ ಪಂಚಾಯತ್ ಪಾಣಾಜೆ, ಒಳಮೊಗ್ರು, ಆರ್ಯಾಪು ಹಾಗೂ ಬಲ್ನಾಡು ಗ್ರಾಮ ಪಂಚಾಯತ್‌ಗಳೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಇರ್ದೆ-ಬೆಟ್ಟಂಪಾಡಿ ಎರಡು ಗ್ರಾಮಗಳೂ ಐತಿಹಾಸಿಕವಾಗಿ ಬಹಳ ಪ್ರಸಿದ್ಧಿ ಪಡೆದಿದ್ದು, ವಿಜಯನಗರ ಅರಸರ ಕಾಲದ ಬಲ್ಲಾಳರ ಮನೆ ಈಗಲೂ ಇದೆ. ಇಲ್ಲಿ ಅತ್ಯಂತ ಪ್ರಾಚೀನವಾದ ಹಾಗೂ ಕಾರಣಿಕವಾದ ಮಹಾಲಿಂಗೇಶ್ವರ ದೇವಾಲಯವಿದೆ. ದಕ್ಷಿಣ ಭಾರತದ ಏಕೈಕ ಬಿಸಿನೀರಿನ ಬು ಗ್ಗೆ " ಬೆಂದ್ರ್ ತೀರ್ಥ" ಇರ್ದೆ ಗ್ರಾಮದಲ್ಲಿದೆ. ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮುಂದುವರಿದ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 9 ಪ್ರಾಥಮಿಕ ಶಾಲೆಗಳು, 2 ಪ್ರೌಢ ಶಾಲೆಗಳು, ಪದವಿ ಪೂರ್ವಕಾಲೇಜು, ಸರಕಾರಿ ಪದವಿ ಕಾಲೇಜು ಸ್ಥಾಪಿಸಲ್ಪಟ್ಟು ಹಲವಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ದೇಶ-ವಿದೇಶಗಳಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿ ಗ್ರಾಮಕ್ಕೆ ಕೀರ್ತಿಯನ್ನು ತಂದಿರುತ್ತಾರೆ. ಇರ್ದೆ ಗ್ರಾಮವು 854.66 ಹೆಕ್ಟೇರ್ ವಿಸ್ತೀರ್ಣ ಪ್ರದೇಶ ಹೊಂದಿದ್ದು, ಅಲ್ಲದೆ 4283 ಜನಸಂಖ್ಯೆ ಹೊಂದಿರುತ್ತದೆ.

ರಾಷ್ಟ್ರೀಯ ಸಲಹಾ ಸಮಿತಿಯ ಸಲಹೆಯ ಮೇರೆಗೆ ಭಾರತ ಸರಕಾರವು ಪೆಬ್ರವರಿ 2,2006ರಂದುರಾಷ್ಟ್ರೀಯಉದ್ಯೋಗಖಾತರಿಯೋಜನೆಯನ್ನು ಜಾರಿಗೊಳಿಸುವ ಸಂಬಂಧದಲ್ಲಿ ಕಾಯಿದೆಯನ್ನು ಅಳವಡಿಸಿತು. ಗ್ರಾಮೀಣ ಮತ್ತು ಪಟ್ಟಣದ ಬಡಕುಟುಂಬಗಳ ಮತ್ತು ಕೆಳ ಮಧ್ಯಮ ವರ್ಗದ ಕುಟುಂಬಗಳ ಕನಿಷ್ಟ ಒಬ್ಬರಿಗೆ ಪ್ರತಿವರ್ಷ 100 ದಿನಗಳಲ್ಲಿ ಕನಿಷ್ಠ ವೇತನದಲ್ಲಿ ಸ್ವತ್ತುಗಳನ್ನು ಸೃಷ್ಟಿಸುವಂತಹ ಸಾರ್ವಜನಿಕ ಕಾಮಗಾರಿಗಳಲ್ಲಿ ಉದ್ಯೋಗವನ್ನುಒದಗಿಸುವುದು ಈ ಯೋಜನೆಯಗುರಿಯಾಗಿದೆ. ಪ್ರಾರಂಭದಲ್ಲಿ ಈ ಯೋಜನೆಯನ್ನುದೇಶದ 200 ಜಿಲ್ಲೆಗಳಲ್ಲಿ ಅಳವಡಿಸಲಾಯಿತು.2007-08 ರಲ್ಲಿಇದನ್ನುಇನ್ನೂ 130 ಜಿಲ್ಲೆಗಳಿಗೆ ವಿಸ್ತರಿಸಲಾಯಿತು.ನಂತರಏಪ್ರಿಲ್ 1, 2008ರಂದು ಈ ಯೋಜನೆಯನ್ನು ಉಳಿದ ಜಿಲ್ಲೆಗಳಿಗೆ ವಿಸ್ತರಿಸಿ ದೇಶದಎಲ್ಲಾ 593 ಜಿಲ್ಲೆಗಳಿಗೆ ವ್ಯಾಪಿಸುವಂತೆ ಮಾಡಲಾಯಿತು. ಈ ಯೋಜನೆಯಲ್ಲಿ 2006-07 ರಲ್ಲಿ ಕೈಗೊಳ್ಳಲಾದ ವೆಚ್ಚ 11,000ಕೋಟಿ ರೂಪಾಯಿಗಳಾಗಿತ್ತು.2009-10ರಲ್ಲಿ ಇದು 39,100 ಕೋಟಿ ರೂಪಾಯಿಗಳಾಗಿತ್ತು.

ಧ್ಯೇಯೋದ್ದೇಶಗಳು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಮುಖ ಧ್ಯೇಯೋದ್ದೇಶಗಳು ಕೆಳಗಿನಂತಿವೆ.

1. ಉದ್ಯೋಗಾವಕಾಶಗಳನ್ನು ವಿಸ್ತರಿಸುವುದು.
2. ವೇತನ ಗಳಿಕೆಯ ಸಾಮರ್ಥ್ಯವನ್ನು ಎತ್ತರಿಸುವುದು ಮತ್ತು ಕನಿಷ್ಠ ವೇತನದ ಮೇಲೆ ಪರಿಣಾಮ ಬೀರುವುದು.
3. ಗ್ರಾಮೀಣ ಬಡವರ್ಗದಜನರ ಹಣಕಾಸಿನ ಅಂತರ್ವೇಶನವನ್ನು ಸಾಧಿಸುವುದು.

ಮುಖ್ಯ ಲಕ್ಷಣಗಳು

ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಮುಖ್ಯಲಕ್ಷಣಗಳು ಮುಂದೆ ವಿವರಿಸಿದಂತಿದೆ.

1. ಗ್ರಾಮೀಣ ಭಾರತದ ಪ್ರತಿಯೊಂದು ಕುಟುಂಬವೂ ಕನಿಷ್ಟ ಒಬ್ಬ ವಯಸ್ಕ ಸದಸ್ಯನಿಗೆ ಪ್ರತಿ ವರ್ಷ 100 ದಿನಗಳ ಖಾತರಿಯಾದ ಉದ್ಯೋಗವನ್ನು ಹೊಂದಲು ಅರ್ಹವಾಗಿರುತ್ತದೆ. ಉದ್ಯೋಗವನ್ನು ಅನಿಯತ ದೈಹಿಕ ಶ್ರಮದ ರೂಪದಲ್ಲಿ ಶಾಸನಾತ್ಮಕ ಕನಿಷ್ಟ ವೇತನದರದಲ್ಲಿ ಏಳು ದಿವಸಗೊಳಗಾಗಿ ವೇತನವನ್ನು ಪಾವತಿಸಲಾಗುತ್ತದೆ. ಕನಿಷ್ಟ ವೇತನವು ಕನಿಷ್ಟ 60 ರೂಪಾಯಿಗಳಾದರೂ ಆಗಿರಬೇಕು.
2. ಕೆಲಸವನ್ನು ಕೇಳಲಾದ 15 ದಿವಸಗಳ ಒಳಗಾಗಿ ಒದಗಿಸಬೇಕು. ಕೆಲಸದ ಜಾಗವು ಐದು ಕಿಲೋಮೀಟರ್ ಒಳಗಿನ ದೂರದಲ್ಲಿರಬೇಕು.
3. ನಿಗದಿತ ಸಮಯದೊಳಗೆ ಯಾರಿಗಾದರೂ ಕೆಲಸವನ್ನುಕೊಡಲಾಗದಿದ್ದಲ್ಲಿ ಆ ವ್ಯಕ್ತಿಗೆ (ಅವನಿಗೆ ಅಥವಾ ಅವಳಿಗೆ) ಪ್ರತಿದಿವಸದ ನಿರುದ್ಯೋಗ ಭತ್ಯೆಯನ್ನು ಪಾವತಿಸಬೇಕು. ಈ ಭತ್ಯೆಯು ಕನಿಷ್ಟ ವೇತನದ $^{1}/_{3}$ರಷ್ಟಾದರೂಆಗಿರಬೇಕು.
    1. ಕೆಲಸದ ಸಮಯದಲ್ಲಿ ಗಾಯಗಳಾದರೆ ಕೆಲಸಗಾರರು ವೈದ್ಯಕೀಯ ಶುಶ್ರೂಷೆ ಮತ್ತುಆಸ್ಪತ್ರೆಗೆ ಸೇರ್ಪಡೆಗೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ಇಂತಹ ಸಮಯದಲ್ಲಿಅವರಿಗೆ ಕನಿಷ್ಟ ವೇತನದಅರ್ಧದಷ್ಟು ಮೊತ್ತವನ್ನಾದರೂ ದಿನನಿತ್ಯದ ಭತ್ಯೆಯರೂಪದಲ್ಲಿ ಪಾವತಿಸಬೇಕು. ಕೆಲಸಗಾರನು ಮರಣವನ್ನಪ್ಪಿದರೆಅಥವಾ ಅವನಿಗೆ ಅಂಗವಿಕಲತೆಯಾದರೆ ಕೆಲಸಗಾರರ ಪರಿಹಾರಕಾಯಿದೆಯ ಪ್ರಕಾರ ಅವನ ವಾರಸುದಾರರಿಗೆಅನುಗ್ರಹ ಹಣವನ್ನು ಪಾವತಿಸಬೇಕು.
    2. ವೇತನದ ಶೇಕಡ 5 ರಷ್ಟನ್ನುಆರೋಗ್ಯ ವಿಮೆ, ಅಪಘಾತ ವಿಮೆ, ಮಾತೃತ್ವ, ಸೌಲಭ್ಯಗಳು, ಸಾಮಾಜಿಕ ಭದ್ರತೆಗಳು, ಜೀವಂತ ವಾರಸುದಾರರಿಗೆನೀಡಬೇಕಾದ ಪ್ರಯೋಜನಗಳು ಮುಂತಾದಕ್ಷೇಮಾಭ್ಯುದಯ ಯೊಜನೆಗಳಿಗೆ ವಂತಿಕೆಯಾಗಿಕಟಾಯಿಸಬೇಕು.
    3. ಈ ನಿಯಮಗಳನ್ನು ಅನುಸರಿಸದವರಿಗೆ ನಿಷ್ಠುರ ದಂಡಗಳನ್ನು ವಿಧಿಸಬೇಕು.
    4. ಪಾರದರ್ಶಕತೆ ಮತ್ತುಉತ್ತರದಾಯತ್ವದದೃಷ್ಟಿಯಿಂದಕಾರ್ಯಕ್ರಮದಎಲ್ಲಾ ಲೆಕ್ಕಪತ್ರಗಳನ್ನು ಮತ್ತು ದಾಖಲೆಗಳನ್ನು ಸಾರ್ವಜನಿಕ ಪರಿಶೀಲನೆಗಾಗಿ ಲಭ್ಯವಾಗಿಸಬೇಕು.
    5. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಾರ್ಯಕ್ರಮಕ್ಕೆ ಜವಬ್ದಾರರಾಗಿರುತ್ತಾರೆ.

6. ಗ್ರಾಮ ಪಂಚಾಯತಿಯ ಕೆಲಸವನ್ನು ಗ್ರಾಮಸಭೆಯು ಸಾಮಾಜಿಕ ಲೆಕ್ಕ ಪರಿಶೋಧನೆಯ ರೂಪದಲ್ಲಿ ಮೇಲ್ವಿಚಾರಣೆ ಮಾಡುತ್ತದೆ.
7. ಈ ಯೋಜನೆಯನ್ನು ಪ್ರಾರಂಭದಲ್ಲಿ 200 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿ, ನಂತರಐದು ವರ್ಷಗಳಲ್ಲಿ ದೇಶದಾದ್ಯಂತ ವಿಸ್ತರಿಸಲಾಗುತ್ತದೆ.
8. ಅರ್ಜಿದಾರರು ಜಾಸ್ತಿ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಮಹಿಳೆಯರಿಗೆ ಮೂರನೇಒಂದರಷ್ಟುಆದ್ಯತೆಇರುತ್ತದೆ.
9. ಗರಿಷ್ಠವೆಂದು ನಿಗದಿಪಡಿಸಲಾಗಿರುವ 100 ಮಾನವ ದಿನಗಳನ್ನು ಅವರೊಳಗೆ ಹಂಚಿಕೊಳ್ಳುವುದಾದಲ್ಲಿ ಕುಟುಂಬವೊಂದರ ಎಷ್ಟು ಮಂದಿ ಸದಸ್ಯರಾದರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ಅಂದರೆ ಒಂದು ಕುಟುಂಬದ ಇಬ್ಬರ ಹೆಸರುಗಳು ಈ ಯೋಜನೆಯಲ್ಲಿ ಸೇರ್ಪಡೆಯಾಗಿದ್ದರೆ ಮತ್ತು ಅವರು ಆಯ್ಕೆಯಾಗಿದ್ದರೆ, ಪ್ರತಿಯೊಬ್ಬರು 50 ದಿವಸಗಳ ಉದ್ಯೋಗಕ್ಕೆ ಹಕ್ಕುಳ್ಳವರಾಗಿರುತ್ತಾರೆ.
10. ಕೇಂದ್ರ ಸರಕಾರವುಯೋಜನೆಗೆ ಶೇಕಡ 90ರಷ್ಟು ಹಣವನ್ನುಒದಗಿಸುತ್ತದೆ. ಉದ್ಯೋಗ ಸೃಷ್ಟಿಯಕಾರ್ಯದಲ್ಲಿ ಹಣಕಾಸಿನ ಆಡಚಣೆ ಸಂಭವಿಸಿದರೆ ಅದುರಾಜ್ಯ ಸರಕಾರಗಳಿಗೆ ಸರಕಾರಗಳಿಗೆ ಪೂರಕವಾಗಿ ಹಣವನ್ನು ಒದಗಿಸುತ್ತದೆ.

ರಾಜ್ಯ ಸರಕಾರಗಳ ಪಾತ್ರ

ಈ ಯೋಜನೆಯ ಅನುಷ್ಠಾನಕ್ಕಾಗಿ ಈ ಕಾಯಿದೆಯು ಜಾರಿಯಾದ ಆರು ತಿಂಗಳ ಒಳಗಾಗಿ ಪ್ರತಿಯೊಂದು ರಾಜ್ಯವೂ ಉದ್ಯೋಗ ಭರವಸೆಯ ಕಾರ್ಯಕ್ರಮವೊಂದನ್ನು ಸಿದ್ಧಪಡಿಸಬೇಕು. ಕಾರ್ಯಕ್ರಮದಲ್ಲಿ ಸೇರಿಸಬೇಕಾದ ಪ್ರಮುಖ ಅಂಶಗಳು ಕೆಳಗಿನಂತಿವೆ.

1. ಆರ್ಥಿಕ ಸಾಮಾಜಿಕ ಮತ್ತು ಪರಿಸರದ ಪ್ರಯೋಜನಗಳನ್ನು ಆಧರಿಸಿದ, ಸಾಮಾಜಿಕ ಸಮಾನತೆಗೆಕೊಡುಗೆ ನೀಡುವಂತಹ ಮತ್ತು ಶಾಶ್ವತ ಸ್ವತ್ತುಗಳನ್ನು ಸೃಷ್ಟಿಸಲು ಸಮರ್ಥವಾಗಿರುವಂತಹ ಉತ್ಪಾದಕ ಕೆಲಸಗಳನ್ನು ಮಾತ್ರ ಕೈಗೆತ್ತಿಕೊಳ್ಳಬೇಕು.
2. ಕೆಲಸಗಳು ಗ್ರಾಮೀಣ ಪ್ರದೇಶದಲ್ಲಿರಬೇಕು.
3. ವೇತನಗಳನ್ನು ಕೆಲಸದ ಪ್ರಮಾಣದೊಡನೆ ನೇರವಾಗಿ ಸಂಪರ್ಕಿಸಬೇಕು. ರಾಜ್ಯ ಸರಕಾರವು ನಿಗದಿಪಡಿಸಿದ ಪರಿಶಿಷ್ಟದ ಪ್ರಕಾರ ಅವುಗಳನ್ನು ಪಾವತಿಸಬೇಕು. ಕುಶಲತೆಯಿಲ್ಲದ ಕೆಲಸಗಾರರಿಗೆಏಳು ಗಂಟೆಗಳ ಕೆಲಸಕ್ಕಾಗಿ ವೇತನವುರಾಜ್ಯ ಸರಕಾರವು ನಿಗದಿಪಡಿಸಿರುವ ಶಾಸನಬದ್ಧ ಕನಿಷ್ಠ ವೇತನಕ್ಕೆ ಸಮನಾಗಿರುವಂತೆ ಈ ಪರಿಶಿಷ್ಟವನ್ನು ರೂಪಿಸಬೇಕು.

ಪ್ರಗತಿ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಉದ್ಯೋಗ ಸೃಷ್ಟಿ, ಆದಾಯ ಗಳಿಗೆ ಸಾಮರ್ಥ್ಯದ ಹೆಚ್ಚಳ ಮತ್ತು ಬಡವರ್ಗಗಳ ಜನರ ಸಬಲೀಕರಣದಲ್ಲಿ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿದೆ.

1. *ಉದ್ಯೋಗಾವಕಾಶಗಳ ಹೆಚ್ಚಳ:2007–08ರಲ್ಲಿ 3.39 ಕೋಟಿ ಕುಟುಂಬಗಳಿಗೆ ಉದ್ಯೋಗವನ್ನುಒದಗಿಸಲಾಗಿತು, ಮತ್ತು 330 ಜಿಲ್ಲೆಗಳಲ್ಲಿ 143.5 ವ್ಯಕ್ತಿಗಳಿಗೆ ದಿವಸಗಳ ಉದ್ಯೋಗವನ್ನು ಸೃಷ್ಟಿಸಲಾಯಿತು.*
2. ವೇತನ ಗಳಿಕೆಯ ಸಾಮರ್ಥ್ಯವನ್ನು ವಿಸ್ತರಿಸುವಿಕೆವೇತನ ಗಳಿಕೆಯ ಸಾಮರ್ಥ್ಯದ ಏರಿಕೆಯೊಂದಿಗೆ ಗ್ರಾಮೀಣ ಜನರ ಜೀವನೋಪಾಯದ ಮೂಲಗಳು ಬಲಗೊಂಡಿವೆ. 2007–08ರಲ್ಲಿ ಈ ಯೋಜನೆಯಲ್ಲಿ ವಿನಿಯೋಗಿಸಲಾದ ಶೇಕಡ 68ಕ್ಕಿಂತ ಹೆಚ್ಚಿನ ನಿಧಿಗಳು ಕೆಲಸಗಾರರಿಗೆ ವೇತನವನ್ನು ಪಾವತಿಸಲು ಬಳಕೆಯಾದವು. 2008–09ರಲ್ಲಿ ಶೇಕಡ 73ರಷ್ಟು ನಿಧಿಗಳು ಈ ರೀತಿಯಲ್ಲಿ ಬಳಕೆಯಾಗಿವೆ.
3. ಬಡವರ್ಗಗಳ ಜನರ ಹಣಕಾಸಿನ ಅಂತರ್ವೇಶನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೂಲಕ ಗ್ರಾಮೀಣ ಬಡವರ್ಗಗಳ ಜನರು ಹಣಕಾಸಿನ ವ್ಯವಸ್ಥೆಗೆ ಸೇರ್ಪಡೆಗೊಳ್ಳಲು ಸಾಧ್ಯವಾಗಿರುತ್ತದೆ. ಹಣ ಗಳಿಕೆಯ ದೃಷ್ಟಿಯಿಂದ ಅವರು ಸ್ವಲ್ಪ ಪ್ರಬಲರಾಗಿರುವುದಲ್ಲದೆ, ವೇತನವನ್ನು ಬ್ಯಾಂಕುಗಳ ಮೂಲಕವೆ ಪಾವತಿಸಬೇಕೆನ್ನುವ ಷರತ್ತಿನಿಂದಾಗಿ ಅವರು ಬ್ಯಾಂಕುಗಳಲ್ಲಿ ವ್ಯಕ್ತಿಗತ ಖಾತೆಗಳನ್ನು ಹೊಂದಲು ಸಾಧ್ಯವಾಗಿದೆ.

ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಶ್ರೇಷ್ಠತೆ

ರಾಷ್ಟ್ರೀಯ ಉದ್ಯೋಗ ಖಾತರಿಯೋಜನೆಯು ಉದ್ಯೋಗ ಭರವಸೆ ಯೋಜನೆ, ಜವಾಹರ್‌ರೋಜ್‌ಗಾರ್ ಯೋಜನೆ ಮುಂತಾದ ಉದ್ಯೋಗ ಸೃಷ್ಟಿಯ ಯೋಜನೆಗಳಿಗಿಂತ ಭಿನ್ನವಾಗಿದೆ.

1. **ಉದ್ಯೋಗವನ್ನು ಪಡೆಯುವ ಹಕ್ಕು**: ಇತರೆ ಉದ್ಯೋಗ ಯೋಜನೆಗಳಲ್ಲಿ ಜನರಿಗೆ ಉದ್ಯೋಗವನ್ನು ಕೇಳಲು ಯಾವುದೇ ಹಕ್ಕು ಮತ್ತು ಚೌಕಾಯಿಸಿಯ ಶಕ್ತಿ ಇರುವುದಿಲ್ಲ. ಅಂತೆಯೇ ಉದ್ಯೋಗವನ್ನು ನೀಡಲು ಆಡಳಿತಕ್ಕೆ ಉತ್ತರದಾಯಿತ್ವವೂ ಇರುವುದಿಲ್ಲ. ಆದರೆ ಉದ್ಯೋಗ ಖಾತರಿ ಯೋಜನೆಯು ಜನರಿಗೆ ಕೆಲಸವನ್ನು ಪಡೆಯುವ ಹಕ್ಕನ್ನು ದಯಪಾಲಿಸುತ್ತದೆ. ಇದು ಶಾಸನಬದ್ಧ ಹಕ್ಕು ಆಗಿದ್ದು, ಇದರಜಾರಿಗೆ ನ್ಯಾಯಾಲಯದ ಮೂಲಕವೂ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಇದರಿಂದಾಗಿ ಜನರ ಚೌಕಾಸಿಯ ಶಕ್ತಿ ಹೆಚ್ಚುತ್ತದೆ ಮತ್ತುಅವರು ಕೆಲಸವನ್ನು ಕೊಡದಿದ್ದರೆ ನಿರುದ್ಯೋಗ ಭತ್ಯೆಯನ್ನು ಪಾವತಿಸಬೇಕಾಗುತ್ತದೆ ಮತ್ತು ಸ್ಥಳೀಯ ಅಧಿಕಾರಿಗಳು ಉತ್ತರವನ್ನು ನೀಡಬೇಕಾಗುತ್ತದೆ.
2. **ಕೇಂದ್ರ ಸರಕಾರದಿಂದ ನಿಧಿ ನೀಡಿಕೆ**: ಈ ಯೋಜನೆಯ ಇನ್ನೊಂದು ವೈಶಿಷ್ಟ್ಯವೇನೆಂದರೆ ಪ್ರಥಮ ಬಾರಿಗೆ ಕೇಂದ್ರಸರಕಾರವು ಶೇಕಡ80ರಷ್ಟು ನಿಧಿಯನ್ನು ಒದಗಿಸುವಂತಹ ಉದ್ಯೋಗ ಖಾತರಿಯೋಜನೆಯೊಂದನ್ನು ಅನುಷ್ಠಾನಗೊಳಿಸಲು ರಾಷ್ಟ್ರಮಟ್ಟದಲ್ಲಿ ಪ್ರಯತ್ನಿಸಲಾಗಿದೆ.
3. **ನಿರ್ದಿಷ್ಟ ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳತ್ತ ಗುರಿ**: ಕಾಮಗಾರಿಗಳು ನಿರ್ದಿಷ್ಟ ಗ್ರಾಮೀಣ ಅಭಿವೃದ್ಧಿ ಚಟುಟಿಕೆಗಳತ್ತ ಗುರಿಮಾಡಿರಬೇಕೆಂದು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯು ನಿರ್ದೇಶಿಸುತ್ತದೆ. ಇಂತಹ ಕಾಮಗಾರಿಗಳಲ್ಲಿ ಮುಖ್ಯವಾದವುಗಳೆಂದರೆ ನೀರಿನ ಸಂರಕ್ಷಣೆ ಮತ್ತು ಕೊಯಿಲು, ಅರಣ್ಯೀಕರಣ, ಗ್ರಾಮೀಣ ಸಂಪರ್ಕ ಸೇತು, ಪ್ರವಾಹ ನಿಯಂತ್ರಣ, ಹೊಸ ಕೆರೆಗಳ ಮತ್ತು ಕೊಳಗಳ ನಿರ್ಮಾಣ ಇತ್ಯಾದಿ.


ಬೆಟ್ಟಂಪಾಡಿ ಗ್ರಾಮ ಪಂಚಾಯತ್

2013ರಿಂದ 2018ರವರೆಗಿನ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗಯೋಜನೆಯ ಕಾರ್ಯಕ್ರಮಗಳ ವಿವರ

ಕ್ರ. ಸಂಖ್ಯೆ.	ಕಾಮಗಾರಿಯ ವಿವರ	2013-14	2014-15	2015-16	2016-17	2017-18	ಒಟ್ಟು	ಶೇಕಡ
1.	ಕೆರೆ	02	–	1	2	–	5	1.6%
2.	ಬಾವಿ	4	7	8	13	7	39	13.0%
3.	ಹಟ್ಟಿ	–	1	4	6	12	23	7.7%
4.	ಕೃಷಿ	30	9	11	10	9	69	33%
5.	ಶೌಚಾಲಯ	5	6	–	3	1	15	6%
6.	ತಡೆಗೋಡೆ	3	–	–	–	–	3	1%
7.	ಕಿಂಡಿಅಣೆಕಟ್ಟು	–	–	–	1	1	2	0.5%
8.	ಅಂಗನವಾಡಿಕಟ್ಟಡ ದುರಸ್ತಿ	–	–	–	2	–	2	0.5%
9.	ಇಂಗುಗುಂಡಿ	1	–	–	–	–	1	0.3%
10.	ಕೋಳಿಶೆಡ್ಡು	–	1	2	2	3	8	2.6%
11.	ಮನೆ ನಿರ್ಮಾಣ	–		32	44	55	131	43.8%
	ಒಟ್ಟು	45	24	58	83	88	298	100%

ಖರ್ಚು ಮಾಡಲಾದ ಮೊಬಲಗು


ಕ್ರ.ಸಂಖ್ಯೆ.	ಯೋಜನೆಗಳು	2013-14	2014-15	2015-16	2016-17	2017-18	ಒಟ್ಟು	ಶೇಕಡ
1.	ಕೆರೆ ನಿರ್ಮಾಣ	11,000	–	57,324	15,008	–	83,332	2.00%
2.	ಬಾವಿ ನಿರ್ಮಾಣ	11,000	1,30,835	1,90,944	4,22,298	1,36,880	8,91,957	21.00%
3.	ಹಟ್ಟಿ ನಿರ್ಮಾಣ	–	10,123	39,984	60,480	1,18,748	2,29,335	6.6%
4.	ಕೃಷಿ	3,10,996	1,01,550	15,952	1,09,984	1,12,974	7,95,032	19.4%
5.	ಶೌಚಾಲಯ	22,500	26,538	–	16,800	8,024	73,682	1.8%
6.	ತಡೆಗೋಡೆ	1,60,100	–	–	–	–	1,60,100	3.9%
7.	ಕಿಂಡಿಅಣೆಕಟ್ಟು	–	–	–	8424	125952	134376	3.3%
8.	ಅಂಗನವಾಡಿ ದುರಸ್ತಿ	–	–	–	1,05,200	–	1,05,200	2.6%
9.	ಇಂಗುಗುಂಡಿ	70,000	–	–	–	–	70,000	1.7%
10.	ಕೋಳಿಶೆಡ್ಡು	–	10,505	17,748	12,992	35,630	76,881	1.8%
11.	ಮನೆ ನಿರ್ಮಾಣ	–		3,40,680	4,25,152	7,01,392	14,67,224	35.9%



ಫಲಾನುಭವಿಯ ವೈಯಕ್ತಿಕ ಮಾಹಿತಿ

ಕೋಷ್ಟಕ-1.1 ಫಲಾನುಭಗಳ ವಯೋಮಾನ ದ ವಿವರ

ವಯಸ್ಸು	ಫಲನುಭವಿಗಳು	ಶೇಕಡ
20ಕಡಿಮೆ	ಇಲ್ಲ	0
20-40	26	26%
40-60	55	55%
60-80	19	19%
80-ಹೆಚ್ಚು	ಇಲ್ಲ	100%



ಸ್ತಂಭ ನಕ್ಷೆ 1.2 ಫಲಾನುಭಗಳ ವಯೋಮಾನ ದ ವಿವರ


ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಫಲಾನುಭವಿಗಳನ್ನು ಅವರ ವಯಸ್ಸು ಮತ್ತು ಉದ್ಯೋಗ ಖಾತರಿಯನ್ನು ಸಂಶೋಧನೆಗೆ ಒಳಪಡಿಸಿದಾಗ ಅಧ್ಯಯನದಿಂದ ತಿಳಿದು ಬಂದಂತೆ ಸುಮಾರು 20 ರಿಂದ 40 ವರ್ಷದ ವರೆಗಿನ್ ಫಲಾನುಭವಿಗಳು ಶೇಕಡ 26% ಕಂಡುಬಂದಿದೆ. 40 ರಿಂದ 60 ವರ್ಷದ ಫಲಾನುಭವಿಗಳು ಶೇಕಡ 55%, 60 ರಿಂದ 80 ವರ್ಷದ ಫಲಾನುಭವಿಗಳು ಶೇಕಡ 19% ಸಮಗ್ರವಾದ ಅಧ್ಯಯನದ ಪ್ರಕಾರ 20 ವರ್ಷಕ್ಕಿಂತ ಕಡಿಮೆ ಮತ್ತು 80 ವರ್ಷಕ್ಕಿಂತ ಹೆಚ್ಚಿನ ವರ್ಷದ ಫಲಾನುಭವಿಗಳು ಉದ್ಯೋಗ ಖಾತರಿ ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿಲ್ಲ ಎಂದು ಸಮೀಕ್ಷೆಯು ಖಾತರಿಗೊಳಿಸಿದೆ.



ಕೋಷ್ಟಕ–1.2

ಫಲಾನುಭವಿಗಳ ಲಿಂಗದ ವಿವರ

ಲಿಂಗ	ಶೇಕಡ
ಗಂಡು	56%
ಹೆಣ್ಣು	44%



ಪೈನಕ್ಷೆ 1.3 ಫಲಾನುಭವಿಯ ಲಿಂಗ ವಿವರ


ಚೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಫಲಾನುಭವಿಗಳನ್ನು ಒಟ್ಟು ಫಲಾನುಭವಿಗಳಲ್ಲಿ 56% ರಷ್ಟು ಪುರುಷರು ಮತ್ತು ಶೇಕಡ 44 ಮಹಿಳೆಯರನ್ನು ಈ ಸಂಶೋಧನೆಯಡಿಯಲ್ಲಿ ಕ್ರೋಢಿಕೃತವಾಗಿದ್ದಾರೆ.

ಚೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಫಲಾನುಭವಿಗಳನ್ನು ಸಂದರ್ಶಿಸಿದಾಗ ಒಟ್ಟು 100 ಫಲಾನುಭವಿಗಳಲ್ಲಿ 56% ರಷ್ಟು ಪುರುಷರು ಮತ್ತು 44% ರಷ್ಟು ಮಹಿಳೆಯರನ್ನು ಈ ಸಂಶೋಧನೆಗೆ ಬಳಸಲಾಗಿದೆ.

ಕೋಷ್ಟಕ-1.3

ಫಲಾನುಭವಿಗಳ ವೈವಾಹಿಕ ಸ್ಥಿತಿಯ ವಿವರ

ವೈವಾಹಿಕ ಸ್ಥಿತಿ	ಫಲಾನುಭವಿಗಳು
ವಿವಾಹಿತರು	100
ಅವಿವಾಹಿತರು	0




ಪೈ ನಕ್ಷೆ 1.4 ಫಲಾನುಭವಿಗಳ ವೈವಾಹಿಕ ಸ್ಥಿತಿಯ ವಿವರ

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳಲ್ಲಿ 100% ವಿವಾಹಿತರನ್ನು ಈ ಸಂದರ್ಶನಕ್ಕೆ ಒಳಪಡಿಸಿ ಅಧ್ಯಯನ ನಡೆಸಲಾಗಿದೆ.

ಕೋಷ್ಟಕ-1.5

ಫಲಾನುಭವಿಗಳ ಧರ್ಮದ ವಿವರ

ಧರ್ಮ	ಫಲಾನುಭವಿಗಳು
ಹಿಂದು	72
ಮುಸ್ಲಿಂ	22
ಕ್ರಿಶ್ಚನ್	6
ಇತರರು	0




ಸ್ತಂಭ ನಕ್ಷೆ 1.6ಫಲಾನುಭವಿಗಳ ಧರ್ಮದ ವಿವರ

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಉದ್ಯೋಗ ಖಾತರಿಯ ಯೋಜನೆಯ ಅಧ್ಯಯನ ನಡೆಸಿದಾಗ ಆ ವ್ಯಾಪ್ತಿಯ ಒಟ್ಟು ಫಲಾನುಭವಿಗಲ್ಲಿ 72% ಹಿಂದುಗಳು 32% ಮುಸ್ಲಿಂ ಸಮುದಾಯಗಳು ಮತ್ತು 6% ಕ್ರಿಶ್ಚನ್ ಸಮುದಾಯಗಳು ಇರುವುದು. ಸಂಶೋಧನೆಯ ಸಮೀಕ್ಷೆ ದೃಡಪಡಿಸಿದೆ. ಆದರೆ ಇತರ ಧರ್ಮಿಯರಾದ ಜೈನ, ಬೌದ್ದ, ಸಿಖ್ಖರು ಈ ಸಮ್ಮಿಕ್ಷೆಯಲ್ಲಿ ಕಂಡುಬರುವುದಿಲ್ಲ.

ಕೋಷ್ಟಕ-1.6

ಫಲಾನುಭವಿಗಳ ಜಾತಿಯ ವಿವರ

ವರ್ಗ	ಫಲಾನುಭವಿಗಳು
ಪರಿಶಿಷ್ಟ ಜಾತಿ	8
ಪರಿಶಿಷ್ಟ ಪಂಗಡ	22
ಮುಸ್ಲಿಂ	12
ಕ್ರಿಶ್ಚನ್	6
ಇತರರು	52




ಸ್ತಂಭ ನಕ್ಷೆ 1.7 ಫಲಾನುಭವಿಗಳ ಜಾತಿಯ ವಿವರ

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯನ್ನು ವರ್ಗಕ್ಕೆ ಅನುಗುಣವಾಗಿ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳನ್ನು ಸಮಗ್ರ ಅಧ್ಯಯನಕ್ಕೆ ಒಳಪಡಿಸಿದಾಗ ಆ ವ್ಯಾಪ್ತಿಯಲ್ಲಿರುವ ಪರಿಷ್ಟಜಾತಿಗೆ 8% (8) ಪರಿಶಿಷ್ಟ ಪಂಗಡಕ್ಕೆ 22% (22) ಮುಸ್ಲಿಂ ಸಮುದಾಯಕ್ಕೆ 12% (12) ಕ್ರಿಶ್ಚಿಯನ್ ಸಮುದಾಯಕ್ಕೆ 6% (6) ಮತ್ತು ಇತರರು 52% (52)ರಷ್ಟು ಸಂಶೋಧನ ಸಮೀಕ್ಷೆಯ ಮಾಹಿತಿಯಿಂದ ಕಂಡುಬಂದಿದೆ

ಕೋಷ್ಟಕ-1.8

ಫಲಾನುಭವಿಗಳ ವೃತ್ತಿಯ ವಿವರ

ವೃತ್ತಿ	ಸಂಖ್ಯೆ	ಶೇಕಡಾವಾರು
ಕೂಲಿ	6	6%
ಕೃಷಿ	65	65%
ಸೇವಾರಂಗ	19	19%
ಕೈಗಾರಿಕೆ	10	10%



ಪೈ ನಕ್ಷೆ 1.9 ಫಲಾನುಭವಿಗಳ ವೃತ್ತಿಯ ವಿವರ


ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವೃತ್ತಿಗೆ ಅನುಗುಣವಾಗಿ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕಂಡುಬಂದ ಸಮೀಕ್ಷೆಯ ವರದಿಯ ಪ್ರಕಾರ ಕೂಲಿಕೆಲಸಗಾರರು ಉದ್ಯೋಗ ಖಾತರಿಯಲ್ಲಿ 6% ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ಕೃಷಿ ಅವಲಂಬಿತರು 65% ಸೇವಾರಂಗದಲ್ಲಿ ದುಡಿಯುದು ಕಾರ್ಮಿಕರು19% ಮತ್ತು ಕೈಗಾರಿಕೆ ರಂಗದಲ್ಲಿ ಕೆಲಸ ನಿರ್ವಹಿಸುತ್ತಿರುವರು 10%ಮಂದಿ ಉದ್ಯೋಗ ಖಾತರಿ ಯೋಜನೆಯಲ್ಲಿ ತನ್ನತಾನು ತೊಡಗಿಸಿಕೊಂಡಿರುವುದು ಈ ಸಂಶೋಧನ ಅಧ್ಯಯನ ಗುರುತಿಸಿದೆ.



ಕೋಷ್ಟಕ-1.10

ಫಲಾನುಭವಿಗಳ ಶಿಕ್ಷಣದ ವಿವರ

ಶಿಕ್ಷಣ	ಫಲಾನುಭವಿಗಳು
ಪ್ರಾಥಮಿಕ	17
ಪ್ರೌಢ	61
ಪದವಿ ಪೂರ್ವ	14
ಪದವಿ	8




ಸ್ತಂಭ ನಕ್ಷೆ 1.11 ಫಲಾನುಭವಿಗಳ ಶಿಕ್ಷಣದ ವಿವರ

ಚೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಶಿಕ್ಷಣಕ್ಕೆ ಅನುಗುಣವಾಗಿ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳನ್ನು ಸಂದರ್ಶನಕ್ಕೆ ಒಳಪಡಿಸಿದಾಗ ಕಂಡುಬಂದ ಸಮೀಕ್ಷೆಯ ಪ್ರಕಾರ ಪ್ರಾಥಮಿಕ ಶಿಕ್ಷಣ ಪಡೆದ ಫಲಾನುಭವಿಗಳು 17% ಪ್ರೌಡ ಶಿಕ್ಷಣ 61% ಪದವಿ ಪೂರ್ವ 14% ಪದವಿ 8% ಎಂದು ಗುರುತಿಸಲಾಗಿದೆ.

ಕೋಷ್ಟಕ-1.12

ಫಲಾನುಭವಿಗಳ ಆದಾಯದ ವಿವರ

ಆದಾಯ	ಫಲಾನುಭಾವಿಗಳು
18000 ಕ್ಕಿಂತ ಕಡಿಮೆ	09%
18000–50000	62%
50000–100000	22%
100000 ಕ್ಕಿಂತ ಹೆಚ್ಚು	07%




ಸ್ತಂಭ ನಕ್ಷೆ 1.13 ಫಲಾನುಭವಿಗಳ ಆದಾಯದ ವಿವರ

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯನ್ನು ಉದ್ಯೋಗ ಮತ್ತು ಆದಾಯ ಹಂಚಿಕೆ ಅನುಗುಣವಾಗಿ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳನ್ನು ಸಂದರ್ಶನಕ್ಕೆ ಒಳಪಡಿಸಿದಾಗ 18000 ಕ್ಕಿಂತ ಕಡಿಮೆ ಹೊಂದಿರುವ ಫಲಾನುಭವಿಗಳು 9%,18000–50000 ಆದಾಯ ಹೊಂದಿರುವ ಫಲಾನುಭವಿಗಳು 62%,50000–100000 ಆದಾಯ ಹೊಂದಿರುವ ಫಲಾನುಭವಿಗಳು 22%,100000 ಕ್ಕಿಂತ ಹೆಚ್ಚು ಆದಾಯ ಹೊಂದಿರುವ ಫಲಾನುಭವಿಗಳು 7% ರಷ್ಟು ಎಂದೂ ಸಂಶೋಧನ ಸಮೀಕ್ಷೆಯ ಮಾಹಿತಿಯ ವರದಿಯಿಂದ ಕಂಡುಬಂದಿದೆ.

ಸ್ತಂಭ ನಕ್ಷೆ: 2.1

ಫಲಾನುಭವಿಗಳ ಯೋಜನೆಯ ಮಾಹಿತಿಯ ಮೂಲ




ಸರಕಾರ ಗ್ರಾಮೀಣ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ರೂಪಿಸಿದರೂ ಅದರ ಪ್ರಯೋಜನ ಅನೇಕ ಅರ್ಹ ವ್ಯಕ್ತಿಗಳಿಗೆ ಲಭಿಸುವುದಿಲ್ಲ. ಇದಕ್ಕೆ ಮೂಲ ಕಾರಣ ಯೋಜನೆಗಳ ಮಾಹಿತಿ ಹಲವಾರು ಕಾರಣಗಳಿಂದಾಗಿ ಗ್ರಾಮೀಣ ಜನತೆಗೆ ಲಭಿಸುದಿಲ್ಲ. ಸಂಶೋಧನ ವ್ಯಾಪ್ತಿ ಬೆಟ್ಟಂಪಾಡಿ ಗ್ರಾಮದಲ್ಲಿ ಈ ವಿಚಾರವಾಗಿ ಸರಕಾರದ ಯೋಜನೆಯ ಅರಿವುವಿನ ಬಗ್ಗೆ ಸಂಗ್ರಹಿಸಲಾದ ಮಾಹಿತಿಯಲ್ಲಿ ಸದ್ರಿ ಗ್ರಾಮದಲ್ಲಿ ಪಂಚಾಯತ್ ಸದಸ್ಯರು ಸ್ಥಳೀಯ ಪತ್ರಿಕೆಯ, ಬಂಧುಗಳ, ಬಂಧುಮಿತ್ರರ ಮತ್ತು ಇತರ ಮೂಲಗಳಿಂದ ವಿವಿಧ ಯೋಜನೆಗಳ ಮಾಹಿತಿ ಲಭ್ಯವಾಗಿರುವುದು ಫಲಾನುಭವಿಗಳ ಸಂದರ್ಶನದಿಂದ ಗುರುತಿಸಲಾಗಿದೆ. ಇದರಲ್ಲಿ 68% ಫಲಾನುಭವಿಗಳು ತಮಗೆ ಮಾಹಿತಿ ದೊರೆತಿರುವುದು ತಮ್ಮ ಗ್ರಾಮ ಪಂಚಾಯತ್ ವಾರ್ಡು ಸದಸ್ಯರಿಂದ ಎಂಬುದಾಗಿ ತಿಳಿಸಿರುತ್ತಾರೆ.14% ರಷ್ಟು ಫಲಾನುಭವಿಗಳು ಪತ್ರಿಕೆಗಳಿಂದ, 10% ಮಂದಿ ಬಂಧು ಮಿತ್ರರಿಂದ, ಮತ್ತು 8% ಫಲಾನುಭವಿಗಳು ಆಕಾಶವಾಣಿ, ದೂರದರ್ಶನ, ಮುಂತಾದ ಮಾದ್ಯಮಗಳ ಮೂಲಕ ಯೋಜನೆಗಳ ಬಗ್ಗೆ ಮಾಹಿತಿ ಲಭ್ಯವಾಗಿರುವುದು ಎಂಬುದಾಗಿ ಸಂಶೋಧನೆ ಅಧ್ಯಯನದಿಂದ ತಿಳಿದುಬರುತ್ತದೆ.ಮೇಲಿನ ಮಾಹಿತಿಯಿಂದ ತಿಳಿದಿದು ಬರುವುದೇನೆಂದರೆ ಹೆಚ್ಚಿನ ಫಲಾನುಭವಿಗಳಿಗೆ ಈ ಯೋಜನೆಯ ಕುರಿತು ಸೂಕ್ತ ಮಾಹಿತಿಯನ್ನು ನೀಡುವಲ್ಲಿ ಗ್ರಾಮ ಪಂಚಾಯತ್ ವಾರ್ಡ ಸದಸ್ಯರು ಯಶಸ್ವಿಯಾಗಿರುತ್ತಾರೆ. ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಸದಸ್ಯರು ಯೋಜನೆಯ ಬಗೆಗಿನ ಮಾಹಿತಿಯನ್ನು ಗ್ರಾಮಸ್ಥರಿಗೆ ನೀಡುತ್ತಿದ್ದು ಯೋಜನೆಯ ಯಶಸ್ವಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ.



ಪೈ ನಕ್ಷೆ: 2.2

ಫಲಾನುಭವಿಗಳು ಪಡೆದ ಯೋಜನೆಯ ಪ್ರಯೋಜನದ ಅನುಭವ




ಈ ಅಧ್ಯಯನ ಮೂಲ ಉದ್ದೇಶಗಳಲ್ಲಿ ಒಂದಾದ ಯೋಜನೆಯ ಗುಣಾತ್ಮಕವಾದ ಮತ್ತು ಪ್ರಮಾಣತ್ಮಕ ವಾದ ಫಲ ಎಷ್ಟರ ಮಟ್ಟಿಗೆ ಎನ್ನುವುದನ್ನು 2013 ರಿಂದ 2018 ವರೆಗಿನ 5 ವರ್ಷ ಕಾಲಾವಧಿಗೆ ಸೀಮಿತವಾಗಿರುವಂತೆ ಸಂಶೋಧನ ಅದ್ಯಯನಕ್ಕೆ ಒಳಪಡಿಸಲಾಯಿತು. ಈ ಅಧ್ಯಯನದ ಪ್ರಕಾರ ಬೆಟ್ಟಂಪಾಡಿ ಗ್ರಾಮದಲ್ಲಿ ಈ ಯೋಜನೆಯ ಗುಣಾತ್ಮಕವಾದ ಪ್ರಯೋಜನವನ್ನು ಅನೇಕ ಆರ್ಥಿಕ ಅಭಿವೃದ್ಧಿಯ ಸೂಚಕಗಳ ಆಧಾರದಲ್ಲಿ ವಿಶ್ಲೇಷಿಸಲಾಯಿತು. ಇದರಂತೆ ಫಲಾನುಭವಿಗಳ ಕುಟಂಬದಲ್ಲಿ ಉಂಟಾಗಿರುವ ಆರ್ಥಿಕ ಅಭಿವೃದ್ಧಿಗಲ್ಲಿ ಗೃಹ ನಿರ್ಮಾಣ, ಕೃಷಿ, ಸೇವಾರಂಗ, ಹಣಕಾಸು ಸೌಲಭ್ಯಗಳು ಗುಡಿಕೈಗಾರಿಕೆಯಲ್ಲಿ ತೊಡಗಿಸುವಿಕೆ, ಸ್ವಂತ ಶೌಚಾಲಯ, ಕುಡಿಯುವ ನೀರು, ವಿದ್ಯುತೀಕರಣ', ರಸ್ತೆ ನಿರ್ಮಾಣ ಮೊದಲಾದ ಅಭಿವೃದ್ಧಿ ಕಾರ್ಯಗಳು ಕಂಡು ಬಂದಿರುತ್ತದೆ. ಈ ಬದಲಾವಣೆಗಳು ಬಹುತೇಕ ಕುಟಂಬಗಳಲ್ಲಿ ಕಾಣಿಸಿರುವುದರಿಂದ ಗುಣಾತ್ಮಕವಾದ ಅಭಿವೃದ್ಧಿ ಕಾರ್ಯಗಳು ನೆಲೆಗೊಂಡಿರುವುದು ಗಾಂಧೀಜಿಯರ ಕಲ್ಪನೆಯಂತೆ. ದೇಶದ ಅಭಿವೃದ್ಧಿಯ ಮೂಲವಾದ ಗ್ರಾಮೀಣ ಅಭಿವೃದ್ಧಿ ಆಗಿರುವುದು ಕಂಡುಬಂದಿರುತ್ತದೆ. ಲಭ್ಯವಾದ ಅಂಕಿ ಅಂಶಗಳ ಪ್ರಕಾರ 74% ಫಲಾನುಭವಿಗಳು ತಮಗೆ ಸರಕಾರದ ಯೋಜನೆಯಿಂದ ಸಂಪೂರ್ಣವಾದ ಪ್ರಯೋಜನ ದೊರಕಿರುವುದು, 18% ಫಲಾನುಭವಿಗಳು ತಮಗೆ ಐದು ವರ್ಷದ ಕಾಲಾವಧಿಯಲ್ಲಿ ಪ್ರಸಕ್ತ ಯೋಜನೆಯಿಂದ ಸ್ವಲ್ಪಮಟ್ಟಿನ ಪ್ರಯೋಜನ ದೊರಕಿರುವುದು ಹಾಗು 8% ಫಲಾನುಭವಿಗಳು ತಮಗೆ ಈ ಯೋಜನೆಯಿಂದ ಯಾವುದೇ ಆರ್ಥಿಕ ಸುಧಾರಣೆ ದೊರಕಿರುವುದಿಲ್ಲ ಎಂಬುದು ಸಂಶೋಧನ ಸಮೀಕ್ಷೆಯಿಂದ ಕಂಡು ಬಂದಿರುತ್ತದೆ. ಅಂಕಿ ಅಂಶಗಳನ್ನು ವಿಶ್ಲೇಷಿಸಿದಾಗ ಹೆಚ್ಚಿನ ಫಲಾನುಭವಿಗಳು ಈ ಯೋಜನೆಯನ್ನು ಪ್ರಯೋಜನವನ್ನು ಸಂಪೂರ್ಣವಾಗಿ ಪಡೆದಿರುವುದು ತಿಳಿದು ಬರುತ್ತದೆ.



ಪೈ ನಕ್ಷೆ: 2.3

ಗ್ರಾಮ ಪಂಚಾಯತ್ ಅಧಿಕಾರಿಗಳ ಮತ್ತು ಸಿಬ್ಬಂದಿ ಬಗ್ಗೆ ಫಲಾನುಭವಿಗಳ ಅಭಿಪ್ರಾಯ




ಸರಕಾರದ ಯೋಜನೆಗಳ ಫಲ ಸಂಪೂರ್ಣವಾಗಿ ಜನ ಸಾಮಾನ್ಯರಿಗೆ ದೊರಕಬೇಕಾದರೆ ಅದರಲ್ಲಿ ಪ್ರಾಮಾಣಿಕತೆ, ಶ್ರಮ, ಇಚ್ಛಾಶಕ್ತಿ ಮತ್ತು ಕಾರ್ಯವೈಖರಿಗಳು ಬಹಳ ಪ್ರಾಮುಖ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಸ್ಥಳೀಯ ಸರಕಾರ ಸಿಬ್ಬಂದಿಗಳ ಸೇವಾ ಮನೋಭಾವದ ಬಗ್ಗೆ ಗ್ರಾಮೀಣ ಆಯ್ದ ಫಲಾನುಭವಿಗಳಲ್ಲಿ ಸಂಗ್ರಹಿಸಿದ ಮಾಹಿತಿಯ ಪ್ರಕಾರ ಬಹುಮತದಲ್ಲಿ ಗ್ರಾಮ ಪಂಚಾಯತಿನ ಸಿಬ್ಬಂದಿಗಳು ಧನಾತ್ಮಕವಾಗಿ ಸ್ಪಂದಿಸಿರುವುದು ಸಂಶೋಧನೆಯಿಂದ ಕಂಡುಬಂದಿರುತ್ತದೆ. ಲಭ್ಯ ಅಂಕಿ ಅಂಶಗಳ ಪ್ರಕಾರ 94% ಫಲಾನುಭವಿಗಳು ಗ್ರಾಮ ಪಂಚಾಯತ್ ಅಧಿಕಾರಿ ಮತ್ತು ಸಿಬ್ಬಂದಿಗಳು ಸರಕಾರದ ಯೋಜನೆಗಳನ್ನು ಬಡ ಮತ್ತು ಆರ್ಹ ಜನರಿಗೆ ತಲಪಿಸಲು ಸೂಕ್ತವಾಗಿ ಸ್ಪಂದಿಸಿರುವುದನ್ನು ವ್ಯಕ್ತಪಡಿಸಿರುತ್ತಾರೆ. 6% ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆಯವಲ್ಲಿ ಗ್ರಾಮ ಪಂಚಾಯತ್ ಸೂಕ್ತವಾಗಿ ಸ್ಪಂದಿಸಿಲಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಮೇಲಿನ ಮಾಹಿತಿಯಿಂದ ತಿಳಿದು ಬರುವುದೇನೆಂದರೆ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗವು ಸರಕಾರದ ಯೋಜನೆಯನ್ನು ಗ್ರಾಮಸ್ಥ ಫಲಾನುಭವಿಗಾಳಿಗೆ ತಲುಪಿಸುವಲ್ಲಿ ಯಶಸ್ವಿಯಾಗಿರುವುದು ಸಂಶೋಧನ ಅಧ್ಯಯನದಿಂದ ಕಂಡು ಬರುತ್ತದೆ.



ಪೈ ನಕ್ಷೆ. 2.4

ಫಲಾನುಭವಿಗಳ ಆರ್ಥಿಕ ಸ್ಥಿತಿಗತಿಯ ವಿವರ




ಉದ್ಯೋಗ ಖಾತರಿ ಯೋಜನೆಯ ಮೂಲ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ನೆಲೆಗೊಂಡಿರುವ ಅಪಾರ ಮಾನವ ಸಂಪತ್ತನ್ನು ಬಿಡುವಿನ ವೇಳೆ ವ್ಯರ್ಥವಾಗದಂತೆ ಪೂರ್ಣ ಪ್ರಮಾಣದಲ್ಲಿ ತೊಡಗಿಸಿ ಉದ್ಯೋಗ ಸೃಷ್ಠಿಯ ಮೂಲಕ ಆದಾಯವನ್ನು ಹೆಚ್ಚಿಸುವುದಾಗಿದೆ. ಕೃಷಿ ಮತ್ತು ಪೂರಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಬಡ ಗ್ರಾಮವಾಸಿಗಳು ವಿವಿಧ ರೀತಿಯ ಸಮಸ್ಯೆಯಿಂದ ತೊಂದರೆಗೆ ಒಳಗಾಗಿರುವುದು ಕಂಡು ಬಂದಿರುತ್ತದೆ. ಕೃಷಿ ಪ್ರದಾನ ವ್ಯಕ್ತಿಯಾಗಿದ್ದರೂ ಅದು ಪೂರ್ಣಕಾಲಿಕ ಉದ್ಯೋಗ ನೀಡದೆ ಇರುವುದರಿಂದ ನಾಟಿಯಿಂದ ಕಟಾವುವಿನವರೆಗಿನ ಕಾಲಾವಧಿಯಲ್ಲಿ ಹೆಚ್ಚುವರಿ ಆದಾಯ ನೀಡಬಲ್ಲ ಉಪ ವೃತ್ತಿಗಳನ್ನು ನೀಡಿದಾಗ ಹೆಚ್ಚುವರಿ ಆದಾಯ ತೃಪ್ತಿಯಾಗುತ್ತದೆ. ಈ ಹಿನ್ನಲೆಯ ಆಧಾರದಲ್ಲಿ ಈ ಯೋಜನೆಯನ್ನು ರೂಪಿಸಲಾಗಿದೆ. ಈ ಪ್ರಕಾರ ಪ್ರತಿ ಫಲಾನುಭವಿಗಳ 2013 ರಿಂದ 2018 ರ ವರೆಗಿನ 5 ವರ್ಷಗಳ ಕಾಲಾವಧಿಯಲ್ಲಿ ಕುಟುಂಬದ ಆದಾಯ ಹೆಚಳವನ್ನು ಸರಾಸರಿ ವೀಕ್ಷಿಸಿದಾಗ 69% ಫಲಾನುಭವಿಗಳ ಕುಟುಂಬದಲ್ಲಿ ಸರಸಾರಿ 50% ವರೆಗೆ ಹೆಚ್ಚಳವಾಗಿರುವುದು ವ್ಯಕ್ತವಾಗಿರುತ್ತದೆ. ಉಳಿದ 31% ಜನರ ಆದಾಯ 50%ಕ್ಕಿಂತ ಹೆಚ್ಚಿನದಾಗಿರುವುದು ಕಂಡುಬರುತ್ತದೆ. ಆದರೆ ಆದಾಯ ಹೆಚ್ಚಳವಾಗದೆ ತಟಸ್ಥರಾಗಿರುವ ಫಲಾನುಭವಿಗಳು ಅಧ್ಯಯನದಲ್ಲಿ ಕಂಡುಬರುದಿಲ್ಲ



ಸ್ತಂಭ ನಕ್ಷೆ: 2.5

ಯೋಜನೆಯ ಪ್ರತಿಶತ ಯಶಸ್ವಿಯಾದ ಅಂಶಗಳು



ಈ ಯೋಜನೆಯ ಯಶಸ್ಸಿಯಲ್ಲಿ ಮೇಲಾಧಿಕಾರಿಗಳ ಮೇಲ್ವಿಚಾರಣೆಯು ಮಹತ್ವದಾಗಿದೆ. ಸಮಗ್ರ ಮತ್ತು ಸೂಕ್ತ ಮೆಲ್ವಿಚಾರಣೆಯಿಂದ ಯೋಜನೆಯಲ್ಲಿ ಆಗಬಹುದಾದ ಕುಂದು ಕೊರತೆಗಳನ್ನು ನಿವಾರಿಸಬಹುದಾಗಿದೆ. ಈ ಹಿನ್ನಲೆಯಲ್ಲಿ ಬೆಟ್ಟಂಪಾಡಿ ಗ್ರಾಮ ಪಂಚಾಯತ್‌ನ ಮಹಾತ್ಮಗಾಂಧೀಜಿಯವರ ಉದ್ಯೋಗ ಖಾತರಿ ಯೋಜನೆಯ ಆಯ್ದ ಫಲಾನುಭವಿಗಳಲ್ಲಿ ದೊರೆತ ಮಾಹಿತಿಯ ಪ್ರಕಾರ ಫಲಾನುಭವಿಗಳನ್ನು ಗುರುತಿಸುವಲ್ಲಿ ಗುರುತಿನ ಚೀಟಿಯನ್ನು 100% ಫಲಾನುಭವಿಗಳಿಗೆ ನೀಡಲಾಗಿದೆ. ಯೋಜನಾಧಿಕಾರಿಗಳು ಪ್ರತಿಯೋಜನೆಯ ಕಾರ್ಯಗತ ಹಂತದಲ್ಲಿ ಮಾಹಿತಿಗಳನ್ನು 100% ಫಲಾನುಭವಿಗಳು ವ್ಯಕ್ತಪಡಿಸಿರುತ್ತಾರೆ. ಯೋಜನೆಯ ಅನುಷ್ಟಾನವನ್ನು ವೀಕ್ಷಿಸಲು ಬರುವ ಅಧಿಕಾರಿಗಳ ಉಪಸ್ಥಿತಿ ಇರುವುದನ್ನು 100% ಫಲಾನುಭವಿಗಳು ಒಪ್ಪಿಕೊಂಡಿರುವುದು ಕಂಡುಬರುತ್ತದೆ. ಮೇಲಿನ ಮಾಹಿತಿಯಿಂದ ತಿಳಿದು ಬರುವುದೇನೆಂದರೆ ಗುರುತಿನ ಚೀಟಿಯಾನ್ನು ಫಲಾನುಭವಿಗಳಿಗೆ ನೀಡುವಲ್ಲಿ ಮಾಹಿತಿಯನ್ನು ಫಲಾನುಭವಿಗಳಿಗೆ ನೀಡುವಲ್ಲಿ ಹಾಗೂ ಅಧಿಕಾರಿಗಳ ಭೇಟಿಗೆ ಸಂಬಂಧಿಸಿದಂತೆ ಈ ಯೋಜನೆಯ ಅನುಷ್ಠಾನದಲ್ಲಿ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಸಂಪೂರ್ಣ ಯಶಸ್ಸನ್ನು ಸಾಧಿಸಿದೆ.

ಕೋಷ್ಟಕ : 2.6

ಉದ್ಯೋಗ ಖಾತರಿ ಯೋಜನೆಯ ಹಣಕಾಸು ಪಾವತಿ ವಿಧಾನ

ಮಾಹಿತಿದಾರ ಸಂಖ್ಯೆ	ಬ್ಯಾಂಕ್‌ಖಾತೆ ಹೊಂದಿದವರ ಸಂಖ್ಯೆ
100	100%

ಮೇಲಿನ ಕೋಷ್ಟಕವು ಉದ್ಯೋಗ ಖಾತರಿ ಯೋಜನೆಯ ಹಣಕಾಸು ಪಾವತಿ ವಿಧಾನದ ಕುರಿತು ತಿಳಿಸುತ್ತದೆ. ಗಾಂಧೀಜಿಯವರ ಕಲ್ಯಾಣ ಅರ್ಥವ್ಯವಸ್ಥೆಯಲ್ಲಿ ತಿಳಿಸಿರುವಂತೆ ಗ್ರಾಮೀಣ ಜನತೆಯ ಯೋಗ ಕ್ಷೇಮ ಸೃಷ್ಠಿ ಕೇವಲ ಉದ್ಯೋಗ ಮತ್ತು ಆದಾಯ ಸೃಷ್ಠಿಯಿಂದ ಮಾತ್ರ ಸಾಧ್ಯವಾಗದು, ಅದರೊಂದಿಗೆ ಯೋಜಿತ ಅನುಭೋಗ ಪದ್ಧತಿ ಮತ್ತು ಯೋಜಿತ ಹಣಕಾಸಿನ ಆಡಳಿತದಿಂದ ಸಾದ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಕೆಲಸಕ್ಕಾಗಿ ಕಾಳು ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ನೇರವಾಗಿ ಹಣದರೂಪದ ಪ್ರತಿ ಫಲವನ್ನು ನೀಡದೆ ದವಸ ದಾನ್ಯಗಳನ್ನು ವಿವಿಧ ಉದ್ಯೋಗ ಖಾತರಿ ಯೋಜನೆಯಲ್ಲಿ ನೀಡಲಾಗುತ್ತಿತ್ತು. ಅದರ ನಂತರ ಇತ್ತೀಚಿಗೆ ಯೋಜನೆಯ ಫಲಾನುಭವಿಗಳಿಗೆ ಪ್ರತಿಫಲವನ್ನು ವಿತರಣೆ ಮಾಡುವ ಹಂತದಲ್ಲಿ ನೇರವಾಗಿ ವ್ಯಕ್ತಿಗೆ ನೀಡದೆ ಬ್ಯಾಂಕ್ ಖಾತೆಯ ಮೂಲಕ ನೀಡುವ ಪರಿಪಾಠ ಗ್ರಾಮೀ ಅಭಿವೃದ್ಧಿ ಒಂದು ಮಹತ್ವರ ಮೈಲಿಗಲ್ಲು. ಇದರ ಬಗ್ಗೆ ಫಲಾನುಭವಿಗಳಲ್ಲಿ ಮಾಹಿತಿ ಸಂಗ್ರಹಿಸಿದಾಗ ಹಣದ ವ್ಯವಹಾರವು ಬ್ಯಾಂಕ್ ಆಧಾರಿತ ಎಂದು ಸಂಶೋಧನ ಅಧ್ಯಯನದಿಂದ ಕಂಡು ಬಂದಿರುತ್ತದೆ. ಗ್ರಾಮೀಣ ಅಭಿವೃದ್ಧಿಗೆ ಪೂರಕವಾಗುವಂತೆ ಹಣದ ವ್ಯವಹಾರವು ಬ್ಯಾಂಕ್ ಆಧಾರಿತವಾಗಿರುವುದು, ಹಾಗೂ ಇದು ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಯಶಸ್ವಿಯಾಗಿರುವುದು ಕಂಡು ಬರುತ್ತದೆ.

ಪೈ ನಕ್ಷೆ: 2.7

ಯೋಜನೆಯ ಅಗತ್ಯ ದಾಖಲೆಗಳು




ಯೋಜನೆಯ ಫಲಾನುಭವಿಗಳ ಆಯ್ಕೆಗೆ ಇರಬೇಕಾದ ಅಗತ್ಯ ದಾಖಲೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ ದಾಖಲೆಗಳ ಅಗತ್ಯವನ್ನು 100% ಫಲಾನುಭವಿಗಳು ವ್ಯಕ್ತಪಡಿಸಿದ್ದರು ಆದರೆ ದಾಖಲೆ ನೀಡುವಲ್ಲಿ ತೊಂದರೆಗಳ ಬಗ್ಗೆ ಕೇಳಲಾದ ಮಾಹಿತಿಯಲ್ಲಿ 42% ಆಯ್ದ ಫಲಾನುಭವಿಗಳು ತೊಂದರೆ ವ್ಯಕ್ತಪಡಿಸಿರುತ್ತಾರೆ. ಆದರೆ ಉಳಿದ 58% ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ಸಲ್ಲಿಸುವಲ್ಲಿ ಅನಾನುಕೂಲವಾಗದೆ ಇರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ. ಆರ್ಥಿಕ ವಿಚಾರಲ್ಲಿ ಸಾಲ ರೂಪದಲ್ಲಿ ಅಥವಾ ಅನುದಾನ ರೂಪದಲ್ಲಿ ಸರಕಾರದ ಹಲವು ಯೋಜನೆಗಳು ಆಯ್ದ ಮತ್ತು ಅರ್ಹ ವ್ಯಕ್ತಿಗಳಿಗೆ ಸಿಗಬೇಕು ಎನ್ನುವ ಉತ್ತಮ ಉದ್ದೇಶದಿಂದ ಫಲಾನುಭವಿಗಳಲ್ಲಿ ಹಲವಾರು ದಾಖಲೆಗಳನ್ನು ಮತ್ತು ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಆದರೆ ಗ್ರಾಮೀಣ ಜನತೆಗೆ ಮೇಲ್ನೋಟಕ್ಕೆ ತೊಂದರೆಯಾಗಿರುವುದು ಈ ಸಂಶೋಧನೆಯಿಂದ ಕಂಡುಬರುತ್ತದೆ. ಮೇಲಿನ ಮಾಹಿತಿಯಿಂದ ತಿಳಿದು ಬರುವುದೇನೆಂದರೆ ಹೆಚ್ಚಿನ ಫಲಾನುಭವಿಗಳಿಗೆ ಅಗತ್ಯ ದಾಖಲೆಗಳನ್ನು ನೀಡುವಲ್ಲಿ ತೋಂದರೆಯಾಗಿರುವುದು ಕಂಡು ಬರುತ್ತದೆ.



ಪೈ ನಕ್ಷೆ: 2.8

ಉದ್ಯೋಗ ಖಾತರಿ ಯೋಜನೆಯ ಹಣಕಾಸಯೇತರ ಸವಲತ್ತುಗಳು




ಉದ್ಯೋಗ ಖಾತರಿ ಯೋಜನೆಯಡಿ ಹಣಕಾಸುಯೇತರ ಸಹಾಯದ ಬಗ್ಗೆ ಮಾಡಲಾದ ಸಮಗ್ರ ಅಧ್ಯಯನದಲ್ಲಿ ಕಂಡು ಬಂದ ಅಂಶಗಳ ಪ್ರಕಾರ ಸರಕಾರ ಆರ್ಥಿಕ ಸವಲತ್ತುಗಳೊಂದಿಗೆ ಕೇಲವು ಯೋಜನೆಗಳಲ್ಲಿ ಹಣಕಾಸೇತರ ವಸ್ತುರೂಪಿ ಸವಲತ್ತುಗಳನ್ನು ನೀಡಿರುವುದು ವ್ಯಕ್ತವಾಗುತ್ತದೆ. ಈ ಪ್ರಕಾರ ಕೇಳಲಾದ ಮಾಹಿತಿಯಲ್ಲಿ ಆಯ್ದ ಫಲಾನುಭವಿಗಳ 32%ರಷ್ಟು ಜನ ಹಣಕಾಸೇತರ ಸಲಕರಣೆಗಳನ್ನು ಪಡೆದಿರುವ ಬಗ್ಗೆ ಅಧ್ಯಯನದಲ್ಲಿ ಕಂಡು ಬರುತ್ತದೆ.ಆದರೆ ಉಳಿದ 68% ಫಲಾನುಭವಿಗಳು ಯಾವುದೇ ಸಲಕರಣೆಯನ್ನು ಗ್ರಾಮ ಪಂಚಾಯತ್‌ನಿಂದ ಪಡೆಯದೆ ಇರುವುದು ಸಂಶೋಧನ ಅಧ್ಯಯನದಿಂದ ಕಂಡುಬರುತ್ತದೆ. ಮೇಲಿನ ಪೈ ನಕ್ಷೆಯ ಫಲಾನುಭವಿಗಳು ಉದ್ಯೋಗ ಖಾತರಿ ಯೋಜನೆಗೆ ಸಂಬುಧಿಸಿದಂತೆ ಗ್ರಾಮ ಪಂಚಾಯತ್ ನಿಂದ ಯಾವುದೆ ಸಲಕರಣೆಗಳನ್ನು ಪಡೆಯದೆ ಇರುವುದನ್ನು ತಿಳಿಸುತ್ತದೆ.



ಸ್ತಂಭ ನಕ್ಷೆ: 2.9

ಸಲಹೆ ಸೂಚನೆ ನೀಡಿದವರ ವಿವರ



ಉದ್ಯೋಗ ಖಾತರಿ ಯೋಜನೆಯ ಆಯ್ದ ಫಲಾನುಭವಿಗಳಲ್ಲಿ ಪ್ರಸುತ್ತ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಮತ್ತು ತೊಡಕುಗಳ ನಿವಾರಣೆಯಲ್ಲಿ ಕೇಳಲಾದ ಸಲಹೆ ಸೂಚನೆಗಳಿಗೆ ಪ್ರತಿಕ್ರಿಯೆ ವ್ಯಕ್ತ ಪಡಿಸಿರುವ ಫಲಾನುಭವಿಗಳು 81% ಮತ್ತು ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸದೆ ಇರುವವರು 19% ಇರುವುದು ಈ ಸಂಶೋಧನೆಯಿಂದ ತಿಳಿದು ಬಂದಿರುತ್ತದೆ.

ಮೇಲಿನ ಮಾಹಿತಿಯಿಂದ ತಿಳಿಯುವುದೇನೆಂದರೆ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಬಗ್ಗೆ ಫಲಾನುಭವಿಗಳು ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತಾರೆ. ಆದರೆ ಅಧ್ಯಯನ ಪ್ರದೇಶ ಕಾರ್ಯಕ್ರಮದ ಯಶಸ್ವಿಗೆ ಸಲಹೆ ನೀಡಲು ಅಶಕ್ತರಾದ ಫಲಾನುಭವಿಗಳು ಇರುವುದರಿಂದ ಅಂತಹ ವ್ಯಕ್ತಿಗಳಿಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಪೂರ್ಣ ಪ್ರಮಾಣದ ಸವಲತ್ತುಗಳನ್ನು ಪಡೆದುಕೊಳ್ಳಲು ಕಷ್ಟಕರವಾಗಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ.



ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಚುನಾಯಿತ ಪ್ರತಿನಿದಿಗಳ ಉದ್ಯೋಗ ಖಾತರಿ ಯೋಜನೆ ಸಂಬಂಧಿಸಿದ ಮಾಹಿತಿ.

ಕೋಷ್ಟಕ: 3.1

ಅರಿವು ಪಡೆದ ಚುನಾಯಿತ ಪಂಚಾಯತ್ ಜನಪ್ರತಿನಿಧಿಗಳು

ಒಟ್ಟು ಗ್ರಾಮ ಪಂಚಾಯತ್ ಜನ ಪ್ರತಿನಿಧಿಗಳ ಸಂಖ್ಯೆ	ಯೋಜನೆಯ ಮಾಹಿತಿ ಇರುವ ಜನ ಪ್ರತಿ ನಿಧಿಗಳ ಸಂಖ್ಯೆ	ಶೇಕಡವಾರು
18	18	100%

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರು ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದ ವಿಷಯಗಳಲ್ಲಿ ರೂಪಿಸಲಾದ ಪ್ರಶ್ನಾವಳಿಯಲ್ಲಿ ಉದ್ಯೋಗಖಾತರಿ ಯೋಜನೆಯ ಕುರಿತು ಅರಿವು ಇರುವ ಬಗ್ಗೆ ತಿಳಿಸು್ತದೆ.ಅಂಕಿ ಅಂಶದ ಪ್ರಕಾರ ಒಟ್ಟು 18 ಸದಸ್ಯರಲ್ಲಿ ಎಲ್ಲಾ ಸದಸ್ಯರು ಈ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಗ್ರಾಮದ ಸದಸ್ಯರಿಗೆ ಅವುಗಳ ಸಂಪೂರ್ಣ ಮಾಹಿತಿ ತಿಳಿದಿರ ಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಬೆಟ್ಟಂಪಾಡಿ ಗ್ರಾಮ ಪಂಚಾಯತಿನ ಎಲ್ಲಾ ಚುನಾಯಿತ ಸದಸ್ಯರು ಯೋಜನೆಯ ಬಗ್ಗೆ ಮಾಹಿತಿಯನ್ನು ಸಂಪೂರ್ಣವಾಗಿ ಪಡೆದು ಕಾರ್ಯಕ್ರಮ ಯಶಸ್ವಿಗೆ ಕಾರಣೀಕರ್ತರಾಗಿರುತ್ತಾರೆ

ಕೋಷ್ಟಕ: 3.2

ಪಂಚಾಯತ್ ಸದಸ್ಯರಿಗೆ ನೀಡಲಾದ ತರಬೇತಿಯ ವಿವರ

ಗ್ರಾಮ ಪಂಚಾಯತ್ ಜನ ಪ್ರತಿನಿಧಿಗಳ ಸಂಖ್ಯೆ	ಯೋಜನೆಯ ಬಗ್ಗೆ ತರಬೇತಿ ಹೊಂದಿದ ಜನ ಪ್ರತಿನಿಧಿಗಳ ಸಂಖ್ಯೆ	ಶೇಕಡವಾರು
18	18	100%

ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರಿಗೆ ವಿವಿಧ ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹಾಗೂ ಪಂಚಾಯತ್ ಮಟ್ಟದಲ್ಲಿ ದೊರಕುವ ವಿವಿಧ ಯೋಜನೆಯ ಸಂಪೂರ್ಣ ವಿವರಗಳನ್ನು ಮೇಲಾಧಿಕಾರಿಗಳು ತರಬೇತಿ ನೀಡುವುದರ ಮೂಲಕ ಸದಸ್ಯರಿಗೆ ನೀಡಲಾಗುತ್ತದೆ. ಆದರಂತ ಬೆಟ್ಟಂಪಾಡಿ ಗ್ರಾಮ ಪಂಚಾಯತಿನ ಒಟ್ಟು 18 ಸದಸ್ಯರಲ್ಲಿ ಎಲ್ಲಾ ಸದಸ್ಯರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ನೀಡುವ ವ್ಯವಸ್ಥೆ ನೀಡಿದ್ದು ಅದರ ಪ್ರಯೋಜನವನ್ನು ಸಂಪೂರ್ಣ ಅಂದರೆ 100% ಸದಸ್ಯರು ಈ ಮಾಹಿತಿಯ ಪ್ರಯೋಜನ ಪಡೆದಿರುವುದು ಈ ಅಧ್ಯಯನದಿಂದ ಕಂಡುಬಂದಿರುತ್ತದೆ. ಮೇಲಿನ ಕೋಷ್ಟಕವು ಗ್ರಾಮ ಪಂಚಾಯತ್ ಸದಸ್ಯರಿಗೆ ನೀಡಲಾದ ವಿವಿಧ ಯೋಜನೆಗಳ ಬಗೆಗಿನ ತರಬೇತಿ ನೀಡುವಲ್ಲಿ ಗ್ರಾಮ ಪಂಚಾಯತ್ ಯಶಸ್ವಿಯಾಗಿರುವುದನ್ನು ಸೂಚಿಸುತ್ತದೆ.

ಕೋಷ್ಟಕ: 3.3


ಉದ್ಯೋಗ ಖಾತರಿ ಯೋಜನೆಯಿಂದ ಫಲಾನುಭವಿಗಳಿಗೆ ಒಳಿತುಗಾಗುವ ವಿಶ್ವಾಸದ ವಿವರ

ಜನ ಪ್ರತಿನಿಧಿಗಳ ಸಂಖ್ಯೆ	ಸಫಲತೆಯ ಬಗ್ಗೆ ವಿಶ್ವಾಸ ಹೊಂದಿರುವ ಸಂಖ್ಯೆ	ಶೇಕಡಾವಾರು
18	18	100

ಈ ಅಧ್ಯಯನದಲ್ಲಿ ರೂಪಿಸಲಾದ ಪ್ರಶ್ನಾವಳಿಯಲ್ಲಿ ಚುನಾಯಿತ ಸದಸ್ಯರಿಗೆ ಯೋಜನೆಯ ಫಲದ ಬಗ್ಗೆ ಇರುವ ವಿಶ್ವಾಸದ ಮಾಹಿತಿ ಪಡೆದಾಗ ಎಲ್ಲಾ ಸದಸ್ಯರು ಇದ್ದರಿಂದಾಗಿ ಕಾರ್ಮಿಕ ಸಮುದಾಯದ ಆರ್ಥಿಕ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಅಭಿವೃದ್ಧಿ ಸಾಧಿಸಲಾದ ಈ ಯೋಜನೆ ಪ್ರಯೋಜನ ಎಂಬ ಮಾಹಿತಿ ಈ ಅಧ್ಯಯನದಿಂದ ತಿಳಿದು ಬಂದಿರುತ್ತದೆ. ಒಟ್ಟು 14 ಸದಸ್ಯರಲ್ಲಿ ಎಲ್ಲಾ ಸದಸ್ಯರ ಯೋಜನೆಯ ಮಹತ್ವದ ಬಗ್ಗೆ ಅತಿಯಾದ ಆತ್ಮವಿಶ್ವಾಸವನ್ನು ಪ್ರಕಟಿಸಿರುವುದು ಈ ಸಂಶೋಧನೆಯಿಂದ ಕಂಡು ಬಂದಿರುತ್ತದೆ

ಸ್ತಂಭ ನಕ್ಷೆ: 3.4

ಯೋಜನೆಯನ್ನು ಪರಿಣಾಮಕಾರಿಗೊಳಸುವ ಬಗೆಗಿನ ಮಾಹಿತಿ




ಈ ಅಧ್ಯಯನದಲ್ಲಿ ಪ್ರಸಕ್ತ ಯೋಜನೆಯನ್ನು ಇನ್ನಷ್ಟು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಇರುವ ಮಾರ್ಗೋಪಾಯಗಳನ್ನು ಸದಸ್ಯರಲ್ಲಿ ಪ್ರಶ್ನಾವಳಿಯ ಮೂಲಕ ವಿಚಾರಿಸಲು 48% ರಷ್ಟು(8) ಸದಸ್ಯರು ಈ ಯೋಜನೆ ಬಹಳಷ್ಟು ಸುಧಾರಣೆಯಿಂದ ಹೆಚ್ಚಿನ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿರುವುದು ಅಧ್ಯಯನದಿಂದ ಕಂಡುಬರುತ್ತದೆ. 41%(7) ರಷ್ಟು ಸದಸ್ಯರು ಪ್ರಸಕ್ತ ಯೋಜನೆಗಳನ್ನು ಸ್ವಲ್ಪ ಮಟ್ಟಿಗೆ ಪರಿಣಾಕಾರಿಯಾಗಿ ರೂಪಿಸಲು ಸಾಧ್ಯವೆ ಹೊರತು ಸಂಪೂರ್ಣ ದೋಷ ರಹಿತಗೊಳಿಸಲು ಕಷ್ಟ ಸಾಧ್ಯ ಎಂಬ ನಿರ್ಧಾರಕ್ಕೆ ಬಂದಿರುವುದು ಸಂಶೋಧನೆಯಿಂದ ತಿಳಿದುಬಂದ ಮಾಹಿತಿಯಾಗಿದೆ. ಆದರೆ ಉಳಿದ11%(3) ಸದಸ್ಯರು ಉದ್ಯೋಗ ಖಾತ್ರಿ ಯೋಜನೆಯ ಸಂಪೂರ್ಣ ಯಶಸ್ವಿನ ಬಗ್ಗೆ ಸಂದೇಹ ವ್ಯಕ್ತಪಡಿಸಿರುವುದು ಅಧ್ಯಯನದಿಂದ ಕಂಡುಬಂದಿದೆ.

ಸ್ತಂಭ ನಕ್ಷೆ 3.5


ಸಂಪನ್ಮೂಲ ಸದ್ಬಳಕೆಯ ಬಗ್ಗೆ ಅಭಿಪ್ರಾಯ

ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆಯಿಂದ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ ಆಗುತ್ತದೆ ಎಂಬ ಅಭಿಪ್ರಾಯ ಸರ್ವಸಾಮನ್ಯ ಈ ವಿಚಾರವಾಗಿ ಚುನಾಯಿತ ಸದಸ್ಯರಾಭಿಪ್ರಾಯವನ್ನು ಸಂಶೋಧನೆಯಲ್ಲಿ ಬಳಸಲಾಗಿದ್ದು ದೊರೆತ ಅಂಕಿ ಅಂಶಗಳ ಆಧಾರದ ಪ್ರಕಾರ 61% (11) ರಷ್ಟು ಜನ ಪ್ರತಿನಿಧಿಗಳು ಧನಾತ್ಮಕವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. 39%(7) ರಷ್ಟು ಸದಸ್ಯರು ಸಂಪನ್ಮೂಲಗಳನ್ನು ಸ್ವಲ್ಪ ಮಟ್ಟಿಗೆ ಸದ್ಬಳಕೆ ಮಾಡಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದು ಸಂಶೋಧನೆ ಅಧ್ಯಯನದಿಂದ ತಿಳಿದುಬರುತ್ತದೆ.



ಸ್ತಂಭ ನಕ್ಷೆ 3.6

ಬಡತನ ನಿರ್ವಾಹಣೆಯಲ್ಲಿ ಉದ್ಯೋಗ ಖಾತರಿ ಯೋಜನೆಯ ಪಾತ್ರ



ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯಲ್ಲಿ ಗುಡಿಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆ ಕೃಷಿ ಕುಟುಂಬಕ್ಕೆ ಪೂರಕ ಆದಾಯ ನೀಡಬಲ್ಲ ಮೂಲಗಳಾಗಿ ಕಂಡುಬಂದಿರುವುದರಿಂದ ಸ್ವಾತ್ರತ್ರೋತ್ತರ ಸರಕಾರದ ಅಭಿವೃದ್ಧಿ ಕಾರ್ಯಗಳಲ್ಲಿ ಉದ್ಯೋಗ ಖಾತರಿ ಯೋಜನೆಗಳ ಅನುಷ್ಠಾನ ಹಲವು ವಿಧಗಳಲ್ಲಿ ಕಾಣಿಸಿಕೊಂಡಿರುತ್ತದೆ. ಪ್ರಸಕ್ತ ಅರ್ಥವ್ಯವಸ್ಥೆಯಲ್ಲಿ ಇತ್ತೀಚಿನ ಅಭಿವೃದ್ಧಿ ಕಾರ್ಯ ನಿರುದ್ಯೋಗಿ ಗ್ರಾಮೀಣ ಮಹಿಳೆಯರು ಮತ್ತು ಪುರುಷರಿಗೆ ವಾರ್ಷಿಕ 100 ದಿನಗಳ ಉದ್ಯೋಗವನ್ನು ಖಾತರಿಗೊಳಿಸುವ ಕಾರಣಗಳಿಂದಾಗಿ ಗ್ರಾಮೀಣ ಜನರ ಆದಾಯ ಸುಧಾರಣೆಯಾಗಿರುವುದರಿಂದ ಬಡತನ ನಿವಾರಣೆಯಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಪ್ರಧಾನ ಯೋಜನೆ ಎಂದು ಪರಿಗಾಣಿಸಲು ಸಾಧ್ಯ ಎಂಬದು ಪ್ರಶ್ನಾವಳಿಯಲ್ಲಿ 67% ಸದಸ್ಯರು (12) ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ಉಳಿದ 33%(6) ಸದಸ್ಯರು ಈ ವಿಚಾರವಾಗಿ ಬಡತನ ನಿವಾರಣೆಯಲ್ಲಿ ಸ್ವಲ್ಪಮಟ್ಟಿನ ಸುಧಾರಣೆಯನ್ನು ತಿಳಿಸಿರುವುದು ಸಂಶೋಧನ ಅಧ್ಯಯನದಿಂದ ತಿಳಿದು ಬರುತ್ತದೆ.

ಕೋಷ್ಟಕ : 3.7

ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಜನ ಜಾಗೃತಿಯ ವಿವರ


ಒಟ್ಟು ಜನ ಪ್ರತಿನಿಧಿಗಳ ಸಂಖ್ಯೆ	ಜನ ಜಾಗೃತಿಯ ಪ್ರಮಾಣ
18	100%

ಈ ಅಧ್ಯಯನದಲ್ಲಿ ಉದ್ಯೋಗ ಖಾತೆಯ ಯೋಜನೆಯ ವಿಷಯವಾಗಿ ಅರಿವು ಹಾಗೂ ಜಾಗೃತಿ ಮೂಡಿಸಲಾಗಿದೆ ಎಂದು ತಿಳಿಯಲು ಆಯ್ದ ಫಲಾನುಭವಿಗಳನ್ನು ಮತ್ತು ಎಲ್ಲಾ ಬೆಟ್ಟಂಪಾಡಿ ಗ್ರಾಮ ಪಂಚಾಯತ್‌ನ ಎಲ್ಲಾ ಜನ ಪ್ರತಿನಿಧಿಗಳನ್ನು ಸಂದರ್ಶನಕ್ಕೆ ಒಳಪಡಿಸಲು ಆಗಿದ್ದು ಅದರಲ್ಲಿ ಹೆಚ್ಚಿನ ಫಲಾನುಭವಿಗಳಿಗೆ ಈ ಯೋಜನೆಯ ಜಾಗೃತಿ ಉಂಟಾಗಿರುವುದು ಕಂಡುಬಂದಿರುತ್ತದೆ. ಈ ಯೋಜನೆಯ ಜಾಗೃತಿ ರೂಪಿಸುವಲ್ಲಿ ಜನಪ್ರತಿ ನಿಧಿಗಳ ಪಾತ್ರ ಮಹತ್ತರವಾಗಿರುವುದು ಎನ್ನುವುದು ಅಧ್ಯಯನದಿಂದ ವ್ಯಕ್ತವಾಗಿರುತ್ತದೆ. ಲಭ್ಯ ಅಂಕಿ ಅಂಶಗಳ ಪ್ರಕಾರ 100%(18) ರಷ್ಟು ಜನ ಪ್ರತಿನಿಧಿಗಳು ಈ ಯೋಜನೆಯ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವು ಮೂಡಿಸಿರುವುದರ ಬಗ್ಗೆ ಈ ಅಧ್ಯಯನ ಬೆಳಕು ಚೆಲ್ಲುತ್ತದೆ.



ಕೋಷ್ಟಕ: 3.8

ಉದ್ಯೋಗ ಖಾತರಿ ಯೋಜನೆಯ ವೈಪಲ್ಯಕ್ಕೆ ಕಾರಣಗಳು




ಉದ್ಯೋಗ ಖಾತರಿ ಯೋಜನೆಯು ಅನೇಕ ವರ್ಷಗಳ ಹಿಂದಿನ ಯೋಜನೆಗಳಾಗಿದ್ದು ಅವುಗಳ ಅನೇಕ ಯೋಜನೆಗಳು ಸಫಲತೆಯನ್ನು ಕಾಣಲು ಶಕ್ತವಾಗಿಲ್ಲ. ಈ ವಿಚಾರವಾಗಿ ಹಿಂದಿನ ಯೋಜನೆಯ ವೈಫಲ್ಯಕ್ಕೆ ಕಾರಣಗಳನ್ನು ಚುನಾಯಿತ ಸದಸ್ಯರ ಅಭಿಪ್ರಾಯದಲ್ಲಿ ಕ್ರೋಢೀಕರಿಸಿದಾಗ 15% (3) ರಷ್ಟು ಸದಸ್ಯರು ವೈಫಲ್ಯಕ್ಕೆ ಕಾರಣ ಅಧಿಕಾರಿ ವರ್ಗಗಳ ಮೇಲ್ವಿಚಾರಣೆಯ ವೈಫಲ್ಯ ಎಂಬುದಾಗಿ ಅಧ್ಯಯನದಿಂದ ತಿಳಿದು ಬಂದಿರುತ್ತದೆ. ಇದರಂತೆ ಉಳಿದ 25% (5) ವೈಪಲ್ಯಕ್ಕೆ ಕಾರಣ ಕಾರ್ಮಿಕ ವರ್ಗದ ಅರಿವಿನ್ ಕೊರತೆ ಮತ್ತು ಅಜ್ಞಾನ್ ಎಂದೂ 11%(2) ರಷ್ಟು ಸದಸ್ಯರು ರಾಜಕೀಯ ಕಾರಣಗಳ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಸದಸ್ಯರಲ್ಲಿ ಬಹುಸಂಖ್ಯೆಯ 49% (8) ಸದಸ್ಯರು ಮೇಲೆ ಸೂಚಿಸಲಾದ ಎಲ್ಲಾ ಅಂಶಗಳು ಉದ್ಯೋಗ ಖಾತರಿ ಯೋಜನೆಯ ವೈಫಲ್ಯ ಮತ್ತು ಅದು ಈ ಯೋಜನೆಯ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುತ್ತಿರುವುದನ್ನು ವ್ಯಕ್ತ ಪಡಿಸಿದರುವುದು ಈ ಅಧ್ಯಯನದಿಂದ ದೃಢಪಟ್ಟಿದೆ.



ಕೋಷ್ಟಕ 3.9

ಚುನಾಯಿತ ಸದ್ಯಸರ ಮಾಹಿತಿಯ ವಿವರ



ಮೇಲಿನ ಸ್ತಂಭ ನಕ್ಷೆಯು ಬೆಟ್ಟಂಪಾಡಿ ಗ್ರಾಮ ಪಂಚಾಯಿತಿನ ಸರ್ವತೋಮುಖ ಅಭಿವೃಧಿಯ ಕುರಿತು ಮಾಹಿತಿಯನ್ನು ನೀಡುತ್ತದೆ. ಗ್ರಾಮ ಮಟ್ಟದಲ್ಲಿ ಸಾರ್ವಜನಿಕ ಕಾಮಗಾರಿಗಳು ನಡೆದು ಗ್ರಾಮದ ಸರ್ವತ್ತೋಮುಖ ಅಭಿವೃದ್ದಿ ಅಗಿದೆಯೆ ಎಂಬ ವಿಷಯದ ಕುರಿತಾಗಿ ಮಾಹಿತಿ ಸಂಗ್ರಹಿಸಿದಾಗ (14)% ಜನಪ್ರತಿನಿಧಿಗಳು ಗ್ರಾಮದಲ್ಲಿ ಉದ್ಯೋಗ ಖಾತರಿ ಅನುಪಾತ ತರುವಾಯು ಸಾರ್ವಜನಿಕ ಕೆಲಸ ಕಾರ್ಯಗಳು ನಡೆದು ಒಟ್ಟಾರೆ ಗ್ರಾಮದ ಅಭಿವೃದ್ದಿ ಆಗಿದೆ ಹಾಗು 23%(4) ಜನಪ್ರತಿನಿಧಿಗಳು ಸ್ವಲ್ಪಮಟ್ಟಿಗೆ ಗ್ರಾಮಗಳ ಅಭಿವೃದ್ದಿ ಅಗಿದೆ ಎಂದು ಸಮಗ್ರ ಸಂಶೋಧನೆ ಅಧ್ಯಯನದಿಂದ ಕಂಡುಬರುತ್ತದೆ.

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಾರ್ವಜನಿಕ ಕಾಮಗಾರಿಗಳು ಉತ್ತಮವಾಗಿದ್ದು ಗ್ರಾಮದ ಅಭಿವೃಧಿಯಾಗಿದೆ ಎನ್ನುವುದರ ಬಗ್ಗೆ ತಿಳಿದು ಬರುತ್ತದೆ.



ಬೆಟ್ಟಂಪಾಡಿ ಗ್ರಾಮ ಪಂಚಾಯಿತಿನ ಉದ್ಯೋಗಖಾತ್ರಿ ಯೋಜನೆಯಡಿ ಪಂಚಾಯತಿ ಅಭಿವೃದ್ಧಿ(ಪಿ.ಡಿ.ಓ) ಜೊತೆ ನಡೆಸಿದ ಸಂದರ್ಶನದ ವಿವರ

ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರನ್ನು ಸಂದರ್ಶಿಸಿ ಮಾಹಿತಿಗಳನ್ನು ಸಂಗ್ರಹಿಸಿ ವಿಮರ್ಶೆಗೊಳಪಡಿಸಿ, ಅಧ್ಯಯನ ನಡೆಸಿ ವಿಶ್ಲೇಷಿಸಿದಾಗ "ಗ್ರಾಮದಲ್ಲಿ ವಿಶೇಷ ಸಭೆ ನಡೆಸಿ ಕ್ರಿಯಾಯೋಜನೆಗಳನ್ನು ತಯಾರಿಸಿ ಕಾರ್ಯ ನಿರ್ವಾಹಕ ಅಧಿಕಾರಿಯವರ ಮುಖಾಂತರ ಅನುಮೋದನೆ ಪಡೆದ ಗ್ರಾಮದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆಯ ಕೆಲಸಗಳನ್ನು ಕೈಗೊಳ್ಳಲಾಗುತ್ತದೆ.

ಉದ್ಯೋಗಖಾತ್ರಿ ಯೋಜನೆಯಲ್ಲಿ ಪರಿಶಿಷ್ಟ ಜಾತಿ, ಪಂಗಡ, ಸಣ್ಣ ಹಾಗೂ ಅತಿ ಸಣ್ಣ ರೈತರು, ಬಿ.ಪಿ.ಎಲ್ ಕಾರ್ಡುದಾರರು ಗ್ರಾಮದಲ್ಲಿ ಫಲಾನುಭವಿಗಳಾಗಿದ್ದು ಪ್ರಸ್ತುತ 2018-19 ರಲ್ಲಿ ದಿನಕ್ಕೆ 249 ರೂಪಾಯಿಗಳಂತೆ ಪ್ರತಿ 15 ದಿವಸಗಳಿಗೊಮ್ಮೆ ಫಲಾನುಭವಿಗಳ ಖಾತೆಗೆ ನೇರವಾಗಿ ಕೂಲಿಯನ್ನು ಜಮೆ ಮಾಡಲಾಗುತ್ತದೆ ಎಂಬುದು ತಿಳಿದುಬಂದಿತು. ಗ್ರಾಮದಲ್ಲಿ ಫಲಾನುಭವಿಗಳಿಗೆ ಜನಪ್ರತಿನಿಧಿಗಳು ಮಾಹಿತಿ ನೀಡಿದರೆ, ಅವರು ನಿರ್ವಹಿಸಿದ ಕಾಮಗಾರಿಯನ್ನು ತಾಂತ್ರಿಕ ಸಹಾಯಕರು ವೀಕ್ಷಿಸಿ ಮುಕ್ತಾಯದ ವರದಿಯನ್ನು ನೀಡುತ್ತಾರೆ. ಬೆಟ್ಟಂಪಾಡಿ ಗ್ರಾಮದಲ್ಲಿ ಕೆಲವೊಂದು ಕಾಮಗಾರಿಗಳನ್ನು ಇತರ ಅನುದಾನಗಳ ಒಗ್ಗೂಡಿಸುವಿಕೆಯೊಂದಿಗೆ ನಿರ್ವಹಿಸಲಾಗುತ್ತದೆ. ಬೆಟ್ಟಂಪಾಡಿ ಗ್ರಾಮದ ಎಲ್ಲಾ ಉದ್ಯೋಗಖಾತ್ರಿ ಯೋಜನೆಯ ದಾಖಲೆಗಳನ್ನು ನಮೂನೆಗಳ ವಹಿಯಲ್ಲಿ ಹಾಗೂ ಕಡತಗಳ ಮೂಲಕವೇ ನಿರ್ವಹಿಸಿ ನರೇಗಾ- ಸಾಫ್ಟ್ ತಂತ್ರಾಂಶವನ್ನು ಬಳಸಿ ನಿರ್ವಹಿಸುತ್ತಿರುವುದು ಅಧ್ಯಯನದಲ್ಲಿ ತಿಳಿದುಬಂದಿತು.

ಒಟ್ಟಾರೆಯಾಗಿ ಗ್ರಾಮದಲ್ಲಿ ಜಲಸಂರಕ್ಷಣೆಗೆ ಆದ್ಯತೆ ನೀಡಿರುವುದು, ಕೊಳವೆ ಬಾವಿಗಳಿಗೆ ಮರುಪೂರಣ, ಕಿಂಡಿ ಅಣೆಕಟ್ಟುಗಳ ರಚನೆ ಮಾಡುವುದು, ತೆರೆದ ಬಾವಿ, ಕೃಷಿ ಹೊಂಡಗಳ ರಚನೆ, ಕೋಳಿ, ಆಡು ಮುಂತಾದ ಸಾಕು ಪ್ರಾಣಿಗಳಿಗೆ ಶೆಡ್ದು ರಚನೆ ಮಾಡಿರುವುದು ಅಧ್ಯನದಲ್ಲಿ ಕಂಡುಬಂದಿದ್ದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ಬೆಟ್ಟಂಪಾಡಿ ಗ್ರಾಮದಲ್ಲಿ ಜನರಿಗೆ ಜೀವನಕ್ಕೆ ಬಹಳ ಉಪಯುಕ್ತವಾದುದು ಎಂಬುದಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ನೀಡಿದ ಮಾಹಿತಿಯನ್ನು ವಿಶ್ಲೇಷಿಸಿದಾಗ ಕಂಡುಬಂದಿತು.

ಅಧ್ಯಾಯ-4

ಸಂಶೋಧನ ಫಲಿತಗಳು

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಮಹಾತ್ಮ ಗಾಂಧೀಜಿ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿ ಮಾಡಲಾದ ಅಧ್ಯಯನದಿಂದ ಈ ಕೆಳಗಿನ ಸಂಶೋಧನ ಫಲಿತವು ಲಭ್ಯವಾಗಿರುತ್ತದೆ.

1. **ಯೋಜನೆಯ ಮಾಹಿತಿ:**

ಸರಕಾರದ ಯೋಜನೆಗಳು ಯಶಸ್ವಿಯಾಗಬೇಕಾದಲ್ಲಿ ಯೋಜನೆಗಳ ಸರಿಯಾದ ಮಾಹಿತಿ ಸಕಾಲದಲ್ಲಿ ಫಲಾನುಭವಿಗಳಿಗೆ ಸಿಗಬೇಕಾಗುತ್ತದೆ. ಅಧ್ಯಯನದಲ್ಲಿ ದೊರೆತ ಸಂಶೋಧನ ಫಲಿತದ ಪ್ರಕಾರ ಈ ಮಾಹಿತಿಯನ್ನು ನೀಡಲು ಗ್ರಾಮ ಪಂಚಾಯತಿಯ ಸದಸ್ಯರು ಪ್ರಧಾನ ಪಾತ್ರವಹಿಸಿರುತ್ತಾರೆ. ಪಂಚಾಯಿತಿನ ಪ್ರತಿನಿಧಿಗಳು ವಿಶೇಷ ಕಾಳಜಿ ವಹಿಸಿದಾಗ ಅದಕ್ಕೆ ಜನತೆ ಪೂರಕವಾಗಿ ಸ್ಪಂದಿಸಿದರೆ ಮಾತ್ರ ಸರಕಾರಿ ಉದ್ಯೋಗ ಖಾತರಿ ಯೋಜನೆ ಯಶಸ್ವಿಯಾಗುತ್ತದೆ ಮತ್ತು ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟ ಸುಧಾರಣೆಗೊಳ್ಳುತ್ತದೆ.

2. **ಯೋಜನೆಯ ಪ್ರಯೋಜನ:**

ಮಹಾತ್ಮ ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯ ಅನುಷ್ಠಾನಕ್ಕೆ ಉದ್ಯೋಗ ಖಾತರಿ ಯೋಜನೆಗಳು ದಿಕ್ಸೂಚಿ ಇದ್ದಂತೆ. ಸ್ವಾತಂತ್ರೋತ್ತರದ ತರುವಾಯ ಈ ಹಿನ್ನಲೆಯಲ್ಲಿ ಅನೇಕ ಯೋಜನೆಗಳನ್ನು ರೂಪಗೊಳಿಸಿದರೂ ಅವುಗಳ ಯಶಸ್ವಿ ಹಲವಾರು ಕಾರಣಗಳಿಂದ ಸೀಮಿತ ಮಟ್ಟಕ್ಕೆ ಯಶಸ್ವಿಯಾಗಿರುತ್ತದೆ.ಬೆಟ್ಟಂಪಾಡಿ ಗ್ರಾಮ ಪಂಚಾಯತ್‌ನಲ್ಲಿ ಮಾಡಲಾದ ಈ ಅಧ್ಯಯನದಲ್ಲಿ ನರೇಗ ಯೋಜನೆಯ ಬಹುತೇಕ ಫಲಾನುಭವಿಗಳು ಯೋಜನೆಯ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯನ್ನು ಪಡೆದಿರುವುದು ಅಧ್ಯಯನದಲ್ಲಿ ಕಂಡು ಬರುತ್ತದೆ. ಸಮಗ್ರ ಅಧ್ಯಯನದಿಂದ ಗ್ರಾಮಸ್ಥರ ಆರ್ಥಿಕ ಸ್ಥಿತಿಗತಿಗಳು ಸುಧಾರಿಸಿರುವುದು ಯೋಜನೆಯ ಮಹತ್ವಕ್ಕೆ ಕೈಗನ್ನಡಿಯಾಗಿದೆ.

3. **ಅಧಿಕಾರಿಗಳ ಸ್ಪಂದನೆ:**

ಗ್ರಾಮೀಣ ಅಭಿವೃದ್ಧಿ ಯೋಜನೆಯ ವಿವಿಧ ಕಾರ್ಯಕ್ರಮಗ'ಳು ಯಶಸ್ವಿಯಾಗಲು ಗ್ರಾಮೀಣ ಮಟ್ಟದಲ್ಲಿ ನೆಲೆಗೊಂಡಿರುವ ಸ್ಥಳೀಯ ಸರಕಾರದ ಜನಪ್ರತಿನಿಧಿಗಳು ಮತ್ತು ಅಧಿಕಾರಿ ವರ್ಗದವರ ಸಹಕಾರ ಮತ್ತು ಸ್ಪಂದನೆ ಅತೀ ಅಗತ್ಯವಾಗಿರುತ್ತದೆ. ಯೋಜನೆಯ ಬಗ್ಗೆ ಅರಿವು ನೀಡುವುದರೊಂದಿಗೆ ಕಾಲಕಾಲಕ್ಕೆ ಅನುದಾನ ಬಿಡುಗಡೆ,ತರಬೇತಿ,ಮತ್ತು ಇತರ ಮಾರ್ಗದರ್ಶನಗಳನ್ನು ನೀಡುವಲ್ಲಿ ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಯಶಸ್ವಿಯಾಗಿರುವುದು ಅಧ್ಯಯನದಲ್ಲಿ ಕಂಡುಬರುತ್ತದೆ. ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಸಿಬ್ಬಂದಿ ವರ್ಗ ಮತ್ತು ಜನ ಪ್ರತಿನಿಧಿಗಳ ಸೇವೆ ತೃಪ್ತಿದಾಯಕವಾಗಿರುವುದನ್ನು ಫಲಾನುಭವಿಗಳು ಬಹುಮತದಲ್ಲಿ ವ್ಯಕ್ತಪಡಿಸಿರುವುದು ಸಂಶೋಧನೆಯಿಂದ ದೃಢಪಟ್ಟಿದೆ.

4. **ಆರ್ಥಿಕ ಅಭಿವೃದ್ಧಿ:**

ಯೋಜನೆಯ ಫಲವಾಗಿ ರೂಪುಗೊಂಡ ಆರ್ಥಿಕ ಅಭಿವೃದ್ಧಿ ಯೋಜನೆಯ ನಿಖರವಾದ ಅಧ್ಯಯನದಿಂದ ಕಂಡುಬಂದ ಅಂಶದ ಪ್ರಕಾರ ಬಹುತೇಕ ಫಲಾನುಭವಿಗಳ ವಾರ್ಷಿಕ ಆದಾಯದ ಹೆಚ್ಚಳ 5ವರ್ಷಗಳ ಕಾಲವಧಿಯಲ್ಲಿ ಸರಾಸರಿ 50%ದ ವರೆಗೆ ಮತ್ತು ಸುಮಾರು 30% ಫಲಾನುಭವಿಗಳ ವಾರ್ಷಿಕ ಸರಾಸರಿ ಆದಾಯ 50%ಕ್ಕಿಂತ ಹೆಚ್ಚಾಗಿರುವುದು ಅಧ್ಯಯನದಿಂದ ಕಂಡು ಬಂದ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಸಂಶೋಧನ ಫಲಿತವಾಗಿದೆ.

5. **ಅಧಿಕಾರಿಗಳ ಮೇಲ್ವಿಚಾರಣೆ ಮತ್ತು ಮಾಹಿತಿ:**

ಉದ್ಯೋಗ ಖಾತರಿ ಯೋಜನೆಯಲ್ಲಿ ಫಲಾನುಭವಿಗಳಿಗೆ ನೀಡಲಾದ ಮಾಹಿತಿ ಮತ್ತು ಮಾರ್ಗದರ್ಶನಗಳ ಬಗ್ಗೆ ಮಾಡಲಾದ ಅಧ್ಯಯನದಲ್ಲಿ ಕಂಡು ಬಂದ ಸಂಶೋಧನ ಫಲಿತ'ದ ಪ್ರಕಾರ ಬೆಟ್ಟಂಪಾಡಿ ಗ್ರಾಮ ಪಂಚಾಯತ್‌ನಲ್ಲಿ ವಿವಿಧ ಉದ್ಯೋಗ ಖಾತರಿ ಯೋಜನೆಗಳಲ್ಲಿ ಕೇವಲ ಹಣಕಾಸಿನ ಸೌಲಭ್ಯಗಳನ್ನು ಫಲಾನುಭವಿಗಳಿಗೆ ನೀಡಿರುವುದು ಅಲ್ಲದೆ ಇತರ ಅಗತ್ಯ ಮಾಹಿತಿ ಮತ್ತು ಮಾರ್ಗದರ್ಶನವನ್ನು ನೀಡಿರುವುದು ದೃಢಪಟ್ಟಿದೆ. ಈ ಕಾರಣಕ್ಕಾಗಿ ಈ ಯೋಜನೆಯಿಂದ ಫಲಾನಭವಿಗಳ ಆರ್ಥಿಕ ಸ್ಥಿತಿಗತಿ ಸುಧಾರಣೆಯಾಗಿರುತ್ತದೆ. ಆದುದರಿಂದ ಯಾವುದೆ ಸರಕಾರಿ ಕಾರ್ಯಕ್ರಮಗಳು ಯಶಸ್ವಿಯಾಗ ಬೇಕಾದಲ್ಲಿ ಯೋಜನೆಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡುವ ಸಲುವಾಗಿ ಫಲಾನುಭವಿ ಮತ್ತು ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕ ಅಗತ್ಯವಾಗಿರುವುದು ಸಂಶೋಧನೆ ಯಿಂದ ತಿಳಿದು ಬರುತ್ತದೆ.

6. **ಪಾರದರ್ಶಕ ಹಣದ ನಿರ್ವಹಣೆ:**

ಕಾಲಂತರದಲ್ಲಿ ಕಂಡುಬರುವ ಉದ್ಯೋಗ ಖಾತರಿ ಯೋಜನೆಗಳಲ್ಲಿ ಉಂಟಾಗಿರುವ ಹೊಸತನದ ವಿಚಾದಲ್ಲಿ ಗ್ರಾಮೀಣ ಜನತೆಗೆ ಬ್ಯಾಂಕ್ ಖಾತೆಗಳ ಮೂಲಕ ಸಂಭಾವನೆ ಪಾವತಿಯನ್ನು ಸಾರ್ವತ್ರಿಕವಾಗಿ ಫಲಾನುಭವಿಗಳು ಒಪ್ಪಿಕೊಂಡಿರುವುದು ಅಧ್ಯಯನದಿಂದ ತಿಳಿದು ಬಂದಿರುತ್ತದೆ. ಮೇಲ್ನೋಟಕ್ಕೆ ಈ ಪಾವತಿಯ ವ್ಯವಸ್ಥೆ ಸಮಾಧಾನಕರವಲ್ಲ ಎಂದಿದ್ದರೂ ಪ್ರಚಲಿತ ಅರ್ಥವ್ಯವಸ್ಥೆಯಲ್ಲಿ ಫಲಾನುಭವಿಗಳು ಸಹಮತ ಸೂಚಿಸಿರುವುದು ಆರ್ಥಿಕ ಅಭಿವೃದ್ಧಿಯ ಒಂದು ಮುಖ್ಯ ಲಕ್ಷಣ ವಾಗಿರುತ್ತದೆ. ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡುವುದರ ಮೂಲಕ ಬ್ಯಾಂಕಿಂಗ್ ವ್ಯವಹಾರದ ಬಗ್ಗೆ ಆಸಕ್ತಿ ಮಾಡುವುದಲ್ಲದೆ ಉಳಿತಾಯ ಮನೋಭಾವನೆಯು ರೂಪುಗೊಳ್ಳುತ್ತದೆ. ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸಂಭಾವನೆಯನ್ನು ನಗದು ರೂಪದಲ್ಲಿ ನೀಡಿದೆ ಆದರೆ ಅನಗತ್ಯ ದುಂದು ವೆಚ್ಚಕ್ಕೆ ಅಸ್ಪದ ನೀಡಿದಂತಾಗುತ್ತದೆ.

7. **ಫಲಾನುಭವಿಗಳ ಆಯ್ಕೆ:**

ಫಲಾನುಭವಿಗಳ ಆಯ್ಕೆಯಲ್ಲಿ ಅಧಿಕಾರಿಗಳು ಎಚ್ಚರಿಕೆ ವಹಿಸುವುದು ಯೋಜನೆಯ ಯಶಸ್ವಿಯ ಮೇಲೆ ಪರಿಣಾಮ ಬೀರುವ ಒಂದು ಅಂಶವಾಗಿರುತ್ತದೆ. ಸರಕಾರದ ಯಾವುದೇ ಸವಲತ್ತುಗಳು ಅರ್ಹ

ಫಲಾನುಭವಿಗೆ ದೊರಕುವಂತೆ ಅಗತ್ಯ ದಾಖಲೆಗಳನ್ನು ಪಡೆದುಕೊಳ್ಳುವ ಪ್ರಕ್ರಿಯೆ ಇತ್ತೀಚಿನ ಉದ್ಯೋಗ ಖಾತರಿಗಳಲ್ಲಿ ಸರ್ವಸಾಮಾನ್ಯವಾಗಿ ಕಂಡು ಬರುತ್ತದೆ. ಈ ಅಧ್ಯಯನದಲ್ಲಿ ಕಂಡು ಬಂದ ಸಂಶೋಧನೆ ಫಲಿತದ ಪ್ರಕಾರ ಬಹುತೇಕ ಮಂದಿ ಫಲಾನುಭವಿಗಳಿಗೆ ದಾಖಲೆಪತ್ರಗಳನ್ನು ಒಪ್ಪಿಸುವಲ್ಲಿ ಯಾವುದೇ ರೀತಿಯ ತೊಂದರೆ ವ್ಯಕ್ತವಾಗದೆ ಇರುವುದು ಲಭ್ಯವಾಗುತ್ತದೆ. ಆದರೆ ಫಲಾನುಭವಿಗಳಲ್ಲಿ ಬಹಳಷ್ಟು ಮಂದಿ ಈ ವ್ಯವಸ್ಥೆಗೆ ಹೊಂದಿಕೊಳ್ಳಲು ತೊಂದರೆ ಒಳಪಟ್ಟಿರುವುದು ಅಧ್ಯಯನದಿಂದ ಕಂಡುಬರುತ್ತದೆ. ಯೋಜನೆಯ ಫಲವನ್ನು ಅನರ್ಹರು ಪಡೆದುಕೊಳ್ಳದಂತೆ ಮಾಡಲು ಈ ಎಲ್ಲಾ ಪಾರದರ್ಶಕ ಪಾವತಿ ಅಂಶಗಳು ಸಹಕಾರಿಯಾಗುತ್ತದೆ.

8. **<u>ಯೋಜನೆಗೆ ಸಲಕರಣೆಗಳ ಒದಗಿಸುವಿಕೆ:</u>**

ಗ್ರಾಮೀಣ ಪ್ರದೇಶದ ಉದ್ಯೋಗ ಖಾತರಿ ಯೋಜನೆಗಳಲ್ಲಿ ಶ್ರಮಕ್ಕೆ ಬಹಳಷ್ಟು ಮಹತ್ವ ಇದೆ.ಗಾಂಧೀಜಿಯ ಪರಿಕಲ್ಪನೆಯಲ್ಲಿ ಕಾಯಕ ಅನ್ವತತ್ವ ಎಂಬ ವಿಚಾರದಲ್ಲಿ ಪ್ರತಿಯೊಬ್ಬ ಸಮರ್ಥ ವ್ಯಕ್ತಿಯು ತನ್ನ ಉದಾರ ಪೋಷಣೆಗೆ ಅಗತ್ಯವಾದಷ್ಟು ಸಂಪಾದನೆಯನ್ನು ಶ್ರಮ ಪಡುವುದರ ಮೂಲಕ ಸಂಪಾದಿಸಬೇಕು ಎಂದು ತಿಳಿಸುತ್ತದೆ. ಗ್ರಾಮೀಣ ಪ್ರದೇಶವು ಬಹುತೇಕ ಕೃಷಿಯನ್ನು ಅವಲಂಬಿಸಿರುವ ಕ್ಷೇತ್ರವಾಗಿದ್ದು ಈ ಕಾರ್ಯದಲ್ಲಿ ದಕ್ಷತೆಯನ್ನು ಹೆಚ್ಚಿಸುವಲ್ಲಿ ವಿವಿಧ ಸಲಕರಣೆಗಳು ಅಗತ್ಯವಾಗಿರುತ್ತದೆ. ಸಲಕರಣೆಗಳ ಲಭ್ಯತೆ ಇಲ್ಲದೆ ಇರುವಿಕೆ ಬಹುತೇಕ ಹಳ್ಳಿಗಳಲ್ಲಿ ಅರ್ಹ ವ್ಯಕ್ತಿಗಳನ್ನು ಅನುತ್ಪಾದಕ ಕಾರ್ಮಿಕರಾಗಿ ರೂಪುಗೊಳಿಸುತ್ತದೆ. ಈ ಹಿನ್ನಲೆಯಲ್ಲಿ ಸರಕಾರವು ವಿವಿಧ ಸಲಕರಣೆಗಳನ್ನು ನೀಡುವುದರ ಮೂಲಕ ಯೋಜನೆಗಳನ್ನು ಬಹಳಷ್ಟು ಪರಿಣಾಮಕಾರಿಯಾಗಿ ರೂಪಿಸಲು ಸಾಧ್ಯವಾಗುತ್ತದೆ. ಸುಮಾರು $\frac{1}{3}$ ರಷ್ಟು ಫಲಾನುಭಾವಿಗಳು ತಮ್ಮಲ್ಲಿ ಸೂಕ್ತ ಸಲಕರಣೆಗಳು ಇಲ್ಲದೆ ಸರಕಾರದಿಂದ ಸಲಕರಣೆಗಳನ್ನು ಪಡೆಯಲು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಬೇರೆ ಮಾತಿನಲ್ಲಿ ಹೇಳುದಾದರೆ ಕೃಷಿಯಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿರುವ ಅನೇಕ ಮಂದಿ ಅಂದರೆ $\frac{2}{3}$ ರಷ್ಟು ಫಲಾನುಭವಿಗಳು ತಮ್ಮಲ್ಲಿ ಸೂಕ್ತ ಮತ್ತು ಸಾಕಷ್ಟು ಪ್ರಮಾಣದ ಸಲಕರಣೆಗಳು ಲಭ್ಯವಿರುವುದರಿಂದ ಸರಕಾರದ ಸಲಕರಣೆಗಳನ್ನು ಪಡೆಯುವ ವಿಷಯದಲ್ಲಿ ಆಸಕ್ತಿ ಹೊಂದದೆ ಇರುವುದು ಅಧ್ಯಯನದಿಂದ ಕಂಡುಬರುತ್ತದೆ.

9. **<u>ವೈಫಲ್ಯಗಳು:</u>**

ಅಧ್ಯಯನದಲ್ಲಿ ಕಂಡು ಬಂದ ಅನೇಕ ಅಂಶಗಳು ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಆದರೆ ಆಯ್ದ ಫಲಾನುಭವಿಗಳು ಅಭಿಪ್ರಾಯಗಳನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಪಡುವಾಗ ಈ ಕ್ಷೇತ್ರದಲ್ಲಿ ಪ್ರತಿಶತ ಯಶಸ್ಸು ಕಂಡುಬಂದಿರುವುದಿಲ್ಲ. ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾದ ಉದ್ಯೋಗ ಖಾತರಿ ಯೋಜನೆಗಳಲ್ಲಿ ಫಲಾನುಭವಿಗಳು ಎಲ್ಲರೂ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳಲು ಸಾಮರ್ಥ್ಯ ಹೊಂದಿರುವುದಿಲ್ಲ. ಈ ವೈಫಲ್ಯಕ್ಕೆ ಕಾರಣಗಳನ್ನು ಕಂಡುಹಿಡಿಯುವುದು ಮತ್ತು ಪರಿಹಾರ ಮಾರ್ಗಗಳನ್ನು ಅನುಷ್ಠಾನಗೊಳಿಸಲು ಸಲಹೆ ಸೂಚನೆಗಳನ್ನು ನೀಡುವುದು ಈ ಅಧ್ಯಯನದ ಒಂದು ಪ್ರಮುಖ ಭಾಗವಾಗಿರುತ್ತದೆ.

ಯೋಜನೆಯ ಯಶಸ್ಸಿನಲ್ಲಿ ಗ್ರಾಮ ಪಂಚಾಯತ್ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಸ್ಪಂದನೆಯ ವಿಚಾರವಾಗಿ ಕೆಲವು ಫಲಾನುಭವಿಗಳು ಅತೃಪ್ತಿ ವ್ಯಕ್ತಪಡಿಸಿರುವುದು ಅಧ್ಯಯನದಿಂದ ವ್ಯಕ್ತವಾಗಿರುತ್ತದೆ. ಈ ಅತೃಪ್ತಿಗೆ ಕಾರಣಗಳನ್ನು ಸಂಶೋಧನೆಯ ಮೂಲಕ ಕಂಡು ಹಿಡಿಯುವುದು ಮತ್ತು ಅದಕ್ಕೆ ಸಂಬಂಧ ಪಟ್ಟ ಪರಿಹಾರೋಪಯಗಳನ್ನು ಸೂಚಿಸುವ ಪ್ರಯತ್ನವನ್ನು ಸಂಶೋಧನ ಕಾರ್ಯದಲ್ಲಿ ಮಾಡಲಾಗಿರುತ್ತದೆ.

10. <u>ಫಲಾನುಭವಿಗಳ ಸಲಹೆಗಳು:</u>

ಈ ಅಧ್ಯಯನದಲ್ಲಿ ಉದ್ಯೋಗ ಖಾತರಿ ಯೋಜನೆಯ ಸಂಪೂರ್ಣ ಯಶಸ್ವಿಗೆ ತೊಂದರೆ ಉಂಟುಮಾಡಿರುವ ಅಂಶಗಳ ವಿಚಾರವಾಗಿ ಫಲಾನುಭವಿಗಳಲ್ಲಿ ಸಲಹೆ ಸೂಚನೆಗಳನ್ನು ಪಡೆಯಲಾಗಿದ್ದು ಆ ಪ್ರಕಾರ ಅವರು ನೀಡಿರುವ ಪ್ರಮುಖ ಸಲಹೆಗಳ ಆಯ್ದ ಭಾಗಗಳನ್ನು ಈ ಕೆಳಗೆ ನೀಡಲಾಗಿದೆ.

1.1 ಗ್ರಾಮೀಣ ಪ್ರದೇಶದಲ್ಲಿ ಬಹುಬಗೆಯ ನಿರುದ್ಯೋಗ ಗ್ರಾಮೀಣ ಜನತೆಯನ್ನು ಬಡತನದತ್ತ ಕೊಂಡೊಯ್ಯುದನ್ನು ತಪ್ಪಿಸಲು ಕುಟುಂಬದ ಎಲ್ಲಾ ಸದಸ್ಯರಿಗೆ ಅನ್ವಯವಾಗುವಂತೆ ಕೃಷಿಯೇತರ ಚಟುವಟಿಕೆಗಳಲ್ಲಿಯೂ ಉದ್ಯೋಗ ಖಾತರಿ ಯೋಜನೆಗಳನ್ನು ರೂಪಿಸುವುದು ಅತಿ ಅಗತ್ಯ.

1.2 ಉದ್ಯೋಗ ಖಾತರಿ ಯೋಜನೆಯಲ್ಲಿ ನೀಡಲಾಗಿರುವ ವೇತನವನ್ನು ತಟಸ್ಥವಾಗಿರಿಸದೆ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ಪರಿಷ್ಕರಿಸುವುದು ಅಗತ್ಯ.

1.3 ಈ ಯೋಜನೆಯಲ್ಲಿ ಫಲಾನುಭವಿಗಳ ಆಯ್ಕೆ ಯೋಜನೆಯ ಅನುಷ್ಠಾನ ಮತ್ತು ಸಲಕರಣೆಗಳ ನೀಡಿಕೆಯಲ್ಲಿ ರಾಜಕೀಯ ಪ್ರಭಾವ ಬೀರದಂತೆ ಕ್ರಮ ವಹಿಸುವುದು.

1.4 ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಲಿಂಗ, ಜಾತಿ, ಧರ್ಮ, ಪ್ರದೇಶ, ವರ್ಗ, ತಾರತಮ್ಯ ವಾಗದಂತೆ ಕ್ರಮವಹಿಸುವುದು.

1.5 ಫಲಾನುಭವಿಗಳಿಗೆ ಅಗತ್ಯ ಸಂದರ್ಭದಲ್ಲಿ ಉಚಿತ ಚಿಕಿತ್ಸೆ ಔಷಧಿ ಸೌಲಭ್ಯಗಳು ಮತ್ತು ಜೀವವಿಮೆ ನೀಡುವುದು.

1.6 ವೇತನ ಪಾವತಿ ಸಕಾಲಕ್ಕೆ ದೊರಕುವಂತೆ ಕ್ರಮ ವಹಿಸುವುದು

1.7 ಫಲಾನುಭವಿಗಳಿಗೆ ಅಗತ್ಯ ಸಂದರ್ಭದಲ್ಲಿ ಉಚಿತ ಚಿಕಿತ್ಸೆ ಔಷಧಿ ಸೌಲಭ್ಯಗಳು ಮತ್ತು ಜೀವ ವಿಮೆ ನೀಡುವುದು.

1.8 ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಆಯ್ಕೆ ಆಗಿರುವ ಫಲಾನುಭವಿಗಳಿಗೆ ಪೂರ್ಣ ಪ್ರಮಾಣದ ಉದ್ಯೋಗ ದೊರೆಯದೆ ಇರುವ ಸಂದರ್ಭದಲ್ಲಿ ಸರಕಾರ ನಿರುದ್ಯೋಗಿ ಭತ್ಯೆ ನೀಡುವುದು.

ಚುನಾಯಿತ ಗ್ರಾಮ ಪಂಚಾಯತ್ ಸದಸ್ಯರ ಅಭಿಪ್ರಾಯ

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯತ್ ಸದಸ್ಯರು ನೀಡಿರುವ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಬಗೆಗಿನ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಈ ಕೆಳಗಿನಂತೆ ಪ್ರಸ್ತುತ ಪಡಿಸಲಾಗುತ್ತದೆ.

1.1. ಯೋಜನೆಯ ಅನುಷ್ಠಾನದ ವಿಶ್ವಾಸ:

ಸದ್ರಿ ಗ್ರಾಮದಲ್ಲಿ ಇರುವ ಎಲ್ಲಾ ಸದಸ್ಯರು ಸಕ್ರೀಯವಾಗಿ ತಮ್ಮ ಕ್ಷೇತ್ರದಲ್ಲಿರುವ ಅರ್ಹ ಜನರಿಗೆ ಮಾಹಿತಿ ನೀಡಿ ಅವರನ್ನು ಯೋಜನೆಯ ಬಗ್ಗೆ ತರಬೇತಿ ಪಡೆದು ಸಾಕಷ್ಟು ವಿವರಗಳನ್ನು ಗ್ರಾಮೀಣ ಜನತೆಗೆ ನೀಡಿ ತಮ್ಮ ಕ್ಷೇತ್ರದ ಯೋಜನೆಗಳಲ್ಲಿ ತೊಡಗಿಸಿ ಇರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಮಾತ್ರವಲ್ಲದೆ ಪ್ರತಿ ಜನ ಪ್ರತಿನಿಧಿಗಳಿಗೆ ಈ ಯೋಜನೆಗಳ ಅನುಷ್ಠಾನದಿಂದ ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯವನ್ನು ರೂಪಿಸುವ ವಿಶ್ವಾಸವಾಗಿರುತ್ತದೆ.

1.2. ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಅಂಶಗಳು:

ಉದ್ಯೋಗ ಖಾತರಿ ಯೋಜನೆಗಳನ್ನು ಇನ್ನಷ್ಟು ಪರಿಣಾಮಕಾರಿ ಯಾಗಿಸಲು ಇರುವ ಸಲಹೆಗಳನ್ನು ಜನಪ್ರತಿನಿಧಿಗಳಲ್ಲಿ ಸಂಗ್ರಹಿಸಿದಾಗ ಅವರು ನೀಡಿರುವ ಮಾಹಿತಿಯಂತೆ ಆಡಳಿತ ಸುಧಾರಣೆ, ಪಾರದರ್ಶಕವಾದ ಹಣಕಾಸಿನ ವ್ಯವಹಾರಗಳು ಸೂಕ್ತ ಮತ್ತು ಸಕಾಲಿಕ ತರಬೇತಿ ಹಾಗೂ ಬಹುಮಂದಿ ಅರ್ಹ ವ್ಯಕ್ತಿಗಳಿಗೆ ಭಾಗವಹಿಸುವಿಕೆ ಸಲಹೆಗಳು ಸಂಶೋಧನ ಫಲಕದಿಂದ ತಿಳಿದು ಬಂದಿರುತ್ತದೆ.

1.3. ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸುವಿಕೆ:

ಉದ್ಯೋಗ ಖಾತರಿ ಯೋಜನೆಗಳಲ್ಲಿ ಸಾಮಾನ್ಯವಾಗಿ ಕೃಷಿಕಾರ್ಮಿಕರಿಗೆ ನಿರುದ್ಯೋಗದ ಸಂದರ್ಭದಲ್ಲಿ ಹೆಚ್ಚುವರಿ ಉದ್ಯೋಗ ಕಲ್ಪಿಸುವ ಸಲುವಾಗಿ ಮಾಡಲಾದ ಕಾರ್ಯಗಳಿಂದ ಹೆಚ್ಚುವರಿ ಆಯ್ಕೆ ಮಾಡುವ ಕ್ಷೇತ್ರಗಳು ಕೇವಲ ಕೃಷಿರಂಗವನ್ನು ಮಾತ್ರ ಆಯ್ಕೆ ಮಾಡದೆ ಅದರೊಂದಿಗೆ ಗುಡಿಕೈಗಾರಿಕೆ, ಸಣ್ಣಕೈಗಾರಿಕೆ, ಕೃಷಿಆಧಾರಿತ ಉದ್ದಿಮೆ ಮತ್ತು ಕೃಷಿ ಪೂರಕ ಚಟುವಟಿಕೆಗಳಿಗೆ ಆದ್ಯತೆ ನೀಡಿ ಸಮತೋಲನ ಬೆಳವಣಿಗೆಯನ್ನು ಗ್ರಾಮೀಣ ಮಟ್ಟದಲ್ಲಿ ರೂಪಿಸಲು ಸಲಹೆ ಸೂಚನೆಗಳನ್ನು ನೀಡಲಾಗಿರುತ್ತದೆ.

1.4. ಹಿಂದಿನ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಉಂಟಾಗಿರುವ ಅಡಚಣೆಗಳು:

ಸ್ವಾತಂತ್ರ್ಯೋತ್ತರದ ತರುವಾಯ ಗರಿಷ್ಟ ಭಾರತದ ನಿರ್ಮಾಣಕ್ಕೆ ರೂಪಿಸಲಾದ ಹಲವಾರು ಯೋಜನೆಗಳಲ್ಲಿ ಸಮುದಾಯ ಅಭಿವೃದ್ಧಿ ಯೋಜನೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, 20 ಅಂಶಗಳ ಕಾರ್ಯಕ್ರಮ, ಪ್ರಧಾನಮಂತ್ರಿ ಉದ್ಯೋಗ ಯೋಜನೆ ಮೊದಲಾದ ಹಲವಾರು ಉದ್ಯೋಗ ಯೋಜನೆಗಳ ಅನುಷ್ಠಾನ ವಾಗಿದ್ದರೂ ಅವುಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಿದ ಪ್ರಸಕ್ತ ಅತ್ಯಂತ ಸೂಕ್ತ ಮತ್ತು ಪಾರದರ್ಶಕ ಯೋಜನೆಯಾಗಿರುವ ನರೇಗ ಯೋಜನೆಯು ಸಂಪೂರ್ಣ ದೋಷರಹಿತ ವಾಗಿಲ್ಲದಿರುವುದು ಜನ ಪ್ರತಿನಿಧಿಗಳ ಅಭಿಪ್ರಾಯದಲ್ಲಿ ವ್ಯಕ್ತವಾಗಿರುತ್ತದೆ. ಆ ಪ್ರಕಾರ ವೈಫಲ್ಯದ ಕಾರಣಗಳಲ್ಲಿ ಪ್ರಮುಖವಾಗಿ ಆಡಳಿತಾತ್ಮಕ ನ್ಯೂನತೆ, ಅರಿವಿನ ಕೊರತೆ, ರಾಜಕೀಯ ಹಸ್ತಕ್ಷೇಪಗಳನ್ನು ವ್ಯಕ್ತಪಡಿಸಿರುವುದು ಸಂಶೋಧನಫಲಕದಿಂದ ಕಂಡುಬರುತ್ತದೆ.

ಸಲಹೆಗಳು

1. ಉದ್ಯೋಗಖಾತ್ರಿ ಫಲಾನುಭವಿಗಳಿಗೆ ನಿಗದಿತ ಅವಧಿಯಲ್ಲಿ ಸಂಭಾವನೆಯನ್ನು ಪಾವತಿಸಬೇಕು.
2. ಸಂಭಾವನೆಯ ದರವನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು.
3. ಮಹಿಳಾ ಕೆಲಸಗಾರರಿಗೆ ಯೋಜನೆಯ ಬಗ್ಗೆ ಸೂಕ್ತ ಅರಿವು ನೀಡಬೇಕು.
4. ನರೇಗ ಯೋಜನೆಯಡಿಯಲ್ಲಿ ನಿಗದಿಗೊಳಿಸಿರುವ ಕೆಲಸದ ದಿನಗಳನ್ನು ಸಂಪೂರ್ಣವಾಗಿ ಪೂರ್ಣಗೊಳಿಸುವಂತೆ ನಿಯಮವನ್ನು ರೂಪಿಸುವುದು.
5. ಉದ್ಯೋಗಖಾತ್ರಿ ಫಲಾನುಭವಿಗಳಿಗೆ ಸಾಮಾಜಿಕ ಭದ್ರತೆ ಒದಗಿಸಬೇಕು. ಉದಾಹರಣೆಗೆ ಆರೋಗ್ಯ ವಿಮೆ, ಗುಂಪು ವಿಮೆ
6. ಸರಕಾರದ ಯೋಜನೆಯ ಬಗ್ಗೆ ಮೇಲ್ವಿಚಾರಣೆ ಮಾಡಲು ಸಮಿತಿಗಳನ್ನು ರಚಿಸಬೇಕು, ಸಾರ್ವಜನಿಕ ಕುಂದುಕೊರತೆಗಳನ್ನು ಆಲಿಸಬೇಕು.
7. ಕೌಶಲ್ಯ ವೃದ್ಧಿಸುವ ಉದ್ಯೋಗಗಳನ್ನು ಸೃಷ್ಟಿಸುವ ಯೋಜನೆಗೆ ಸರಕಾರ ಮುಂದಾಗಬೇಕು.
8. ಆಡಳಿತ ವ್ಯವಸ್ಥೆ ಯೋಜನೆಯ ಅನುಷ್ಠಾನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.
9. ಅರ್ಹ ಫಲಾನುಭವಿಗಳನ್ನು ಗುರುತಿಸುವಾಗ ಜನ ಪ್ರತಿನಿಧಿಗಳು ರಾಜಕೀಯ ಹಸ್ತಕ್ಷೇಪ ಮಾಡಬಾರದು.
10. ಫಲಾನುಭವಿಗಳಿಗೆ ವರ್ಷಪೂರ್ತಿ ಕೆಲಸದ ಅವಕಾಶವನ್ನು ಕಲ್ಪಿಸುವುದು.
11. ರಾಜಕೀಯ ಮಧ್ಯಪ್ರವೇಶ ದೂರವಾಗಬೇಕು.
12. ಕೆಲಸದ ಸ್ಥಳದಲ್ಲಿ ಉತ್ತಮ ವಾತಾವರಣವನ್ನು, ಸೌಲಭ್ಯವನ್ನು ಒದಗಿಸಬೇಕು.

ಉಪಸಂಹಾರ

ಮಹಾತ್ಮ ಗಾಂಧಿಯವರ ಗ್ರಾಮೀಣ ಆಡಳಿತದ ಪರಿಕಲ್ಪನೆಯು ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸುವಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡಿರುವುದು ಸತ್ಯ. ಈ ಹಿನ್ನಲೆಯಲ್ಲಿ ಅದು ನಡೆದು ಬಂದ ಅಥವಾ ಅದರ ಬೆಳವಣಿಗೆಯ ವಿವಿಧ ಮಜಲುಗಳನ್ನು ನಾವು ಆಧುನಿಕ ಸರಕಾರದಲ್ಲಿ ಕಾಣಬಹುದಾಗಿದೆ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಮೂಲಕ ದೇಶದಲ್ಲಿ ಇರುವ 60% ರಷ್ಟು ತುಂಬಿಕೊಂಡಿರುವ ಗ್ರಾಮಗಳನ್ನು ಬಲಪಡಿಸುವ ಯೋಜನೆಯನ್ನು ಮೊತ್ತ ಮೊದಲ ಬಾರಿಗೆ ಭಾರತದಲ್ಲಿ ಬಿತ್ತಿದವರು ಮಹಾತ್ಮ ಗಾಂಧಿ. 130 ವರ್ಷಗಳಷ್ಟು ಹಿಂದೆಯೇ ಭಾರತದ ಜೀವಾಳ ಇರುವುದು ಗ್ರಾಮಗಳಲ್ಲಿ ಎಂಬುವುದನ್ನು ವಿವರಿಸಿದವರು ಮಹಾತ್ಮ ಗಾಂಧಿ. 1993 ರ ಸ್ಥಳೀಯ ಸರ್ಕಾರಗಳಿಗೆ, ಮಾಡಿದ 73ನೇ ಮತ್ತು 74ನೇ ತಿದ್ದುಪಡಿಯನ್ನು ಮಾಡುವ ಮೂಲಕ ಗ್ರಾಮಗಳಿಗೆ ಸಂವಿಧಾನ ಬದ್ಧ ಅಧಿಕಾರ ದೊರೆಯಿತು. ಮಾತ್ರವಲ್ಲದೆ ಹಲವು ಯೋಜನೆಗಳನ್ನು ಹಮ್ಮಿಕೊಂಡು ಆ ಮೂಲಕ ಗ್ರಾಮೀಣ ಜನರ ಬದುಕನ್ನು ಸಬಲೀಕರಣಗೊಳಿಸುವ ಪ್ರಯತ್ನವನ್ನು ರಾಷ್ಟ್ರೀಯ ಮತ್ತು ರಾಜ್ಯ ಸರಕಾರಗಳು ನಿರಂತರವಾಗಿ ನಡೆಸುತ್ತವೆ.

ಅಂಥ ಬೃಹತ್ ಜನ ಕಲ್ಯಾಣ ಯೋಜನೆಯಲ್ಲಿ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯು ಒಂದಾಗಿದೆ. ಗ್ರಾಮೀಣ ಪ್ರದೇಶವನ್ನು ಈ ಯೋಜನೆಯ ಮೂಲಕ ಉದ್ಯೋಗವನ್ನು ನಿರ್ಧಿಷ್ಟ ಅವಧಿಯ ವರೆಗೆ ನೀಡಿ ಆ ಮೂಲಕ ಗ್ರಾಮೀಣ ಜನರನ್ನು ಬಲಿಷ್ಠ ಗೊಳಿಸುವುದಾಗಿದೆ. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಗ್ರಾಮಪಂಚಾಯತ್‌ನ ಮೂಲಕ ಕಾರ್ಯರೂಪಕ್ಕೆ ತರುತ್ತಿದೆ. ಮಹಾತ್ಮ ಗಾಂಧಿಯ ಕನಸನ್ನು ಸಕಾರಗೊಳಿಸುವ ಪ್ರಯತ್ನವನ್ನು ಇಂದು ಮಾಡುತ್ತಿದ್ದು, ಅದರ ವಿವಿಧ ಆಯಾಮಗಳನ್ನು ಈ ಸಂಶೋಧನಾ ಬರಹದಲ್ಲಿ ಸಮೀಕ್ಷಾ ವಿಧಾನವನ್ನು ಬಳಸಿಕೊಂಡು ತಿಳಿಯುವ ಪ್ರಯತ್ನವನ್ನು ಮಾಡಲಾಗಿದೆ. ನಿರ್ಧಿಷ್ಟ ರೀತಿಯಲ್ಲಿ ಸಂಶೋಧನಾ ಸಮೀಕ್ಷೆಯನ್ನು ನಡೆಸಿದಾಗ ಗ್ರಾಮಗಳ ಚಿತ್ರಣ ಹಾಗೂ ಸ್ಥಳೀಯ ಸರಕಾರಗಳ ಮಹತ್ವ ಮತ್ತು ಅವುಗಳ ವಿವಿಧ ಯೋಜನೆಯನ್ನು ಜನರಿಗೆ ತಲುಪಿಸುವ ಬಗ್ಗೆ ಫಲಾನುಭವಿಗಳ ಅನುಭವದ ಹಿನ್ನಲೆಯ ಮಾತುಗಳನ್ನು ನೋಡಿ ಹಾಗೂ ಮಹಾತ್ಮಗಾಂಧಿಯವರು ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಲು ಸುಲಭವಾಯಿತು.

"ನಮ್ಮ ದೇಶದ ಬಹುಪಾಲು ಜನರ ಬದುಕು ಸ್ವಲ್ಪ ಮಟ್ಟಿಗೆ ಉತ್ತಮಗೊಂಡಿರುವ ಬಗ್ಗೆ ಪುಷ್ಟಿಕರವಾದ ಆಹಾರವನ್ನು, ಹೆಚ್ಚು ಬಟ್ಟೆಗಳನ್ನು ಪಡೆದಿರುವ ಬಗ್ಗೆ ನನಗೆ ವಿಶ್ವಾಸವಿದ್ದರೂ, ಜನಕಲ್ಯಾಣ ಯೋಜನೆಯಿಂದ ಬಹುಜನರಿಗೆ ಪ್ರಯೋಜನವಾಗಲಿಲ್ಲವೆಂಬ,ಅವರ ಬಡತನ ಪಾತಳಕ್ಕಿಳಿದಿದೆಯೆಂಬ ಎಂಬ, ಹಾಗೆಯೇ ತುಂಬಾ ನೋವುಂಟುಮಾಡಿದೆ ಎಂಬ ಸಂಗತಿ ನನಗೆ ತುಂಬಾ ವ್ಯಥೆಯನ್ನುಂಟು ಮಾಡಿದೆ. ಈಸಮಸ್ಯೆಯನ್ನು ಪರಿಹರಿಸಲು ಸೂಕ್ತ ವಿಧಾನವನ್ನು ಕಂಡುಹಿಡಿಯಲು ಯೋಚಿಸುತ್ತಿದ್ದು, ಮಹಾತ್ಮಗಾಂಧಿಯವರು ತೋರಿಸಿದ ಹಲವು ಪರಿಕಲ್ಪನೆಗಳೇ ಹೆಚ್ಚು ಸೂಕ್ತವಾಗಿದೆ ಎಂದೆನಿಸುತ್ತದೆ" ಎಂದು 1963 ನೇ ಡಿಸಂಬರ್ ನಲ್ಲಿ ಪ್ರಧಾನಿ ನೆಹರು ಲೋಕಸಭೆಯಲ್ಲಿ ಹೇಳಿದರು. ಅವರ ಮಾತು ಕೇಳಿ 60 ವರ್ಷಗಳಾದರೂ ಭಾರತ ಸರಕಾರಕ್ಕೆ ಎಲ್ಲಾ ಗ್ರಾಮೀಣ ಜನರನ್ನು ತಲುಪಲು, ಅವರಿಗೆ ಸೂಕ್ತವಾದ ರೀತಿಯಲ್ಲಿ ಯೋಜನೆಯನ್ನು ತಲುಪಿಸುವಲ್ಲಿ ಎಡವಿದ್ದೇವೆ ಎಂದೆನಿಸುತ್ತದೆ. ಪ್ರತಿ ವರ್ಷ 3:1 ಅನುಪಾತದಲ್ಲಿ ಅನುದಾನವನ್ನು ಮಹಾತ್ಮಗಾಂಧಿಯವರ ಕನಸಿನ ಕೂಸಾದ ಗ್ರಾಮೀಣ ಅಭಿವೃದ್ಧಿಗೆ ಬಳಸುತ್ತಿದ್ದರೂ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಎಲ್ಲಾ ರೀತಿಯ ಸವಲತ್ತನ್ನು ತಲುಪಿಸಲು ಸಾಧ್ಯವಾಗಿಲ್ಲ ಎನ್ನಬಹುದು.

ನೂರು ವರ್ಷಗಳ ಮೊದಲೇ ಬಾರತದ ಹಳ್ಳಿಗಳ ಸ್ಥಿತಿಯನ್ನು ಹಾಗೂ ಅಲ್ಲಿನ ಜನರ ವಿಭಿನ್ನ ಪರಿಸ್ಥಿತಿಯನ್ನು ಅರ್ಥೈಸಿಕೊಂಡ ಮಹಾತ್ಮಗಾಂಧಿ, ಆ ನಿಟ್ಟನಲ್ಲಿ ಗ್ರಾಮೀಣ ಆಡಳಿತದ ಪರಿಕಲ್ಪನೆಯನ್ನು ವಿಭಿನ್ನವಾಗಿ ಮಂಡಿಸಿದರು. ಆ ಪರಿಕಲ್ಪನೆಯ ಪ್ರಸ್ತುತತೆಯನ್ನು ಮನಗೊಂಡ ನಮ್ಮ ಸ್ವಾತಂತ್ರ್ಯ ನಂತರದ ವಿವಿಧ ಸರಕಾರಗಳು ತಮ್ಮ ಅಭಿವೃದ್ಧಿಯ ಯೋಜನೆಗಳಲ್ಲಿ ಗಾಂಧೀಯ ತತ್ವಗಳನ್ನು ಅಳವಡಿಸಿಕೊಂಡಿದ್ದು, ಅದರಲ್ಲಿ ಪ್ರಮುಖವಾಗಿ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯನ್ನು ಅಧ್ಯಯನ ವಿಷಯವಾಗಿ ನೋಡಿದಾಗ ಸರಕಾರದ ಯೋಜನೆಗಳಲ್ಲಿ ಅದೊಂದು ಬೃಹತ್ ಯೋಜನೆಯಾಗಿ ಇಂದು ರೂಪುಗೊಂಡಿದೆ. ಆದರೆ ನರೇಗಾ ಯೋಜನೆಯ ಫಲಾನುಭವಿಗಳನ್ನು ವಿಶ್ಲೇಷಿಸಿದಾಗ ಇನ್ನು 30% ರಷ್ಟು ಆ ಯೋಜನೆಯು ಎಲ್ಲರನ್ನು ತಲುಪಿಲ್ಲ ಎಂಬುದು ಅರಿವಾಗುತ್ತದೆ.

ಈ ಅಧ್ಯಯನ ಕಾರ್ಯಕ್ಷೇತ್ರವಾದ ಪುತ್ತೂರು ತಾಲೂಕಿನ ಬೆಟ್ಟಂಪಾಡಿ ಗ್ರಾಮ ಪಂಚಾಯತ್‌ನ 4283 ಜನರಲ್ಲಿ ಜನರು ಕಳೆದ 5 ವರ್ಷಗಳಲ್ಲಿ ತಮ್ಮ ಜೀವನವನ್ನು ಉತ್ತಮವಾಗಿ ರೂಪಿಸಿಕೊಂಡಿದ್ದಾರೆ ಎಂಬುವುದು ಸಂಶೋಧನಾ ಸಮೀಕ್ಷೆಯನ್ನು ನಡೆಸಿದಾಗ ತಿಳಿಯಿತು. ಆದರೆ ಈ ರೀತಿಯ ಯೋಜನೆಗಳು ಕೆಲವು ತಾಂತ್ರಿಕ ದೋಷಗಳಿಂದ ಕೂಡಿರುವುದರಿಂದ ಎಲ್ಲಾ ಗ್ರಾಮೀಣ ಫಲಾನುಭವಿಗಳನ್ನು ಹೊಂದಿಲ್ಲ ಎನ್ನಬಹುದು, ಇದಲ್ಲದೇ ಗ್ರಾಮೀಣ ಭಾಗದವರಿಗೆ ಮಾಹಿತಿಯ ಕೊರತೆ, ಆನ್‌ಲೈನ್ ಸಮಸ್ಯೆ, ಕಛೇರಿ ಅಲೆದಾಟ, ಆಡಳಿತಾತ್ಮಕ ನ್ಯೂನತೆ ವರ್ಗ ಮುಂತಾದ ಸಮಸ್ಯೆಗಳಿಂದ ಕೂಡಿರುವುದು ಸಂಶೋಧನಾ ಸಮೀಕ್ಷೆಯಲ್ಲಿ ವ್ಯಕ್ತವಾಗುತ್ತದೆ. ಆದರೂ 68% ರಷ್ಟು ಈ ನರೇಗಾ ಯೋಜನೆಯು ಗ್ರಾಮೀಣ ಪ್ರದೇಶದವರಿಗೆ ಆಶ್ರಯವಾಗಿರುವುದು ಅತ್ಯಂತ ಪ್ರಮುಖ ವಿಷಯವಾಗಿದೆ.

ಮಹಾತ್ಮ ಗಾಂಧೀಜಿ ಉದ್ಯೋಗ ಖಾತರಿ ಯೋಜನೆಯು ಸ್ವಾತಂತ್ರೋತ್ತರ ಭಾರತದ ಒಂದು ಚಾರಿತ್ರಿಕವಾದ ಸಾಮಾಜಿಕ ಭದ್ರತೆಯ ಶಾಸನೀಯ ಕ್ರಮವಾಗಿದೆ. ಗ್ರಾಮೀಣ ಬಡತನ ನಿರ್ಮೂಲನೆಯ ಪ್ರಮುಖ ಹೆಜ್ಜೆಯಾಗಿದ್ದು, ಗ್ರಾಮೀಣ ಜನತೆಯು ತಮ್ಮ ಸಂಕಷ್ಟದ ಸಮಯಗಳಲ್ಲಿ ದೈನಂದಿನ ಅವಶ್ಯಕತೆಯನ್ನು ಈಡೇರಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ.

ಪ್ರಸ್ತುತದ ದಿನಮಾನಗಳಲ್ಲಿ ನಿರುದ್ಯೋಗ ಸಮಸ್ಯೆಯು ಸರ್ವವ್ಯಾಪಿಯಾಗುತ್ತಿದೆ. ಈ ಹಿನ್ನಲೆಯಲ್ಲಿ ಸದರಿ ಯೋಜನೆಯು ಗ್ರಾಮೀಣ ಭಾಗದ ಜನತೆಗೆ ಉದ್ಯೋಗದ ಖಾತರಿಯನ್ನು ಒದಗಿಸುವುದರೊಂದಿಗೆ ಅವರಲ್ಲಿ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳುವಲ್ಲಿ ನೆರವಾಗುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಬೆಟ್ಟಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸಂಬದಿಸಿದಂತೆ ಮಹಾತ್ಮ ಗಾಂಧೀಜಿ ಉದ್ಯೋಗ ಖಾತರಿ ಯೋಜನೆಯ ಕುರಿತು ಕೈಗೊಂಡ ಸಂಶೋಧನ ಫಲಿತವು, ಗ್ರಾಮಸ್ಥರಲ್ಲಿ ಆಶಾದಾಯಕವಾದ ಗುರುತುಗಳನ್ನು ಮೂಡಿಸಿದೆ. ಸಮುದಾಯ ಮತ್ತು ಗೃಹ ನಿರ್ವಹಣೆಯ ಪ್ರಕ್ರಿಯೆಯಲ್ಲಿ ಹಲವು ತೆರನಾದ ಪ್ರಯೋಜಗಳನ್ನುಂಟು ಮಾಡಿದೆ. ಸದರಿ ಗ್ರಾಮದ ಜನತೆಯು ಈ ಯೋಜನೆಯ ಫಲವನ್ನು ಸದುಪಯೋಗಪಡಿಸಿಕೊಂಡು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಂಡಿರುವುದು ಧನಾತ್ಮಕ ಅಂಶವಾಗಿ ವ್ಯಕ್ತಗೊಂಡಿದೆ.

ಫಲಾನುಭವಿಗಳ ವಾರ್ಷಿಕ ಆದಾಯದ ಹೆಚ್ಚಳ 5 ವರ್ಷಗಳ ಕಾಲಾವಧಿಯಲ್ಲಿ ಸರಾಸರಿ 50% ವರೆಗೆ ಮತ್ತು ಸುಮಾರು 30% ಫಲಾನುಭವಿಗಳ ವಾರ್ಷಿಕ ಸರಾಸರಿ ಆದಾಯ 50% ಹೆಚ್ಚಾಗಿರುವುದು ಯೋಜನೆಯ ಯಶಸ್ಸಿನ ಮಾನದಂಡವಾಗಿ ವ್ಯಕ್ತವಾಗುತ್ತಿದೆ. ಪರಿಣಾಮವಾಗಿ ಅವರ ಜೀವನ ಮಟ್ಟ ಸುಧಾರಿತವಾಗಿದೆ. ಯೋಜನೆಯ ಯಶಸ್ವಿಯು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಮತ್ತು ಸರಿಯಾದ ಸಮಯದಲ್ಲಿ ಸಂಭಾವನೆಯನ್ನು ಪಾವತಿಸುವ ನೀತಿಯ ಅನುಷ್ಠಾನದಲ್ಲಿ ಅಡಕವಾಗಿರುತ್ತದೆ. ಸದರಿ ಗ್ರಾಮದಲ್ಲಿ ಫಲಾನುಭವಿಗಳ ಆಯ್ಕೆಯಲ್ಲಿ ಅಧಿಕಾರಿಗಳು ಎಚ್ಚರವಹಿಸಿರುವುದು ಗಮನಾರ್ಹವಾಗಿದೆ. ಸಂಭಾವನೆಯ ಪಾವತಿಯು ಬ್ಯಾಂಕ್ ಖಾತೆಗಳ ಮೂಲಕ ನೇರವಾಗಿ ಖಾತೆದಾರರ ಖಾತೆಗಳಿಗೆ ವರ್ಗಾವಣೆಯಾಗಿರುವುದು ಪಾರದರ್ಶಕತೆಯ ದ್ಯೋತಕವಾಗಿದೆ. ಫಲಾನುಭವಿಗಳಿಗೆ ಬ್ಯಾಂಕಿಂಗ್ ವ್ಯವಹಾರ ಜ್ಞಾನದೊಂದಿಗೆ ಉಳಿತಾಯದ ಕಡೆ ಗಮನ ಹರಿಸುವಂತೆಯೂ ಪ್ರೇರೆಪಿಸಿದೆ. ಕೃಷಿ ಹಿನ್ನಲೆಯ 2/3 ರಷ್ಟು ಫಲಾನುಭವಿಗಳ ಉದ್ಯೋಗಖಾತರಿ ಯಲ್ಲಿ ಸಕ್ರಿಯಾವಾಗಿ ತೊಡಗಿಸಿಕೊಳ್ಳಲು ಅವರುಗಳು ಹೊಂದಿರುವ ಕೃಷಿ ಸಲಕರಣೆಗಳು ಸಹಕಾರಿಯಾಗಿದೆ.

ಆದ್ದರಿಂದ ಸರಕಾರದ ವತಿಯಿಂದ ಸಲಕರಣೆಗಳನ್ನು ಪಡೆಯಲು ಆಸಕ್ತಿ ವ್ಯಕ್ತಪಡಿಸಿರುವುದಿಲ್ಲ. ಆದರೆ 1/3 ರಷ್ಟು ಫಲಾನುಭವಿಗಳು ತಮ್ಮಲ್ಲಿ ಸೂಕ್ತ ಸಲಕರಣೆಗಳ ಕೊರತೆಯಿದೆ ಎಂಬುದನ್ನು ತಿಳಿಯಪಡಿಸುವುದರಿಂದ ಸರಕಾರವು ಫಲಾನುಭವಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಉದ್ಯೋಗ ಸಂಬಂಧಿಸಿದ ಸಲಕರಣೆಗಳ ಲಭ್ಯತೆಗೆ ಪ್ರಾಶಸ್ತ್ಯ ನೀಡುವುದು ಅಗತ್ಯವಾಗಿದೆ.

ಯೋಜನೆಯ ಅನುಷ್ಠಾನದಲ್ಲಿ ಪೂರ್ಣ ಪ್ರಮಾಣದ ಯಶಸ್ಸನ್ನು ಹೊಂದಲು ಫಲಾನುಭವಿಗಳು ಮತ್ತ ಜನಪ್ರತಿನಿಧಿಗಳು ಹಲವು ಅಮೂಲ್ಯ ಸಲಹೆಗಳನ್ನು ನೀಡಿರುತ್ತಾರೆ. ಆ ಸಲಹೆಗಳಲ್ಲಿ ಪ್ರಮುಖವಾಗಿ ಗಮನಹರಿಸಬೇಕಾದ ತುರ್ತು ಸಲಹೆಗಳೆಂದರೆ ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗ ಖಾತರಿ ಯೋಜನೆಗಳನ್ನು ವಿಸ್ತರಿಸುವುದರಿಂದ ಕೆಲಸದ ಅವಧಿಯ ಪ್ರಮಾಣ ಮತ್ತು ಕೆಲಸದ ಬಹುರೂಪತೆ ಹೆಚ್ಚಳಗೊಳ್ಳುತ್ತದೆ. ಪರಿಣಾಮದಲ್ಲಿ ನಿರುದ್ಯೋಗ ಸಮಸ್ಯೆ ಕ್ಷೀಣಿಸುತ ಜೀವನ ಮಟ್ಟ ಸುಧಾರಿತಗೊಳ್ಳುತ್ತದೆ. ಉದ್ಯೋಗ ಖಾತರಿ ಯೋಜನೆಯಲ್ಲಿನ ವೇತನದ ಪ್ರಮಾಣವನ್ನು ಕಾಲಕಾಲಕ್ಕೆ ಜೀವನವೆಚ್ಚದ ಏರಿಕೆಯ ಸ್ಥಿತಿಗತಿಗಳಿಗೆ ಅನುಗುಣವಾಗಿ ಪರಿಷ್ಕರಿಸುವುದು ಅನಿವಾರ್ಯವೆಂಬುವುದು ಸಮಂಜಸವಾದ ನ್ಯಾಯೋಚಿತ ಸಲಹೆಯಾಗಿದೆ.

ಸಾರಾಂಶದಲ್ಲಿ ಫಲಾನುಭವಿಗಳು ಮತ್ತು ಜನಪ್ರತಿನಿಧಿಗಳು ರಾಜಕೀಯ ಹಸ್ತಕ್ಷೇಪ, ಸೂಕ್ತ ಸಾಮಾಜಿಕ ಭದ್ರತೆಯ ಕ್ರಮಗಳ ಪ್ರಸ್ತಾಪವಿಲ್ಲದಿರುವುದು, ಕೌಶಲ್ಯವರ್ಧನೆಯ ಉದ್ಯೋಗಗಳನ್ನು ಒದಗಿಸುವಲ್ಲಿ ಸೂಕ್ತ ಯೋಜನೆಗಳಿಲ್ಲದಿರುವುದು, ಆಡಳಿತದ ನೆಲೆಯಲ್ಲಿ ಸಮನ್ವಯತೆಯ ಕೊರತೆ ಮತ್ತು ಸಕಾಲದಲ್ಲಿ ವೇತನ ಪಾವತಿಗೆ ಕ್ರಮ ಕೈಗೊಳ್ಳದಿರುವುದನ್ನು ಸ್ಪಷ್ಟಪಡಿಸಿರುತ್ತಾರೆ. ಆದ್ದರಿಂದ ಈ ವೈಫಲ್ಯಗಳಿಂದ ಮುಕ್ತವಾಗುವ ಬಗೆಯಲ್ಲಿ ಸರಕಾರಗಳು ದೂರದೃಷ್ಟಿಯ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು ಅತೀ ಅಗತ್ಯ ಎಂಬುದನ್ನು ಸದರಿ ಸಂಶೋಧನಾ ಫಲಿತವು ಅನಾವರಣ ಗೊಳಿಸುತ್ತದೆ.

ಗ್ರಂಥಸೂಚಿ

1. ಎ. ಶ್ರೀಧರ (2002), "ವಿಕೇಂದ್ರೀಕರಣ ಮತ್ತು ಗ್ರಾಮಪಂಚಾಯತ್", ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಎ. ಕೆ. ಮಿಶ್ರಾ ಅಖ್ತರ್ ಮತ್ತು ತಾರಿಕ (2011), "ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರ", ಸಂಚಿಕೆ, VII.
3. ಡಾ। ಬಿ. ಪ್ರಭಾಕರ ಶಿಶಿಲ(2007), "ಆರ್ಥಿಕ ಚಿಂತನಧಾರೆ", ಮಂಗಳ ಪ್ರಕಾಶನ, ಮಂಗಳೂರು.
4. ಐವನ್ ಲೋಬೋ(1993), ಜವಹರ್‌ಲಾಲ್ ನೆಹರು ವಿಶ್ವವಿದ್ಯಾಲಯ, ನವದೆಹಲಿ, "ಗಾಂಧೀಜಿಯವರ ಆಧುನಿಕತೆಯ ಟೀಕೆಗಳು ಹಿಂದೂ ಸ್ವರಾಜ್ಯದ ಮೇಲೊಂದು ವಿಶ್ಲೇಷಣೆ".
5. ಡಾ। ಕೆ. ಜೆ. ಸುರೇಶ್ ಸಿ. ಜೆ,(2007), "ರಾಜ್ಯಶಾಸ್ತ್ರ", ಚೇತನ ಬುಕ್‌ಹೌಸ್, ಮೈಸೂರು.
6. ಡಾ। ಪ್ರೊ. ಕೃಷ್ಣಪ್ಪ ಮಡಿವಾಳ(2010), " ಗಾಂಧೀಜಿ ಅರ್ಥಶಾಸ್ತ್ರ", ಈಶ್ವರೀ ಪ್ರಕಾಶನ, ಬಂಟ್ವಾಳ.
7. ಗುಂಡೇ ಗೌಡ(2012), " ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯ ಹಿನ್ನಲೆಯಲ್ಲಿ ಸ್ಥಳೀಯ ಸ್ವಯಂ ಸರಕಾರಗಳ ಬೆಳವಣಿಗೆ ಮತ್ತು ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಬೆಳವಣಿಗೆ ಒಂದು ಸಮಗ್ರ ಅಧ್ಯಯನ", ಮೈಸೂರು ವಿಶ್ವವಿದ್ಯಾಲಯ, ಮೈಸೂರು.
8. ಜಿ. ಯಂ. ಕೃಷ್ಣಮೂರ್ತಿ(2015),"ನನ್ನ ಕನಸಿನ ಭಾರತ", ಸಪ್ನ ಬುಕ್‌ಹೌಸ್ ಗಾಂಧಿನಗರ,ಬೆಂಗಳೂರು.
9. ಎಮ್. ಎನ್. ಸುರೇಶ್ ಕುಮಾರ್, ಡಾ। ಜೆ. ಆರ್. ಪೂರ್ಣಿಮಾ (2005), "ರಾಜಕೀಯ ಚಿಂತಕರು ವಿದ್ಯಾಮಾನಗಳು ಮತ್ತು ವಿಧಾನಗಳು", ಸಪ್ನ ಬುಕ್‌ಹೌಸ್ ಬೆಂಗಳೂರು.
10. ಎಂ. ಅಸ್ಲಮ್ ಪ್ರಬಂಧ (2007), "ಭಾರತದಲ್ಲಿ ಪಂಚಾಯತಿ ರಾಜ್", ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸದೆಹಲಿ.
11. ಪ್ರೊ ಎನ್. ಹಾಲಪ್ಪ(2014) "ಸಮಕಾಲೀನ ಸಮಾಜಕ್ಕೆ ಗಾಂಧಿವಾದ ಔಚಿತ್ಯತೆ", ಸೂರ್ಯರಶ್ಮಿ ಪ್ರೇರಣಾ ಪ್ರಕಾಶನ, ಬೆಂಗಳೂರು.
12. ಡಾ। ಎಚ್. ಆರ್. ಕೃಷ್ಣಯ್ಯ ಗೌಡ(2008), " ಗ್ರಾಮೀಣ ಅಭಿವೃದ್ಧಿಗೆ ಮಾರ್ಗಗಳು", ಮೈಸೂರು ಪ್ರಕಾಶನ, ಮೈಸೂರು.
13. ಡಾ। ಎನ್. ಆನಂದ ಗೌಡ(2017), "ಗ್ರಾಮೀಣ ವಿಕೇಂದ್ರೀಕರಣ ಮತ್ತು ಅಭಿವೃದ್ಧಿಯಲ್ಲಿ ಗಾಂಧೀಜಿಯವರ ಚಿಂತನೆ" ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು.
14. ಡಾ। ಚಂದ್ರಶೇಖರ್(2017), "ಗಾಂಧಿ ಮತ್ತು ಸಾಮಾಜಿಕ ನ್ಯಾಯ", ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.
15. ಸುರೇಂದ್ರ ಹಚ್.(2017), "ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಹಾತ್ಮ ಗಾಂಧೀಜಿಯವರ ರಾಜಕೀಯ ಚಿಂತನೆಗಳ ಪ್ರಸ್ತುತತೆ", ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹುಣಸೂರು.

16. ಸೌಮ್ಯ ಮೊಹಂತಿ(2012), " ಮಹಾತ್ಮಾ ಗಾಂಧೀಜಿಯ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಮತ್ತು ಬುಡಕಟ್ಟನ ಜೀವನ ಒರಿಸ್ಸಾದ ಸುಂದರಗಾರ್ ಜಿಲ್ಲೆಯ ಅಧ್ಯಯನ", NIT ROURKELA ORISSA (ಅಪ್ರಕಟಿತ ಸಂಶೋಧನಾ ಪ್ರಬಂಧ)

17. ಶನ್‌ಮುಗನ್ ನಾಯರ್(2009), " ಕಡಲೂರು, ಡಿಂಡಿಗಲ್, ಕಂಚಿಪುರ, ತಿರುವಳ್ಳವರ್ ಜಿಲ್ಲೆಗಳಲ್ಲಿ ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ವಿಶ್ಲೇಷಣೆ", INDIAN INSTITUTE OF TECHNOLOGY, MEDRAS(ಅಪ್ರಕಟಿತ ಸಂಶೋಧನಾ ಪ್ರಬಂಧ).

18. ಆರ್. ಕೆ. ಪ್ರಭು ಮತ್ತು ಯು. ಆರ್. ರಾವ್(2011), "ಮಹಾತ್ಮ ಗಾಂಧಿಯವರ ಮನೋರಂಗ", ನವಜೀವನ ಪಬ್ಲಿಷಿಂಗ್ ಹೌಸ್, ಅಹಮದಾಬಾದ್.

19. ಡಾ। ಎಚ್.ಎಸ್. ದೊರೆಸ್ವಾಮಿ(2013), " ಹಿಂದ್ ಸ್ವರಾಜ್ ಮತ್ತು ಇತರ ಲೇಖನಗಳು", ಸಪ್ನ ಬುಕ್ ಹೌಸ್, ಬೆಂಗಳೂರು.

20. ಎಂ. ಚಂದ್ರ ಪೂಜಾರಿ (2001), "ದೇಶೀಯತೆಯ ನೆರಳಿನಲ್ಲಿ ವಿಕೇಂದ್ರೀಕರಣ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

21. ಡಾ। ಹೋ. ಶ್ರೀನಿವಾಸಯ್ಯ (2016). " ಮಹಾತ್ಮ ಗಾಂಧಿ ಪ್ರಸ್ತುತತೆ", ಈಶ್ವರೀ ಪ್ರಕಾಶನ, ಮೈಸೂರು.

22. ಶ್ರೀಮತಿ ಪುಷ್ಪಲತ (2015), "ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕಲ್ಪನೆಯ ಹಿನ್ನೆಲೆಯಲ್ಲಿ ಸ್ಥಳೀಯ ಸ್ವಯಂ ಸರಕಾರಗಳ ಬೆಳವಣಿಗೆ ಮತ್ತು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಬೆಳವಣಿಗೆ ಒಂದು ಸಮಗ್ರ ಅಧ್ಯಯನ", ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

23. ಗುಂಡೇಗೌಡ (2012) "ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕಲ್ಪನೆಯ ಹಿನ್ನೆಲೆಯಲ್ಲಿ ಸ್ಥಳೀಯ ಸ್ವಯಂ ಸರಕಾರಗಳ ಬೆಳವಣಿಗೆ ಮತ್ತು ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳ ಬೆಳವಣಿಗೆ ಒಂದು ಸಮಗ್ರ ಅಧ್ಯಯನ", ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

24. ಸಿ. ಎಸ್. ಕುಲಕರ್ಣಿ (1960) "ಸರ್ವೋದಯ" ಗಾಂಧಿಯಾನ ಪಬ್ಲಿಷಿಂಗ್ ಹೌಸ್ ಕಸ್ತೂರ್‌ಬಾ ಭವನ, ಬೆಂಗಳೂರು.

ಅನುಬಂಧ-2 ಪ್ರಶ್ನಾವಳಿ

ಮಹಾತ್ಮ ಗಾಂಧೀಜಿಯವರ ಗ್ರಾಮೀಣ ಆಡಳಿತದ ಪರಿಕಲ್ಪನೆಯ ಬೆಳವಣಿಗೆಯ ಅಧ್ಯಯನ
ಕನ್ನಡ ವಿಶ್ವವಿದ್ಯಾಲಯ ಹಂಪಿ ಇದರ ಎಂ.ಫಿಲ್ ಪದವಿಗಾಗಿ ರಚಿಸಲ್ಪಟ್ಟ ಪ್ರಶ್ನಾವಳಿ

ಸ್ಥಳ:

ದಿನಾಂಕ:

ಸಂಶೋಧಕರು: ಕಿರಣಚಂದ್ರ ರೈ.ಬಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕರ್ನಾಟಕ ಥಿಯೋಲಜಿಕಲ್ ಸಂಶೋಧನಾ ಕೇಂದ್ರ
ಮಂಗಳೂರು

ವೈಯಕ್ತಿಕ ಮಾಹಿತಿ

ಹೆಸರು :

ವಿಳಾಸ :

ವಾರ್ಡ್‌ನ ಹೆಸರು :

ವಯಸ್ಸು : ಅ) 20ಕ್ಕಿಂತ ಕಡಿಮೆ ಆ) 20-40 ಇ) 40-60
ಈ) 60-80 ಉ) 80 ಕ್ಕಿಂತ ಹೆಚ್ಚು

ಲಿಂಗ : ಸ್ತ್ರೀ/ಪುರುಷ

ವೈವಾಹಿಕ ಸ್ಥಿತಿ : ವಿವಾಹಿತೆ/ಅವಿವಾಹಿತೆ/ವಿಧವೆ

ಧರ್ಮ : ಹಿಂದು/ಮುಸ್ಲಿಮ್/ಕ್ರಿಶ್ಚಿಯನ್/ಇತರ

ಜಾತಿ/ಉಪಜಾತಿ :

ಶಿಕ್ಷಣ : ಪ್ರಾಥಮಿಕ/ಪ್ರೌಢ/ಪದವಿಪೂರ್ವ/ಪದವಿ/ಸ್ನಾತಕೋತ್ತರ

ವೃತ್ತಿ :

ವಾರ್ಷಿಕ ಆದಾಯ : ಅ) 18 ಸಾವಿರಕ್ಕಿಂತ ಕೆಳಗೆ ಆ) 18-50 ಸಾವಿರ
ಇ) 50-1 ಲಕ್ಷ ಈ) 1 ಲಕ್ಷಕ್ಕಿಂತ ಮೇಲೆ

ಆದಾಯದ ಮೂಲ : ಅ) ಕೃಷಿ ಭೂಮಿ/ಕೂಲಿಕಾರ್ಮಿಕ/ಸೇವಾರಂಗ/ಕೈಗಾರಿಕೆ/

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಬಗ್ಗೆ ಪಂಚಾಯತ್ ಅಧಿಕಾರಿಗೆ ಸಂಬಂಧಿಸಿದ ಪ್ರಶ್ನೆಗಳು

ಪಂಚಾಯತ್ ಸಿಬ್ಬಂದಿ (ಪಿಡಿಒ)

1. ಉದ್ಯೋಗ ಖಾತರಿ ಯೋಜನಯೆ ನೀಲನಕ್ಷೆಯನ್ನು ತಯಾರಿಸುವವರು ಯಾರು?
2. ಉದ್ಯೋಗ ಖಾತರಿ ಯೋಜನೆಯ ನಿರ್ವಹಣೆಯಲ್ಲಿ ಭಾಗಿಯಾಗುವ ಅಧಿಕಾರಿಗಳು ಯಾರು?
3. ಉದ್ಯೋಗ ಖಾತರಿ ಯೋಜನೆ ನಿಮ್ಮ ಗ್ರಾಮ ಪಂಚಾಯತ್‌ನಲ್ಲಿ ಯಾವಾಗ ಅನುಷ್ಠಾನಗೊಂಡಿದೆ?
4. ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವಾಗ ಯಾವುದನ್ನು ಮಾನದಂಡವಾಗಿ ಬಳಸುತ್ತೀರಿ?
5. ಉದ್ಯೋಗ ಖಾತರಿ ಯೋಜನೆಯು ಎಷ್ಟು ವರ್ಷದ ಅವಧಿಯದ್ದು ಆಗಿರುತ್ತದೆ?
6. ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಜನರ ಪ್ರತಿಕ್ರಿಯೆ ಹೇಗಿದೆ?
7. ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಪ್ರತಿನಿಧಿಗಳು ಯಾವ ರೀತಿ ಕಾರ್ಯನಿರ್ವಹಿಸುತ್ತಾರೆ?
8. ಅನುದಾನವನ್ನು ಯಾವ ಮಾನದಂಡದ ಆಧಾರದ ಮೇಲಿಂದ ಎಷ್ಟು ಕಂತುಗಳಲ್ಲಿ ಬಿಡುಗಡೆ ಮಾಡುತ್ತೀರಿ?
9. ಉದ್ಯೋಗ ಖಾತರಿ ಯೋಜನೆಯನ್ನು ಪೂರ್ಣಗೊಳಿಸುವ ಸಂದರ್ಭದಲ್ಲಿ ಪರಿಗಣಿಸಲ್ಪಡುವ ಮಾನದಂಡ ಯಾವುದು?
10. ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಯಾರ ಯಾರ ಸಹಕಾರ ಪಡೆಯುತ್ತೀರಿ?
11. ಉದ್ಯೋಗ ಖಾತರಿ ಯೋಜನೆಗೆ ಅನುದಾನವನ್ನು ಯಾವ ಸರಕಾರ ಬಿಡುಗಡೆ ಮಾಡುತ್ತದೆ? ಎಷ್ಟು?
12. ಉದ್ಯೋಗ ಖಾತರಿ ಯೋಜನೆಯಡಿ ಯಾವುದಾದರೂ ಕಾಮಗಾರಿಗೆ ಬಿಡುಗಡೆಯಾದ ಅನುದಾನ ಕಡಿಮೆಯಾದಲ್ಲಿ ಆಗ ಯೋಜನೆಯನ್ನು ಯಾವ ರೀತಿ ನಿಭಾಯಿಸುತ್ತೀರಿ?
13. ಉದ್ಯೋಗ ಖಾತರಿ ಯೋಜನೆಯ ದಾಖಲೆಗಳ ನಿರ್ವಹಣೆ ಹೇಗೆ?
14. ನಿರುದ್ಯೋಗವನ್ನು ಹೋಗಲಾಡಿಸುವಲ್ಲಿ ಸಫಲತೆಯನ್ನು ಸಾಧಿಸಿದೆಯೇ?

    ಅ) ಹೌದು   ಆ) ಇಲ್ಲ   ಇ) ಸ್ವಲ್ಪ ಮಟ್ಟಿಗೆ
15. ಸ್ಥಳೀಯ ಆಡಳಿತದ ಪರಿಕಲ್ಪನೆಗೆ ಪೂರವಾಗಿದೆಯೇ?

    ಅ) ಹೌದು   ಆ) ಇಲ್ಲ   ಇ) ಸ್ವಲ್ಪ ಮಟ್ಟಿಗೆ
16. ಸರಕಾರದಿಂದ ಅನುದಾನ ಸರಿಯಾದ ಸಮಯಕ್ಕೆ ಫಲಾನುಭವಿಗಳಿಗೆ ದೊರಕುತ್ತದೆಯೇ?

    ಅ) ಹೌದು   ಆ) ಇಲ್ಲ   ಇ) ಸ್ವಲ್ಪ ಮಟ್ಟಿಗೆ
17. ಉದ್ಯೋಗ ಖಾತರಿ ಯೋಜನೆಯ ಮೂಲಕ ಗ್ರಾಮೀಣ ಬಡಜನರನ್ನು ಬಡತನ ರೇಖೆಯಿಂದ ಮೇಲೆತ್ತಲು ಸಾಧ್ಯವೇ?

    ಅ) ಹೌದು   ಆ) ಇಲ್ಲ   ಇ) ಸ್ವಲ್ಪ ಮಟ್ಟಿಗೆ

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಮಹಾತ್ಮ ಗಾಂಧೀಜಿ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳ ಅರಿವಿಗೆ ಸಂಬಂಧಿಸಿದ ಪ್ರಶ್ನೆಗಳು

1. ಉದ್ಯೋಗ ಖಾತರಿ ಯೋಜನೆಯ ಅರಿವಿನ ಮೂಲ ಯಾವುದು?
   ಅ) ಪಂಚಾಯತ್ ಸದಸ್ಯರು ಆ) ಸ್ಥಳೀಯ ಪತ್ರಿಕೆ ಇ) ಬಂಧು ಮಿತ್ರರು
   ಈ) ಇತರ ಮಾಧ್ಯಮ
2. ಉದ್ಯೋಗ ಖಾತರಿ ಯೋಜನೆಯಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡಿದ್ದೀರಾ?
   ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
3. ಈ ಯೋಜನೆ ನಿಮಗೆ ಪ್ರಯೋಜನವಾಗಿದೆಯೇ?
   ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
4. ಈ ಯೋಜನೆಯಿಂದ ನಿಮ್ಮ ಆರ್ಥಿಕ ಸ್ಥಿತಿ ಬದಲಾಗಿದೆಯೇ?
   ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
5. ಈ ಯೋಜನೆಗೆ ನಿಮಗೆ ಗ್ರಾಮ ಪಂಚಾಯತ್ ಸೂಕ್ತವಾಗಿ ಸ್ಪಂದಿಸಿದೆಯೇ?
   ಅ) ಹೌದು ಆ) ಇಲ್ಲ
6. ಉದ್ಯೋಗ ಖಾತರಿ ಯೋಜನೆ ಸರಕಾರದ ಸಮಗ್ರ ಯೋಜನೆ ಎಂದು ನಿಮಗೆ ಭರವಸೆ ಮೂಡಿದೆಯೇ?
   ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
7. ಈ ಯೋಜನೆಯಲ್ಲಿ ನಿಮ್ಮ ಸಂಪಾದನೆಯು ಮೊದಲಿಗಿಂತ ಹೆಚ್ಚಾಗಿದೆಯೇ?
   ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
8. ಈ ಯೋಜನೆಯ ಕುರಿತು ಗುರುತಿನ ಚೀಟಿ ಇದೆಯೇ?
   ಅ) ಹೌದು ಆ) ಇಲ್ಲ
9. ಈ ಯೋಜನೆಯ ಕುರಿತು ಅಧಿಕಾರಿಗಳು ನಿಮಗೆ ಮಾಹಿತಿ ನೀಡಿದ್ದಾರೆಯೇ?
   ಅ) ಹೌದು ಆ) ಇಲ್ಲ
10. ಈ ಯೋಜನೆಗೆ ಸಂಬಳವನ್ನು ಬ್ಯಾಂಕ್‌ನ ಮೂಲಕ ನೀಡುತ್ತಾರೆಯೇ?
    ಅ) ಹೌದು ಆ) ಇಲ್ಲ
11. ಈ ಯೋಜನೆಯ ಕಾಮಗಾರಿಯನ್ನು ನೋಡಲು ಅಧಿಕಾರಿಗಳು ಬರುತ್ತಾರೆಯೇ?
    ಅ) ಹೌದು ಆ) ಇಲ್ಲ
12. ಈ ಯೋಜನೆಯ ಕೆಲಸಕ್ಕೆ ನಿಮಗೆ ಹಾಜರಾತಿ ಇದೆಯೇ?
    ಅ) ಹೌದು ಆ) ಇಲ್ಲ
13. ಈ ಯೋಜನೆಗೆ ಯಾವುದಾದರೂ ದಾಖಲೆ ನೀಡುತ್ತೀರಾ?
    ಅ) ಹೌದು ಆ) ಇಲ್ಲ
14. ಈ ಯೋಜನೆಗೆ ಬೇಕಾದ ಸಲಕರಣೆಗಳನ್ನು ನಿಮಗೆ ಗ್ರಾಮ ಪಂಚಾಯತ್ ಒದಗಿಸಿದೆಯೇ?
    ಅ) ಹೌದು ಆ) ಇಲ್ಲ
15. ಈ ಯೋಜನೆಯನ್ನು ಉತ್ತಮ ಪಡಿಸುವಲ್ಲಿ ನಿಮ್ಮ ಸಲಹೆ ಸೂಚನೆ ಇದೆಯೇ?
    ಅ) ಹೌದು ಆ) ಇಲ್ಲ

ಫಲಾನುಭವಿಗಳ ಸಹಿ

ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರಿಗೆ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಅರಿವಿಗೆ ಸಂಬಂಧಿಸಿದ ಪ್ರಶ್ನೆಗಳು

1. ಉದ್ಯೋಗ ಖಾತರಿ ಯೋಜನೆಯ ಬಗ್ಗೆ ನಿಮಗೆ ತಿಳಿದಿದೆಯೇ
   ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
2. ಈ ಯೋಜನೆಯ ಬಗ್ಗೆ ನಿಮಗೆ ಯಾವುದಾದರೂ ತರಬೇತಿ ನೀಡಲಾಗಿದೆಯೇ?
   ಅ) ಹೌದು ಆ) ಇಲ್ಲ
3. ಈ ಯೋಜನೆಯಿಂದ ಕಾರ್ಮಿಕರಿಗೆ ಒಳ್ಳೆಯದಾಗಿದೆ ಎಂಬ ವಿಶ್ವಾಸ ಇದೆಯೇ?
   ಅ) ಹೌದು ಆ) ಇಲ್ಲ
4. ಫಲಾನುಭವಿಗಳಿಗೆ ಉದ್ಯೋಗ ಖಾತರಿ ಯೋಜನೆಯ ಪ್ರಯೋಜನ ಆಗಿದೆಯೇ?
   ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
5. ಎಷ್ಟು ದಿನಗಳ ಕಾಲ ಈ ಯೋಜನೆ ಉದ್ಯೋಗವನ್ನು ವಾರ್ಷಿಕವಾಗಿ ಒದಗಿಸುತ್ತದೆ?
   ಅ) 100 ಆ) 200 ಇ) 250 ಈ) ಯಾವುದೂ ಅಲ್ಲ
6. ಈ ಯೋಜನೆಯನ್ನು ಪರಿಣಾಮಕಾರಿ ಜಾರಿಗೊಳಿಸಲು ಸಾಧ್ಯ ಇದೆಯೇ?
   ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
7. ನಿಮ್ಮ ವಾರ್ಡ್‌ನಲ್ಲಿ ಎಷ್ಟು ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದಾರೆ?
8. ಈ ಯೋಜನೆಯನ್ನು ನಿರ್ವಹಣೆ ಮಾಡುವವರು ಯಾರು?
   ಅ) ಗ್ರಾಮ ಪಂಚಾಯತ್ ಅಧ್ಯಕ್ಷರು ಆ) ಗ್ರಾಮ ಪಂಚಾಯತ್ ಅಧಿಕಾರಿ
   ಇ) ಕೇಂದ್ರ ಸರಕಾರ/ರಾಜ್ಯ ಸರಕಾರ ಈ) ಜಿಲ್ಲಾ ಪಂಚಾಯತ್ ಸದಸ್ಯರು
9. ಈ ಯೋಜನೆ ಕಾರ್ಮಿಕರಿಗೆ ಸರಕಾರದ ಸೂಕ್ತ ಯೋಜನೆ ಎಂದು ನೀವು ಭಾವಿಸುತ್ತೀರಾ?
   ಅ) ಹೌದು ಆ) ಇಲ್ಲ
10. ಈ ಯೋಜನೆಯಿಂದ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ ಆಗಿದೆಯೇ?
    ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
11. ಉದ್ಯೋಗ ಖಾತರಿ ಯೋಜನೆ ಬಡತನ ನಿವಾರಿಸುವಲ್ಲಿ ಸಹಕಾರಿ ಆಗಿದೆಯೇ?
    ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ
12. ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಿದ್ದೀರಾ?
    ಅ) ಹೌದು ಆ) ಇಲ್ಲ
13. ಉದ್ಯೋಗ ಖಾತರಿ ಯೋಜನೆಯ ಕುರಿತು ಟೆಂಡರ್ ಇದೆಯೇ?
    ಅ) ಹೌದು ಆ) ಇಲ್ಲ
14. ಹಿಂದಿನ ಉದ್ಯೋಗ ಖಾತ್ರಿ ಯೋಜನೆಯ ವೈಫಲ್ಯತೆ ಕಾರಣದ ಬಗ್ಗೆ ಅಭಿಪ್ರಾಯ
    ಅ) ಅಧಿಕಾರಿ ವರ್ಗಗಳ ಮೇಲ್ವಿಚಾರಣೆಯ ವೈಫಲ್ಯ ಆ) ಕಾರ್ಮಿಕ ವರ್ಗದ ಅನಕ್ಷರತೆ
    ಇ) ರಾಜಕೀಯ ಕಾರಣಗಳು ಈ) ಮೇಲಿನ ಎಲ್ಲವೂ

ಸದಸ್ಯರ ಸಹಿ